ಶನಿವಾರ, ಏಪ್ರಿಲ್ 12, 2025 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆ್ಯಂಡರ್ಸನ್‌ಗೆ ನೈಟ್‌ಹುಡ್ ಪದವಿ

ಲಂಡನ್: ಟೆಸ್ಟ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದವರ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿರುವ ಇಂಗ್ಲೆಂಡ್ ಕ್ರಿಕೆಟ್ ತಂಡದ ಮಾಜಿ ವೇಗಿ ಜೇಮ್ಸ್ ಆ್ಯಂಡರ್ಸನ್ ಇನ್ನು ಮುಂದೆ ಸರ್ ಜಿಮ್ಮಿ ಆ್ಯಂಡರ್ಸನ್ ಎನಿಸಿಕೊಳ್ಳಲಿದ್ದಾರೆ. ಅವರಿಗೆ ಶುಕ್ರವಾರ ನೈಟ್‌ಹುಡ್ ಪದವಿ ಘೋಷಿಸಲಾಯಿತು. ಅವರು 704 ವಿಕೆಟ್ ಪಡೆದಿದ್ದಾರೆ. ಮುರಳೀಧರನ್ (800), ವಾರ್ನ್ (708) ಮೊದಲೆರಡು ಸ್ಥಾನದಲ್ಲಿದ್ದಾರೆ

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಚರ್ಚೆ ವಿವಾದ ಸೃಷ್ಟಿಸಿರುವ 'ವಚನ ದರ್ಶನ' ಕೃತಿ ಕುರಿತಂತೆ ಎರಡು ಅಭಿಪ್ರಾಯಗಳು

'ಬಡಿಗೆ ಹಿಡಿದು ಠಾಣೆಗೆ ನುಗ್ಗುವ ದಿನ ದೂರವಿಲ್ಲ' 6

ಪ್ರತಿಸುಂಕ ಶೇ 125ಕ್ಕೆ ಏರಿಸಿದ ಚೀನಾ 10


ಸೆನ್ಸೆಕ್ಸ್	ನಿಫ್ಟಿ	₹/$
75,157 ▲	22,828 ▲	86.10 ▲

ಚಿನ್ನ ಬಲು ದುಬಾರಿ

₹6,250 ದೆಹಲಿ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಒಂದೇ ದಿನ ಏರಿಕೆ ಕಂಡ 10 ಗ್ರಾಂ ಚಿನ್ನದ ದರ

₹96,450 10 ಗ್ರಾಂ ಚಿನ್ನದ ಬೆಲೆ (ಶೇ 99.9 ಪರಿಶುದ್ಧತೆ)

₹96,000 10 ಗ್ರಾಂ ಆಭರಣ ಚಿನ್ನದ ಧಾರಣೆ (ಶೇ 99.5 ಪರಿಶುದ್ಧತೆ)



(ಆಧಾರ: ಅಖಿಲ ಭಾರತ ಸರಾಫ್ ಅಸೋಸಿಯೇಷನ್)

ಹಿಂದುಳಿದವರ ಮೀಸಲಾತಿ ಪ್ರಮಾಣ ಶೇ 32ರಿಂದ ಶೇ 51ಕ್ಕೆ ಏರಿಕೆ: ಹೆಗ್ಡೆ ಆಯೋಗ ಶಿಫಾರಸು

ಒಬಿಸಿ ಮೀಸಲು: ಭಾರಿ ಬದಲು?

• ವೈ.ಗ. ಜಗದೀಶ್

ಬೆಂಗಳೂರು: ಲಿಂಗಾಯತರು, ಒಕ್ಕಲಿಗರು, ಮುಸ್ಲಿಮರು, ಹಿಂದುಳಿದ ತಳ ಸಮುದಾಯಗಳೂ ಸೇರಿಕೊಂಡಂತೆ ಇತರೆ ಹಿಂದುಳಿದ ಜಾತಿಗಳ (ಒಬಿಸಿ) ಪಟ್ಟಿಯಲ್ಲಿರುವ ವಿವಿಧ ಜಾತಿಗಳ ಮೀಸಲಾತಿಯನ್ನು ಮರುವರ್ಗೀಕರಣ ಮಾಡಿ, ಆಯಾ ಜಾತಿಯವರ ಜನಸಂಖ್ಯೆಗೆ ಅನುಗುಣವಾಗಿ ಈಗಿರುವ ಮೀಸಲು ಪ್ರಮಾಣವನ್ನು ಹೆಚ್ಚಳ ಮಾಡುವಂತೆ ಕೆ. ಜಯಪ್ರಕಾಶ್ ಹೆಗ್ಡೆ ಅಧ್ಯಕ್ಷತೆಯ ಆಯೋಗ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ರಾಜ್ಯದಲ್ಲಿ ಹಿಂದುಳಿದ ವರ್ಗಗಳಿಗೆ ಈಗ ಶೇಕಡ 32 ಹಾಗೂ ಪರಿಶಿಷ್ಟ ಜಾತಿ-ಪಂಗಡದವರಿಗೆ ಶೇ 24.1ರಷ್ಟು ಮೀಸಲಾತಿ ಇದೆ. ಹಿಂದುಳಿದವರ ಮೀಸಲಾತಿಯನ್ನು ಶೇ 51ಕ್ಕೆ ಏರಿಸುವಂತೆ ಆಯೋಗ ತನ್ನ ಶಿಫಾರಸಿನಲ್ಲಿ ಹೇಳಿದೆ. ಅಲ್ಲದೆ ವರ್ಗೀಕರಣದಲ್ಲೂ ಬದಲಾವಣೆಗಳನ್ನು ಮಾಡಲಾಗಿದೆ.

6ನೇ ಪುಟ ನೋಡಿ

ಶಿಫಾರಸಿನಲ್ಲಿರುವ ಮೀಸಲಾತಿ ಪ್ರಮಾಣ

ಪ್ರವರ್ಗ	ಮೀಸಲಾತಿ	ಜನಸಂಖ್ಯೆ	ಯಾರಿಗೆ ಅನ್ವಯ
1ಎ	6%	35 ಲಕ್ಷ	ಪ್ರವರ್ಗ 1ರ ಪಟ್ಟಿಯಲ್ಲಿದ್ದ ಹಿಂದುಳಿದ ಜಾತಿಗಳು
1ಬಿ	12%	73.94 ಲಕ್ಷ	ಪ್ರವರ್ಗ 2 ಹಾಗೂ 1ರ ಪಟ್ಟಿಯಲ್ಲಿದ್ದ ಕೆಲವು ಹಿಂದುಳಿದ ಜಾತಿಗಳು
2ಎ	10%	77.78 ಲಕ್ಷ	ಪ್ರವರ್ಗ 2ರ ಪಟ್ಟಿಯಲ್ಲಿದ್ದ ಕೆಲವು ಹಿಂದುಳಿದ ಜಾತಿಗಳು
2ಬಿ	8%	75.27 ಲಕ್ಷ	ಮುಸ್ಲಿಂ
3ಎ	7%	72 ಲಕ್ಷ	ಒಕ್ಕಲಿಗ ಮತ್ತು ಉಪ ಜಾತಿಗಳು
3ಬಿ	8%	81 ಲಕ್ಷ	ಲಿಂಗಾಯತ ಮತ್ತು ಉಪ ಜಾತಿಗಳು

* 10% ಆರ್ಥಿಕವಾಗಿ ದುರ್ಬಲ ವರ್ಗ

85.1% ಒಟ್ಟು ಮೀಸಲಾತಿ | **14.9%** ಸಾಮಾನ್ಯ ವರ್ಗ

ಪರಿಶಿಷ್ಟ ಜಾತಿ/ ಪಂಗಡಗಳಿಗೆ ಯಥಾಸ್ಥಿತಿ

17.15% ಪರಿಶಿಷ್ಟ ಜಾತಿ

6.95% ಪರಿಶಿಷ್ಟ ಪಂಗಡ

1.60+ಕೋಟಿ ಪರಿಶಿಷ್ಟ ಜಾತಿ/ ಪಂಗಡಗಳ ಒಟ್ಟು ಜನಸಂಖ್ಯೆ

ಹಾಲಿ ಮೀಸಲಾತಿ

ಪ್ರವರ್ಗ	ಮೀಸಲಾತಿ
1	4%
2ಎ	15%
2ಬಿ	4%
3ಎ	4%
3ಬಿ	5%
ಪರಿಶಿಷ್ಟ ಜಾತಿ	17.15%
ಪರಿಶಿಷ್ಟ ಪಂಗಡ	6.95%

* 10% ಆರ್ಥಿಕವಾಗಿ ದುರ್ಬಲ ವರ್ಗ

66% ಒಟ್ಟು ಮೀಸಲಾತಿ | **34%** ಸಾಮಾನ್ಯ ವರ್ಗ

ಲಿಂಗಾಯತ– ಒಕ್ಕಲಿಗರಿಗೂ ಲಾಭ

ರಾಜ್ಯದಲ್ಲಿ ರಾಜಕೀಯವಾಗಿ ಪ್ರಬಲ-ವಾಗಿರುವ ಎರಡು ಸಮುದಾಯವರಿಗೆ ಮೀಸಲಾತಿ ಪ್ರಮಾಣವನ್ನು ತಲಾ ಶೇ 3ರಷ್ಟು ಹೆಚ್ಚಿಸುವಂತೆ ಆಯೋಗವು ತನ್ನ ಶಿಫಾರಸಿನಲ್ಲಿ ಹೇಳಿದೆ.

6ನೇ ಪುಟ ನೋಡಿ

ಮುಸ್ಲಿಮರ ಮೀಸಲು ಶೇ 8ಕ್ಕೆ?

ಮುಸ್ಲಿಂ ಸಮುದಾಯದವರ ಮೀಸಲಾತಿ ಪ್ರಮಾಣವನ್ನು ಈಗಿರುವ ಶೇ 4ರಿಂದ ಶೇ 8ಕ್ಕೆ ಏರಿಸುವಂತೆ ಜಯಪ್ರಕಾಶ ಹೆಗ್ಡೆ ಆಯೋಗವು ತನ್ನ ಶಿಫಾರಸಿನಲ್ಲಿ ಹೇಳಿದೆ. ಮುಸ್ಲಿಂ ಸಮುದಾಯವರ ಜನಸಂಖ್ಯೆಯು ಒಂದು ಜಾತಿಯಾಗಿ 75.27 ಲಕ್ಷದಷ್ಟಿದೆ. ಪರಿಶಿಷ್ಟ ಜಾತಿಯವರ ಸಂಖ್ಯೆಯ 1 ಕೋಟಿಗೂ ಹೆಚ್ಚಿದ್ದು, ಈ ಸಮುದಾಯವರನ್ನು ಬಿಟ್ಟರೆ ಏಕ ಜಾತಿಯಾಗಿ ಅತಿ ಹೆಚ್ಚಿನ ಸಂಖ್ಯೆಯಲ್ಲಿರುವುದು ಮುಸ್ಲಿಂ ಸಮುದಾಯವರೇ ಆಗಿದ್ದಾರೆ. ಹೀಗಾಗಿ ಮೀಸಲಾತಿ ಹೆಚ್ಚಿಸುವಂತೆ ಶಿಫಾರಸು ಮಾಡಲಾಗಿದೆ.

17ಕ್ಕೆ ಜಾತಿಗಣತಿ ಭವಿಷ್ಯ?

ಬೆಂಗಳೂರು: ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ (ಜಾತಿ ಗಣತಿ) ಕೊನೆಗೂ 'ಮೋಕ್ಷ' ಸಿಗುವ ಲಕ್ಷಣಗಳು ಕಾಣಿಸಿದ್ದು, ಇದೇ 17ರ ಗುರುವಾರ ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಸಮೀಕ್ಷೆಯ ಭವಿಷ್ಯ ನಿರ್ಧಾರವಾಗಲಿದೆ.

ವಿವರ ಪುಟ 6

ಚಿನಕುರುಳಿ

ಪ್ರಕಾಶ್ ಶೆಟ್ಟಿ



ರಾಣಾ ವಿಚಾರಣೆ ಆರಂಭ

ಪ್ರಜಾವಾಣಿ ವಾರ್ತೆ/ ಪಿಟಿಐ



ತಹವ್ವುರ್ ರಾಣಾ

ನವದೆಹಲಿ: ಮುಂಬೈ ಮೇಲಿನ ಭಯೋತ್ಪಾದಕ ದಾಳಿಯ ಸಂಪೂರ್ಣ ಸಂಚನ್ನು ಬಯಲಿಗೆಳೆಯುವ ನಿಟ್ಟಿನಲ್ಲಿ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ), ಪ್ರಮುಖ ಸಂಚುಕೋರ ತಹವ್ವುರ್ ರಾಣಾನನ್ನು ಶುಕ್ರವಾರ ತೀವ್ರ ವಿಚಾರಣೆಗೆ ಗುರಿಪಡಿಸಿದೆ.

ವಿಶೇಷ ನ್ಯಾಯಾಲಯವು ಗುರುವಾರ ತಡರಾತ್ರಿ ರಾಣಾನನ್ನು ವಿಚಾರಣೆಗಾಗಿ 18 ದಿನಗಳ ಎನ್‌ಐಎ ಕಸ್ಟಡಿಗೆ ಒಪ್ಪಿಸಿದೆ. ಕಸ್ಟಡಿ ವಿಚಾರಣೆಗೆ ಅನುಮತಿ ನೀಡಿದ ಕೆಲವೇ ಗಂಟೆಗಳಲ್ಲಿ ಎನ್‌ಐಎ ಅಧಿಕಾರಿಗಳು ವಿಚಾರಣೆ ಆರಂಭಿಸಿದರು.

ವಿಚಾರಣೆಯ ನೇತೃತ್ವವನ್ನು ಎನ್‌ಐಎ ಡಿಐಜಿ ಜಯಾ ರಾಯ್ ವಹಿಸಿದ್ದು, ಅವರು ಮುಖ್ಯ ತನಿಖಾಧಿಕಾರಿಯೂ ಆಗಿದ್ದಾರೆ ಎಂದು ಮೂಲಗಳು ತಿಳಿಸಿವೆ. 'ರಾಣಾ 18 ದಿನ ಎನ್‌ಐಎ ಕಸ್ಟಡಿಯಲ್ಲಿ ಇರಲಿದ್ದು, 2008ರ ದಾಳಿಯ ಹಿಂದಿನ ಸಂಪೂರ್ಣ ಪಿತೂರಿಯನ್ನು ಬಯಲಿಗೆಳೆಯಲು ಆತನನ್ನು ತೀವ್ರ ವಿಚಾರಣೆಗೆ ಒಳಪಡಿಸಲಾಗುವುದು' ಎಂದು ಎನ್‌ಐಎ ಶುಕ್ರವಾರ ತಿಳಿಸಿದೆ.

10ನೇ ಪುಟ ನೋಡಿ

ಎಸ್‌ಐಟಿ ತನಿಖೆಗೆ ಶೇ 40 ಲಂಚ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ವಿರುದ್ಧ ಗುತ್ತಿಗೆದಾರರು ಮಾಡಿದ್ದ ಶೇ 40 ಲಂಚ ಆರೋಪದ ಕುರಿತು ನ್ಯಾ. ಎಚ್‌.ಎನ್‌. ನಾಗಮೋಹನ್‌ದಾಸ್ ಆಯೋಗ ಸಲ್ಲಿಸಿರುವ ವರದಿಯ ಆಧಾರದಲ್ಲಿ ಹೆಚ್ಚಿನ ತನಿಖೆಗಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲು ಶುಕ್ರವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಸಚಿವ ಸಂಪುಟ ಸಭೆಯ ಬಳಿಕ ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿ, 'ತನಿಖೆ ನಡೆಸಿ ಎರಡು ತಿಂಗಳೊಳಗೆ ವರದಿ ನೀಡುವಂತೆ ಎಸ್‌ಐಟಿಗೆ ಸೂಚಿಸಲಾಗುವುದು' ಎಂದು ಹೇಳಿದರು.

ಶೇ 40 ಲಂಚ ನೀಡಿರುವುದು ಅಥವಾ ಪಡೆದಿರುವುದು ಯಾವುದಾದರೂ ಪ್ರಕರಣಗಳಲ್ಲಿ ದೃಢಪಟ್ಟ ಸಂಬಂಧ ವರದಿಯಲ್ಲಿ ಮಾಹಿತಿ ಇದೆಯೇ ಎಂಬ ಪ್ರಶ್ನೆಗೆ ಪಾಟೀಲ ಅವರು ನೇರ ಉತ್ತರ ನೀಡಲಿಲ್ಲ. ವರದಿಯನ್ನು ಇನ್ನಷ್ಟೇ ಅಧ್ಯಯನ ಮಾಡಬೇಕಿದೆ ಎಂದರು.

6ನೇ ಪುಟ ನೋಡಿ

ಸಪ್ನ ಬುಕ್ ಹೌಸ್ ನೂತನ ಶಾಖೆ ನಾಳೆ ಉದ್ಘಾಟನೆ

ಬೆಂಗಳೂರು: ಸಪ್ನ ಬುಕ್ ಹೌಸ್ ತನ್ನ 24ನೇ ಶಾಖೆಯ ಉದ್ಘಾಟನಾ ಸಮಾರಂಭವನ್ನು ಇದೇ 13ರಂದು ಬೆಳಿಗ್ಗೆ 11.30ಕ್ಕೆ ಎಲೆಕ್ಟ್ರಾನಿಕ್ ಸಿಟಿಯ ಎರಡನೇ ಹಂತದಲ್ಲಿರುವ ಎಂ5 ಇ-ಸಿಟಿ ಮಾಲ್‌ನಲ್ಲಿ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ನಿತಿನ್ ಷಾ, 'ನೂತನ ಶಾಖೆಯ ಉದ್ಘಾಟನಾ ಸಮಾರಂಭದಲ್ಲಿ ಸಾಹಿತ್ಯ ಕ್ಷೇತ್ರದ ಪ್ರಮುಖರು ಪಾಲ್ಗೊಳ್ಳುತ್ತಾರೆ.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು ಸೇರಿ 500ಕ್ಕೂ ಹೆಚ್ಚು ಬರಹಗಾರರ 7,000ಕ್ಕೂ ಹೆಚ್ಚು ಪುಸ್ತಕಗಳನ್ನು ಸಂಸ್ಥೆ ಪ್ರಕಟಿಸಿದೆ. ಒಂದೇ ಸೂರಿನಡಿ ವಿವಿಧ ವಿಷಯಗಳ ಬಗ್ಗೆ ಲಕ್ಷಕ್ಕೂ ಹೆಚ್ಚು ಶೀರ್ಷಿಕೆಗಳನ್ನು ಕಾಣಬಹುದು' ಎಂದು ಹೇಳಿದರು.

'ಮಳಿಗೆಯಲ್ಲಿ ಪುಸ್ತಕಗಳ ಜತೆಗೆ ಅಲಂಕಾರಿಕ ವಸ್ತುಗಳು, ಆಟಿಕೆಗಳು, ಕ್ರೀಡಾ ಸಾಮಗ್ರಿಗಳು ಸೇರಿ ವಿವಿಧ ವಸ್ತುಗಳು ದೊರೆಯುತ್ತವೆ' ಎಂದು ಮಾಹಿತಿ ನೀಡಿದರು.

ನೈಸ್ ಸಂಸ್ಥೆಗೆ ಸಾಧನಾ ಪ್ರಶಸ್ತಿ

ಬೆಂಗಳೂರು: ಭಾರತ ಸರ್ಕಾರದ ಯೋಜನಾ ಆಯೋಗ ಮತ್ತು ನಿರ್ಮಾಣ ಉದ್ಯಮ ಅಡಿಯಲ್ಲಿರುವ ನಿರ್ಮಾಣ ಉದ್ಯಮ ಅಭಿವೃದ್ಧಿ ಮಂಡಳಿ ಸ್ಥಾಪಿಸಿದ 16ನೇ ಸಿಐಡಿಸಿ ವಿಶ್ವಕರ್ಮ ಪ್ರಶಸ್ತಿಗೆ ವರ್ಗ 'ಎಫ್' ಅಡಿಯಲ್ಲಿ ಅತ್ಯುತ್ತಮ ನಿರ್ಮಾಣ ಯೋಜನೆಗಳಿಗಾಗಿ ಸಾಧನೆ ಪ್ರಶಸ್ತಿಯನ್ನು ನಂದಿ ಮೂಲಸೌಲಭ್ಯ ಕಾರಿಡಾರ್ ಎಂಟರ್‌ಪ್ರೈಸ್ (ನೈಸ್) ಲಿಮಿಟೆಡ್ ಪಡೆದಿದೆ.

ನವದೆಹಲಿಯ ಜನಪಥ್‌ನಲ್ಲಿರುವ ಡಾ. ಅಂಬೇಡ್ಕರ್ ಅಂತರರಾಷ್ಟ್ರೀಯ ಕೇಂದ್ರದ ಭೀಮ್ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು ಎಂದು ನೈಸ್ ವ್ಯವಸ್ಥಾಪಕ ನಿರ್ದೇಶಕ ಅಶೋಕ್ ಖೇಣಿ ತಿಳಿಸಿದ್ದಾರೆ.

ಶಿವರಾಮ ಕಾರಂತ ಬಡಾವಣೆಯಲ್ಲಿ 30 ಸಾವಿರ ನಿವೇಶನಗಳ ಅಭಿವೃದ್ಧಿಗೆ ವೇಗ

ಕಾಮಗಾರಿ ಮುಗಿಸಲು 3 ತಿಂಗಳ ಗಡುವು

• ಕೆ.ಎಸ್.ಸುನಿಲ್

ಬೆಂಗಳೂರು: ನಗರದ ಉತ್ತರ ಭಾಗದಲ್ಲಿ ನಿರ್ಮಾಣವಾಗುತ್ತಿರುವ ಪ್ರತಿಷ್ಠಿತ ಡಾ.ಶಿವರಾಮ ಕಾರಂತ (ಎಸ್.ಕೆ) ಬಡಾವಣೆಯಲ್ಲಿ ಮೂವತ್ತು ಸಾವಿರ ನಿವೇಶನ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ. ಬಾಕಿ ಕಾಮಗಾರಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಮೂರು ತಿಂಗಳು ಗಡುವು ನೀಡಲಾಗಿದೆ.

ನಾಡಪ್ರಭು ಕೆಂಪೇಗೌಡ ಬಡಾವಣೆ ಬಳಿಕ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಯಾವುದೇ ಬಡಾವಣೆಗಳ ನಿರ್ಮಾಣ ವಾಗಲಿ, ನಿವೇಶನಗಳ ಹಂಚಿಕೆಯಾಗಲಿ ಮಾಡಿರಲಿಲ್ಲ. ಹಾಗಾಗಿ ಶಿವರಾಮ ಕಾರಂತ (ಎಸ್.ಕೆ.) ಬಡಾವಣೆಯಲ್ಲಿ ನಿವೇಶನ ಖರೀದಿಸಲು ಜನರು ಕಾಯುತ್ತಿದ್ದಾರೆ.

ಬಡಾವಣೆಯಲ್ಲಿ 30 ಸಾವಿರಕ್ಕೂ ಹೆಚ್ಚು ನಿವೇಶನಗಳನ್ನು ನಿರ್ಮಿಸಲಾಗಿದ್ದು, 16-17 ಸಾವಿರ ನಿವೇಶನಗಳನ್ನು ರೈತರಿಗೆ ನೀಡಲಾಗುತ್ತದೆ. 30X40 ಅಡಿ ಮತ್ತು 40X60 ಅಡಿ ಅಳತೆಯ ನಿವೇಶನಗಳು ಹೆಚ್ಚಿನ ಸಂಖ್ಯೆಯಲ್ಲಿದೆ. ನಾಲ್ಕು ಸಾವಿರಕ್ಕೂ ಅಧಿಕ ಮೂಲೆ ನಿವೇಶನಗಳಿವೆ. ಸುಮಾರು 7-8 ಸಾವಿರ ನಿವೇಶನಗಳನ್ನು ಸಾರ್ವಜನಿಕರಿಗೆ ಹಂಚಿಕೆಗೆ ಸಿಗಲಿವೆ. ಒಂದು ಚದರ ಅಡಿಗೆ ₹4,900 ದರ ನಿಗದಿಪಡಿಸಲಾಗಿದೆ.

> ಶಿವರಾಮ ಕಾರಂತ ಬಡಾವಣೆಯಲ್ಲಿ ಬಹುತೇಕ ಕಾಮಗಾರಿ ಪೂರ್ಣಗೊಂಡಿವೆ. ಬಾಕಿ ಇರುವ ಕೆಲಸಗಳು ಶೀಘ್ರ ಮುಗಿಯಲಿದೆ.
> **ಮೋಹನ್ ಕುಮಾರ್,** ಕಾರ್ಯಪಾಲಕ ಎಂಜಿನಿಯರ್, ಬಿಡಿಎ

'ಏಪ್ರಿಲ್ ಅಂತ್ಯದ ವೇಳೆಗೆ ಕಾಮಗಾರಿಗಳು ಪೂರ್ಣಗೊಳ್ಳಬೇಕಿತ್ತು. ಕಾಮಗಾರಿ ಶೇಕಡ 80ರಷ್ಟು ಪೂರ್ಣಗೊಂಡಿದೆ. ರಸ್ತೆ ನಿರ್ಮಾಣ, ಪೈಪ್‌ಲೈನ್ ಅಳವಡಿಕೆ ಸೇರಿದಂತೆ ನಾನಾ ಕಾಮಗಾರಿಗಳನ್ನು ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಗಡುವು ನೀಡಲಾಗಿದೆ.

ಇತ್ತೀಚೆಗೆ, ಸುಪ್ರೀಂ ಕೋರ್ಟ್ ಬಿಡಿಎಗೆ ಸುಮಾರು 200 ಎಕರೆ ಜಮೀನು ಸ್ವಾಧೀನಪಡಿಸಿಕೊಳ್ಳಲು ಅನುಮತಿ ನೀಡಿದೆ' ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.



ಶಿವರಾಮ ಕಾರಂತ ಬಡಾವಣೆ ಕಾಮಗಾರಿಯ ದೃಶ್ಯ (ಸಂಗ್ರಹ ಚಿತ್ರ)

'ಬಡಾವಣೆಯಲ್ಲಿನ ಒಂಬತ್ತು ಸೆಕ್ಟರ್‌ಗಳ ಪೈಕಿ ಕೆಲವು ಸೆಕ್ಟರ್‌ಗಳಲ್ಲಿ ಶೇಕಡ 90ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಮತ್ತೆ ಕೆಲ ಸೆಕ್ಟರ್‌ಗಳಲ್ಲಿ ಶೇಕಡ 80ರಷ್ಟು ಕೆಲಸವಾಗಿದೆ. ಬೀದಿ ದೀಪಗಳನ್ನು ಅಳವಡಿಸಲಾಗಿದೆ.

ಬ್ಲಾಕ್‌ಗಳಲ್ಲಿ ನಿವೇಶನಗಳನ್ನು ಗುರುತಿಸಿ, ಅಡ್ಡ ರಸ್ತೆಗಳನ್ನು ನಿರ್ಮಿಸಲಾಗಿದೆ. ನೀರಿನ ಸಂಪರ್ಕ ಹಾಗೂ ಒಳಚರಂಡಿ ಪೈಪ್‌ಲೈನ್‌ಗಳ ಅಳವಡಿಕೆ ಕಾರ್ಯ ನಡೆಯುತ್ತಿದೆ' ಎಂದು ಅಧಿಕಾರಿಗಳು ಹೇಳಿದರು.

ಭೂಸ್ವಾಧೀನ ಸೇರಿದಂತೆ ಇತರೆ ಸಮಸ್ಯೆಗಳನ್ನು ಬಗೆಹರಿಸದೇ ನಿವೇಶನ ಹಂಚಿಕೆ ಮಾಡಲಾಗುತ್ತಿದೆ ಎಂಬ ಆರೋಪ ಬಂತು. ಹಾಗಾಗಿ ನಿವೇಶನ ಹಂಚಿಕೆಗೆ ಸಾರ್ವಜನಿಕರಿಂದ ಅರ್ಜಿ ಗಳನ್ನು ಆಹ್ವಾನಿಸಿ, ಅಧಿಸೂಚನೆ ಹೊರಡಿಸದಂತೆ ನಿರ್ಬಂಧ ವಿಧಿಸಲಾಗಿತ್ತು.

ಈ ಪ್ರಕರಣವು ನ್ಯಾಯಾಲಯದಲ್ಲಿ ಇನ್ನೂ ಇತ್ಯರ್ಥವಾಗಿಲ್ಲ. ನ್ಯಾಯಾಲಯ ಆದೇಶ ನೀಡಿದ ಕೂಡಲೇ ನಿವೇಶನ ಹಂಚಿಕೆಗೆ ಅರ್ಜಿ ಆಹ್ವಾನಿಸಲಾಗುವುದು . ಇದಕ್ಕೆ ಎಲ್ಲ ಸಿದ್ಧತೆ ನಡೆದಿದೆ ಎಂದು ಬಿಡಿಎ ಮೂಲಗಳು ತಿಳಿಸಿವೆ.

2,782 ಎಕರೆಯಲ್ಲಿ ಬಡಾವಣೆ

2008ರಲ್ಲಿ ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕಾಗಿ 3,546 ಎಕರೆ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಡಿಸಲಾಯಿತು. ಸ್ವಾಧೀನಪಡಿಸಿಕೊಂಡ ಜಮೀನಿನ ಪೈಕಿ 2,782 ಎಕರೆಯಲ್ಲಿ ನಿವೇಶನಗಳನ್ನು ನಿರ್ಮಿಸಲಾಗಿದೆ. ಬಡಾವಣೆ ನಿರ್ಮಾಣಕ್ಕೆ ಗಾಣಿಗರಹಳ್ಳಿ, ಕಾಳತಮ್ಮನಹಳ್ಳಿ, ಲಕ್ಷ್ಮೀಪುರ, ಸೋಮಶೆಟ್ಟಿಹಳ್ಳಿ, ಕೆಂಪಾಪುರ, ರಾಮಗೊಂಡನಹಳ್ಳಿ, ಹಾರೋಹಳ್ಳಿ, ಆವಲಹಳ್ಳಿ, ಗುಣಿ ಅಗ್ರಹಾರ, ಮೇಡಿ ಅಗ್ರಹಾರ, ಶಾಮರಾಜಪುರ, ವೀರಸಾಗರ ಕೆ.ಬಿ. ಕಾವಲ್, ದೊಡ್ಡಬೆಟ್ಟಹಳ್ಳಿ, ವಡೇರಹಳ್ಳಿ, ಕೆಂಪನಹಳ್ಳಿ, ಬ್ಯಾಲಕೆರೆ ಗ್ರಾಮಗಳ ರೈತರಿಂದ ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದೆ.

ಎರ್ನಾಕುಲಂ, ಬೆಳಗಾವಿಗೆ ವಿಶೇಷ ರೈಲು

ಬೆಂಗಳೂರು: ಬೆಳಗಾವಿ-ಬೆಂಗಳೂರು ಮತ್ತು ಬೆಂಗಳೂರು-ಎರ್ನಾಕುಲಂ ನಡುವೆ ಬೇಸಿಗೆ ವಿಶೇಷ ರೈಲುಗಳ ಟ್ರಿಪ್ ನಡೆಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ

ಬೇಸಿಗೆ ರಜೆಯ ಪ್ರಯಾಣಿಕರ ದಟ್ಟಣೆ ಕಡಿಮೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಏಪ್ರಿಲ್ 12ರಂದು ಬೆಳಿಗ್ಗೆ 4ಕ್ಕೆ ಬೆಳಗಾವಿಯಿಂದ ಹೊರಡುವ ರೈಲು ಮಧ್ಯಾಹ್ನ 3.30ಕ್ಕೆ ಎಸ್‌ಎಂವಿಟಿ ಬೆಂಗಳೂರು ತಲುಪಲಿದೆ. ಲೋಂಡಾ, ಅಳ್ನಾವರ, ಧಾರವಾಡ, ಎಸ್‌ಎಸ್‌ಎಸ್ ಹುಬ್ಬಳ್ಳಿ, ಎಸ್‌ಎಂಎಂ ಹಾವೇರಿ, ದಾವಣಗೆರೆ, ಬೀರೂರು, ಅರಸೀಕೆರೆ, ತುಮಕೂರು ಮತ್ತು ಚಿಕ್ಕಬಾಣಾವರ ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿರಲಿದೆ.

ಎಸ್‌ಎಂವಿಟಿಯಿಂದ ಎರ್ನಾಕುಲಂಗೆ ವಿಶೇಷ ಟ್ರಿಪ್ ಇರಲಿದೆ. ಏ.12ರಂದು ಸಂಜೆ 4.35ಕ್ಕೆ ಹೊರಡುವ ರೈಲು ಮರುದಿನ ಮುಂಜಾನೆ 3ಕ್ಕೆ ಎರ್ನಾಕುಲಂ ತಲುಪಲಿದೆ. ಏ.14ರಂದು ರಾತ್ರಿ 10ಕ್ಕೆ ಹೊರಟು ಮರುದಿನ ಬೆಳಿಗ್ಗೆ 10.55ಕ್ಕೆ ಬೆಂಗಳೂರು ತಲುಪಲಿದೆ. ಕೃಷ್ಣರಾಜಪುರ, ಬಂಗಾರಪೇಟೆ, ಸೇಲಂ, ಈರೋಡ್, ತಿರುಪ್ಪೂರು, ಪೊದನೂರು, ಪಾಲಕ್ಕಾಡ್, ತ್ರಿಶೂರ್ , ಅಲುವಾಗಳಲ್ಲಿ ನಿಲುಗಡೆ ಹೊಂದಿದೆ.

ಮಾಯಸಂದ್ರದಲ್ಲಿ ವೈಭವದ ಕರಗ

ಆನೇಕಲ್: ತಾಲ್ಲೂಕಿನ ಮಾಯಸಂದ್ರದ ಧರ್ಮರಾಯ ಸ್ವಾಮಿ ದ್ರೌಪದಮ್ಮ ಕರಗ ಮಹೋತ್ಸವ ಗುರುವಾರ ರಾತ್ರಿ ವೈಭವದಿಂದ ನಡೆಯಿತು.

ಸುತ್ತಮುತ್ತಲ ಗ್ರಾಮಗಳ ಭಕ್ತರು ವೈಭವದ ಕರಗ ಮಹೋತ್ಸವಕ್ಕೆ ಸಾಕ್ಷಿಯಾದರು. ಕರಗ ಕಣ್ತುಂಬಿಕೊಳ್ಳಲು ಆನೇಕಲ್, ಹಾರೋಹಳ್ಳಿ, ಹಳೇಹಳ್ಳಿ, ಶೆಟ್ಟಿಹಳ್ಳಿ, ಬಂಡಾಪುರ, ಅತ್ತಿಬೆಲೆ ಸೇರಿದಂತೆ ವಿವಿಧ ಗ್ರಾಮಗಳ ಭಕ್ತರು ಮಾಯಸಂದ್ರದಲ್ಲಿ ಜಮಾಯಿಸಿದ್ದರು.

ದೇವಾಲಯದ ಮುಂಭಾಗದ ವಿಶಾಲ ಬಯಲಿನಲ್ಲಿ ಅದ್ಭುತ ಕರಗ ನೃತ್ಯ ನಡೆಯಿತು.

ಪಂಕಜ ಕಸ್ತೂರಿ– ಐಐಐಎಂ ಪಾಲುದಾರಿಕೆ

ಬೆಂಗಳೂರು: ವೈಜ್ಞಾನಿಕ ವಿಧಾನದ ಮೂಲಕ ಆಯುರ್ವೇದ ಪದ್ಧತಿಗೆ ಮತ್ತಷ್ಟು ಬಲ ನೀಡುವ ನಿಟ್ಟಿನಲ್ಲಿ ಪಂಕಜ ಕಸ್ತೂರಿ ಇಂಡಿಯಾ ಕಂಪನಿ ಮತ್ತು ಜಮ್ಮುವಿನ ಸಿಎಸ್‌ಐಆರ್–ಐಐಐಎಂ ಸಂಸ್ಥೆಯು ಪಾಲುದಾರಿಕೆ ಒಪ್ಪಂದಕ್ಕೆ ಅಂಕಿತ ಹಾಕಿವೆ.

ಐಐಐಎಂ ನಿರ್ದೇಶಕ ಡಾ.ಜಬೀರ್ ಅಹ್ಮದ್ ಅವರ ನೇತೃತ್ವದಡಿ ವೈಜ್ಞಾನಿಕ ವಿಧಾನ ಅನುಸರಿಸುವ ಕಾರ್ಯ ನಡೆಯಲಿದೆ. ಸಾಂಪ್ರದಾಯಿಕ ಜ್ಞಾನ ಮತ್ತು ವೈಜ್ಞಾನಿಕ ಸಂಶೋಧನೆ ಮೂಲಕ ಆಯುರ್ವೇದ ಪದ್ಧತಿಗೆ ಹೆಚ್ಚಿನ ಪ್ರೋತ್ಸಾಹ ನೀಡುವುದು ಈ ಒಪ್ಪಂದದ ಮೂಲ ಉದ್ದೇಶವಾಗಿದೆ ಎಂದು ಪಂಕಜ ಕಸ್ತೂರಿ ಕಂಪನಿ ತಿಳಿಸಿದೆ.ಮತ್ತೊಂದೆಡೆ ಪಂಕಜ ಕಸ್ತೂರಿ ಬ್ರೀತ್ ಈಸಿ ಔಷಧವು ಉಸಿರಾಟ ತೊಂದರೆಗೆ ಪರಿಹಾರ ನೀಡಲಿದೆ. ಮಾರುಕಟ್ಟೆಯಲ್ಲಿ ಮುಂಚೂಣಿ ಸ್ಥಾನ ಕಾಯ್ದುಕೊಂಡಿದೆ ಎಂದು ಹೇಳಿದೆ.

'ಐಐಐಎಂ ಸಂಸ್ಥೆಯ ಜೊತೆಗಿನ ಪಾಲುದಾರಿಕೆ ಆಯುರ್ವೇದ ಔಷಧಗಳ ಬಗ್ಗೆ ಮತ್ತಷ್ಟು ನಂಬಿಕೆ ಬಲಗೊಳ್ಳಲು ಮತ್ತು ಇದಕ್ಕೆ ವೈಜ್ಞಾನಿಕ ಮನ್ನಣೆ ಸಿಗಲು ನೆರವಾಗಲಿದೆ' ಎಂದು ಪಂಕಜ ಕಸ್ತೂರಿ ಕಂಪನಿ ಸಂಸ್ಥಾಪಕ ಡಾ.ಜೆ. ಹರೀಂದ್ರನ್ ನಾಯರ್ ಹೇಳಿದ್ದಾರೆ.

ತ್ಯಾಜ್ಯ ವಿಂಗಡಣೆಗೆ ಆದ್ಯತೆ ನೀಡಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭೂಭರ್ತಿ ಪ್ರದೇಶದಲ್ಲಿ ಮಿಶ್ರ ತ್ಯಾಜ್ಯ ಪ್ರಮಾಣವನ್ನು ಕಡಿಮೆ ಮಾಡಲು ಮೂಲದಲ್ಲಿ ಕಸ ವಿಂಗಡಣೆ ಪ್ರಮಾಣವನ್ನು ಹೆಚ್ಚಿಸಬೇಕು ಎಂದು ಸ್ವಚ್ಛ ಭಾರತ ಮಿಷನ್ ನಿರ್ದೇಶಕ ಬಿನಯ್ ಝಾ ಸಲಹೆ ನೀಡಿದರು.

ಸ್ವಚ್ಛ ಭಾರತ ಅಭಿಯಾನದ ಧ್ಯೇಯೋದ್ದೇಶಗಳಲ್ಲಿ ಒಂದಾಗಿರುವ ಘನ ತ್ಯಾಜ್ಯದ ಸಮರ್ಪಕ ನಿರ್ವಹಣೆಯ ಕುರಿತು ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಅವರು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳಿಂದ ಶುಕ್ರವಾರ ಮಾಹಿತಿ ಪಡೆದರು.



ಭೂಭರ್ತಿ ಘಟಕಗಳಿಗೆ ಭೇಟಿ ನೀಡಿ, ವೈಜ್ಞಾನಿಕವಾಗಿ ನಿರ್ವಹಿಸಲಾಗುತ್ತಿರುವ ಮಿಶ್ರ ತ್ಯಾಜ್ಯ ವಿಲೇವಾರಿಯನ್ನು ಗಮನಿಸಿದರು. ಈ ಘಟಕಗಳಲ್ಲಿ ಮಿಶ್ರ ತ್ಯಾಜ್ಯ ವಿಲೇವಾರಿ ಕಡಿಮೆ ಮಾಡಬೇಕು. ಮೂಲದಲ್ಲಿ ತ್ಯಾಜ್ಯ ವಿಂಗಡಣೆ ಬಗ್ಗೆ ಸಾರ್ವಜನಿಕರಿಗೆ ಹೆಚ್ಚು ಅರಿವು ಮೂಡಿಸಬೇಕು ಎಂದು ಹೇಳಿದರು.

ಮುಕ್ಕಾ ಪ್ರೊಟೀನ್ಸ್ ಸಂಸ್ಥೆ ವತಿಯಿಂದ ₹150 ಕೋಟಿ ವೆಚ್ಚದಲ್ಲಿ ಅಂತರರಾಷ್ಟ್ರೀಯ ತಂತ್ರಜ್ಞಾನ ದೊಂದಿಗೆ ನಿರ್ಮಾಣವಾಗುತ್ತಿರುವ ತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ಬಿನಯ್ ಝಾ ಭೇಟಿ ನೀಡಿದ್ದರು. 1,000 ಟನ್ ಸಾಮರ್ಥ್ಯದ ಸಂಸ್ಕರಣೆ ಘಟಕವನ್ನು ಖಾಸಗಿ ಸಂಸ್ಥೆ ನಿರ್ಮಿಸುತ್ತಿರುವ ಬಗ್ಗೆ ಹರ್ಷ ವ್ಯಕ್ತಪಡಿಸಿದ ಅವರು, 'ಈ ತಂತ್ರಜ್ಞಾನದ ವಿವರವನ್ನು ನೀಡಿದರೆ ದೇಶದ ಇತರೆ ನಗರಗಳಲ್ಲಿನ ಪಾಲಿಕೆಗಳು ಅಳವಡಿಸಿಕೊಳ್ಳುವಂತೆ ಮಾರ್ಗಸೂಚಿ ಹೊರಡಿಸಲಾಗುತ್ತದೆ' ಎಂದರು.

ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಸ್ವಚ್ಛ ಭಾರತ್ ಮಿಷನ್ (ನಗರ) 2.0 ಮಿಷನ್ ನಿರ್ದೇಶಕ ಬಿನಯ್ ಝಾ ಅವರಿಗೆ ಬಿಎಸ್‌ಡಬ್ಲ್ಯುಎಂಎಲ್‌ನ ಸಿಇಒ ಕೆ. ಹರೀಶ್ ಕುಮಾರ್ ಅವರು, ಘನತ್ಯಾಜ್ಯ ನಿರ್ವಹಣೆ ಯೋಜನೆಗಳ ಬಗ್ಗೆ ಪ್ರಾತ್ಯಕ್ಷಿಕೆ ಮೂಲಕ ಮಾಹಿತಿ ನೀಡಿದರು.

ನಗರದಲ್ಲಿ ಪ್ರಸ್ತುತ ಪ್ರತಿನಿತ್ಯ 6,500 ಟನ್ ತ್ಯಾಜ್ಯ ಉತ್ಪತ್ತಿಯಾಗುತ್ತಿದ್ದು, ಪ್ರತಿ ಮನೆಯಿಂದ ಆಟೊ ಟಿಪ್ಪರ್‌ಗಳ ಮೂಲಕ ಹಸಿ, ಒಣ ಹಾಗೂ ನೈರ್ಮಲ್ಯ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಲಾಗುತ್ತಿದೆ. ಕಸ ಸಂಗ್ರಹಿಸುವ ಆಟೊ ಟಿಪ್ಪರ್ ಹಾಗೂ ಕಾಂಪ್ಯಾಕ್ಟರ್‌ಗಳ ಹಾಜರಾತಿಯನ್ನು ಮಾರ್ಷಲ್‌ಗಳು ಮೊಬೈಲ್ ತಂತ್ರಾಂಶದ ಮೂಲಕ ಪಡೆಯುತ್ತಿದ್ದಾರೆ. ರಸ್ತೆ ಬದಿ ತ್ಯಾಜ್ಯ ಬಿಸಾಡುವವರಿಗೆ ಮಾರ್ಷಲ್‌ಗಳು ದಂಡ ವಿಧಿಸುತ್ತಿದ್ದಾರೆ ಎಂದರು.

ಇದಲ್ಲದೆ ಘನತ್ಯಾಜ್ಯ ನಿರ್ವಹಣೆಯ ಮೇಲ್ವಿಚಾರಣೆಗಾಗಿ 'ಇಂಟಿಗ್ರೇಟೆಡ್ ಕಮಾಂಡ್ ಕಂಟ್ರೋಲ್ ಸೆಂಟರ್' ನಿರ್ಮಾಣ, ಕಸ ವಿಲೇವಾರಿಯ ಮೇಲ್ವಿಚಾರಣೆಗಾಗಿ ತಂತ್ರಾಂಶಗಳ ಅಭಿವೃದ್ಧಿಪಡಿಸುತ್ತಿರುವ ಬಗ್ಗೆಯೂ ಮಾಹಿತಿ ನೀಡಿದರು. ಬಿಎಸ್‌ಡಬ್ಲ್ಯುಎಂಎಲ್ ಮುಖ್ಯ ಕಾರ್ಯಾಚರಣೆ ಅಧಿಕಾರಿ ರಮಾಮಣಿ, ಮುಖ್ಯ ಪ್ರಧಾನ ವ್ಯವಸ್ಥಾಪಕರಾದ ಲೋಕೇಶ್ ಉಪಸ್ಥಿತರಿದ್ದರು.

14ರಂದು ಭೀಮ ರಥೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿ.ಆರ್. ಅಂಬೇಡ್ಕರ್ ಅವರ 134ನೇ ಜಯಂತಿ ಅಂಗವಾಗಿ ಸಮತಾ ಸೈನಿಕ ದಳವು ಇದೇ 14ರಂದು ಭೀಮ ರಥೋತ್ಸವ ಮತ್ತು ಭೀಮರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಸ್ವಾತಂತ್ರ್ಯ ಉದ್ಯಾನದಲ್ಲಿ ಹಮ್ಮಿಕೊಂಡಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮತಾ ಸೈನಿಕ ದಳದ ಪ್ರಧಾನ ಕಾರ್ಯದರ್ಶಿ ಜಿ.ಸಿ. ವೆಂಕಟರಮಣಪ್ಪ, 'ಅಂದು ಬೆಳಿಗ್ಗೆ 10 ಗಂಟೆಗೆ ವಿಧಾನಸೌಧದ ಬಳಿ ಇರುವ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಸ್ವಾತಂತ್ರ್ಯ ಉದ್ಯಾನದವರೆಗೆ ಜಾನಪದ ಕಲಾ ತಂಡಗಳ ಮೆರವಣಿಗೆ ನಡೆಸಲಾಗುವುದು. ಬಹಿರಂಗ ಸಮಾವೇಶವನ್ನು ಲೇಖಕಿ ಬಿ.ಟಿ. ಲಲಿತಾ ನಾಯಕ್ ಉದ್ಘಾಟಿಸುತ್ತಾರೆ' ಎಂದು ಹೇಳಿದರು.

'ನೇತ್ರತಜ್ಞ ಡಾ.ಎಚ್.ಆರ್. ಸುರೇಂದ್ರ ಅವರಿಗೆ 2025ನೇ ಸಾಲಿನ 'ಭೀಮರತ್ನ ಪ್ರಶಸ್ತಿ' ಪ್ರದಾನ ಮಾಡಲಾಗುವುದು. ಪ್ರಶಸ್ತಿಯು ₹ 25 ಸಾವಿರ ನಗದು ಒಳಗೊಂಡಿದೆ' ಎಂದು ತಿಳಿಸಿದರು.

ಇಂದು ಬೆಂಗಳೂರು ಕರಗ, ಪೇಟೆಗಳಲ್ಲಿ ಸಡಗರ, ಹಸಿರು ತೋರಣ, ಜನರ ಕಾತರ

ಹಸಿ ಕರಗ; ಮಲ್ಲಿಗೆಯ ಘಮ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇತಿಹಾಸ ಪ್ರಸಿದ್ಧ 'ಬೆಂಗಳೂರು ಕರಗ'ದ ಮುನ್ನಾ ದಿನ ಶುಕ್ರವಾರ ಹಸಿ ಕರಗದ ಮೆರವಣಿಗೆ, ಪೂಜೆ, ಆರತಿಗಳು ವಿಜೃಂಭಣೆಯಿಂದ ನಡೆದವು. ಶನಿವಾರ ರಾತ್ರಿ ಕರಗ ನಡೆಯಲಿದ್ದು, ಧರ್ಮರಾಯಸ್ವಾಮಿ ದೇವಸ್ಥಾನದ ಸುತ್ತಮುತ್ತಲಿನ ಪೇಟೆಗಳಲ್ಲಿ ಹಸಿರು ತೋರಣ, ಮಲ್ಲಿಗೆ ಹೂವಿನ ಘಮ ಪಸರಿಸಿದೆ.

ಸಂಪಂಗಿ ಕೆರೆಯ ಕರಗದ ಕುಂಟೆಯಲ್ಲಿರುವ ಶಕ್ತಿ ಪೀಠದಲ್ಲಿ ಗುರುವಾರ ರಾತ್ರಿಯಿಂದ ಹಸಿ ಕರಗದ ಪೂಜಾ ವಿಧಿಗಳು, ಧಾರ್ಮಿಕ ಆಚರಣೆಗಳು ನಡೆದವು. ಶುಕ್ರವಾರ ನಸುಕಿನಲ್ಲಿ ಹಸಿ ಕರಗ ಸಿದ್ಧಗೊಂಡಿತು. ವಿಶೇಷ ಪೂಜೆಯ ನಂತರ, ಹೂವಿನ ವೇಷಭೂಷಣದೊಂದಿಗೆ ಸಿದ್ಧರಾದ ಅರ್ಚಕ ಎ. ಜ್ಞಾನೇಶ್ ಒಂದು ಕೈಯಲ್ಲಿ ಕತ್ತಿ ಹಿಡಿದು, ಸೊಂಟದಲ್ಲಿ ಹಸಿ ಕರಗವನ್ನು ಹೊತ್ತು ಸಾಗಿದರು.

ಸಂಪಂಗಿ ಕೆರೆಯಿಂದ ಹಡ್ಸನ್ ವೃತ್ತದತ್ತ ಸಾಗಿ ಬಿಬಿಎಂಪಿ ಕೇಂದ್ರ ಕಚೇರಿಯಲ್ಲಿರುವ ಆದಿಶಕ್ತಿ ದೇವಸ್ಥಾನದಲ್ಲಿ ಹಸಿ ಕರಗದ ಪೂಜೆ ನಡೆಯಿತು. ಮೆರವಣಿಗೆಯುದ್ದಕ್ಕೂ ನೂರಾರು ವೀರಕುಮಾರರು ಸಾಗಿದರು. ಧರ್ಮರಾಯಸ್ವಾಮಿ ದೇವಸ್ಥಾನದ ಅಂಗಳದಲ್ಲಿ ವೀರಕುಮಾರರು ಧಾರ್ಮಿಕ ಸಂಪ್ರದಾಯಗಳನ್ನು ನೆರವೇರಿಸಿದರು. ವಿಶೇಷ ಪೂಜೆ ನಂತರ ಶುಕ್ರವಾರ ಮುಂಜಾನೆ, ಧರ್ಮರಾಯಸ್ವಾಮಿ ದೇವಸ್ಥಾನದ ಒಳಭಾಗವನ್ನು ಹಸಿ ಕರಗ ತಲುಪಿತು.

ಶನಿವಾರ ಹೂವಿನ ಕರಗ: ಪ್ರಸಿದ್ಧ ದ್ರೌಪದಿದೇವಿ ಕರಗ ಶಕ್ತೋತ್ಸವ (ಬೆಂಗಳೂರು ಕರಗ) ಚೈತ್ರ ಪೌರ್ಣಿಮೆಯಾದ ಏಪ್ರಿಲ್ 12ರ ಶನಿವಾರ ನಡೆಯಲಿದೆ. ತಿಗಳರ ಪೇಟೆಯಲ್ಲಿರುವ ಧರ್ಮರಾಯ ಸ್ವಾಮಿ ದೇವಸ್ಥಾನದಲ್ಲಿ ಶನಿವಾರ ಸಂಜೆಯಿಂದ ಧಾರ್ಮಿಕ ಕಾರ್ಯಕ್ರಮಗಳು ನಡೆಯಲಿದ್ದು, ಪೂಜಾ ವಿಧಿಗಳನ್ನು ಪೂರೈಸಿದ ನಂತರ ಜ್ಞಾನೇಂದ್ರ ಅವರು ಶನಿವಾರ ತಡರಾತ್ರಿ ಕರಗ ಹೊತ್ತು ಸಾಗಲಿದ್ದಾರೆ. ಜ್ಞಾನೇಂದ್ರ ಅವರು 15ನೇ ಬಾರಿ ಕರಗವನ್ನು ಹೊರಲಿದ್ದಾರೆ.

ಧರ್ಮರಾಯಸ್ವಾಮಿ ದೇವಸ್ಥಾನದಿಂದ ಹೊರಬರುವ ಕರಗ, ಗಣಪತಿ ಮತ್ತು ಮುತ್ಯಾಲಮ್ಮ ದೇವಾಲಯ, ಹಲಸೂರು ಪೇಟೆಯ ಆಂಜನೇಯ ಸ್ವಾಮಿ, ರಾಮ ದೇವಾಲಯದಲ್ಲಿ ಪೂಜೆ ಸ್ವೀಕರಿಸಿ, ನಗರ್ತಪೇಟೆ, ಸಿದ್ದಣ್ಣ ಗಲ್ಲಿ, ಕಬ್ಬನ್‌ಪೇಟೆ, ಗಾಣಿಗರ ಪೇಟೆ, ದೊಡ್ಡ ಪೇಟೆಯಿಂದ ಕೆ.ಆರ್. ಮಾರುಕಟ್ಟೆ ತಲುಪಲಿದೆ. ಮಸ್ತಾನ್ ಸಾಬ್ ದರ್ಗಾಕ್ಕೆ ಭೇಟಿ ನೀಡಿ, ಅಲ್ಲಿಂದ ಬಳೇಪೇಟೆ ಹಳೇಗರಡಿ, ಅಣ್ಣಮ್ಮನ ದೇವಾಲಯ, ಕಿಲಾರಿ ರಸ್ತೆ, ಯಲಹಂಕ ಗೇಟ್, ಅವೆನ್ಯೂ ರಸ್ತೆ, ಕುಂಬಾರಪೇಟೆ, ಗೊಲ್ಲರಪೇಟೆ, ತಿಗಳರ ಪೇಟೆಗಳಲ್ಲಿ ಸಾಗಲಿದೆ. ಭಾನುವಾರ ಸೂರ್ಯೋದಯದ ಮುನ್ನ ಧರ್ಮರಾಯಸ್ವಾಮಿ ದೇವಸ್ಥಾನಕ್ಕೆ ಕರಗ ಹಿಂದಿರುಗಲಿದೆ.

ಧರ್ಮರಾಯಸ್ವಾಮಿ ದೇವಸ್ಥಾನದಿಂದ ಕರಗ ಹೊರಟ ಬಳಿಕ ಧರ್ಮರಾಯಸ್ವಾಮಿ ಮಹಾರಥೋತ್ಸವ ಆರಂಭವಾಗಲಿದೆ. ಇದರ ಹಿಂದೆ, ನಗರದ ಹಲವು ಭಾಗಗಳಲ್ಲಿರುವ ದೇವಸ್ಥಾನಗಳಿಂದ ಬರುವ ಪಲ್ಲಕ್ಕಿಗಳು ಸಾಗಲಿವೆ.



ಧರ್ಮರಾಯಸ್ವಾಮಿ ದೇವಸ್ಥಾನದ ಅಂಗಳದಲ್ಲಿ ಶುಕ್ರವಾರ ಮುಂಜಾನೆ ನೂರಾರು ವೀರಕುಮಾರರು ಹಸಿ ಕರಗ ಪೂಜೆ ನೆರವೇರಿಸಿದರು

ಪ್ರಜಾವಾಣಿ ಚಿತ್ರ: ಎಂ. ಎಸ್. ಮಂಜುನಾಥ್

ನಾಳೆ ವೃತ್ತಿ ಮಾರ್ಗದರ್ಶನ ಮೇಳ

ಬೆಂಗಳೂರು: ಪದ್ಮಶ್ರೀ ಶಿಕ್ಷಣ ಸಂಸ್ಥೆಗಳ ಸಮೂಹವು ಏ.13ರಂದು ಬೃಹತ್ 'ವೃತ್ತಿ ಮಾರ್ಗದರ್ಶನ ಮೇಳ'ವನ್ನು ಕೊಮ್ಮಘಟ್ಟದ ಕ್ಯಾಂಪಸ್‌ನಲ್ಲಿ ಆಯೋಜಿಸಿದೆ. 2,000ಕ್ಕೂ ಹೆಚ್ಚು ಕಾಲೇಜು ವಿದ್ಯಾರ್ಥಿಗಳು ಪಾಲ್ಗೊಳ್ಳಲಿದ್ದಾರೆ ಎಂದು ಸಮೂಹದ ಅಧ್ಯಕ್ಷ ಸಿ.ಎನ್. ಸತೀಶ ತಿಳಿಸಿದ್ದಾರೆ.

ಉನ್ನತ ಶಿಕ್ಷಣ ಅವಕಾಶಗಳು, ವೃತ್ತಿ ಅವಕಾಶಗಳು, ವಿದ್ಯಾರ್ಥಿವೇತನ ಸೌಲಭ್ಯಗಳು, ಕೌಶಲಾಭಿವೃದ್ಧಿ ಇತ್ಯಾದಿಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮೋಜಿನಿಂದ ಕೂಡಿದ ಪ್ರಾಯೋಗಿಕ ಚಟುವಟಿಕೆಗಳ ಮೂಲಕ ತಿಳಿವಳಿಕೆ ಮೂಡಿಸಲಾಗುವುದು. ಶಾಸಕ ಸಿ.ಎನ್. ಅಶ್ವತ್ಥ ನಾರಾಯಣ, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಜಯಕರ ಶೆಟ್ಟಿ ಪಾಲ್ಗೊಳ್ಳಲಿದ್ದಾರೆ.

ಪ್ರತಿಸ್ಪಂದನಾತ್ಮಕ ವೃತ್ತಿ ಮಾರ್ಗದರ್ಶನ ಕೌಂಟರ್, ಅಣಕು ಸಂದರ್ಶನ, ಕರಿಯರ್ ಗೇಮ್, ವ್ಯಕ್ತಿತ್ವ ಪರೀಕ್ಷೆ ಹಾಗೂ ಪರಿಣತರಿಂದ ಗೋಷ್ಠಿಗಳಿಗೆ ಮೇಳದಲ್ಲಿ ವ್ಯವಸ್ಥೆ ಮಾಡಲಾಗಿದೆ ಎಂದು ಸತೀಶ ಮಾಹಿತಿ ನೀಡಿದ್ದಾರೆ.


ಸಂಚಾರ ಸಂಪರ್ಕ ದಿನ ಇಂದು

ಬೆಂಗಳೂರು: ನಗರ ಸಂಚಾರ ವಿಭಾಗದ ಪೊಲೀಸರು (ಪೂರ್ವ ವಿಭಾಗ) ಏಪ್ರಿಲ್ 12ರಂದು ಸಂಚಾರ ಸಂಪರ್ಕ ದಿನ ಹಮ್ಮಿಕೊಂಡಿದ್ದಾರೆ.

ಇಂದಿರಾನಗರದ 100 ಅಡಿ ರಸ್ತೆಯ ಇಸಿಎ ಕ್ಲಬ್‌ನಲ್ಲಿ ಅಂದು ಬೆಳಿಗ್ಗೆ 11ಕ್ಕೆ ಸಂಚಾರ ಸಂಪರ್ಕ ದಿನ ನಡೆಯಲಿದೆ. ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ, ಎಂ.ಎನ್.ಅನುಚೇತ್, ಸಾಹಿಲ್ ಬಾಗ್ಲಾ ಪಾಲ್ಗೊಳ್ಳಲಿದ್ದಾರೆ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.

ಬೋಧನಾ ತರಗತಿ: ಸ್ಪಷ್ಟನೆಗೆ ಆಗ್ರಹ

ಪ್ರಜಾವಾಣಿ ವಾರ್ತೆ



ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗಾಗಿ ವಿಶೇಷ ಪರಿಹಾರ ಬೋಧನಾ ತರಗತಿಗಳು ನಡೆಸಬೇಕೆಂದು ಪದವಿ ಪೂರ್ವ ಶಿಕ್ಷಣ ಇಲಾಖೆ ಹೊರಡಿಸಿದ ಆದೇಶದಲ್ಲಿ ಕಳೆದ ಶೈಕ್ಷಣಿಕ ವರ್ಷ ಸೇವೆ ಸಲ್ಲಿಸಿರುವ ಅತಿಥಿ ಉಪನ್ಯಾಸಕರ ಬಗ್ಗೆ ಸ್ಪಷ್ಟನೆ ನೀಡಿಲ್ಲ ಎಂದು ಸರ್ಕಾರಿ ಪದವಿಪೂರ್ವ ಕಾಲೇಜುಗಳ ಅತಿಥಿ ಉಪನ್ಯಾಸಕರ ಸಂಘಟನೆ ತಿಳಿಸಿದೆ.

ರಾಜ್ಯದಲ್ಲಿ 4,000ಕ್ಕಿಂತ ಹೆಚ್ಚು ಅತಿಥಿ ಉಪನ್ಯಾಸಕರು ಪದವಿ ಪೂರ್ವ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿದ್ದು, ಹಲವಾರು ಕಾಲೇಜುಗಳಲ್ಲಿ ಪ್ರಾಂಶುಪಾಲರನ್ನು ಬಿಟ್ಟರೆ ಉಳಿದ ಎಲ್ಲರೂ ಅತಿಥಿ ಉಪನ್ಯಾಸಕರುಗಳೇ ಆಗಿದ್ದಾರೆ. ಆದ್ದರಿಂದ ತರಗತಿಗಳಿಗೆ ಅತಿಥಿ ಉಪನ್ಯಾಸಕರ ಅವಶ್ಯಕತೆ ಬಗ್ಗೆ ಪದವಿ ಪೂರ್ವ ಇಲಾಖೆ ಸ್ಪಷ್ಟನೆ ನೀಡಬೇಕು ಎಂದು ಸಂಘಟನೆ ಅಧ್ಯಕ್ಷ ಪದ್ಮಪ್ರಭ ಇಂದ್ರ ಆಗ್ರಹಿಸಿದ್ದಾರೆ.

ಅವಶ್ಯಕತೆ ಇರುವ ಕಾಲೇಜುಗಳಲ್ಲಿ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ಗುಣಮಟ್ಟದ ಶಿಕ್ಷಣಕ್ಕಾಗಿ ಅತಿಥಿ ಉಪನ್ಯಾಸಕರು ಬೋಧನಾ ತರಗತಿಗಳನ್ನು ನಡೆಸಿಕೊಡಲು ಸಿದ್ಧ. ಆದರೆ, ಸರ್ಕಾರ ಮತ್ತು ಪದವಿ ಪೂರ್ವ ಇಲಾಖೆ ಸೂಕ್ತ ಗೌರವಧನ ನೀಡಬೇಕು ಎಂದು ಮನವಿ ಮಾಡಿದ್ದಾರೆ.

ಮಾರ್ಚ್‌ನಲ್ಲಿ ನಡೆದ ಪ್ರಥಮ ಹಾಗೂ ದ್ವಿತೀಯ ಪಿಯುಸಿ ಉತ್ತರ ಪತ್ರಿಕೆಗಳ ಮೌಲ್ಯಮಾಪನದ ಮಾರ್ಚ್ ತಿಂಗಳ ಗೌರವಧನ ನೀಡಿಲ್ಲ. ಕೂಡಲೇ ಪದವಿ ಪೂರ್ವ ಶಿಕ್ಷಣ ಇಲಾಖೆ ಅತಿಥಿ ಉಪನ್ಯಾಸಕರಿಗೆ ಮಾರ್ಚ್ ತಿಂಗಳ ಗೌರವಧನ ನೀಡಬೇಕು ಎಂದು ಕಾರ್ಯದರ್ಶಿ ರಾಜೇಶ್ ಭಟ್ ಒತ್ತಾಯಿಸಿದ್ದಾರೆ.

ಸ.ರ.ಸುದರ್ಶನ್‌ಗೆ ಕಸಾಪ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



ಸ.ರ.ಸುದರ್ಶನ್

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಕನ್ನಡ ಚಳವಳಿ ವೀರ ಸೇನಾನಿ ಮ. ರಾಮಮೂರ್ತಿ ದತ್ತಿ ಪ್ರಶಸ್ತಿ'ಗೆ ಕನ್ನಡ ಪರ ಹೋರಾಟಗಾರ ಸ.ರ.ಸುದರ್ಶನ್ ಆಯ್ಕೆಯಾಗಿದ್ದಾರೆ.

ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಈ ಪ್ರಶಸ್ತಿಯು ₹10 ಸಾವಿರ ನಗದು ಒಳಗೊಂಡಿದೆ.

ರಾಜ್ಯದಾದ್ಯಂತ ಕನ್ನಡ ಚಳವಳಿಗೆ ಶಕ್ತಿ, ಹೋರಾಟದ ಸ್ಫೂರ್ತಿ ತುಂಬಿದ ಮ.ರಾಮಮೂರ್ತಿ ಅವರ ಹೆಸರಿನಲ್ಲಿ ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ಈ ದತ್ತಿ ಸ್ಥಾಪಿಸಿದೆ. ಕನ್ನಡ ನಾಡು-ನುಡಿ, ನೆಲ-ಜಲ, ಸಂಸ್ಕೃತಿ ರಕ್ಷಣೆ ಹಾಗೂ ಪ್ರಗತಿಗೆ ಶ್ರಮಿಸಿ, ಎಲೆ ಮರೆಯ ಕಾಯಿಗಳಂತಿರುವ ಕನ್ನಡ ಕಾರ್ಯಕರ್ತರಿಗೆ ಈ ಗೌರವ ಸಲ್ಲಬೇಕೆಂಬುದು ಪ್ರಶಸ್ತಿಯ ಆಶಯವಾಗಿದೆ.

ಮೈಸೂರಿನ ಸ.ರ.ಸುದರ್ಶನ ಅವರು ಗೋಕಾಕ್ ಚಳವಳಿಯ ಆರಂಭದಿಂದಲೂ ಕನ್ನಡ ಪರ ಹೋರಾಟಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಎಂದು ಪ್ರಕಟಣೆ ತಿಳಿಸಿದೆ.

ಮನೋಸ್ಥೈರ್ಯದ ಮೀರಾ

ಏಪ್ರಿಲ್ 17 ಹಿಮೊಫಿಲಿಯಾ ದಿನ

ಅನಿತಾ ಎಚ್.

ರಕ್ತ ಹೆಪ್ಪುಗಟ್ಟುವ ಪ್ರೊಟೀನುಗಳ ಕೊರತೆಯಿಂದ ಉಂಟಾಗುವ ರಕ್ತಸ್ರಾವ ರೋಗ ಹಿಮೊಫಿಲಿಯಾ (ಕುಸುಮ ರೋಗ) ಗುಣಪಡಿಸಲಾಗದ ವಿರಳ ಸಮಸ್ಯೆ. ಕೆಲ ತಾಯಂದಿರಲ್ಲಿನ ನ್ಯೂನತೆಯುಳ್ಳ ವಂಶವಾಹಿನಿಯಿಂದಾಗಿ ಮಕ್ಕಳು ಹಿಮೊಫಿಲಿಯಾಗೆ ತುತ್ತಾಗುತ್ತಾರೆ. ಈ ವಿಚಾರದಲ್ಲಿ ತಾಯಂದಿರ ಸಂಕಟ ಹೇಳತೀರದು. ಇಂಥವರಲ್ಲಿ ಮನೋಸ್ಥೈರ್ಯ ತುಂಬುತ್ತಿದ್ದಾರೆ ದಾವಣಗೆರೆಯಲ್ಲಿರುವ ಕರ್ನಾಟಕ ಹಿಮೊಫಿಲಿಯಾ ಸೊಸೈಟಿಯ ಮನೋವಿಜ್ಞಾನತಜ್ಞೆ ಮೀರಾ ಹನಗವಾಡಿ.

ಇವರ ಪತಿ ಡಾ.ಸುರೇಶ್ ಹನಗವಾಡಿ ಸ್ವತಃ ಹಿಮೊಫಿಲಿಯಾದಿಂದ ಬಳಲುತ್ತಿದ್ದಾರೆ. ಸುರೇಶ್ ಚಿಕ್ಕವರಿದ್ದಾಗ ತಮ್ಮ ಸೋದರ ಮಾವ ಹಿಮೊಫಿಲಿಯಾಗೆ ಬಲಿಯಾಗಿದ್ದನ್ನು ಕಂಡಿದ್ದರು. ಇದರ ಬಗ್ಗೆ ಜನರಲ್ಲಿ ಅರಿವಿರಲಿಲ್ಲ. ಸರ್ಕಾರಿ ಆಸ್ಪತ್ರೆಗಳಲ್ಲೂ ಚಿಕಿತ್ಸೆ ಲಭ್ಯವಿರಲಿಲ್ಲ. ಔಷಧವನ್ನು ವಿದೇಶದಿಂದ ಆಮದು ಮಾಡಿಕೊಳ್ಳಬೇಕಿತ್ತು. ಇವೆಲ್ಲವನ್ನೂ ಮನಗಂಡ ಡಾ.ಸುರೇಶ್, ಪೈಲಟ್ ಆಗುವ ಕನಸು ತೊರೆದು ಮಾವನವರ ಆಸೆಯಂತೆ ಹಿಮೊಫಿಲಿಯಾ ಚಿಕಿತ್ಸಕನಾಗಲು ನಿರ್ಧರಿಸಿದರು. ವೈದ್ಯಕೀಯ ವಿದ್ಯಾಭ್ಯಾಸ ಮುಗಿಯುತ್ತಲೇ ಮನೆಯಲ್ಲಿಯೇ 1989ರಲ್ಲಿ ಕರ್ನಾಟಕ ಹಿಮೊಫಿಲಿಯಾ ಸೊಸೈಟಿ ಸ್ಥಾಪಿಸಿ, ರೋಗಿಗಳಿಗೆ ಚಿಕಿತ್ಸೆ ನೀಡಲಾರಂಭಿಸಿದರು.

ದಾನಿಗಳನೇಕರ ನೆರವಿನಿಂದ ಹಂತ ಹಂತವಾಗಿ ಸೊಸೈಟಿ ಅಭಿವೃದ್ಧಿಯಾಗಿದ್ದು, ನೂರಾರು ರೋಗಿಗಳು ಒಂದೇ ಸೂರಿನಡಿ ರೋಗ ಪತ್ತೆ, ಚಿಕಿತ್ಸೆ, ಆಪ್ತಸಮಾಲೋಚನೆ, ಫಿಜಿಯೊಥೆರಪಿಯನ್ನು ಉಚಿತವಾಗಿ ಪಡೆದುಕೊಳ್ಳುತ್ತಿದ್ದಾರೆ. ಸೊಸೈಟಿಯ ಈ ಮಟ್ಟದ ಬೆಳವಣಿಗೆ ಹಾಗೂ ಡಾ.ಸುರೇಶ್ ಅವರ ಯಶಸ್ಸಿನ ಹಿಂದಿನ ರೂವಾರಿ ಅವರ ಪತ್ನಿ ಮೀರಾ ಆಗಿದ್ದಾರೆ.

ಡಾ.ಸುರೇಶ್ ಹಿಮೊಫಿಲಿಯಾ ರೋಗಿ ಎಂಬುದು ತಿಳಿದಿದ್ದರೂ 1995ರಲ್ಲಿ ಅವರನ್ನು ಮದುವೆಯಾದ ಮೀರಾ ಅವರು ಪತಿಯೊಂದಿಗೆ ಸೊಸೈಟಿಯ ಕೆಲಸಗಳಲ್ಲಿ ಜತೆಗೂಡಿದರು. ಬಿ.ಎಸ್ಸಿ ಪದವಿ ಪೂರ್ಣಗೊಳಿಸಿ, ಮನೋವಿಜ್ಞಾನ ವಿಷಯದಲ್ಲಿ ಡಿಪ್ಲೊಮಾ ಪದವಿ ಪಡೆದು ಸೊಸೈಟಿಯಲ್ಲಿಯೇ ಹಿಮೊಫಿಲಿಯಾಕ್ಕೆ ತುತ್ತಾದ ಮಕ್ಕಳು ಮತ್ತು ತಾಯಂದಿರ ಆಪ್ತಸಮಾಲೋಚನೆ ನಡೆಸುತ್ತಿದ್ದಾರೆ.

ತಾಯಂದಿರನ್ನು ಆರ್ಥಿಕವಾಗಿ ಸ್ವಾವಲಂಬಿಗಳಾಗಿಸಲು ಉದ್ಯೋಗ ತರಬೇತಿ ಶಿಬಿರವನ್ನು ನಿಯಮಿತವಾಗಿ ನಡೆಸುತ್ತಿದ್ದಾರೆ. ತರಬೇತಿ ಪಡೆದ ತಾಯಂದಿರಲ್ಲಿ ಹಲವರು ಹಿಟ್ಟಿನ ಗಿರಣಿ, ಫ್ಯಾನ್ಸಿ ಸ್ಟೋರ್, ಬಟ್ಟೆ ವ್ಯಾಪಾರ, ಹೈನುಗಾರಿಕೆ ಮೂಲಕ ಜೀವನ ಸಾಗಿಸುತ್ತಿದ್ದಾರೆ. ಇದಕ್ಕೆಲ್ಲ ಮೀರಾ ಅವರೇ ಬೆನ್ನೆಲುಬು.


ಮೀರಾ ಹನಗವಾಡಿ

ಏನಿದು ಸಮಸ್ಯೆ?

‘ನಮ್ಮ ದೇಹದ ಜೀವಕೋಶಗಳು 23 ಜೊತೆ ದಾರದ ತುಂಡುಗಳಂತೆ ಕಾಣುವ ವರ್ಣತಂತುಗಳನ್ನು ಒಳಗೊಂಡಿರುತ್ತದೆ. ಇದರಲ್ಲಿ ಒಂದು ಜೊತೆ ಮಗುವಿನ ಲಿಂಗವನ್ನು ನಿರ್ಧರಿಸುತ್ತದೆ. X ಮತ್ತು Y ವರ್ಣತಂತುಗಳು ಗಂಡಿನಲ್ಲಿದ್ದರೆ, ಎರಡೂ XX ವರ್ಣತಂತುಗಳು ಹೆಣ್ಣಿನಲ್ಲಿರುತ್ತವೆ. X ವರ್ಣತಂತು ರಕ್ತವನ್ನು ಹೆಪ್ಪುಗಟ್ಟಿಸುವ ಪ್ರೊಟೀನುಗಳ ಉತ್ಪತ್ತಿಯನ್ನು ನಿಯಂತ್ರಿಸುವ ವಂಶವಾಹಿನಿಯನ್ನು ಹೊಂದಿರುತ್ತದೆ. ಹುಟ್ಟುವ ಮಗು ಒಂದೊಂದು ವರ್ಣತಂತುವನ್ನು ತನ್ನ ತಂದೆ ಮತ್ತು ತಾಯಿಯಿಂದ ಪಡೆಯುತ್ತದೆ. ಗಂಡುಮಗುವಿನಲ್ಲಿ X ಮತ್ತು Y ವರ್ಣತಂತುಗಳಿರುವುದರಿಂದ ಅದರಲ್ಲಿ X ವರ್ಣತಂತುವಿನ ಮೇಲಿರುವ ರಕ್ತ ಹೆಪ್ಪುಗಟ್ಟಿಸುವ ಪ್ರೊಟೀನುಗಳ ಫ್ಯಾಕ್ಟರ್ 8 ಮತ್ತು ಫ್ಯಾಕ್ಟರ್ 9 ಅನ್ನು ಉತ್ಪತ್ತಿ ಮಾಡುವ ವಂಶವಾಹಿನಿ ನ್ಯೂನತೆಗೊಂಡಿದ್ದಲ್ಲಿ ಆ ಮಗು ಹಿಮೊಫಿಲಿಯಾದಿಂದ ಬಳಲುತ್ತದೆ’ ಎನ್ನುತ್ತಾರೆ ಡಾ.ಸುರೇಶ್ ಹನಗವಾಡಿ.



‘ನ್ಯೂನತೆಯುಳ್ಳ ವಂಶವಾಹಿನಿಯಿಂದಾಗಿ ತನ್ನ ಮಗು ಹಿಮೊಫಿಲಿಯಾಕ್ಕೆ ಗುರಿಯಾಗಬೇಕಾಯಿತು ಎಂಬುದನ್ನು ಅರಿತ ತಾಯಂದಿರು ಮಾನಸಿಕವಾಗಿ ಜರ್ಜರಿತರಾಗಿರುತ್ತಾರೆ. ತನ್ನ ಮಗುವಿಗೆ ತಾನೇ ಮುಳುವಾದೆನಲ್ಲ ಎಂದು ಶಪಿಸಿಕೊಳ್ಳುತ್ತಾರೆ. ತನ್ನದಲ್ಲದ ತಪ್ಪಿಗೆ ಅತ್ತೆ, ಮಾವ ಗಂಡನಿಂದ ದೂಷಣೆಗೆ ಒಳಗಾಗುತ್ತಾರೆ. ಇದೇ ಕಾರಣಕ್ಕೆ ಪತಿಯು ಪತ್ನಿಗೆ ವಿಚ್ಛೇದನ ನೀಡಿ ಬೇರೆ ಮದುವೆಯಾದ ಉದಾಹರಣೆಗಳು ಸಾಕಷ್ಟಿವೆ. ಚಿಕಿತ್ಸೆ ದುಬಾರಿಯಾದ ಕಾರಣ ಆರ್ಥಿಕ ಸಂಕಷ್ಟಕ್ಕೂ ಗುರಿಯಾಗುತ್ತಾಳೆ. ನನ್ನ ತಾಯಿಯ ವೇದನೆಯನ್ನು ಸ್ವತಃ ಕಂಡಿದ್ದೇನೆ. ಆದ್ದರಿಂದ ಹಿಮೊಫಿಲಿಯಾ ಮಗು ಮತ್ತು ತಾಯಂದಿರಿಗೆ ಆಪ್ತಸಮಾಲೋಚನೆ ಅಗತ್ಯ’ಎನ್ನುತ್ತಾರೆ ಅವರು.

ಹಿಮೊಫಿಲಿಯಾ ಸಮಗ್ರ ಚಿಕಿತ್ಸಾ ಕೇಂದ್ರ ಆರಂಭಿಸುವಂತೆ ಸೊಸೈಟಿ ವತಿಯಿಂದ ರಾಜ್ಯ ಸರ್ಕಾರದೊಂದಿಗೆ ಸತತ ಮಾತುಕತೆ ನಡೆಸಿದ್ದರ ಫಲವಾಗಿ 2005ರ ನಂತರ ಆಯ್ದ ಜಿಲ್ಲಾ ಆಸ್ಪತ್ರೆಗಳಲ್ಲಿ, 2010ರ ಬಳಿಕ ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ ಉಚಿತವಾಗಿ ಚಿಕಿತ್ಸೆ ಲಭ್ಯವಾಗಿದೆ. ಆದರೆ ಪರೀಕ್ಷೆ, ಫಿಜಿಯೊಥೆರಪಿ, ಆಪ್ತಸಮಾಲೋಚನೆ, ಪುನರ್‌ವಸತಿ ಸೇವೆಗಳಿಲ್ಲ. ನಮ್ಮ ದೇಶದಲ್ಲಿ ಹಿಮೊಫಿಲಿಯಾ ರೋಗಿಗೆ ರಕ್ತ ಸುರಿಯುತ್ತಿರುವಾಗ ಇಂಜೆಕ್ಷನ್ ನೀಡಿ ನಿಯಂತ್ರಿಸಲಾಗುತ್ತದೆ. ಆದರೆ, ವಿದೇಶದಲ್ಲಿ ರಕ್ತ ಸೋರದಂತೆ ತಡೆಗಟ್ಟಲು ‘ಪ್ರೊಫಿಲಾಕ್ಸಿಸ್’ ಚಿಕಿತ್ಸಾ ವಿಧಾನ ಅನುಸರಿಸಲಾಗುತ್ತಿದೆ. ಹಿಮೊಫಿಲಿಯಾ ಮಕ್ಕಳಿಗೆ ಸೂಕ್ತ ಸಂದರ್ಭದಲ್ಲಿ ಚಿಕಿತ್ಸೆ ಸಿಗದಿದ್ದರೆ ಅಂಗವಿಕಲರಾಗುವ ಸಾಧ್ಯತೆ ಹೆಚ್ಚು.



ಹೊಡೆಸಿಕೊಳ್ಳುವವರಿಗಿಂತಲೂ ಹೊಡೆಯುವವರು ನಿಜವಾದ ದುರ್ಬಲರು. ಆ ಕ್ಷಣಕ್ಕೆ ಕೋಪವನ್ನು ನಿಯಂತ್ರಿಸುವ ಶಕ್ತಿ ಹಾಗೂ ವಿವೇಚನೆಯನ್ನು ಹೊಡೆಯುವವರು ಕಳೆದುಕೊಂಡಿರುತ್ತಾರೆ. ಕೌಟುಂಬಿಕ ದೌರ್ಜನ್ಯದ ಜಾಲದಲ್ಲಿ ಸಿಲುಕಿ ನಲುಗುವುದಕ್ಕೆ ಹೆಣ್ಣು–ಗಂಡಿನ ಭೇದವಿಲ್ಲವಾದರೂ ಇಲ್ಲಿಯೂ ಈ ದೌರ್ಜನ್ಯವನ್ನು ತುಟಿಕಚ್ಚಿ ಸಹಿಸುವವರು ಬಹುಪಾಲು ಹೆಣ್ಣುಮಕ್ಕಳೇ.

ಹೊಡೆದರಷ್ಟೆ ದೌರ್ಜನ್ಯವೇ?

ರೂಪಾ ಕೆ.ಎಂ.

‘ಎಷ್ಟು ಅಂತ ಹೇಳೋದು? ಕೇಳಿಸಿಕೊಳ್ಳುವ ತಾಳ್ಮೆಗೂ ಮಿತಿ ಇದೆ. ಇದನ್ನೆ ಮಾಡ್ತಿದ್ದರೆ ಬಂದು ಎದೆಗೆ ಒದ್ದು ಬಿಡ್ತೀನಿ’ ಹೀಗೆ ಪಕ್ಕದ ಮನೆಯ ಗಂಡಸಿನ ದನಿ ಬಿರುಸಿನಂತೆ ತೂರಿಬಂತು. ಅಲ್ಲಿಯವರೆಗೆ ನಾಲ್ಕುಗೋಡೆಗಳ ಮೇರೆ ಮೀರಿ ತಾರಕಕ್ಕೇರಿದ್ದ ಆ ಮನೆಯಲ್ಲಿ ವಾಸವಿದ್ದ ದಂಪತಿಯ ಕಲಹ ನಿಧಾನಕ್ಕೆ ತಣ್ಣಗಾದಂತೆ ಅನಿಸಿದರೂ, ಮುಗಿದಿದ್ದು ಮಾತ್ರ ಆತ, ಆಕೆಯ ಮೇಲೆ ಒಂದೆರಡು ಏಟು ಹೊಡೆಯುವ ಪ್ರಸ್ತಾಪ ಮಾಡಿದಾಗಲೇ. ಯಾರಿಗೆ ಗೊತ್ತು?! ಅವನು ಎದೆಗೆ ಒದ್ದಿರಬಹುದು; ಅವಳು ಪೆಟ್ಟು ತಿಂದು ಬಿಕ್ಕಿರಬಹುದು. ಇವೆಲ್ಲ ಯಾರಿಗೂ ಗೊತ್ತಾಗದೇ ಹೋಗಬಹುದು. ಅಥವಾ ಅದು ಮಾತಿನಲ್ಲಿಯೇ ಉಳಿದಿರಬಹುದು!

ಒದ್ದು ಬಿಡ್ತೀನಿ ಅಂದ ಮಾತ್ರಕ್ಕೆ ಒದ್ದಿರ್ತನಾ? ಅನ್ನುವ ಪ್ರಶ್ನೆ ಸಹಜವಾಗಿ ಬರುತ್ತದೆ. ಆದರೆ, ‘ಒದೆಯುತ್ತೀನಿ, ಹೊಡೆದುಬಿಡ್ತೀನಿ, ಸಾಯಿಸ್ತೀನಿ, ಸಾಯುವ ಹಾಗೆ ಹೊಡೆಯುತ್ತೀನಿ’ ಇಂಥ ಮಾತುಗಳು, ಆಲೋಚನೆಗಳು, ಕಾರ್ಯರೂಪಕ್ಕೆ ಬರಲು ಎಷ್ಟು ಬೆರಳೆಣಿಕೆಯ ದಿನಗಳು ಬೇಕಾಗಬಹುದು. ಇದರ ಸಣ್ಣ ಅರಿವು ಇಲ್ಲದೇ ಮಾತಿನ ಭರದಲ್ಲಿ ಇಂಥ ಹೊಡೆಯುವ ಮಾತುಗಳಿಗೆಲ್ಲ ಅವಕಾಶ ಸಿಗುವುದರ ಹಿಂದಿನ ಸದರ ಯಾವುದು?


‘ಹೊಡೆದು, ಬಡಿದು ಅಂಕೆಯಲ್ಲಿ ಇಟ್ಟುಕೊಳ್ತೀನಿ, ತಾನು ಹೇಳಿದ ಹಾಗೆ ಕೇಳಬೇಕು. ಕೇಳಿಲ್ವಾ, ಅಂಥವರಿಗೆ ತಕ್ಕ ಶಾಸ್ತಿ ಮಾಡಬೇಕು’ ಇಂಥ ವಿಚಾರಗಳೇ ಹೊಡೆಯುವ ಮನಸ್ಥಿತಿಯನ್ನು ಪೊರೆಯುವುದು. ಜತೆಗೆ ಸಂಬಂಧಗಳ ನಡುವೆ ಪರಸ್ಪರ ಗೌರವವೇ ಇಲ್ಲದಿದ್ದಾಗ, ಒಂದು ಸಣ್ಣ ಮಾತನ್ನು ಸಹಿಸಿಕೊಳ್ಳಲು ಆಗದೇ ಇದ್ದಾಗ, ಅಸಮಾಧಾನ, ಹತಾಶೆ, ಕೋಪ ಎಲ್ಲವೂ ಸೇರಿ ಹೊಡೆಯುವ ಮಟ್ಟಕ್ಕೆ ಹೋಗುವ ಸಾಧ್ಯತೆಗಳನ್ನು ಅಲ್ಲಗಳೆಯುವ ಹಾಗಿಲ್ಲ. ಹದ ತಪ್ಪಿದ ಸಂಬಂಧದಲ್ಲಿ ಒಂದು ಸಲ ಕೈಎತ್ತುವ ಮಟ್ಟಕ್ಕೆ ಹೋಗಿಬಿಟ್ಟರೆ ಪದೇ ಪದೇ ಅದು ಮರುಕಳಿಸುವ ಸಾಧ್ಯತೆಯಂತೂ ಇರುತ್ತದೆ. ಹಾಗಾಗಿ ಕೈ ಎತ್ತುವ ಮುನ್ನ ಹಾಗೂ ಹೊಡೆತ ತಿನ್ನುವ ಮುನ್ನ ಯೋಚಿಸಿ.

ಹೊಡೆಸಿಕೊಳ್ಳುವವರಿಗಿಂತಲೂ ಹೊಡೆಯುವವರು ನಿಜವಾದ ದುರ್ಬಲರು. ಆ ಕ್ಷಣಕ್ಕೆ ಕೋಪವನ್ನು ನಿಯಂತ್ರಿಸುವ ಶಕ್ತಿ ಹಾಗೂ ವಿವೇಚನೆಯನ್ನು ಕಳೆದುಕೊಂಡಿರುತ್ತಾರೆ. ಹೀಗೆ ಕೌಟುಂಬಿಕ ದೌರ್ಜನ್ಯದ ಜಾಲದಲ್ಲಿ ಸಿಲುಕಿ ನಲುಗುವುದಕ್ಕೆ ಹೆಣ್ಣು–ಗಂಡಿನ ಭೇದವಿಲ್ಲವಾದರೂ, ಇಲ್ಲಿಯೂ ದೌರ್ಜನ್ಯಕ್ಕೆ ಒಳಗಾಗಿ ತುಟಿಕಚ್ಚಿ ಸಹಿಸುವವರೂ ಬಹುಪಾಲು ಹೆಣ್ಣುಮಕ್ಕಳೇ. ಇಂಥ ನೋವಿನ ಕೂಪದಲ್ಲಿದ್ದು, ನಲಗುವ ಹೆಣ್ಣುಮಕ್ಕಳಿಗೆ ಸರಿಯಾದ ಸಾಂತ್ವನ ನೀಡಿ, ಕಾನೂನಿನ ಸೂಕ್ತ ಸಲಹೆ ನೀಡುವ ಸಲುವಾಗಿ ‘ರೀಚ್ ಲಾಯರ್’ ಎನ್ನುವ ಟ್ರಸ್ಟ್ ‘ಸೋಜ್’ ಎನ್ನುವ ಅಭಿಯಾನವನ್ನು ಹಮ್ಮಿಕೊಂಡಿದೆ.

ಮನೆ ಹಾಗೂ ಕೆಲಸದ ಸ್ಥಳಗಳಲ್ಲಿ ಹೆಣ್ಣುಮಕ್ಕಳು ಅನುಭವಿಸುವ ಯಾವುದೇ ಬಗೆಯ ದೌರ್ಜನ್ಯಗಳ ವಿರುದ್ಧ ಮಾತನಾಡಲು ‘ಸೋಜ್’ ಅವಕಾಶ ಮಾಡಿಕೊಡುತ್ತದೆ. ಹೆಣ್ಣುಮಕ್ಕಳು ಅರ್ಥಿಕವಾಗಿ ಸಬಲರಾಗಿದ್ದರೂ ಕುಟುಂಬದಲ್ಲಿ ಅವರು ಎದುರಿಸುವ ಕ್ರೌರ್ಯ ನಾನಾ ಬಗೆಯದ್ದು. ಅದು ಗಾರ್ಮೆಂಟ್ಸ್ ಕಾರ್ಮಿಕ ಹೆಣ್ಣುಮಗಳಿಂದ ಹಿಡಿದು ಐಟಿ–ಬಿಟಿಯಲ್ಲಿ ಕೆಲಸ ಮಾಡುವ, ಆರ್ಥಿಕವಾಗಿ ಸದೃಢರಾಗಿರುವ ಹೆಣ್ಣುಮಕ್ಕಳೂ ಕೌಟುಂಬಿಕ ದೌರ್ಜನ್ಯವನ್ನು ಅನುಭವಿಸಿರುವ ಉದಾಹರಣೆಗಳು ಕಣ್ಮುಂದಿವೆ ಎನ್ನುತ್ತಾರೆ ಟ್ರಸ್ಟ್‌ನ ಸಂಸ್ಥಾಪಕ ಬಿ.ಟಿ. ವೆಂಕಟೇಶ್.



‘ರೀಚ್ ಲಾಯರ್’ ಮಾಡುವುದಿಷ್ಟು



ನೊಂದ ಹೆಣ್ಣುಮಗಳಿಗೆ ಮೂರರಿಂದ ನಾಲ್ಕು ಬಾರಿ ಆಪ್ತಸಮಾಲೋಚನೆ ನಡೆಸಿ, ಆಕೆಯ ನಿಜವಾದ ಸಮಸ್ಯೆ ಹಾಗೂ ಸವಾಲುಗಳನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನ ಮಾಡಲಾಗುತ್ತದೆ. ಆ ಸಮಸ್ಯೆಗೆ ಯೋಗ್ಯವಾದ ಕಾನೂನಾತ್ಮಕ ಪರಿಹಾರದ ಜತೆಗೆ ರಚನಾತ್ಮಕ ದಾರಿಯ ಬಗ್ಗೆಯೂ ತಿಳಿಸಿಕೊಡಲಾಗುತ್ತದೆ.

ಹಲವು ಬಾರಿ ಕುಟುಂಬದಲ್ಲಿ ವಿಚ್ಛೇದನ ಇಷ್ಟ ಇರುವುದಿಲ್ಲ. ಕೌಟುಂಬಿಕವಾಗಿ, ಸಾಮಾಜಿಕವಾಗಿ ಹಲವು ಒತ್ತಡಗಳಿರುತ್ತವೆ. ಇವುಗಳನ್ನೆಲ್ಲ ಪರಿಗಣಿಸಿ, ದೌರ್ಜನ್ಯಕ್ಕೆ ಒಳಗಾದ ಹೆಣ್ಣುಮಗಳ ಮುಂದೆ ಹಲವು ಕಾನೂನಾತ್ಮಕ ಆಯ್ಕೆಗಳನ್ನು ತೆರೆದಿಡಲಾಗುತ್ತದೆ ಎನ್ನುತ್ತಾರೆ ವೆಂಕಟೇಶ್. ದೌರ್ಜನ್ಯಕ್ಕೆ ಒಳಗಾದ ಮಹಿಳೆಯರು ಕಾನೂನು ಸಲಹೆ ಪಡೆಯಲು 91-89718 63465 ಸಂಪರ್ಕಿಸಬಹುದು. ಜತೆಗೆ speak2soz@gmail.com ಮೇಲ್ ಕೂಡ ಮಾಡಬಹುದು.

ಮಾನಸಿಕ ಸದೃಢತೆ ಅಗತ್ಯ



ಕೌಟುಂಬಿಕ ದೌರ್ಜನ್ಯಕ್ಕೆ ಕಾರಣಗಳು ಸಂದರ್ಭಕ್ಕಾನುಸಾರ ಬೇರೆ ಬೇರೆ ಇರುತ್ತವೆ. ಈಡೇರದ ಬಯಕೆಗಳು, ಹೊಂದಾಣಿಕೆ ಸಮಸ್ಯೆ, ಒತ್ತಾಯದ ಮದುವೆ ಮತ್ತು ಉಳಿಯದ ಬದ್ಧತೆ ಹೀಗೆ ನಾನಾ ಕಾರಣಗಳಿಗೆ ದೌರ್ಜನ್ಯ ಉಂಟಾಗಬಹುದು. ಪ್ರತಿ ಕಥೆಯೂ ಬೇರೆಯದ್ದೇ ಆಗಿರುತ್ತದೆ. ಸಾಮಾಜಿಕ, ದೈಹಿಕ, ಭಾವಾನಾತ್ಮಕ ದೌರ್ಜನ್ಯಗಳಿರುತ್ತವೆ. ಹೊಡೆಯದೆಯೂ ‘ನಿನ್ನ ಕೈಲಿ ಏನು ಆಗುತ್ತೆ. ನಿನ್ನ ಬದುಕೇ ನಿಷ್ಪ್ರಯೋಜಕ’ ಅಂಥ ಸದಾ ಸಂಗಾತಿಯನ್ನು ಹಳಿಯುತ್ತ ಇರುವುದು ಮಾನಸಿಕ ಆಘಾತವನ್ನು ಉಂಟು ಮಾಡಬಹುದು. ಈ ದೌರ್ಜನ್ಯ ಮಾಡುವವರಿಗೆ ಗಂಡು ಹೆಣ್ಣೆಂಬುದಿರುವುದಿಲ್ಲ. ಇದೊಂದು ಮನಸ್ಥಿತಿ. ಕೆಲವೊಮ್ಮೆ ಗಂಡ ಹೆಂಡತಿಯ ನಡುವೆ ಸಮಸ್ಯೆ ಇರುವುದಿಲ್ಲ. ಅತ್ತೆ ಮತ್ತು ಸೊಸೆಯ ನಡುವೆ ಹೊಂದಾಣಿಕೆಯ ಕೊರತೆ ಉಂಟಾಗಿ ಅದು ದೌರ್ಜನ್ಯಕ್ಕೆ ಕಾರಣವಾಗಬಹುದು. ಹೆಣ್ಣಿರಲಿ, ಗಂಡಿರಲಿ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಮಾನಸಿಕ ಸದೃಢತೆಯನ್ನು ಬೆಳೆಸಿಕೊಳ್ಳಬೇಕು.

ಮೀನಾ ಜೈನ್, ಮನೋಚಿಕಿತ್ಸಕಿ

ನೋವನ್ನು ಗ್ರಹಿಸುವಲ್ಲಿ ವಿಫಲ

ಹೆಣ್ಣುಮಕ್ಕಳು ಎದುರಿಸುವ ಕಷ್ಟ ಹಾಗೂ ಸವಾಲುಗಳನ್ನು ಸರಿಯಾದ ರೀತಿಯಲ್ಲಿ ಗ್ರಹಿಸಲು ನಮ್ಮ ಸಾಮಾಜಿಕ ವ್ಯವಸ್ಥೆ ವಿಫಲವಾಗಿದೆ. ಅವಳ ಕಷ್ಟಗಳನ್ನು ಸರಿಯಾದ ರೀತಿಯಲ್ಲಿ ಕೇಳಿಸಿಕೊಂಡು, ವ್ಯಾಖ್ಯಾನಿಸುವಲ್ಲಿ ಸೋತಿದ್ದೇವೆ. ಇನ್ನು ಕೇಳಿಸಿಕೊಂಡ ಮೇಲೆ ಸೂಕ್ತ ಕಾನೂನು ಸಲಹೆ ನೀಡುವ ವ್ಯವಸ್ಥೆಯೂ ಇಲ್ಲ. ಇದನ್ನು ತಿಳಿದ ‘ರೀಚ್ ಲಾಯರ್’ ತನ್ನ ‘ಸೋಜ್’ ಮೂಲಕ ಅರಿವಿನ ಬೀಜವನ್ನು ಬಿತ್ತುತ್ತಿದೆ.

ದೌರ್ಜನ್ಯ ನೆಪವಲ್ಲ!

ಸಾಮಾನ್ಯವಾಗಿ ದೌರ್ಜನ್ಯ ಅನುಭವಿಸಿದ ಹೆಣ್ಣುಮಕ್ಕಳ ಮನಸ್ಸಿನಲ್ಲಿ ತುಂಬಾ ಸಿಟ್ಟಿರುತ್ತದೆ. ತನ್ನೆಲ್ಲ ನೋವುಗಳನ್ನು ಒಬ್ಬ ಅಪರಿಚಿತ ವಕೀಲನ ಎದುರು ತೆರೆದಿಡುವಾಗ ಆಕೆ ಅನುಭವಿಸುವ ಮುಜುಗರ ಎಂಥದ್ದು ಎಂಬುದನ್ನು ಊಹೆ ಮಾಡುವುದು ಕಷ್ಟ. ಸವಾಲುಗಳ ನಡುವೆಯೂ ಅವಳ ಆಯ್ಕೆ ಮತ್ತು ಸ್ವಾತಂತ್ರ್ಯಕ್ಕೆ ಬೆಲೆ ಇರುವುದಿಲ್ಲ. ಹಾಗಾಗಿ ವಕೀಲರು ಹೇಳಿದಂತೆ ಐದಾರು ದಾವೆಗಳನ್ನು ಹೂಡಿ, ಯಾವುದೂ ಸಫಲಗೊಳ್ಳದೇ ಹೋಗಬಹುದು. ಇದರಿಂದ ಹೆಣ್ಣುಮಕ್ಕಳೆಲ್ಲ ಬೇಕಂತಲೇ ಈ ಕಾನೂನುಗಳನ್ನು ಇಟ್ಟುಕೊಂಡು ‘ದೌರ್ಜನ್ಯದ ನೆಪ’ ಹೇಳುತ್ತಾರೆ ಎಂಬ ಅಪಪ್ರಚಾರವೂ ಸಿಕ್ಕಿದೆ. ಇದನ್ನು ತೊಡೆದು ಹಾಕಲು ಮೊದಲಿಗೆ ನೋವಿನಲ್ಲಿರುವ ಹೆಣ್ಣಿನಲ್ಲಿ ಆತ್ಮಸ್ಥೈರ್ಯ ಮತ್ತು ನಂಬುಗೆಯನ್ನು ಬೆಳೆಸಬೇಕು ಎನ್ನುತ್ತಾರೆ ವೆಂಕಟೇಶ್.

ಶೇ 33ರಷ್ಟು ಮಂದಿ ಹೆಣ್ಣುಮಕ್ಕಳು ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ ಎನ್ನುತ್ತದೆ ಅಧ್ಯಯನ. ಇಷ್ಟರಲ್ಲಿ ಎಷ್ಟು ಪ್ರಕರಣಗಳು ದಾಖಲಾಗಿವೆ ಎಂದು ಗಮನಿಸಿದರೆ ಬಹಳ ಕಡಿಮೆ. ಗಂಡ ಹೊಡೆಯದೇ, ಬಡಿಯದೇ ಇರಬಹುದು. ಅವಳ ಅಸ್ತಿತ್ವವೇ ಕ್ಷುಲ್ಲಕವೆಂದು ಭಾವಿಸುವುದು ಕೂಡ ದೌರ್ಜನ್ಯವೇ ಅಲ್ಲವೇ?.

ಹುಳಕಡ್ಡಿಯ ಸಮಸ್ಯೆಗೆ ಪರಿಹಾರವೇನು?

ಸ್ಪಂದನ



ಡಾ. ವೀಣಾ ಎಸ್. ಭಟ್

- **ಮೂರು ತಿಂಗಳ ಗರ್ಭಿಣಿ. ಹಲವು ದಿನಗಳಿಂದ ತೊಡೆ ಹಾಗೂ ಹೊಟ್ಟೆಯ ಕೆಳಭಾಗದಲ್ಲಿ ಹುಳಕಡ್ಡಿಯ ತರಹದ ದದ್ದುಗಳಾಗಿವೆ. ವೈದ್ಯರು ಮುಲಾಮು ಕೊಟ್ಟಿದ್ದಾರೆ. ಹಚ್ಚಿದಾಗ ಕಡಿಮೆ ಆಗುತ್ತೆ. ಆದರೆ ಮತ್ತೆ ಮತ್ತೆ ಮರುಕಳಿಸುತ್ತಿದೆ. ನುಂಗಲು ಮಾತ್ರೆ ಕೊಟ್ಟಿಲ್ಲ. ಪರಿಹಾರ ತಿಳಿಸಿ ಮೇಡಂ.**

ಬಹುಶಃ ನಿಮಗಾಗಿರುವುದು ಹುಳಕಡ್ಡಿ ಅಥವಾ ಶಿಲೀಂಧ್ರ ಸೋಂಕು. ಮೂರು ತಿಂಗಳ ಗರ್ಭಿಣಿ ಆಗಿರುವುದರಿಂದ ಯಾವುದೇ ಮಾತ್ರೆ ಕೊಡುವುದಿಲ್ಲ. ಅದಕ್ಕಾಗಿಯೇ ಮುಲಾಮು ಬರೆದು ಕೊಟ್ಟಿರುತ್ತಾರೆ. ಗಾಯ ಸ್ವಲ್ಪ ಗುಣವಾದ ತಕ್ಷಣ ಮುಲಾಮು ಹಚ್ಚುವುದನ್ನು ನಿಲ್ಲಿಸಿದ್ದರೆ, ಹಾಗೆ ಮಾಡಬೇಡಿ.

ಸೋಂಕು ಉಂಟುಮಾಡುವ ಕ್ರಿಮಿಯನ್ನು ನಾಶಪಡಿಸಲು ಕನಿಷ್ಠ ಆರರಿಂದ ಎಂಟು ವಾರಗಳಾದರೂ ಬೇಕು. ಅದಕ್ಕಾಗಿ ನಿರಂತರವಾಗಿ ಮುಲಾಮು ಹಚ್ಚಬೇಕು. ಹಗಲು ಹೊತ್ತಿನಲ್ಲಿ ಆ್ಯಂಟಿ ಫಂಗಲ್ ಪೌಡರ್‌ಗಳನ್ನು ಹಚ್ಚಿ. ಈ ಕ್ರಿಮಿಯು ತೇವಾಂಶದಲ್ಲಿ ಹೆಚ್ಚಾಗಿ ಬೆಳೆಯುವುದರಿಂದ ದೇಹದ ಯಾವುದೇ ಭಾಗದಲ್ಲಿ ತೇವಾಂಶ ನಿಲ್ಲದಂತೆ ನೋಡಿಕೊಳ್ಳಿ.

- **30 ವರ್ಷ. ಮದುವೆ ನಿಶ್ಚಯವಾಗಿದೆ. ಇತ್ತೀಚೆಗೆ ತೂಕ ಹೆಚ್ಚುತ್ತಿದೆ. ಎಪ್ಪತ್ತು ಕೆ.ಜಿ. ಇದ್ದೇನೆ. ಮದುವೆಯಾದ ವರ್ಷವೇ ಮಕ್ಕಳಾಗಬೇಕೆಂಬ ಆಸೆ ಇದೆ. ತಡವಾಗಿ ಮದುವೆಯಾದವರಿಗೆ ಮಕ್ಕಳಾಗುತ್ತಿಲ್ಲ ಎಂಬ ವಿಚಾರ ನನಗೆ ಆತಂಕ ತಂದಿದೆ. ಹೇಗೆ ಮುಂಜಾಗ್ರತಾ ಕ್ರಮ ವಹಿಸಬಹುದು?**

ತಾಯ್ತನದ ಬಗ್ಗೆ ಹಂಬಲ ಇರುವುದು ಒಳ್ಳೆಯದು. ಅದಕ್ಕಾಗಿ ಉತ್ತಮ ಯೋಜನೆ ಹಾಕಿಕೊಳ್ಳಿ. 30 ವರ್ಷದ ನಂತರ ಅಂಡಾಶಯದಲ್ಲಿ ಅಂಡಾಣು ಉತ್ಪತ್ತಿ ಹಾಗೂ ಅದರ ಗುಣಮಟ್ಟ ಹಾಗೂ ಅಂಡಾಶಯದ ಮೀಸಲು ಸಾಮರ್ಥ್ಯ ಕಡಿಮೆಯಾಗುತ್ತದೆ. ಹಾಗಾಗಿ ಈ ವಯಸ್ಸಿನಲ್ಲಿಯೇ ಮಗು ಪಡೆಯುವುದು ಉತ್ತಮ. ಗರ್ಭಧಾರಣೆಗೂ ಮೊದಲೇ ಸಾಕಷ್ಟು ಮುಂಜಾಗ್ರತಾ ಕ್ರಮ ಅನುಸರಿಸಿ. ಇದಕ್ಕಾಗಿ ಅಪ್ತ ಸಮಾಲೋಚನೆಗೆ ಒಳಗಾದರೆ ಒಳ್ಳೆಯದು.


ಸಮತೂಕ ಕಾಯ್ದುಕೊಳ್ಳಿ. ಗರ್ಭಧಾರಣೆಯಲ್ಲಾಗುವ ನ್ಯೂರಲ್ ಟ್ಯೂಬ್ ನ್ಯೂನತೆಯನ್ನು ತಡೆಗಟ್ಟಲು ಫೋಲಿಕ್ ಆ್ಯಸಿಡ್ ಮಾತ್ರೆಗಳನ್ನು ಗರ್ಭಧಾರಣೆಗೂ ಮೊದಲು ಆರರಿಂದ ಎಂಟು ವಾರ ಸೇವಿಸಬೇಕು. ಹಿಮೋಗ್ಲೋಬಿನ್ ಮಟ್ಟ ಕನಿಷ್ಠ 11ರಷ್ಟಿರಬೇಕು. ಮಧುಮೇಹ, ಏರು ರಕ್ತದೊತ್ತಡ, ಮೂರ್ಛೆರೋಗ, ಅಸ್ತಮಾ, ಜನ್ಮಜಾತ ಹೃದ್ರೋಗಗಳಿದ್ದರೆ, ಚಿಕಿತ್ಸೆಯಲ್ಲಿದ್ದರೆ, ವೈದ್ಯರಿಂದ ಮಾಹಿತಿ ಪಡೆದುಕೊಳ್ಳಿ. ತಂಬಾಕು, ಧೂಮಪಾನ, ಮದ್ಯಪಾನದಂಥ ದುಶ್ಚಟಗಳಿಂದ ದೂರವಿರಿ. ದೈಹಿಕ ಮತ್ತು ಮಾನಸಿಕ ಸದೃಢತೆ ಇದ್ದರೆ ಆರೋಗ್ಯವಂತ ಮಗು ಪಡೆಯಬಹುದು.

ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗತಜ್ಞೆ ಡಾ.ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು

ಬಂಗಾರವೇ ಬೇಕೆ ಚೆಲುವೆ?

ಬಂಗಾರದ ಆಭರಣಗಳಿಲ್ಲದೇ ಮದುವೆಯೇ ಇಲ್ಲ ಎಂಬ ಕಾಲವೊಂದಿತ್ತು. ಈಗ ಹಾಗಲ್ಲ. ಫ್ಯಾಷನ್ ಬದಲಾಗುತ್ತಿದ್ದು, ಮದುವೆಯಂಥ ಸಮಾರಂಭದಲ್ಲಿ ‘ರಿಚ್ ಲುಕ್‘ನಲ್ಲಿ ಕಾಣಿಸಿಕೊಳ್ಳಲು ಬಂಗಾರದ ಆಭರಣಗಳೇ ಆಗಬೇಕೆಂದೇನಿಲ್ಲ.

ದೊಡ್ಡ ದೊಡ್ಡ ಸೆಲೆಬ್ರಿಟಿ ಮದುವೆಗಳಲ್ಲಿ ರಾರಾಜಿಸುತ್ತಿದ್ದ ಬಂಗಾರೇತರ ಆಭರಣಗಳು ಈಗ ಮಧ್ಯಮವರ್ಗದ ಮದುವೆಗಳಲ್ಲಿಯೂ ಕಾಣಿಸಿಕೊಳ್ಳುತ್ತಿವೆ. ಎಲಿಗೆಂಟ್ ಎನಿಸುವ ಈ ಆಭರಣಗಳನ್ನು ದಿರಿಸಿಗೆ ತಕ್ಕ ಹಾಗೆ ತೊಟ್ಟರೆ ಅದರ ಮೆರುಗು ಇನ್ನಷ್ಟು ಹೆಚ್ಚುತ್ತದೆ. ಶ್ರೀಮಂತರ ಮದುವೆಗಳಲ್ಲಿ ದುಬಾರಿ ಆಗಿದ್ದ ಈ ಬಂಗಾರೇತರ ಆಭರಣಗಳು ಇಮಿಟೇಷನ್ ಜ್ಯುವೆಲರಿಯಾಗಿಯೂ ಲಭ್ಯವಾಗಿರುವುದರಿಂದ ಟ್ರೆಂಡಿ ಎನಿಸಿವೆ.
ಚಿನ್ನವೆಲ್ಲ ಬ್ಯಾಂಕ್‌ನಲ್ಲಿದೆ. ಹತ್ತಿರದ ಸಂಬಂಧಿಕರ ಮದುವೆಗೆ ಏನನ್ನು ತೊಡಲಿ ಎಂಬ ಆಲೋಚನೆಯಿದ್ದರೆ ಚಿಂತೆ ಮಾಡದೇ ದಿರಿಸಿಗೆ ಸೂಕ್ತವೆನಿಸುವ ಬಂಗಾರೇತರ ಆಭರಣಗಳನ್ನು ಖರೀದಿಸಿ.





ಎಮರಾಲ್ಡ್ಸ್

ಗಾಢ ಹಸಿರುಬಣ್ಣದ ಕಲ್ಲುಗಳಿರುವ ಈ ಆಭರಣವು ಬಂಗಾರ ಬಣ್ಣದ ಅಥವಾ ಬೆಳ್ಳಿ ಬಣ್ಣದ ಕುಂದನ್ ಸೀರೆಗಳಿಗೆ ಚೆನ್ನಾಗಿ ಒಪ್ಪುತ್ತದೆ. ಸರ, ಬಳೆ ಹಾಗೂ ಕಿವಿಯೋಲೆಗಳು ಎಮರಾಲ್ಡ್‌ನಲ್ಲಿದ್ದರೆ ಇನ್ನಷ್ಟು ಮೆರುಗು ಬರುತ್ತದೆ. ಇತ್ತೀಚೆಗೆ ನೀತಾ ಅಂಬಾನಿ, ರಾಧಿಕಾ ಮರ್ಚೆಂಟ್, ಕಿಯಾರಾ ಅಡ್ವಾಣಿ ಇಂಥ ಎಮರಾಲ್ಡ್ ಆಭರಣ ತೊಟ್ಟು ಸಂಭ್ರಮಿಸಿದ್ದರು. ಈಗೀಗ ಇಮಿಟೇಷನ್ ಜ್ಯುವೆಲರಿಗಳಲ್ಲಿಯೂ ಎಮರಾಲ್ಡ್ ಹರಳಿರುವ ಆಭರಣಗಳಿಗೆ ಬೇಡಿಕೆ ಹೆಚ್ಚಿದೆ.

ಲೇಯರಿಂಗ್

ಲೇಯರಿಂಗ್ ಜ್ಯುವೆಲರಿ ಮದುಮಗಳ ಆಭರಣವಾಗಿಯೂ ಪ್ರಸಿದ್ಧಿ ಪಡೆದಿದೆ. ಹಲವು ನೆಕ್ಲೇಸ್‌ಗಳ ಗುಚ್ಛವಾಗಿದ್ದು, ಅದಕ್ಕೆ ತಕ್ಕುದಾದ ಬಳೆ ಹಾಗೂ ಕಿವಿಯೋಲೆಗಳು ಇದ್ದರೆ ಅಂದವಾಗಿ ಕಾಣುತ್ತದೆ. ಹಲವು ಬಗೆಯ ರತ್ನಗಳನ್ನು ಸೇರಿಸಿ, ಕುಶಲತೆಯಿಂದ ಮಾಡಲಾಗಿದ್ದು, ವೈಭವೋಪೇತವಾಗಿ ಕಾಣುತ್ತದೆ. ಸೀರೆಗಿಂತ ಲೆಹೆಂಗಾಗಳಿಗೆ ಇದು ಹೆಚ್ಚು ಒಪ್ಪುತ್ತದೆ.

ಆಧುನಿಕ ಚೋಕರ್ ಸೆಟ್ಸ್

ಆಧುನಿಕ ಚೋಕರ್‌ಗಳು ಸಾಂಪ್ರದಾಯಿಕ ಲುಕು ನೀಡುವಲ್ಲಿ ಹಿಂದೆ ಬಿದ್ದಿಲ್ಲ. ದೊಡ್ಡ ಗಾತ್ರದ ಅಗಲವಾಗಿರುವ ಚೋಕರ್ ಸೆಟ್ ಒಂದಿದ್ದರೆ ಸಾಕು ಬೇರೆ ಆಭರಣವೇ ಬೇಡ. ವಿವಿಧ ಹರಳಿನ ಚೋಕರ್ ಸೆಟ್‌ಗಳು ಪ್ರಸ್ತುತವೆನಿಸಿವೆ. ಅದರಲ್ಲಿ ಕೇವಲ ಮುತ್ತಿನ ಮಣಿ ಇರುವ ಚೋಕರ್ ಸೆಟ್‌ಗಳು ಹೆಚ್ಚು ಚಾಲ್ತಿಗೆ ಬಂದಿವೆ.

ಬಹುವರ್ಣೀಯ ಆಭರಣಗಳು

ಬಹುವರ್ಣದ ಹರಳುಗಳಿರುವ ಆಭರಣಗಳನ್ನು ನೆಚ್ಚಿಕೊಳ್ಳದವರಿಲ್ಲ. ಬಹುವರ್ಣದ ಚೋಕರ್‌ಗಳು, ದೊಡ್ಡ ದೊಡ್ಡ ಹಾರಗಳು, ಬಳೆಗಳು, ದೊಡ್ಡ ಗಾತ್ರದ ಉಂಗುರಗಳು ಎಲ್ಲ ಸಮಾರಂಭಗಳಿಗೂ ಅಂದವಾಗಿ ಒಪ್ಪುತ್ತದೆ.

ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ವೈಯಕ್ತಿಕ ಲಾಭಕ್ಕೆ ಜೋತು ಬೀಳದಿರಲಿ: ಹೈಕೋರ್ಟ್ ಎಚ್ಚರಿಕೆ

ಪ್ರಾಧ್ಯಾಪಕ ಹುದ್ದೆಗೆ ಆಕ್ಷೇಪ: ಮೂವರಿಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ವಿಶ್ವವಿದ್ಯಾಲಯದ ಜೀವ ವಿಜ್ಞಾನ ವಿಭಾಗದ ಪ್ರಾಧ್ಯಾಪಕ ಎಂ.ಶಿವಶಂಕರ್ ಅವರನ್ನು ಅವರ ಹುದ್ದೆಯಿಂದ ತೆರವುಗೊಳಿಸಲು ಆದೇಶಿಸಬೇಕು' ಎಂಬ ಕೋರಿಕೆಯನ್ನು ತಿರಸ್ಕರಿಸಿರುವ ಹೈಕೋರ್ಟ್, ಮೂವರು ಅರ್ಜಿದಾರರಿಗೆ ದಂಡ ವಿಧಿಸಿದೆ.

ಈ ಸಂಬಂಧ ಬೆಂಗಳೂರಿನ ಎಚ್.ಟಿ.ಉಮೇಶ್, ಮಂಡ್ಯ ಜಿಲ್ಲೆ ತೈಲೂರು ಗ್ರಾಮದ ಎಸ್.ಆನಂದ್ ಮತ್ತು ನಾಗರಭಾವಿಯ ಎಚ್.ಪಿ.ಪುಟ್ಟರಾಜು ಸಲ್ಲಿಸಿದ್ದ ಸಾರ್ವನಿಕ ಹಿತಾಸಕ್ತಿ ಅರ್ಜಿಯನ್ನು (ಕೊ-ವಾರಂಟೊ) ವಿಭಾಗೀಯ ನ್ಯಾಯಪೀಠ ವಜಾಗೊಳಿಸಿ ಆದೇಶಿಸಿದೆ.

ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠವು, 'ಸೂಕ್ತ ಅರ್ಹತೆ ಹೊಂದಿಲ್ಲ ಎಂಬ ಕಾರಣಕ್ಕೆ ವ್ಯಕ್ತಿಯೊಬ್ಬರನ್ನು ಅವರು ಇದ್ದ ಹುದ್ದೆಯಿಂದ ತೆಗೆದು ಹಾಕುವುದಕ್ಕಾಗಿ ಕೊ-ವಾರಂಟೊ ಅಡಿಯಲ್ಲಿ ಆದೇಶ ನೀಡಲು ಆಗದು' ಎಂದು ಸ್ಪಷ್ಟಪಡಿಸಿದೆ.

'ಈಗ ನೇಮಕಗೊಂಡಿರುವ ಹುದ್ದೆಗೆ ಶಿವಶಂಕರ್ ಅರ್ಹರಲ್ಲ' ಎಂದು ಆಕ್ಷೇಪಿಸಿದ್ದ ಅರ್ಜಿದಾರರ ವಾದವನ್ನು ಸಾರಾಸಗಟಾಗಿ ತಿರಸ್ಕರಿಸಿರುವ ನ್ಯಾಯಪೀಠ, 'ಪ್ರಾಧ್ಯಾಪಕರು ಮತ್ತು ಸಹ ಪ್ರಾಧ್ಯಾಪಕರ ವೃತ್ತಿ ಸ್ವರೂಪವನ್ನು ಸಾರ್ವಜನಿಕ ಹುದ್ದೆ ಎಂದು ಪರಿಗಣಿಸಲು ಆಗುವುದಿಲ್ಲ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದೆ.


'ಅರ್ಜಿದಾರರು ವೈಯಕ್ತಿಕ ಹಾಗೂ ವೃತ್ತಿ ದ್ವೇಷದ ಹಿನ್ನೆಲೆಯಲ್ಲಿ ಪ್ರತೀಕಾರ ತೀರಿಸಿಕೊಳ್ಳುವ ಉದ್ದೇಶದಿಂದ ಈ ಅರ್ಜಿ ಸಲ್ಲಿಸಿದ್ದಾರೆ' ಎಂಬ ಪ್ರತಿವಾದಿ ಶಿವಶಂಕರ್ ಪರ, ಹೈಕೋರ್ಟ್ ವಕೀಲ ಜಿ.ಲಕ್ಷ್ಮಿಕಾಂತ್ ಅವರ ವಾದವನ್ನು ಪುರಸ್ಕರಿಸಿರುವ ನ್ಯಾಯಪೀಠ; ಮೂವರೂ ಅರ್ಜಿದಾರರಿಗೆ ತಲಾ ₹7,500 ದಂಡ ವಿಧಿಸಿದೆ.

'ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು (ಪಿಐಎಲ್), ವೈಯಕ್ತಿಕ ಹಿತಾಸಕ್ತಿ ಅರ್ಜಿಗಳಾಗಬಾರದು' ಎಂದು ಇದೇ ವೇಳೆ ಎಚ್ಚರಿಸಿರುವ ನ್ಯಾಯಪೀಠ, 'ಅರ್ಜಿದಾರರು ದಂಡದ ಮೊತ್ತವನ್ನು ನಾಲ್ಕು ವಾರಗಳ ಒಳಗಾಗಿ, 'ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ'ಕ್ಕೆ ಪಾವತಿ ಮಾಡಬೇಕು' ಎಂದು ಆದೇಶಿಸಿದೆ.

ಒಟಿಎಸ್-ಮಧ್ಯಪ್ರವೇಶ ಇಲ್ಲ; ಹೈಕೋರ್ಟ್: 'ಸಾಲ ಪಾವತಿಗೆ ಏಕ ತೀರುವಳಿ ಯೋಜನೆ (ಒಟಿಎಸ್) ರೂಪಿಸುವ ಬ್ಯಾಂಕುಗಳ ಪ್ರಕ್ರಿಯೆಗಳಲ್ಲಿ ನ್ಯಾಯಾಲಯ ಮಧ್ಯಪ್ರವೇಶ ಮಾಡುವುದಿಲ್ಲ' ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.

ಈ ಸಂಬಂಧ ಕಲಬುರಗಿ ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಸಲ್ಲಿಸಿದ್ದ ರಿಟ್ ಮೇಲ್ಮನವಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಕೆ.ನಟರಾಜನ್ ಮತ್ತು ನ್ಯಾಯಮೂರ್ತಿ ವಿಜಯಕುಮಾರ್ ಎ.ಪಾಟೀಲ್ ಅವರಿದ್ದ ವಿಭಾಗೀಯ ನ್ಯಾಯಪೀಠ (ಕಲಬುರಗಿ), 'ಸಾಲ ಒಪ್ಪಂದಕ್ಕೆ ಸಂಬಂಧಿಸಿದ ನಿಬಂಧನೆ ಹಾಗೂ ನಿಯಮಗಳನ್ನು ಮರು ರೂಪಿಸುವುದು ನ್ಯಾಯಾಲಯದ ಕೆಲಸವಲ್ಲ' ಎಂದು ಹೇಳಿದೆ.

ಬಿಜನೂರು ಅರ್ಬನ್ ಕೋ ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶವನ್ನು ಉಲ್ಲೇಖಿಸಿರುವ ನ್ಯಾಯಪೀಠ, 'ಇಂತಹ ಪ್ರಕರಣಗಳಲ್ಲಿ ಲಭ್ಯವಿರುವ ಸಾಕ್ಷ್ಯಗಳನ್ನು ಆಧರಿಸಿ ಸಾಲ ಮರುಪಾವತಿ ನ್ಯಾಯಮಂಡಳಿ (ಡಿಆರ್‌ಟಿ) ಸೂಕ್ತ ಆದೇಶಗಳನ್ನು ಹೊರಡಿಸಬಹುದು' ಎಂದು ಹೇಳಿದೆ.



ಕೊಪ್ಪಳದ ವಕೀಲರಾದ ರವಿಚಂದ್ರ ಆರ್.ಮಾಟಲದಿನ್ನಿ ರಚಿಸಿರುವ, 'ವಕೀಲರಿಗಾಗಿ ಇ–ಫೈಲಿಂಗ್ ಮಾರ್ಗಸೂಚಿ ಮತ್ತು ವಕೀಲರಿಗಾಗಿ ಕಂಪ್ಯೂಟರ್ ಬೇಸಿಕ್ ಕೈಪಿಡಿ'ಯನ್ನು ಹೈಕೋರ್ಟ್ ನ್ಯಾಯಮೂರ್ತಿ ಪ್ರದೀಪ್ ಸಿಂಗ್ ಯರೂರ್ (ಚಿತ್ರದಲ್ಲಿ ಬಲತುದಿ) ಅವರು ರಾಜ್ಯ ವಕೀಲರ ಪರಿಷತ್ ಸಭಾಂಗಣದಲ್ಲಿ ಇತ್ತೀಚೆಗೆ ಲೋಕಾರ್ಪಣೆ ಮಾಡಿದರು. ಚಿತ್ರದಲ್ಲಿ (ಎಡದಿಂದ ಬಲಕ್ಕೆ) ವಿಧಾನಪರಿಷತ್ ಸದಸ್ಯರೂ ಆದ ರಾಜ್ಯ ವಕೀಲರ ಪರಿಷತ್ ಸದಸ್ಯ ಎಸ್.ಎಲ್.ಭೋಜೇಗೌಡ, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ರಾಜ್ಯ ವಕೀಲರ ಪರಿಷತ್ ಅಧ್ಯಕ್ಷ ಎಸ್.ಎಸ್.ಮಿಟ್ಟಲಕೋಡ ಇದ್ದರು

ಬೈಜೂಸ್ ಕಂಪನಿ ವಿವಾದ: ಮಧ್ಯಂತರ ಆದೇಶ

'ಮೆಸರ್ಸ್ ಥಿಂಕ್ ಅಂಡ್ ಲರ್ನ್ ಪ್ರೈವೆಟ್ ಲಿಮಿಟೆಡ್' (ಟಿಎಲ್‌ಪಿಎಲ್) ಕಂಪನಿಯಿಂದ ಅಮಾನತುಗೊಂಡಿರುವ ನಿರ್ದೇಶಕ ಬೈಜು ರವೀಂದ್ರನ್ ಅವರು ಕಂಪನಿಯ ಜೊತೆ ಈ ಮೊದಲು ಎಲೆಕ್ಟ್ರಾನಿಕ್ ಮಾಧ್ಯಮದ ಮೂಲಕ ನಡೆಸಿರುವ ಸಂವಹನದ ಸಾಕ್ಷ್ಯ ಎನಿಸಿರುವ ಯಾವುದೇ ಇ–ಮೇಲ್‌ಗಳನ್ನು ತೆಗೆದು ಹಾಕಬಾರದು' ಎಂದು ಕಂಪನಿಯ ನೂತನ ರೆಸಲ್ಯೂಷನ್ ಪ್ರೊಫೆಷನಲ್ (ಆರ್‌ಪಿ) ಶೈಲೇಂದ್ರ ಅಜ್ಮೇರಾ ಅವರಿಗೆ ಹೈಕೋರ್ಟ್ ನಿರ್ದೇಶಿಸಿದೆ.

ಈ ಕುರಿತಂತೆ ರವೀಂದ್ರನ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ರಜಾ ದಿನದಲ್ಲಿ ನೇಮಕಗೊಂಡಿದ್ದ ವಿಶೇಷ ನ್ಯಾಯಪೀಠದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಶುಕ್ರವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಅರ್ಜಿದಾರ ರವೀಂದ್ರನ್ ಪರ ಸುಪ್ರೀಂ ಕೋರ್ಟ್ ವಕೀಲ ಶ್ಯಾಮ್ ಮೋಹನ್ ವಾದ ಆಲಿಸಿದ ನ್ಯಾಯಪೀಠ, 'ಅರ್ಜಿದಾರರು ಈ ಮೊದಲು ಕಂಪನಿಯ ಜೊತೆಗೆ ನಡೆಸಿರುವ ಸಂವಹನದ ಇ–ಮೇಲ್‌ಗಳನ್ನು ಸುರಕ್ಷಿತವಾಗಿ ಕಾಪಿಡಬೇಕು' ಎಂದು ಪ್ರತಿವಾದಿ ಆರ್‌ಪಿಗೆ ನಿರ್ದೇಶಿಸುವ ಮೂಲಕ ಮಧ್ಯಂತರ ಆದೇಶ ನೀಡಿ ವಿಚಾರಣೆಯನ್ನು ಇದೇ 21ಕ್ಕೆ ಮುಂದೂಡಿದರು.

ಪ್ರತಿವಾದಿ ಮೆಸರ್ಸ್ ಜಿಎಲ್‌ಎಎಸ್ ಟ್ರಸ್ಟ್ ಕಂಪನಿ ಪರ ಪದಾಂಕಿತ ಹಿರಿಯ ವಕೀಲ ಉದಯ ಹೊಳ್ಳ ಹಾಗೂ ರಾಜ್ಯ ಪ್ರಾಸಿಕ್ಯೂಷನ್ ಪರ ರಾಹುಲ್ ಕಾರ್ಯಪ್ಪ ಹಾಜರಿದ್ದರು.

ಸಮೀರ್ ವಿರುದ್ಧ ₹10 ಕೋಟಿ ಮಾನನಷ್ಟ ದಾವೆ

ಧರ್ಮಸ್ಥಳದ ಸೌಜನ್ಯ ಮೇಲಿನ ಅತ್ಯಾಚಾರ ಮತ್ತು ಕೊಲೆ ಆರೋಪದ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀ ಕ್ಷೇತ್ರ ಧರ್ಮಸ್ಥಳವನ್ನು ಗುರಿಯಾಗಿಸಿ ಸುದ್ದಿ ಬಿತ್ತರಿಸಿದ್ದ ಯೂ–ಟ್ಯೂಬರ್ ಎಂ.ಡಿ.ಸಮೀರ್ ವಿರುದ್ಧ ₹10 ಕೋಟಿ ಮೊತ್ತದ ಮಾನನಷ್ಟ ಮೊಕದ್ದಮೆ ದಾಖಲಿಸಲಾಗಿದೆ.

ವಿಡಿಯೊ ತೆಗೆದುಹಾಕುವಂತೆ ನ್ಯಾಯಾಲಯ ನೀಡಿದ್ದ ಆದೇಶವನ್ನು ಉಲ್ಲಂಘಿಸಿ, ಎರಡನೇ ಬಾರಿಗೆ ವಿಡಿಯೊ ಮಾಡಿ ಹರಿಬಿಡಲಾಗಿದೆ ಎಂದು ಆರೋಪಿಸಿ ಬೆಂಗಳೂರಿನ ಡಿ.ನಿಶ್ಚಲ ಹಾಗೂ ಡಿ.ಹರ್ಷೇಂದ್ರ ಕುಮಾರ್ ಸಲ್ಲಿಸಿರುವ ಅಸಲು ದಾವೆಯನ್ನು ಸಿಟಿ ಸಿವಿಲ್ ಕೋರ್ಟ್ ನ್ಯಾಯಾಧೀಶ ಎಸ್.ನಟರಾಜ್ ಶುಕ್ರವಾರ ಏಕಪಕ್ಷೀಯ ವಿಚಾರಣೆ ನಡೆಸಿದರು.

ವಾದಿಗಳ ಪರ ಹೈಕೋರ್ಟ್ ವಕೀಲ ರಾಜಶೇಖರ ಹಿಲ್ಯಾರು ಅವರ ವಾದ ಆಲಿಸಿದ ನ್ಯಾಯಾಧೀಶರು, ಪ್ರತಿವಾದಿ ಸಮೀರ್‌ಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದ್ದಾರೆ.



ನಟನ ಪ್ರಶಸ್ತಿ...

ಮೈಸೂರಿನಲ್ಲಿ 'ನಟನ' ರಂಗಸಂಸ್ಥೆಯು ಶುಕ್ರವಾರದಿಂದ ಆಯೋಜಿಸಿರುವ 'ರಜಾ– ಮಜಾ' ಮಕ್ಕಳ ಬೇಸಿಗೆ ಶಿಬಿರದಲ್ಲಿ ವೃತ್ತಿ ರಂಗಭೂಮಿಯ ಹಿರಿಯ ಕಲಾವಿದೆಯರಾದ ರಾಧಾ ಹಾಗೂ ರುಕ್ಮಿಣಿ ಅವರಿಗೆ ಚಲನಚಿತ್ರ ನಿರ್ದೇಶಕ ಯೋಗರಾಜ ಭಟ್ ಅವರು 'ನಟನ– 2025' ಪ್ರಶಸ್ತಿ ಪ್ರದಾನ ಮಾಡಿದರು. ಕಿರುತೆರೆ ನಟಿ ಭೂಮಿಕಾ ರಮೇಶ್, ಮುಖಂಡ ರವೀಂದ್ರ ಸ್ವಾಮಿ, ಉದ್ಯಮಿ ರಾಘವೇಂದ್ರ ರಾವ್, ನಟನ ಅಧ್ಯಕ್ಷ ಕೆ.ಎಸ್.ಆನಂದ ಬಾಬು, ಸಂಸ್ಥಾಪಕ ಕಾರ್ಯದರ್ಶಿ ಮಂಡ್ಯ ರಮೇಶ್, ನಟಿಯರ ಪತಿ ಜಿ.ವಿ.ಕೃಷ್ಣ ಜೊತೆಯಾದರು

ಯಲ್ಲಮ್ಮನಿಗೆ ₹4.5 ಲಕ್ಷದ ಸೀರೆ

ಪ್ರಜಾವಾಣಿ ವಾರ್ತೆ

ಉಗರಗೋಳ (ಬೆಳಗಾವಿ ಜಿಲ್ಲೆ): ವಿಜಯಪುರ ಜಿಲ್ಲೆಯ ಜಂಬಗಿಯ ಪ್ರಭುದೇವರ ಬೆಟ್ಟದ ಶಿವಯೋಗೀಶ್ವರ ಮಹಾರಾಜರ ಸಂಕಲ್ಪದಂತೆ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ವೀರಘಟ್ಟದ ಅಡವಿಲಿಂಗ ಮಹಾರಾಜರು ₹4.5 ಲಕ್ಷ ಮೌಲ್ಯದ ಸೀರೆಯನ್ನು ರೇಣುಕಾ ಯಲ್ಲಮ್ಮ ದೇವಿಗೆ ಗುರುವಾರ ರಾತ್ರಿ ಅರ್ಪಿಸಿದರು.

1955ರಲ್ಲಿ ಜಂಬಗಿಯ ಪ್ರಭುದೇವರ ಬೆಟ್ಟದ ಶಿವಯೋಗೀಶ್ವರ ಮಹಾರಾಜರು ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನಕ್ಕೆ ಆಗಮಿಸಿದ್ದರು. ಆಗ ದೇವಿಗೆ ಇಂಥ ಸೀರೆ ನೀಡುವುದಾಗಿ ಬೇಡಿಕೊಂಡಿದ್ದರು. 70 ವರ್ಷಗಳ ನಂತರ, ಕಾಶಿಯ ಬನಾರಸ್‌ನಲ್ಲಿ ರೇಷ್ಮೆಯಿಂದ ತಯಾರಿಸಿದ ಮತ್ತು ಚಿನ್ನದ ಝರಿಗಳನ್ನು ಒಳಗೊಂಡ ಸೀರೆಯನ್ನು ದೇವಿಗೆ ಅರ್ಪಿಸಿ, ಉಡಿ ತುಂಬಿ ಹರಕೆ ತೀರಿಸಿದರು.

ವೀರಘಟ್ಟದ ಅಡವಿಲಿಂಗ ಮಹಾರಾಜರು, ವಿವೇಕ ಚಿಂತಾಮಣಿ ಶ್ರೀಗಳು, ವಿಜಯಪುರದ ಉದ್ಯಮಿ ಬಾಬುರಾಯಗೌಡ ಬಿರಾದಾರ, ಕಲಾವತಿ ಬಿರಾದಾರ, ಜ್ಞಾನಸಿಂಧು ಶ್ರೀಗಳು, ಬಯಲು ಬಸವೇಶ್ವರ ಶ್ರೀಗಳು ಇದ್ದರು.



ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಯಲ್ಲಮ್ಮನ ಗುಡ್ಡದಲ್ಲಿ ಗುರುವಾರ ರಾತ್ರಿ ಶಿವಯೋಗೀಶ್ವರ ಮಹಾರಾಜರು, ಅಡವಿಲಿಂಗ ಮಹಾರಾಜರ ನೇತೃತ್ವದಲ್ಲಿ ₹4.5 ಲಕ್ಷ ಮೌಲ್ಯದ ಸೀರೆಯನ್ನು ದೇವಿಗೆ ಅರ್ಪಿಸಲಾಯಿತು

ಸಿಡಿಲು: ಸಾವು

ಕೊಪ್ಪಳ: ಜಿಲ್ಲೆಯ ಕೊಪ್ಪಳ, ಕಾರಟಗಿ, ಗಂಗಾವತಿ ಹಾಗೂ ಕನಕಗಿರಿ ತಾಲ್ಲೂಕುಗಳಲ್ಲಿ ಗುರುವಾರ ರಾತ್ರಿ ಬೀಸಿದ ಜೋರು ಗಾಳಿ ಹಾಗೂ ಬಿರುಸಿನ ಮಳೆಗೆ ಬಹಳಷ್ಟು ಬೆಳೆ ಹಾನಿಯಾಗಿದೆ.

ಕೊಪ್ಪಳದ ಹೊರವಲಯದ ಜಮೀನಿನಲ್ಲಿರುವ ಮನೆಯಲ್ಲಿದ್ದಾಗ ಸಿಡಿಲು ಬಡಿದು ಕೊಪ್ಪಳದ ಮಂಜುನಾಥ್ ಗಾಳಿ (48) ಹಾಗೂ ಗೋವಿಂದಪ್ಪ ಮ್ಯಾಗಲಮನಿ (62) ಮೃತಪಟ್ಟಿದ್ದಾರೆ.

ಭತ್ತ, ಸಜ್ಜೆ, ಮೆಕ್ಕಜೋಳ ಸೇರಿ ಒಟ್ಟು 10,631 ಹೆಕ್ಟೇರ್‌ನಷ್ಟು ಬೆಳೆ ನೆಲಕ್ಕೊರಗಿದೆ. ಅಳವಂಡಿ ಭಾಗದಲ್ಲಿ ಬಾಳೆ ಬೆಳೆ ಸಂಪೂರ್ಣ ಹಾಳಾಗಿದೆ. ಜಿಲ್ಲೆಯ ವಿವಿಧೆಡೆ ಒಟ್ಟು 60 ಜಾನುವಾರುಗಳು ಮೃತಪಟ್ಟಿವೆ.



ಇಂದಿನಿಂದ 'ಎಡ್ಯುವರ್ಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಮುಗಿಸಿ, ನೀಟ್ ಹಾಗೂ ಸಿಇಟಿ ಬರೆಯುತ್ತಿರುವ ವಿದ್ಯಾರ್ಥಿಗಳಿಗಾಗಿ ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ಪತ್ರಿಕೆಗಳಾದ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಆಯೋಜಿಸಿರುವ ಅತಿ ದೊಡ್ಡ ಶೈಕ್ಷಣಿಕ ಮೇಳ 'ಎಡ್ಯುವರ್ಸ್' ಬೆಂಗಳೂರು ಅರಮನೆ ಮೈದಾನದಲ್ಲಿ (ತ್ರಿಪುರವಾಸಿನಿ) ಇಂದು (ಏ.12) ಆರಂಭವಾಗಲಿದೆ.

ಎರಡು ದಿನ ನಡೆಯುವ ಈ ಮೇಳದಲ್ಲಿ 60ಕ್ಕೂ ಹೆಚ್ಚು ಉನ್ನತ ಶಿಕ್ಷಣ ಸಂಸ್ಥೆಗಳು ಭಾಗವಹಿಸಲಿವೆ. ಪ್ರತಿ ಕಾಲೇಜು, ವಿಶ್ವವಿದ್ಯಾಲಯವೂ ಪ್ರತ್ಯೇಕ ಕೌಂಟರ್ ಹೊಂದಿದ್ದು, ಮೇಳಕ್ಕೆ ಭೇಟಿ ನೀಡುವ ವಿದ್ಯಾರ್ಥಿಗಳು, ಪೋಷಕರಿಗೆ ಪಿಯು ನಂತರದ ಶೈಕ್ಷಣಿಕ ಭವಿಷ್ಯ ಕುರಿತು ಸೂಕ್ತ ಮಾರ್ಗದರ್ಶನ ನೀಡಲಿವೆ. ಸಾಂಸ್ಥಿಕ ಪ್ರದರ್ಶನಗಳ ಜತೆಗೆ, ವಿದ್ಯಾರ್ಥಿಗಳಿಗೆ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಲು ಪ್ರಖ್ಯಾತ ಶಿಕ್ಷಣ ತಜ್ಞರು ಮಾರ್ಗದರ್ಶನ ನೀಡಲಿದ್ದಾರೆ.

ಏ.12ರಂದು ಬೆಳಿಗ್ಗೆ 10.30ಕ್ಕೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ್ ಗುಂಡೂರಾವ್ ಶೈಕ್ಷಣಿಕ ಮೇಳ ಉದ್ಘಾಟಿಸುವರು. ಏ.13ರಂದು ಸಂಜೆ ಸಮಾರೋಪ ಹಮ್ಮಿಕೊಳ್ಳಲಾಗಿದೆ.

ಪ್ರಜಾವಾಣಿ DH ಎಡ್ಯುವರ್ಸ್™ ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

- **ಆಯೋಜನೆ:** 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್'
- **ಸ್ಥಳ:** ತ್ರಿಪುರವಾಸಿನಿ, ಅರಮನೆ ಮೈದಾನ, ಬೆಂಗಳೂರು
- **ದಿನಾಂಕ:** ಏಪ್ರಿಲ್ 12–13 **ಸಮಯ:** ಬೆಳಿಗ್ಗೆ 10ರಿಂದ
- **ಉದ್ಘಾಟನೆ:** ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಪ್ರವೇಶ ನೋಂದಣಿಗಾಗಿ ಉಪಯೋಗಿಸಿ..

ಬೇಟೆ; ಮಾವುತರ ಅಮಾನತು

ಹುಣಸೂರು (ಮೈಸೂರು ಜಿಲ್ಲೆ): ನಾಗರಹೊಳೆ ಅರಣ್ಯ ಪ್ರದೇಶದಲ್ಲಿ ವನ್ಯಮೃಗ ಬೇಟೆಯಾಡಿದ ಆರೋಪದಲ್ಲಿ ನಾಗರಹೊಳೆ ದೊಡ್ಡಹರವೆ ಆನೆ ಶಿಬಿರದ ಮಾವುತರಾದ ಜೆ.ಡಿ. ಮಂಜು ಮತ್ತು ಎಚ್.ಎನ್. ಮಂಜು ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಹುಣಸೂರು ಹುಲಿ ಯೋಜನಾ ನಿರ್ದೇಶಕಿ ಸೀಮಾ ಆದೇಶಿಸಿದ್ದಾರೆ.

ದೊಡ್ಡಹರವೆ (ಕಾವೇರಿ) ಆನೆ ಕ್ಯಾಂಪ್‌ನ 'ರಾಮಯ್ಯ' ಆನೆಯ ಮಾವುತರಾಗಿದ್ದ ನಾಗಾಪುರ ಪುನರ್ವಸತಿ ಕೇಂದ್ರದ ಈ ಇಬ್ಬರು, ನೇರಳಕುಪ್ಪೆಯ ಮಂಜು ಅವರ ಬಂದೂಕು ಬಳಸಿ ಬೇಟೆಯಾಡಿದ್ದರು. ಇದು ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ.

ಜೆ.ಡಿ. ಮಂಜು ಮನೆಯಲ್ಲಿ ತಪಾಸಣೆ ಮಾಡಿದಾಗ ಬಂದೂಕಿನ ಬಿಡಿಭಾಗಗಳು ಮತ್ತು ಗುಂಡು ಪತ್ತೆಯಾಗಿದ್ದು, ಮೂವರ ವಿರುದ್ಧವೂ ಪ್ರಕರಣ ದಾಖಲಿಸಿದ್ದಾರೆ.

'ಬಂದೂಕು ಮಾಲೀಕ ಮಂಜು ತಲೆ ಮರೆಸಿಕೊಂಡಿದ್ದು, ಪತ್ತೆಗೆ ಬಲೆ ಬೀಸಲಾಗಿದೆ. ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಿಸಿದ್ದು, ಮಂಜುಗೆ ನೀಡಿರುವ ಬಂದೂಕು ಪರವಾನಗಿ ರದ್ದುಗೊಳಿಸುವಂತೆ ಕೋರಿದ್ದೇವೆ' ಎಂದು ಸೀಮಾ ತಿಳಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Anjanapura

ANJANAPURA 10TH block BDA 40x60 Site for Sale, ready for Construction (Owner meeting) Contact: 9845535348

ANJANAPURA BDA Sites For Sale, 1st Block, 20x30, W/F, Price 63 Lakhs Negotioble: 9740150364 /8884707773

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

WANTED ANJANAPURA Banashankari 6th Stage JPNagar Near Kanakapura Road Any Measurement Immediate Settlement Call: 9964627255

SITE FOR SALE: BANASHANKARI 6th Stage 3rd Block, 30x40 North Facing, Site.#2011, Price 13500/Sqft. Call: Owner. 9740148870.

SITE FOR`SALE IN BANASHANKARI 6th STAGE 4TH 'B' BLOCK 40X60 WEST FACING 2.05Cr. CONTACT- 9535575774

Basavanagudi

48X37 PLUS common passage. Site for sale Total 1904 sqft, East facing, Back portion, VVPuram, Basavanagudi. Only Genuine buyers Contact: 9148711123

Basaweshwaranagar

40×60 BASVESHWARNAGAR 30×41 Rajajinagar, 50×75 Malleshwapur, 80×100 Race Course Road Site's Residential, Commercial Sale: 8660075308

Intl Airport Road

30x40 Converted Plots @ 2,50,000/-
208/- per sq.ft, 90 minutes Journey from Yelahanka
Clear Documents | Ready for Registration
9343510635 | 9010559539

Jayanagar

40X60 WEST Facing Site for Sale Jayanagar`1st Block, Madhavan`Park, Naveen-9611880033, Brokers`Excuse

SALE SITE 50x60 4th Block Jayanagar Purely Residential Contact: 9611844667 8123515830

J P Nagar

PROPERTY FOR Sale In JPNagar 7th Phase Adjoining RBI Layout 1860sqft South West Corner 9880175555

Kengeri

SITE FOR SALE W/F 30X40 CLEAR TITLES E-KHATA NEAR NEW ORCHID SCHOOL KOMMAGHATTA CONTACT: 9945191143

Kanakapura Road

SITE FOR SALE Judicial Layout Thalagattpura 30x40 North`East and North West`Corner BBMP A katha 30`Feet Road. Call: 9341050991/ 9740148870.

30X40 W/F BDA_SITE JP.Nagar 9th Phase, 5th A Block, Rs.13,250 per_Sqft. Negotiable. Call: Dr.Roopak. 9880299011.

Kempegowda Layout

NADAPRABHU KEMPEGOWDA LAYOUT 8th Block 40X60 East Facing, Arkavati Layout alternate site sale. Contact: 9686469799

KEMPEGOWDA LAYOUT BDA. 40x60 East 5th Block M Sector Near Metro Station 100 ft Road: 9731594565/ 9663005859

KEMPEGOWDA LAYOUT, COMMERCIAL BDA SITE FOR SALE 20x30, 30x40, 40x60, 50x80, Contact Kumar: 9945119449

NADAPRABHU KEMPEGOWDA layout, Sir M.Vishweshwaraiah. Sites for sale. 20x30,30x40, 40x60, 50x80. Manjunatha 9742568746, 9900701637.

Magadi Road

40×50 NORTH-EAST Corner, Site for Sale, Tavarekere 'Raynold Gardens'. Genuine Buyers only Contact: 9845502228, 9844918445

Nagarabhavi

NAGARABHAVI RHCS LAYOUT 2nd Stage BDA Approved 30x60 East Facing 40' Road 12500/- PSft: 9845488488

SITE FOR SALE AT NAGARBHAVI 40x60 SQFT NORTH FACING CONTACT: 94483 77834 NO BROKERS PLEASE

Nelamangala

RASHI SPLENDOUR, 50X80 NORTH WEST CORNER, BIAAPA APPROVED SITE FOR SALE, GATED COMMUNITY, CLUB HOUSE WITH SWIMMING POOL, BUYERS ONLY CONTACT 9902052259


North


30X40 SITE for sale, Baba layout, Dwarakanagar, Near Brindavan college, 10,000/- per sqft. Negotiable. Contact:- 8466822113, 9632440841

Rajarajeshwari Nagar

SALE 30X40 West Facing 40feet Road-@ RR Nagar Kenchenahalli Remco Layout`16000 Per`sft Genuine-Buyers Call: Aaradhana Properties: 9980659543

***41X40 W/S** Corner Site* sale University Layout, Rajarajeshwarinagar. Beautiful location, 19000/- Sqft. Direct Owner. 9591013777





UNIVERSITY LAYOUT Rajarajeswari Nagar 30x40 SF Behind RR Nagar Police Station 17200/- Per Sqft 9845488488

Vijayanagar

SITE FOR SALE 30x45 North`Facing @ Vijayanagar Marenahalli @ Good Location Price 19000/- Sqft Negotiable 7676900174 9945569909

Vishweshwariah Layout

AVAILABLE, VISHWESHWARAIAH Layout, 6th Block, No.129, 30x40, East Facing Near KEL Collage, Owner: 9845062822/ 8660751684

VISHWESHWARAIA LAYOUT 40x60 BDA SITE Sale East Facing 40 Feet Road Developed Area Buyers. Contact: 9035470616

DIRECT OWNER #1340, 30x40 BDA Site Sale VISHVESWARAIAH LAYOUT BLOCK-2, Close to 100'ft Road. 9742681666

40X60 SOUTH facing Vishweshwariaha layout 5th block, near 100ft road, 12,000/- psqft, negotiable. Owner. 9342329030.

Bidadi

BMICPA RERA Approved, just 100 meter from Bangalore to Mysore Highway, wonderla Gate 2424 Sqft Site, E/F, price 5000/- 8970924123/ 9148553232

Srirampura

SALE 30X100, Site, 1st cross,Single owner, 2 mins from metro, 17000/sqft, PH:9739732433

House

J P Nagar

SALE JPNAGAR 2nd Phase Corner Property 30x40 Duplex-House 3BHK_1700sqft Granite-flooring Price 4cr_Classic Estates 9845302589

Vijayanagar

VIJAYANAGAR PATTEGARPALYA: SALE 30X40 House, East, 6 BHK Duplex, E Katha, Fully Furnished. 8095976649/ 9620285339

MORE Classifieds IN SUPPLEMENT

Vidyaranyapura

RESIDENTIAL HOUSE for SALE, at Vidyaranyapura NORTH EAST Corner, 40 Square Building DUPLEX with Lift, BDA, Layout, BBMP Katha. Contact: 9731474000

1 BHK NORTH FACING & 2 BHK EAST FACING SHOPS FOR RENT GOOD LOCATION: 8296895858

Flat

Banashankari

GURURAJA LAYOUT Near Devegowda Petrol Bunk, New Luxury 4 BHK FLATS Sale, Ready to move. Call: 9449353535.

Kanakapura Road

NEW FLATS For Sale, Kanakapura Road near Forum Mall, Swimming Pool, Club house, Anika Projects. Sowmya:- 9611131423.

Commercial Land

East

LAND FOR Sale, Narasapura: 55 Guntas, strategically located 2 kilometers towards Narasapura Junction and a mere 300 feet off the Bengaluru-Tirupati Highway. Features include a 40-foot concrete access road and placement within a thriving, free-zone development. Versatile land suitable for warehouses, industries, apartments, or gated communities. Contact 9342523586.

Commerical

J P Nagar

J.P.NAGAR, 100' Ring Road OC/CC Commercial Rental income Building, Prime`location 60x92 North facing 20000sft. Built-Up Area,`Sale 26,00,00,000/- -9845000299.

Farm House/ Land/ Resorts

East

LAND FOR Sale, Narasapura: 55 Guntas, strategically located 2 kilometers towards Narasapura Junction and 300 feet off the Bengaluru-Tirupati Highway. 40 feet concrete access road and placement within a thriving, free- zone development. Versatile land suitable for warehouses, industries, apartments, or gated communities. Contact: 9342523586.

Industrial & Factory

Mysore Road

SALE INDUSTRIAL CONVERSION LAND 2.14 ACRES RAMANAGARA MYSORE ROAD HIGHWAY FACING 4.90Cr/ Acre Karthik 9741501616



General

Multiple Locations

FOR ALL REAL ESTATE SOLUTIONS, A LEADING 35 YEARS EXPERIENCED REAL ESTATE COMPANY CONTACT VICTORY PROPERTIES, 7411692219/ 8618576685, info@victorypropertie s.in www.victorypropertie s.in

Joint Development

General

INVEST IN REAL ESTATE PROPERTIES, BANGALORE SOUTH AND HAROHALLI SURROUNDING, WITH GOOD RETURNS CONTACT VICTORY PROPERTIES 861856685/ 7411692219, www.victorypropertie s.in info@victorypropertie s.in

Joint Venture

22,000 SQFT DC Converted Land Available`for JVC, Apartment Construction.Near Nisarga`Layout Bukkasagar,Jigani Hobli.Call: Owner 9449235457 7349427477.

Villas/Bunglows

Kammanahalli

INDEPENDENT VILLA 8 BR, 4000 sft built-up, 2500 sft plot in Kammanahalli. Price-12 Cr. Message on WhatsApp:+91 8971767744.

REAL ESTATE BUYING

Farm House/ Land/ Resorts

Out-Station

WANTED 70 TO 100 ACRES GOOD YIELDING COFFEE ESTATE AROUND MADIKERE, CHICKMANGLUR, SAKLESHPUR. CALL: 9845034688

Sites

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESWARAIAH KEMPEGOWDA ANY BDA LAYOUT: 9845062822/ 8660751654

BDA-SITE WANTED @ Banashankari 6th Stage any Block 30x40, 40x60, 50x80 Immediate Settlement Contact: 98455-55666

Kanakapura Road

WANTED SITE 30x40, 40x60 Anjanapura`BDA, Banashankari 6th`Stage, JCHS, BCCHS, BCMC Balaji Layout, Gubblala NarayanaNagar Vajarahalli, Call: 9663454878


Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

REQUIRED EAST/ North Plots, 2400sqft RR Nagar, Poornaprajna Layout, Bharath Housing Co-Operative Society, Jayanagar Housing Co-Operative Society, Only Genuine Owner/ Seller Call: 9845188137.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480



BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Flats

2 BHK FLAT 1350.Sqft. for RENT at`Malleswaram 11th Cross, only Vegetarians. No Brokers. 8277466761.

Industrial And Factory

AVAILABLE OF Industrial Shed of 170000`sqft at Soukya Road, Whitefield. Available Built-to-Suit Warehouse 160000 sqft.`Vijipura, Hoskote Contact: 9341234288/ 9663224353/ 9845417487.

House

3 BHK East Facing Semi furnished with Lift & Parking for Lease 50 Lakhs 9900127289

Villas/Bunglows

SEMIFURNISHED VILLA in Skylark Arcadia Whitefield available for rent - 65k including maintenance contact 8217838593

JOB OPPORTUNITIES

Engg/ Production Technical

REQUIRED ITI/ DEE/ JOC ELECTRICAL Candidates FOR ELECTRICAL MAINTENANCE IN BANGALORE FRESH 2 YEARS EXPERIENCED 7353763801, 7353779797, 7353779800

BUSINESS

Business to Business

Business

FOR ALL BRANDING/ SOCIAL MEDIA/ HOARDINGS/ BUSBACK/ AUTOBACK ADVERTISEMENT/ FOR CORPORATES, EDUCATIONAL INSTITUTIONS, GOLD JEWELLERY COMPANIES AND ALL TYPES OF BUSINESS PROMOTIONAL PACKAGES CONTACT: VENUSCAST TECHNOLOGIES PVT LTD, CALL 8722123445/ 9538123445, www.venuscast.com, INDIA & UAE

AUTOMOTIVE

Four Wheelers Selling

Hyundai

SALE I10 2011, AUTOMATIC, 3RD OWNER, 71000 KMS, SILVER, EXCELLENT CONDITION, GOOD TYRES, CALL 8722123445/ 9538123445

PERSONAL

Change of Name

I, SONIYA NAGLAPUR, residing at Sindhanur, Raichur- 584128 have changed my name as SONIA, vide affidavit dated 10/04/2025 before Notary K.S. Bammappanavar, Bengaluru

TOURS & TRAVEL

Travel

HEAVENLY WORLD TOURS BHUTAN 7DAYS 55000 VIETNAM 5 DAYS 85000 MALAYSIA 4DAYS 47000 THAILAND 5DAYS 47000 KASHMIR 5DAYS 57000 SHIMLA KULU MANALI 7DAYS 43000 DELHI AGRA JAIPUR 6DAYS 39000 Mobile:9880541665/ 9947547866

PUBLIC NOTICE

PUBLIC NOTICE

Notice is hereby given to the general public that my client is intending to purchase all that immovable property described in the Schedule hereunder from its present owner **Mrs. SAILAJA REDDY N. H.** alias **SHAILAJA REDDY N.H.,** aged about 50 years, wife of Mr. N. H. Bhaskar Reddy, Ordinarily at No.25/684-52, Padmavathi Nagar, Opp. Raos Degree College, Nandyal, Kurnool District, Andhara Pradesh -518 501, presently residing at Villa No.419/A, 2nd Phase, " ADARSH PALM RETREAT", Devarabisnahalli, Bangalore - 560103, who is representing that she is the sole and absolute owner of the Schedule property, having purchased the same under a Absolute Sale deed dated 16.10.2004 executed by Mr. P. Swaminathan son of Mr. K. P. Haran, registered as No. SHV-1-03671/2004-05, in Book I, stored in CD No.SHVD20, in the office of the Sub Registrar, Shivajinagar, Bangalore and other than herself no other person/s have any right, title, interest or charge over the Schedule property.

Any person/s having any claims, right, title, interest by way of inheritance, sale, mortgage, transfer, lease, tenancy, lien, charge, maintenance, easement, gift, exchange, possession or encumbrances, objection or otherwise in whatsoever manner may intimate/lodge his/her/ their/objection/s with relevant documentary proof to the undersigned at the address given below within TEN DAYS from the date of publication of this notice, failing which any claims from any party/s shall be waived of for all legal purposes and will be presumed that no other person/s has got any claim, right, title, interest or charge over the Schedule property and my client will proceed to complete the Sale transaction.

SCHEDULE

All that piece and parcel of immovable property being land with building bearing site No.70, PID No.74-8-70, formed by the Bangalore Development Authority, situated at H.A.L. 3rd Stage, in the Bruhat Bangalore Mahanagara Palike Ward No.74, New Ward No.58, Bangalore and bounded on the: **East by :** Road; **West by :** Site bearing No.23; **North by :** Site bearing No.71; **South by :** Site bearing No.69; measuring East to West 24.38 meters; North to South 15.24 meters, in all measuring a total extent of 371.61 square meters.

NAGARAJA, Advocate,
No. 6, KHB Buildings, II Block, 13th Cross, Indiranagar II Stage, Bangalore - 560 038.
Ph: 9448067511.

Bangalore Dated : 10.04.2025

PUBLIC NOTICE

Notice is hereby given to the general public that my client is intending to purchase all that immovable property described in the Schedule hereunder from its present owner **Mr. NARENDRA PANI** alias **NARENDAR PANI,** aged about 70 years, son of late Lt. Col. G. S. Pani, presently residing at No.777/M, 13th Main, 1st Cross, H. A. L. 2nd Stage, Bangalore-560 038, who is representing that he is the sole and absolute owner of the Schedule property, having acquired the same under a Memorandum of Family Settlement deed dated 09.08.2004 executed by Mrs. Parimala Pani wife of late Mr. Lt. Col. G. S. Pani and Ms. Vyjayanthi Pani and Dr. Rajini Pani both daughters of late Mr. Lt. Col. G. S. Pani, registered as No.SHV-1-02515/2004-05, in Book I, stored in CD No.SHVD15, in the office of the Sub Registrar, Shivajinagar, Bangalore and other than himself no other person/s have any right, title, interest or charge over the Schedule property.

Any person/s having any claims, right, title, interest by way of inheritance, sale, mortgage, transfer, lease, tenancy, lien, charge, maintenance, easement, gift, exchange, possession or encumbrances, objection or otherwise in whatsoever manner may intimate/lodge his/her/ their/objection/s with relevant documentary proof to the undersigned at the address given below within TEN DAYS from the date of publication of this notice, failing which any claims from any party/s shall be waived of for all legal purposes and will be presumed that no other person/s has got any claim, right, title, interest or charge over the Schedule property and my client will proceed to complete the Sale transaction.

SCHEDULE

All that piece and parcel of immovable property being land with building bearing Site No.777/M, PID No.72-1-777/M, formed by the Bangalore Development Authority, situated at H.A.L. 2nd Stage, in the Bruhat Bangalore Mahanagara Palike Ward No.72, New Ward No.112, Bangalore and bounded on the: **East by :** Property No.777/B; **West by :** Road; **North by:** Property No.777/L; **South by:** Property No.777/N; measuring East to West 18.28 meters; North to South 12.19 meters, in all measuring a total extent of 222.83 square meters.

A. NAGARAJA, Advocate,
No. 6, KHB Buildings, II Block, 13th Cross, Indiranagar II Stage, Bangalore - 560 038.
Ph: 9448067511.

Bangalore Dated : 10.04.2025

CAUTION NOTICE

ಜಾರಕಬಂಡೆ ಕಾವಲ್ ಗ್ರಾಮ: ₹50 ಕೋಟಿ ಮೌಲ್ಯದ 23 ಗುಂಟೆ ಜಮೀನಿನಲ್ಲಿ 15 ಅಕ್ರಮ ಕಟ್ಟಡ

ಜಿಲ್ಲಾಧಿಕಾರಿ ಬಂಗಲೆ ನಿವೇಶನವೇ ಒತ್ತುವರಿ

● ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ನಗರದ ನಂದಿನಿ ಬಡಾವಣೆಯ ಸರಸ್ವತಿಪುರದಲ್ಲಿ ಜಾರಕ ಬಂಡೆ ಕಾವಲ್ ಗ್ರಾಮದಲ್ಲಿ ಬೆಂಗಳೂರು ನಗರ ಜಿಲ್ಲಾಧಿಕಾರಿ ವಸತಿ ಗೃಹ ನಿರ್ಮಾಣಕ್ಕಾಗಿ ಕಾಯ್ದಿರಿಸಿದ್ದ ಸುಮಾರು ₹50 ಕೋಟಿ ಮೌಲ್ಯದ 23 ಗುಂಟೆ ವಿಸ್ತೀರ್ಣದ ನಿವೇಶನದ ಬಹುಭಾಗ ಎರಡನೇ ಬಾರಿಗೆ ಒತ್ತುವರಿಯಾಗಿದೆ.

ಯಲಹಂಕ ತಾಲ್ಲೂಕು ಯಲಹಂಕ ಹೋಬಳಿಯ ಜೆ.ಬಿ. ಕಾವಲ್ ಗ್ರಾಮದ ಸರ್ವೆ ನಂಬರ್ 1ರಲ್ಲಿ ಬ್ಲಾಕ್ 13ರಲ್ಲಿನ 23 ಗುಂಟೆ ಜಮೀನಿನಲ್ಲಿನ ಒತ್ತುವರಿಯನ್ನು 2014ರಲ್ಲಿ ತೆರವುಗೊಳಿಸಲಾಗಿತ್ತು. ಬೆಂಗಳೂರು ನಗರ ಜಿಲ್ಲಾಧಿಕಾರಿಯವರಿಗಾಗಿ ವಸತಿಗೃಹ ನಿರ್ಮಾಣಕ್ಕೆ ಈ ಜಮೀನನ್ನು ಕಾಯ್ದಿರಿಸಿ 2014ರ ಜುಲೈ 21ರಂದು ಆಗಿನ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದರು.

11 ವರ್ಷಗಳಿಂದ ಈ ನಿವೇಶನದ ಗಡಿ ಗುರುತಿಸಿ, ಸ್ವಾಧೀನಕ್ಕೆ ಪಡೆಯುವ ಪ್ರಯತ್ನವೇ ಆಗಿರಲಿಲ್ಲ. ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಮುಖಂಡರು ನೀಡಿದ ದೂರನ್ನು ಆಧರಿಸಿ ಕಂದಾಯ ಇಲಾಖೆ ಅಧಿಕಾರಿಗಳು ಸ್ಥಳ ತಪಾಸಣೆ ಮತ್ತು ಭೂಮಾಪನ ನಡೆಸಿದ್ದು, 15 ಕಟ್ಟಡಗಳು ಅಕ್ರಮವಾಗಿ ನಿರ್ಮಾಣವಾಗಿರುವುದು ದೃಢಪಟ್ಟಿದೆ.

ಮುಖ್ಯಾಂಶಗಳು

- 2014ರಲ್ಲಿ ಒತ್ತುವರಿ ತೆರವುಗೊಳಿಸಿ ವಶಕ್ಕೆ ಪಡೆದಿದ್ದ ನಿವೇಶನ
- 11 ವರ್ಷವಾದರೂ ಪೋಡಿ ದುರಸ್ತಿ, ದಾಖಲೆ ತಿದ್ದುಪಡಿ ಆಗಿಲ್ಲ
- ಮತ್ತೆ ಒತ್ತುವರಿ ಆಗಿರುವುದು ಕೆಆರ್‌ಎಸ್ ಪಕ್ಷದ ದೂರಿನ ಬಳಿಕ ಪತ್ತೆ

ಪಹಣಿಗೆ ಸೀಮಿತ: ಜಾರಕಬಂಡೆ ಕಾವಲ್ ಗ್ರಾಮದ ಸರ್ವೆ ನಂಬರ್ 1ರಲ್ಲಿ ಒಟ್ಟು 427 ಎಕರೆ 26 ಗುಂಟೆ ಜಮೀನು ಇತ್ತು. ಅದರಲ್ಲಿ ಖಾಲಿ ಇದ್ದ 23 ಗುಂಟೆಯನ್ನು ಜಿಲ್ಲಾಧಿಕಾರಿಯವರ ವಸತಿ ಗೃಹ ನಿರ್ಮಾಣಕ್ಕಾಗಿ ಕಾಯ್ದಿರಿಸುವಂತೆ ಯಲಹಂಕ ತಹಶೀಲ್ದಾರ್ ಪ್ರಸ್ತಾವ ಸಲ್ಲಿಸಿದ್ದರು. ಅದನ್ನು ಅನುಮೋದಿಸಿ ಜಿಲ್ಲಾಧಿಕಾರಿಯವರು ಆದೇಶ ಹೊರಡಿಸಿದ್ದರು.

ಚದರ ಅಡಿಗೆ ₹12 ಸಾವಿರ

ಜಿಲ್ಲಾಧಿಕಾರಿ ವಸತಿಗೃಹ ನಿರ್ಮಾಣಕ್ಕೆ ಕಾಯ್ದಿರಿಸಿರುವ ನಿವೇಶನವು ಸರಸ್ವತಿಪುರ ಮುಖ್ಯರಸ್ತೆಗೆ ಸಮೀಪದಲ್ಲೇ ಇದೆ. ಅಲ್ಲಿ ಪ್ರತಿ ಚದರ ಅಡಿ ಜಮೀನಿನ ಮಾರ್ಗಸೂಚಿ ದರ ₹8,000 ಇದೆ. ಆದರೆ, ಮಾರುಕಟ್ಟೆ ದರ ₹12,000ದಿಂದ ₹20,000ದವರೆಗೂ ಇದೆ. ಒಟ್ಟು 25,047 ಚದರ ಅಡಿ ವಿಸ್ತೀರ್ಣದ ನಿವೇಶನದ ಅಂದಾಜು ಮೌಲ್ಯ ₹50 ಕೋಟಿಗೂ ಹೆಚ್ಚಾಗುತ್ತದೆ ಎನ್ನುತ್ತವೆ ಕಂದಾಯ ಇಲಾಖೆ ಮೂಲಗಳು.

ಆ ಬಳಿಕ 23 ಗುಂಟೆ ಜಮೀನನ್ನು ಜಿಲ್ಲಾಧಿಕಾರಿ ವಸತಿ ಗೃಹ ನಿರ್ಮಾಣಕ್ಕೆ ಕಾಯ್ದಿರಿಸಿರುವುದಾಗಿ ಪಹಣಿಯಲ್ಲಿ ಮಾತ್ರ ನಮೂದು ಮಾಡಲಾಗಿತ್ತು. ಪೋಡಿ ದುರಸ್ತಿ ಮಾಡಿ ಆಕಾರ ಬಂದ್ ಮತ್ತು ಮೂಲ ಟಿಪ್ಪಣಿಯಲ್ಲಿ ಆ ಕುರಿತು ಮಾಹಿತಿ ದಾಖಲಿಸುವ ಪ್ರಕ್ರಿಯೆ ನಡೆದಿಲ್ಲ. ಸ್ವತ್ತಿಗೆ ಕಾಂಪೌಂಡ್ ನಿರ್ಮಿಸಿ ಸ್ವಾಧೀನಕ್ಕೆ ಪಡೆಯುವ ಪ್ರಯತ್ನವೂ ಆಗಿರಲಿಲ್ಲ.

ಖಾಲಿ ಇರುವುದು ಮೂರೇ ಗುಂಟೆ: ದೂರು ಬಂದ ಬಳಿಕ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ ಅವರು ಜಿಲ್ಲಾಡಳಿತದ ಅಧಿಕಾರಿಗಳೊಂದಿಗೆ ಸ್ಥಳಕ್ಕೆ ಭೇಟಿನೀಡಿ ಪರಿಶೀಲಿಸಿದ್ದರು. ನಿವೇಶನ ಒತ್ತುವರಿಯಾಗಿರುವುದು ಕಂಡುಬಂದಿತ್ತು. ಸಂಪೂರ್ಣ ಭೂಮಾಪನ ನಡೆಸಿ, ಒತ್ತುವರಿ ಕುರಿತ ಗುರುತುಗಳೊಂದಿಗೆ ನಕ್ಷೆ ಸಲ್ಲಿಸಲು ಆದೇಶ ನೀಡಿದ್ದರು.

‘ನಿವೇಶನ ಸ್ವಾಧೀನಕ್ಕೆ ಸೂಚನೆ’


ಜಿ. ಜಗದೀಶ

‘ವಸತಿಗೃಹ ನಿರ್ಮಾಣಕ್ಕೆ ಕಾಯ್ದಿರಿಸಿದ್ದ ನಿವೇಶನದಲ್ಲಿನ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವಂತೆ ಯಲಹಂಕ ತಹಶೀಲ್ದಾರ್ ಅವರಿಗೆ ಸೂಚನೆ ನೀಡಲಾಗಿದೆ. ಶೀಘ್ರದಲ್ಲಿಯೇ ಸ್ವತ್ತನ್ನು ಜಿಲ್ಲಾಡಳಿತದ ವಶಕ್ಕೆ ಪಡೆಯಲಾಗುವುದು’ ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ ಅವರು ಪ್ರತಿಕ್ರಿಯಿಸಿದರು.

‘ಸರ್ಕಾರದ ನಿರ್ಲಕ್ಷ್ಯ ಬಯಲು’


ಸಿ.ಎನ್. ದೀಪಕ್

‘₹50 ಕೋಟಿ ಮೌಲ್ಯದ ನಿವೇಶನ ಒತ್ತುವರಿ ಆಗಿರುವುದು ನಮ್ಮ ಪಕ್ಷದ ಮುಖಂಡರು ದೂರು ನೀಡಿದ ಬಳಿಕವಷ್ಟೇ ಜಿಲ್ಲಾಡಳಿತಕ್ಕೆ ತಿಳಿಯಿತು. ಇದು ಸಾರ್ವಜನಿಕ ಆಸ್ತಿಗಳ ರಕ್ಷಣೆಯಲ್ಲಿ ಸರ್ಕಾರದ ನಿರ್ಲಕ್ಷ್ಯಕ್ಕೆ ಕನ್ನಡಿ ಹಿಡಿಯುತ್ತದೆ. ತಕ್ಷಣವೇ ಈ ಆಸ್ತಿಯನ್ನು ವಶಕ್ಕೆ ಪಡೆಯಬೇಕು’ ಎನ್ನುತ್ತಾರೆ ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ ಪ್ರಧಾನ ಕಾರ್ಯದರ್ಶಿ ಸಿ.ಎನ್. ದೀಪಕ್

‘ವಸತಿಗೃಹ ನಿರ್ಮಾಣಕ್ಕೆ ಕಾಯ್ದಿರಿಸಿದ್ದ 23 ಗುಂಟೆ ಜಮೀನಿನ ಪೈಕಿ 3 ಗುಂಟೆ ಮಾತ್ರ ಖಾಲಿ ಉಳಿದಿರುವುದು ಭೂಮಾಪನದ ವೇಳೆ ಗೊತ್ತಾಗಿದೆ. 15 ಅಕ್ರಮ ಕಟ್ಟಡಗಳು ನಿರ್ಮಾಣವಾಗಿವೆ. ಉಳಿದಂತೆ ಗುಡಿಸಲುಗಳು, ಶೀಟ್ ಮನೆಗಳು, ಕಾಂಪೌಂಡ್ ಹಾಕಿರುವ ಖಾಲಿ ನಿವೇಶನಗಳು ಮತ್ತು ಅನಧಿಕೃತವಾಗಿ ನಿರ್ಮಿಸಿರುವ ರಸ್ತೆ ಇದೆ’ ಎಂದು ಯಲಹಂಕ ತಹಶೀಲ್ದಾರ್ ಶ್ರೇಯಸ್ ಜಿ.ಎಸ್. ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಒತ್ತುವರಿದಾರರಿಗೆ ನೋಟಿಸ್ ಜಾರಿ ಮಾಡಲಾಗಿದೆ. ಈ ಪೈಕಿ ಒಬ್ಬರು ಮಾತ್ರ ಪ್ರತಿಕ್ರಿಯೆ ಸಲ್ಲಿಸಿದ್ದಾರೆ. ಏಪ್ರಿಲ್ 22ರಂದು ಮುಂದಿನ ವಿಚಾರಣೆ ನಡೆಯಲಿದೆ’ ಎಂದರು.

ನಕಲಿ ದಾಖಲೆ ಸೃಷ್ಟಿಯ ಶಂಕೆ: ನಕಲಿ ದಾಖಲೆಗಳನ್ನು ಸೃಷ್ಟಿಸಿ ಜಿಲ್ಲಾಧಿಕಾರಿ ವಸತಿಗೃಹದ ನಿವೇಶನವನ್ನು ಸ್ವಂತದ್ದು ಎಂದು ನಂಬಿಸಿ ಮಾರಾಟ ಮಾಡಿರುವ ಶಂಕೆ ಇದೆ. ಅತಿಕ್ರಮಣದಾರರು ತಹಶೀಲ್ದಾರ್ ನ್ಯಾಯಾಲಯಕ್ಕೆ ಸಲ್ಲಿಸುವ ದಾಖಲೆಗಳ ಪರಿಶೀಲನೆ ಬಳಿಕ ಸತ್ಯ ತಿಳಿಯಲಿದೆ ಎನ್ನುತ್ತಾರೆ ಅಧಿಕಾರಿಗಳು.


ಮಾಗಡಿಯ ತಿರುಮಲೆಯಲ್ಲಿ ಜರುಗಿದ ರಂಗನಾಥಸ್ವಾಮಿ ರಥೋತ್ಸವದಲ್ಲಿ ಭಾಗವಹಿಸಿದ್ದ ಜನಸ್ತೋಮ

ಮಾಗಡಿ: ಅದ್ದೂರಿಯಾಗಿ ನಡೆದ ರಂಗನಾಥಸ್ವಾಮಿ ರಥೋತ್ಸವ

ಪ್ರಜಾವಾಣಿ ವಾರ್ತೆ

ಮಾಗಡಿ: ಎರಡನೇ ತಿರುಪತಿ ಎಂದೇ ಖ್ಯಾತಿ ಹೊಂದಿರುವ ಮಾಗಡಿ ರಂಗನಾಥಸ್ವಾಮಿ ರಥೋತ್ಸವ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಅದ್ದೂರಿಯಾಗಿ ನೆರವೇರಿತು.

ರಥೋತ್ಸವ ಅಂಗವಾಗಿ ಶುಕ್ರವಾರ ಹೂವು ಹಾಗೂ ಆಭರಣಗಳಿಂದ ಅಲಂಕರಿಸಲಾಗಿತ್ತು. ಭಕ್ತರು ಬೆಳಿಗ್ಗೆಯಿಂದಲೇ ಸರದಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದರು.

ತಿರುಮಲೆ ಗ್ರಾಮದಲ್ಲಿ ಅದ್ದೂರಿ ಮೆರವಣಿಗೆ ಮಾಡಲಾಯಿತು. ಅನ್ನ ಸಂತರ್ಪಣೆ ಮಾಡುವ ಪ್ರತಿ ಅರವಂಟಿಕೆ ಬಳಿಯೂ ಉತ್ಸವ ಮೂರ್ತಿಯನ್ನು ಕರೆದೊಯ್ದು ಪೂಜೆ ಸಲ್ಲಿಸಲಾಯಿತು. ನಂತರ 12.30ಕ್ಕೆ ಉತ್ಸವ ಮೂರ್ತಿಯನ್ನು ರಥದಲ್ಲಿ ಕೂರಿಸಿ ಪೂಜೆ ಸಲ್ಲಿಸಲಾಯಿತು.

ಭಕ್ತರಿಗೆ ಮಜ್ಜಿಗೆ, ಪಾನಕ, ಕೋಸಂಬರಿ ವಿತರಿಸಲಾಯಿತು.



ಗಾಜಾ ಪಟ್ಟಿಯಲ್ಲಿ ಶಾಂತಿ ಸ್ಥಾಪಿಸುವಂತೆ ಆಗ್ರಹಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಎಐಎಸ್‌ಎ ಕರ್ನಾಟಕದ ಸಂಘಟನೆ ಸದಸ್ಯರು ಪ್ರತಿಭಟನೆ ನಡೆಸಿದರು ಪ್ರಜಾವಾಣಿ ಚಿತ್ರ

ನೈಸ್: ಪರಿಶೀಲನೆಗೆ ಸಂಪುಟ ಉಪ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು– ಮೈಸೂರು ಮೂಲಸೌಲಭ್ಯ ಕಾರಿಡಾರ್ ಯೋಜನೆಯನ್ನು ಜಾರಿ ಮಾಡುತ್ತಿರುವ ನೈಸ್ ಸಂಸ್ಥೆಯ ಕಾರ್ಯ ನಿರ್ವಹಣೆ ಮತ್ತು ಇತರ ವಿಷಯಗಳ ಬಗ್ಗೆ ಚರ್ಚಿಸಿ ಸಚಿವ ಸಂಪುಟಕ್ಕೆ ಶಿಫಾರಸು ಮಾಡಲು ಸಂಪುಟ ಉಪಸಮಿತಿ ರಚಿಸಲು ಶುಕ್ರವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಉಪ ಸಮಿತಿ ರಚಿಸುವ ಅಧಿಕಾರವನ್ನು ಮುಖ್ಯಮಂತ್ರಿಯವರಿಗೆ ನೀಡಲಾಗಿದೆ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ತಿಳಿಸಿದರು.

ಯೋಜನೆಗೆ ಸ್ವಾಧೀನಪಡಿಸಿಕೊಳ್ಳಲು ಗುರುತಿಸಿರುವ ಜಮೀನುಗಳಿಗೆ ಸಂಬಂಧಿಸಿದ ವ್ಯಾಜ್ಯದ ಪ್ರಕರಣಗಳು ವಿವಿಧ ನ್ಯಾಯಾಲಯಗಳಲ್ಲಿ ಬಾಕಿ ಇವೆ. ಕೆಲವು ಪ್ರಕರಣಗಳಲ್ಲಿ ನ್ಯಾಯಾಲಯಗಳು ತೀರ್ಪು ನೀಡಿ ಭೂಸ್ವಾಧೀನವನ್ನು ರದ್ದುಗೊಳಿಸಿವೆ. ಸಿವಿಲ್ ಕೋರ್ಟ್‌ನಲ್ಲಿ 189, ಹೈಕೋರ್ಟ್‌ನಲ್ಲಿ 164, ಸುಪ್ರೀಂಕೋರ್ಟ್‌ನಲ್ಲಿ 21 ಒಟ್ಟು 374 ಪ್ರಕರಣಗಳು ಇತ್ಯರ್ಥವಾಗಿಲ್ಲ ಎಂದು ಹೇಳಿದರು.

ಮುಖ್ಯಾಂಶಗಳು

- ನೈಸ್ ಸಂಸ್ಥೆಯ ಕಾರ್ಯವೈಖರಿಯ ಕುರಿತು ಅಧ್ಯಯನ
- ಬೆಂಗಳೂರು– ಮೈಸೂರು ಮೂಲ ಸೌಲಭ್ಯ ಕಾರಿಡಾರ್ ಯೋಜನೆಯ ಭೂಸ್ವಾಧೀನ ಬಗ್ಗೆ ಪರಿಶೀಲನೆ
- ಸಿವಿಲ್ ಕೋರ್ಟ್‌ನಲ್ಲಿ 189, ಹೈಕೋರ್ಟ್‌ನಲ್ಲಿ 164, ಸುಪ್ರೀಂ ಕೋರ್ಟ್‌ನಲ್ಲಿ 21 ಪ್ರಕರಣ: ಪಾಟೀಲ

1998–99 ರಲ್ಲಿ 23,625 ಎಕರೆ ಖಾಸಗಿ ಜಮೀನು ಹಾಗೂ 5,688 ಎಕರೆ ಸರ್ಕಾರಿ ಜಮೀನು ಹೀಗೆ ಒಟ್ಟು 29,313 ಎಕರೆ ಜಮೀನಿಗೆ ಭೂಸ್ವಾಧೀನ ಮಾಡಿಕೊಳ್ಳಲು ಸಚಿವ ಸಂಪುಟದ ಅನುಮೋದನೆ ಪಡೆಯದೇ ಕೆಐಎಡಿಬಿ ಒಪ್ಪಂದ ಮಾಡಿಕೊಂಡಿದೆ. ಬಿಎಂಐಸಿಪಿ ಯೋಜನೆಗೆ ಸಂಬಂಧಿಸಿದಂತೆ ಕೆಐಎಡಿಬಿ ಕಾಯ್ದೆಯಂತೆ 25,616 ಎಕರೆ ಅನುಸೂಚಿತ ಪ್ರದೇಶವನ್ನು ಕೈಗಾರಿಕಾ ಪ್ರದೇಶವೆಂದು ಘೋಷಿಸಲಾಗಿದೆ. ಖಾಸಗಿ ಜಮೀನುಗಳಿಗೆ 18,058 ಎಕರೆ ಜಮೀನಿಗೆ ಪ್ರಾಥಮಿಕ ಅಧಿಸೂಚನೆಯಾಗಿದ್ದು, 4,809 ಎಕರೆ ಜಮೀನುಗಳಿಗೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ ಎಂದರು.



13,249 ಎಕರೆ ಜಮೀನಿಗೆ ಅಂತಿಮ ಅಧಿಸೂಚನೆ ಹೊರಡಿಸಿಲ್ಲ. 2,268 ಎಕರೆ ಜಮೀನಿಗೆ ಐತೀರ್ಪಿನ ಅನ್ವಯ ₹316 ಕೋಟಿ ಪರಿಹಾರವನ್ನು ಭೂಮಾಲೀಕರುಗಳಿಗೆ ವಿತರಣೆ ಮಾಡಲಾಗಿದೆ. ನೈಸ್ ಸಂಸ್ಥೆಗೆ ಇಲ್ಲಿಯವರೆಗೂ 2191 ಎಕರೆ ಖಾಸಗಿ ಜಮೀನು ಮತ್ತು 5,000 ಎಕರೆ ಸರ್ಕಾರಿ ಜಮೀನು ಹಸ್ತಾಂತರ ಮಾಡಲಾಗಿದೆ. 2 ಎಕರೆ ಸರ್ಕಾರಿ ಜಮೀನು ಸೇರಿದಂತೆ 1,699 ಎಕರೆ ಜಮೀನಿಗೆ ಕೆಐಎಡಿಬಿಯಿಂದ ನೈಸ್ ಸಂಸ್ಥೆಗೆ ಶುದ್ಧ ಕ್ರಯಪತ್ರ ಮಾಡಲಾಗಿದೆ. ಈ ಎಲ್ಲ ವಿಚಾರಗಳನ್ನೂ ಸಂಪುಟ ಉಪಸಮಿತಿ ಚರ್ಚಿಸಲಾಗುವುದು ಎಂದು ಪಾಟೀಲ ಹೇಳಿದರು.

ಅರಮನೆ ಜಾಗಕ್ಕೆ ಭಾಗಶಃ ಟಿಡಿಆರ್: ರಸ್ತೆ ಮತ್ತು ಇತರ ಉದ್ದೇಶಗಳಿಗಾಗಿ ಬಳಸಿದ ಬೆಂಗಳೂರು ಅರಮನೆ ಜಾಗಕ್ಕೆ ಭಾಗಶಃ ಟಿಡಿಆರ್ ಠೇವಣಿ ಇಡಲು ಸಂಪುಟ ಸಭೆ ಒಪ್ಪಿಗೆ ನೀಡಿದೆ ಎಂದು ಎಚ್.ಕೆ.ಪಾಟೀಲ ತಿಳಿಸಿದರು.

1217 ಚದರ ಮೀಟರ್ ಅನ್ನು ಈಗಾಗಲೇ ಬಳಸಿಕೊಳ್ಳಲಾಗಿದೆ. ಠೇವಣಿ ಇಡಲು ಬಿಬಿಎಂಪಿ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

‘ದೇವಾಲಯ ಅಭಿವೃದ್ಧಿ, ಶೈಕ್ಷಣಿಕ ತರಬೇತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದುಳಿದ ಪ್ರದೇಶದಲ್ಲಿರುವ ಬ್ರಾಹ್ಮಣ ಸಮುದಾಯದ ದೇವಾಲಯಗಳ ಅಭಿವೃದ್ಧಿ, ಉನ್ನತ ವ್ಯಾಸಂಗ ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಸೇರಿ ಸಮುದಾಯದ ಸರ್ವತೋಮುಖ ಪ್ರಗತಿಗೆ ಆದ್ಯತೆ ನೀಡಲಾಗುವುದು’ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಭಾನುಪ್ರಕಾಶ್ ಶರ್ಮ ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಸನಾತನ ಧರ್ಮದ ರಕ್ಷಣೆಗೆ ಧರ್ಮ ಜಾಗೃತಿ ಶಿಬಿರಗಳನ್ನು ತಾಲ್ಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಏರ್ಪಡಿಸಲಾಗುವುದು. ಭಜನಾ ಮಂಡಳಿ, ಸಹಸ್ರನಾಮ ಮಂಡಳಿ ಸೇರಿ ವಿವಿಧ ಸಂಘಗಳನ್ನು ಸ್ಥಾಪಿಸಿ, ಪ್ರೋತ್ಸಾಹಿಸಲಾಗುವುದು. ದೇವಾಲಯಗಳನ್ನು ಸರ್ಕಾರದ ನಿರ್ವಹಣೆಯಿಂದ ಬಿಡುಗಡೆ ಮಾಡಿ, ಸ್ಥಳೀಯ ನಿರ್ವಹಣಾ ಮಂಡಳಿಗೆ ವಹಿಸಲು ಶ್ರಮಿಸಲಾಗುವುದು. ಸಾಮೂಹಿಕ ಆಚರಣೆಗಳನ್ನು ನಡೆಸಲಾಗುವುದು. ಕೃಷಿಕರು, ಅಡುಗೆ ತಯಾರಕರು, ಅರ್ಚಕರು ಸೇರಿ ಪಾರಂಪರಿಕ ವೃತ್ತಿಗಳಲ್ಲಿ ತೊಡಗಿರುವವರಿಗೆ ಸಾಂದರ್ಭಿಕ ಅಗತ್ಯ ನೆರವು ಒದಗಿಸಲಾಗುವುದು’ ಎಂದರು.


ಭಾನುಪ್ರಕಾಶ್ ಶರ್ಮ

‘ಸಮುದಾಯದ ಒಡೆತನದ ಆಸ್ಪತ್ರೆಗಳಲ್ಲಿ ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ, ವಧು–ವರ ಅನ್ವೇಷಣೆ ಸಮಾವೇಶ, ಕುಟೀರ ನಿರ್ಮಾಣ ಸೇರಿ ವಿವಿಧ ಯೋಜನೆಗಳನ್ನು ರೂಪಿಸಲಾಗಿದೆ. ಈಗಾಗಲೇ 11 ಜಿಲ್ಲೆಗಳಲ್ಲಿ ನಮ್ಮ ತಂಡದ ಪ್ರತಿನಿಧಿಗಳು ಅವಿರೋಧವಾಗಿ ಆಯ್ಕೆಯಾಗಿದ್ದಾರೆ’ ಎಂದರು.

ಮಹಾಸಭಾದ ಹಾಲಿ ಅಧ್ಯಕ್ಷ ಅಶೋಕ್ ಹಾರನಹಳ್ಳಿ, ‘ಮಹಾಸಭಾದ 50 ವರ್ಷಗಳ ಇತಿಹಾಸದಲ್ಲಿ ವೈದಿಕ ಪರಂಪರೆಯಲ್ಲಿ ತೊಡಗಿಕೊಂಡವರು ಮೊದಲಬಾರಿಗೆ ಚುನಾವಣೆಗೆ ಸ್ಪರ್ಧಿಸುತ್ತಿದ್ದಾರೆ. ಬ್ರಾಹ್ಮಣ ಸಮುದಾಯಕ್ಕೆ ರಾಜಕೀಯ ಶಕ್ತಿಯಿಲ್ಲ. ನಮಗೆ ನಾವೇ ಸಹಾಯ ಮಾಡಿಕೊಳ್ಳಬೇಕಿದೆ. ಹೊಸಬರಿಗೆ ಅವಕಾಶ ನೀಡಬೇಕೆಂಬ ಕಾರಣಕ್ಕೆ ಈ ಬಾರಿ ಸ್ಪರ್ಧಿಸಿಲ್ಲ’ ಎಂದು ಹೇಳಿದರು.

‘ವಿಪ್ರರ ಏಳ್ಗೆಗೆ ₹100 ಕೋಟಿ ದೇಣಿಗೆ ಸಂಗ್ರಹ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಪ್ರ ಸಮುದಾಯದ ಏಳ್ಗೆಗೆ ₹100 ಕೋಟಿ ದೇಣಿಗೆ ಸಂಗ್ರಹಿಸಿ, ದತ್ತಿನಿಧಿ ಸ್ಥಾಪಿಸಲಾಗುವುದು. ಈ ಮೂಲಕ ಬ್ರಾಹ್ಮಣ ಸಮುದಾಯದವರ ಮಕ್ಕಳ ಶಿಕ್ಷಣಕ್ಕೆ ಯೋಜನೆ ರೂಪಿಸಲಾಗುವುದು’ ಎಂದು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿರುವ ಎಸ್.ರಘುನಾಥ್ ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಇದೇ 13ರಂದು ನಡೆಯಲಿರುವ ಚುನಾವಣೆಯಲ್ಲಿ ಜಯಿಸಿದರೆ ಸಮುದಾಯದ ಶ್ರೇಯೋಭಿವೃದ್ಧಿಗೆ ರೂಪಿಸಿರುವ ವಿವಿಧ ಯೋಜನೆಗಳನ್ನು ಕಾರ್ಯಗತ ಮಾಡಲಾಗುವುದು. 10 ಸಾವಿರ ಶ್ರೀಮಂತ ವಿಪ್ರರಿಂದ ತಲಾ ₹1 ಲಕ್ಷ ದೇಣಿಗೆ ಸಂಗ್ರಹಿಸಿ, ದತ್ತಿನಿಧಿ ಸ್ಥಾಪನೆ ಮಾಡಲಾಗುವುದು. ಶಿಕ್ಷಣ ಸಂಸ್ಥೆ ನಿರ್ಮಾಣ ಮಾಡಿ, ಸಮುದಾಯದ ಮಕ್ಕಳಿಗೆ ಅವಕಾಶ ಒದಗಿಸಲಾಗುವುದು. ವಿಶ್ರಾಂತಿ ಭವನ ನಿರ್ಮಾಣಕ್ಕೂ ಆದ್ಯತೆ ನೀಡಲಾಗುವುದು. ಉದ್ಯೋಗ ಮೇಳ, ಸಾಮೂಹಿಕ ಉಪನಯನ, ವಧು-ವರ ಅನ್ವೇಷಣೆ ಕೇಂದ್ರ, ಅಂಗವಿಕಲರಿಗೆ ಸಹಾಯಧನದಂತಹ ಕಾರ್ಯಕ್ರಮಗಳನ್ನು ನಡೆಸಲು ಯೋಜನೆ ರೂಪಿಸಲಾಗಿದೆ’ ಎಂದರು.


ಎಸ್.ರಘುನಾಥ್

‘ನನ್ನ ಜೊತೆಯಲ್ಲಿ ಉತ್ತಮ ತಂಡವಿದೆ. ಸಾಧನೆ ಮತ್ತು ಯೋಜನೆಗಳನ್ನು ವಿಪ್ರರಿಗೆ ತಿಳಿಸಿ, ಮತಯಾಚನೆ ಮಾಡಲಾಗುತ್ತಿದೆ’ ಎಂದು ಹೇಳಿದರು.

ಸಮುದಾಯದ ಮುಖಂಡ ಆರ್.ಲಕ್ಷ್ಮೀಕಾಂತ್, ‘ಕಳೆದ ಚುನಾವಣೆಯಲ್ಲಿ ಕಡಿಮೆ ಅಂತರದಲ್ಲಿ ರಘುನಾಥ್ ಅವರು ಸೋಲು ಕಂಡರು. ಆದರೂ ಅವರು ವಿಪ್ರ ಸಮುದಾಯದ ಸಂಘಟನೆಯಲ್ಲಿ ನಿರಂತರ ತೊಡಗಿಕೊಂಡಿದ್ದರು. ಕಳೆದ ಬಾರಿ ಸ್ಪರ್ಧಿಸಿದ್ದ ನಾನು, ಈ ಬಾರಿ ರಘುನಾಥ್ ಅವರಿಗೆ ಬೆಂಬಲ ನೀಡಿದ್ದೇನೆ’ ಎಂದು ತಿಳಿಸಿದರು.

ಲಂಚ: ಎಪಿಎಂಸಿ ಕಾರ್ಯದರ್ಶಿ ಲೋಕಾಯುಕ್ತ ಬಲೆಗೆ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ: ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಕಾರ್ಯದರ್ಶಿ ಶುಕ್ರವಾರ ಭದ್ರತಾ ಸಿಬ್ಬಂದಿ ಮೂಲಕ ವ್ಯಾಪಾರಿಯೊಬ್ಬರಿಂದ ₹15ಸಾವಿರ ಲಂಚ ಪಡೆಯುವಾಗ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿ ಬಂಧಿಸಿದ್ದಾರೆ.

ಕಾರ್ಯದರ್ಶಿ ಶಶಿಕಲಾ ಮತ್ತು ಹೊರಗುತ್ತಿಗೆಯಡಿ ಭದ್ರತಾ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುತ್ತಿದ್ದ ಕೃಷ್ಣಮೂರ್ತಿ ಬಂಧಿತರು.

ಮಾರುಕಟ್ಟೆ ಮಾವಿನ ಮಂಡಿಯಲ್ಲಿ ಹತ್ತು ವರ್ಷದ ಅವಧಿಗೆ ಮಳಿಗೆ ಪರವಾನಗಿ ಕೋರಿ ವ್ಯಾಪಾರಿ ರಹಮತ್ ಅಲಿ ಎಂಬುವರು ಇತ್ತೀಚೆಗೆ ಅರ್ಜಿ ಸಲ್ಲಿಸಿದ್ದರು. ಶಶಿಕಲಾ ಅವರು ನವೀಕರಣಕ್ಕೆ ₹15 ಸಾವಿರ ಬೇಡಿಕೆ ಇಟ್ಟಿದ್ದರು. ಹಣ ಕೊಡದಿದ್ದರೆ ಪರವಾನಗಿ ನವೀಕರಿಸುವುದಿಲ್ಲ ಎಂದು ಹೇಳಿದ್ದರು.

ಈ ಕುರಿತು ರಹಮತ್ ಅಲಿ ಅವರು ಲೋಕಾಯುಕ್ತಕ್ಕೆ ನೀಡಿದ್ದ ದೂರಿನ ಮೇರೆಗೆ ಪ್ರಕರಣ ದಾಖಲಾಗಿತ್ತು.

ನಗರದಲ್ಲಿ ಇಂದು

ಉಪನ್ಯಾಸ, ವ್ಯಂಗ್ಯಚಿತ್ರ, ಯೋಗ, ಭರತನಾಟ್ಯ ಪ್ರದರ್ಶನ: ‘ಪತ್ರಕರ್ತರಾಗಿ ಗಾಂಧೀಜಿ’ ವಿಷಯದ ಬಗ್ಗೆ ಉಪನ್ಯಾಸ: ಎನ್.ಆರ್. ವಿಶುಕುಮಾರ್, ಭರತನಾಟ್ಯ: ನೇಹಾ ವಿ. ಕೂರ್ಸೆ, ಸನ್ಮಾನ: ಕೆ.ಆರ್. ಸ್ವಾಮಿ, ಪ್ರಭಾಕರನ್, ಅಧ್ಯಕ್ಷತೆ: ಗಜಾನನ ಶರ್ಮ, ಆಯೋಜನೆ ಹಾಗೂ ಸ್ಥಳ: ಬೆಳ್ಳಿ ಭವನ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಆನಂದರಾವ್ ವೃತ್ತ, ಬೆಳಿಗ್ಗೆ 10

ಅಕ್ಕಮಹಾದೇವಿ ಜಯಂತಿ: ಉದ್ಘಾಟನೆ: ಅನುಪಮಾ ಪಂಚಾಕ್ಷರಿ, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಉಪನ್ಯಾಸ: ರತ್ನಾ ದೇಸಾಯಿ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಜಯ ಬಸವರಾಜ ಅಂಗಳ, #182, ಕಬೀರ ಮಠ ಎದುರು, ಕೆಂಗೇರಿ ಉಪನಗರ, ಬೆಳಿಗ್ಗೆ 10

ಇ–ಆಟೊ ರಿಕ್ಷಾ ಹಸ್ತಾಂತರ: ಆಯೋಜನೆ: ಕ್ರೋನಿಕ್ ಫೌಂಡೇಷನ್, ಸ್ಥಳ: ಪ್ರೈಡ್ ಕಾಲೇಜು, ಸಂಖ್ಯೆ 55, ಶಾನುಭೋಗನಹಳ್ಳಿ ಕೆರೆ ಎದುರು, ಚೊಕ್ಕನಹಳ್ಳಿ, ಅರೇಕೆರೆ, ಬೆಳಿಗ್ಗೆ 10.30

ಏಳು ಪುಸ್ತಕಗಳ ಬಿಡುಗಡೆ: ಯಂಡಮೂರಿ ವೀರೇಂದ್ರನಾಥ್ ಅವರ ‘ಅಮೀಬಾ’, ಆರ್. ಗಣೇಶ್ ಅವರ ‘ಮಾರ್ಗಣ’, ವೀಣಾ ಬನ್ನಂಜೆ ಅವರ ‘ತಂದೆ-ಮಗಳು’, ‘ಅವರು, ಇವರು, ಎವರು...’, ಶಿವಾನಂದ ಕಳವೆ ಅವರ ‘ಕೆರೆಯ ನೋಡಿರೊ’, ‘ಮೇಷ್ಟ್ರ ಗಿರಿ’, ಪುಸ್ತಕ ಬಿಡುಗಡೆ: ಕೆ. ಹರೀಶ್, ನಿರೂಪಣೆ: ಗಣೇಶ ಭಟ್ಟ ಕೊಪ್ಪಲತೋಟ, ಆಯೋಜನೆ: ಸಾಹಿತ್ಯ ಪ್ರಕಾಶನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 11

ಆರ್‌ಸಿಬಿ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ: ಮುಖ್ಯ ಅತಿಥಿ: ಸುಧಾರಾಣಿ, ಆಯೋಜನೆ: ರೋಟರಿ ಕ್ಲಬ್ ಆಫ್ ಬೆಂಗಳೂರು, ಸ್ಥಳ: ಭಾರತೀಯ ವಿದ್ಯಾಭವನ, ರೇಸ್ ಕೋರ್ಸ್ ರಸ್ತೆ, ಬೆಳಿಗ್ಗೆ 10.30


ಸುಧಾರಾಣಿ

ಪರಿಸರಕ್ಕಾಗಿ ನಾವು ಸಂಘಟನೆ ಉದ್ಘಾಟನೆ: ಪರಿಸರ ಕಾರ್ಯಕರ್ತರ ರಾಜ್ಯ ಸಂಘಟನೆ, ಉಪಸ್ಥಿತಿ: ರಾಜೇಂದ್ರ ಸಿಂಗ್, ಎಸ್.ಆರ್. ಹಿರೇಮಠ, ಎ.ಟಿ. ರಾಮಸ್ವಾಮಿ, ಅ.ನ. ಯಲ್ಲಪ್ಪರೆಡ್ಡಿ, ಕಪ್ಪತ್ತಗುಡ್ಡ ಶಿವಕುಮಾರ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ, ನಿಜಲಿಂಗೇಶ್ವರ ಸ್ವಾಮೀಜಿ, ಟಿ.ವಿ. ರಾಮಚಂದ್ರ, ನಾಗೇಶ ಹೆಗಡೆ, ಕೃಪಾಕರ, ಬಿ.ಆರ್. ಪಾಟೀಲ, ಡಾ.ಸಿ.ಎನ್. ಮಂಜುನಾಥ್, ಮೋಟಮ್ಮ, ಮೇಜರ್ ಜನರಲ್ ಒಂಬತ್ಕೆರೆ, ಟಿ.ಎನ್. ಸೀತಾರಾಂ, ಇಂದೂಧರ ಹೊನ್ನಾಪುರ, ನಂದಿನಿ ಜಯರಾಂ, ಚಂದ್ರಕಾಂತ ವಡ್ಡು, ಶಂಕರ ಕುಂಬಿ, ಧರ್ಮೇಂದ್ರ ಕುಮಾರ್, ಶಾಂತಿ ತಿಮ್ಮಲ, ಪ್ರಕಾಶ್ ಕುಲಕರ್ಣಿ, ದುಮ್ಮಳ್ಳಿ ಶಿವಮ್ಮ ಶಿವಮೊಗ್ಗ, ಆಯೋಜನೆ: ಪರಿಸರಕ್ಕಾಗಿ ನಾವು, ಸ್ಥಳ: ಸೇಂಟ್ ಜೋಸೆಫ್ ಕಾನೂನು ಕಾಲೇಜು ಸಭಾಂಗಣ, ರೆಸಿಡೆನ್ಸಿ ರಸ್ತೆ, ಬೆಳಿಗ್ಗೆ 10.30


ಎ.ಟಿ. ರಾಮಸ್ವಾಮಿ

ರಾಮನವಮಿ ಮಹೋತ್ಸವ ವಿಶೇಷ



87ನೇ ರಾಮೋತ್ಸವ ಸಮಾರಂಭ: ಕರ್ನಾಟಕ ಶಾಸ್ತ್ರೀಯ ಸಂಗೀತ ವಿಶೇಷ ಕಾರ್ಯಕ್ರಮ, ಆಯೋಜನೆ: ಎನ್. ಆರ್. ಕಾಲೊನಿ ಶ್ರೀರಾಮಮಂದಿರಂ ಟ್ರಸ್ಟ್, ಸ್ಥಳ: ಶ್ರೀರಾಮಮಂದಿರ, ಎನ್. ಆರ್. ಕಾಲೊನಿ, ಬಸವನಗುಡಿ, ಬೆಳಿಗ್ಗೆ 10.15ರಿಂದ ರಾತ್ರಿ 8.30ರವರೆಗೆ

71ನೇ ಶ್ರೀರಾಮನವಮಿ ಸಂಗೀತ ಮಹೋತ್ಸವ: ಗಾಯನ: ಆರ್.ವಿ. ಅಭಿಷೇಕ್, ವ್ಯಾಖ್ಯಾನ: ಅನೀಶ್, ನಾಗೇಶ್, ಕೊಳಲು: ಸುಮಂತ್ ಶ್ರೀಧರ್, ಮೃದಂಗ: ಪ್ರಣವ್ ಎಸ್. ಬಾಲಕೃಷ್ಣ, ಆಯೋಜನೆ: ಕಾರಂಜಿ ಶ್ರೀರಾಮ ಸೇವಾ ಸಮಿತಿ ಟ್ರಸ್ಟ್, ಸ್ಥಳ: ಕಾರಂಜಿ ಆಂಜನೇಯಸ್ವಾಮಿ ದೇವಸ್ಥಾನ, ಬಸವನಗುಡಿ, ಸಂಜೆ 5

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ಮಿಹಿಕಾ ಕೇದಾರ್ ಮತ್ತು ತಂಡ, ಸಂಗೀತ ಕಛೇರಿ: ತ್ರಿಚೂರ್ ಸಹೋದರರು, ತ್ರಿಚೂರ್ ಮೋಹನ್, ಕೋವೈ ಸುರೇಶ್, ಸುನಿಲ್ ಕುಮಾರ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5

32ನೇ ಶ್ರೀರಾಮನವಮಿ ಸಂಗೀತೋತ್ಸವ: ಪಿಟೀಲು: ಜ್ಯೋತ್ಸ್ನಾ ಶ್ರೀಕಾಂತ್, ಮೃದಂಗ: ಎಚ್.ಎಲ್. ಶಿವಶಂಕರ್ ಸ್ವಾಮಿ, ಖಂಜಿರ: ಸುಮಧುರ್ ಆನೂರು, ಭರತನಾಟ್ಯ: ಯೋಗೇಶ್ ಕುಮಾರ್, ಸ್ನೇಹಾ ನಾರಾಯಣ್, ಆಯೋಜನೆ ಹಾಗೂ ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ, ಸಂಜೆ 5.15ರಿಂದ

ವಸಂತ ನವರಾತ್ರಿ ಶ್ರೀರಾಮೋತ್ಸವ: ಯುಗಳ ಗಾಯನ: ಆರ್.ಎನ್. ತ್ಯಾಗರಾಜನ್, ಆರ್. ಎನ್. ತಾರಾನಾಥನ್, ಪಿಟೀಲು: ಸಿ.ಎನ್. ಚಂದ್ರಶೇಖರ್, ಮೃದಂಗ: ಸಂಜಯ್ ತಾರಾನಾಥನ್, ಘಟ: ಎಸ್. ಶ್ರೀಶೈಲನ್, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

‘ಸಂಚಾರ ಸಂಪರ್ಕ ದಿವಸ್’: ದಯಾನಂದ್ ಬಿ., ಅನುಚೇತ್ ಎಂ.ಎನ್., ಸಾಹಿಲ್ ಬಾಗ್ಲಾ, ಆಯೋಜನೆ: ಬೆಂಗಳೂರು ಸಂಚಾರ ಪೊಲೀಸ್ ಸಂಚಾರ ಪೂರ್ವ ವಿಭಾಗ, ಸ್ಥಳ: ಇಸಿಎ ಕ್ಲಬ್, ಇಂದಿರಾನಗರ, ಬೆಳಿಗ್ಗೆ 11

ಅಕ್ಕಮಹಾದೇವಿ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ್ ಎಸ್. ತಂಗಡಗಿ, ಅಧ್ಯಕ್ಷತೆ: ಉದಯ್ ಗರುಡಾಚಾರ್, ಉಪನ್ಯಾಸ: ಹೇಮಾ ಪಟ್ಟಣಶೆಟ್ಟಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10

‘ಗಾಂಪರ ಗುಂಪು’ ನಾಟಕ ಪ್ರದರ್ಶನ: ನಿರ್ದೇಶನ: ಶ್ರೀಪಾದ್ ಎಸ್., ತಂಡ: ಬೆಂಗಳೂರು ಪ್ಲೇಯರ್ಸ್ ಥಿಯೇಟರ್ ಅಸೋಸಿಯೇಶನ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6.30

211ನೇ ಹುಣ್ಣಿಮೆ ಹಾಡು: ಪೊಲೀಸ್–ಹಾಡು ಹಕ್ಕಿಗಳ ಕಲರವ, ಗಾಯಕರು: ಮಂಜುನಾಥ್ ಬಾಬು, ಎನ್. ಮಹಾಂತ್ ರೆಡ್ಡಿ, ಪಿ.ಎಂ. ಯೋಗೇಂದ್ರ ಕುಮಾರ್, ಎಸ್. ಗೋಪಾಲ್ ನಾಯಕ್, ಪ್ರಿಯದರ್ಶಿನಿ ಸಾಣೇಕೊಪ್ಪ, ಸುಬ್ರಮಣಿ, ಆಯೋಜನೆ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಡಾ.ವೇಮಗಲ್ ನಾರಾಯಣಸ್ವಾಮಿ ಸಾಂಸ್ಕೃತಿಕ ಟ್ರಸ್ಟ್, ಸ್ಥಳ: ಕಾಡುಮಲ್ಲೇಶ್ವರ ಬಯಲು ರಂಗಮಂಟಪ, ಮಲ್ಲೇಶ್ವರ, ಸಂಜೆ 6.30

‘ಕರ್ನಾಟಕ ರೈಸಿಂಗ್ ಬಿಯಾಂಡ್ ದಿ ಸೀಲಿಂಗ್’ ಕಾರ್ಯಕ್ರಮಕ್ಕೆ ಆಯ್ಕೆಯಾದ ನೂರು ಮುಸ್ಲಿಂ ಮಹಿಳೆಯರಿಗೆ ಗೌರವ ಸಮರ್ಪಣೆ: ಮುಖ್ಯ ಅತಿಥಿ: ಎಂ.ಎ. ಸಲೀಂ, ಅಧ್ಯಕ್ಷತೆ: ಉಮರ್ ಇಸ್ಮಾಯಿಲ್ ಖಾನ್, ಆಯೋಜನೆ ಹಾಗೂ ಸ್ಥಳ: ಅಲ್–ಅಮೀನ್ ಎಜುಕೇಶನಲ್ ಸೊಸೈಟಿ, ಹೊಸೂರು ರಸ್ತೆ, ಸಂಜೆ 7

ಬೆಂಗಳೂರು ಕರಗ ಮಹೋತ್ಸವ: ಕರಗ ಶಕ್ತ್ಯೋತ್ಸವ, ಧರ್ಮರಾಯಸ್ವಾಮಿ ಮಹಾರಥೋತ್ಸವ, ಆಯೋಜನೆ: ಧಾರ್ಮಿಕ ದತ್ತಿ ಇಲಾಖೆ, ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ, ತಿಗಳರಪೇಟೆ, ರಾತ್ರಿ 12.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಪಿಎಫ್ ಕ್ಷೇತ್ರೀಯ ಕಚೇರಿಗೆ ಉಸ್ತುವಾರಿ ಅಧಿಕಾರಿ ನೇಮಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ರಾಜರಾಜೇಶ್ವರಿ ನಗರದಲ್ಲಿರುವ ನೌಕರರ ಭವಿಷ್ಯ ನಿಧಿ ಸಂಘಟನೆಯ (ಇಪಿಎಫ್‌ಒ) ಕ್ಷೇತ್ರೀಯ ಕಚೇರಿಯ ಉಸ್ತುವಾರಿ ಅಧಿಕಾರಿಯಾಗಿ ಬಾಲಕೃಷ್ಣ ನಾಯ್ಕ್ ಅವರನ್ನು ನಿಯೋಜಿಸಲಾಗಿದೆ.

ಪ್ರಾದೇಶಿಕ ಭವಿಷ್ಯ ನಿಧಿ ಸಂಘಟನೆಯ ಆಯುಕ್ತರಾಗಿರುವ (ಗ್ರೇಡ್–1) ಅವರಿಗೆ, ಈ ಹೊಣೆ ನೀಡಲಾಗಿದೆ ಎಂದು ಕಚೇರಿ ತಿಳಿಸಿದೆ.


ಬಾಲಕೃಷ್ಣ ನಾಯ್ಕ್

‘ಸಾರ್ವಜನಿಕರಿಗೆ ಸಕಾಲದಲ್ಲಿ ಗುಣಮಟ್ಟದ ಸೇವೆ ನೀಡುವುದು ನನ್ನ ಗುರಿಯಾಗಿದೆ. ಇಪಿಎಫ್‌ಒ ಉತ್ತಮವಾಗಿ ಕಾರ್ಯ ನಿರ್ವಹಿಸಲು ಚಂದಾದಾರರು ಮತ್ತು ಉದ್ಯೋಗದಾತ ಸಂಸ್ಥೆಗಳು ಸಹಕಾರ ನೀಡಬೇಕು’ ಎಂದು ಬಾಲಕೃಷ್ಣ ನಾಯ್ಕ್ ಕೋರಿದ್ದಾರೆ.

ಪಿಯುಸಿ ಸಾಧಕರು: ಜೆ.ಟಿ. ಸ್ವತಂತ್ರ ಪದವಿ ಪೂರ್ವ ಕಾಲೇಜು, ಸುಂಕದಕಟ್ಟೆ


ನಕುಲ್ ಎ.ಆರ್. (ಶೇ 95.33)


ಸಂಜನಾ ಎಸ್. (ಶೇ 95.16)


ಮೋನಿಷಾ ವಿ. (ಶೇ 96.33)

₹1.32 ಕೋಟಿ ವಂಚನೆ • ಹೊರ ರಾಜ್ಯದ ಮೂವರ ಸೆರೆ • ಸೈಬರ್ ಅಪರಾಧ ಠಾಣೆ ಪೊಲೀಸರ ಕಾರ್ಯಾಚರಣೆ

ಕೋರ್ಟ್ ಆದೇಶ ಸೃಷ್ಟಿಸಿ ಬ್ಯಾಂಕ್‌ಗೆ ವಂಚನೆ

ಪ್ರಜಾವಾಣಿ ವಾರ್ತೆ


ನೀರಜ್


ಸಾಗರ್

ಅಪರಾಧ ಸುದ್ದಿ

ಬೆಂಗಳೂರು: ಸರ್ಕಾರದ ಹೆಸರಿನಲ್ಲಿ ಇ-ಮೇಲ್ ರಚಿಸಿಕೊಂಡು ನ್ಯಾಯಾಲಯದ ನಕಲಿ ಆದೇಶಗಳನ್ನು ತಯಾರಿಸಿ ಬ್ಯಾಂಕ್‌ಗೆ ₹1.32 ಕೋಟಿ ವಂಚಿಸಿದ್ದ ಹೊರ ರಾಜ್ಯಗಳ ಮೂವರನ್ನು ಸೈಬರ್ ಅಪರಾಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

ದೆಹಲಿಯ ಅಭಿಮನ್ಯು ಕುಮಾರ್ ಪಾಂಡ್ಯ ಹಾಗೂ ನೀರಜ್ ಸಿಂಗ್, ರಾಜಸ್ಥಾನದ ಸಾಗರ್ ಲುಕ್ರಾ ಬಂಧಿತರು.

ಐಸಿಐಸಿಐ ಬ್ಯಾಂಕ್‌ನ ಇಲ್ಲಿನ ಹಲಸೂರು ಶಾಖೆಯ ವ್ಯವಸ್ಥಾಪಕರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ನ್ಯಾಯಾಲಯದ ಆದೇಶದ ಮೇರೆಗೆ ಹಲವು ಖಾತೆಗಳ ವಹಿವಾಟು ಸ್ಥಗಿತ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಐಸಿಐಸಿಐ ಬ್ಯಾಂಕ್ leaddesk@icicibank.com ಎಂಬ ಹೆಸರಿನಲ್ಲಿ ನೋಡಲ್ ಇ-ಮೇಲ್ ಐಡಿ ಹೊಂದಿತ್ತು. ಮೂವರು ಆರೋಪಿಗಳು ಸರ್ಕಾರದ ಹೆಸರಿನಲ್ಲಿ cb-crime-sog@karnataka.gov.in ಎಂಬ ನಕಲಿ ಇ-ಮೇಲ್ ಐಡಿ ರೂಪಿಸಿಕೊಂಡು, ಅದರಿಂದ ಬ್ಯಾಂಕ್‌ನ ಇ-ಮೇಲ್‌ಗೆ ಸಂದೇಶ ಕಳುಹಿಸಿ, ಹಣ ವರ್ಗಾವಣೆ ಮಾಡಿಕೊಂಡಿಕೊಂಡು ವಂಚನೆ ನಡೆಸಿರುವುದು ತನಿಖೆಯಿಂದ ಗೊತ್ತಾಗಿದೆ.

‘2024ರ ಸೆಪ್ಟೆಂಬರ್ 19ರಿಂದ 2025ರ ಫೆಬ್ರುವರಿ 12ರವರೆಗೆ ಕೋರ್ಟ್ ಆದೇಶವನ್ನು 18 ಬಾರಿ ನಕಲಿಯಾಗಿ ಸೃಷ್ಟಿಸಿಕೊಂಡಿದ್ದರು. ಬ್ಯಾಂಕ್‌ನ ವಿವಿಧ ಖಾತೆಯಲ್ಲಿ ವಹಿವಾಟು ಸ್ಥಗಿತಗೊಂಡಿರುವ (ಫ್ರೀಜ್) ಹಣವನ್ನು ವರ್ಗಾವಣೆ ಮಾಡುವಂತೆ ಕೋರ್ಟ್ ಆದೇಶ ನೀಡಿದಂತೆಯೇ ನಕಲಿ ಆದೇಶವನ್ನು ಬ್ಯಾಂಕ್‌ನ ನೋಡಲ್ ಇ-ಮೇಲ್ ಐ.ಡಿಗೆ ರವಾನೆ ಮಾಡಿದ್ದರು. ಇ-ಮೇಲ್ ರವಾನೆ ಮಾಡಿದ ಮೇಲೆ ಹಲಸೂರು ಶಾಖೆಯ ಉದ್ಯೋಗಿಯೊಬ್ಬರಿಗೆ ಕರೆ ಮಾಡಿದ್ದ ಸೈಬರ್ ವಂಚಕನೊಬ್ಬ ಹಣವನ್ನು ಬಿಡುಗಡೆ ಮಾಡುವಂತೆ ಸೂಚಿಸಿದ್ದ. ನಕಲಿ ಆದೇಶದಲ್ಲಿದ್ದ ಮೊಬೈಲ್ ಸಂಖ್ಯೆ ಹಾಗೂ ಕರೆ ಮಾಡಿದ್ದ ವ್ಯಕ್ತಿಯ ಮೊಬೈಲ್ ಸಂಖ್ಯೆಯನ್ನು ಬ್ಯಾಂಕ್ ಸಿಬ್ಬಂದಿ ಪರಿಶೀಲಿಸಿದ್ದರು. ಅದು ಒಂದೇ ಆಗಿತ್ತು. ಹೀಗಾಗಿ ಬ್ಯಾಂಕ್ ಉದ್ಯೋಗಿಯು ಆದೇಶ ನೈಜವೆಂದು ನಂಬಿ ಐಸಿಐಸಿಐ ಬ್ಯಾಂಕ್‌ನ ಎರಡು ಖಾತೆಯಿಂದ ಆರೋಪಿಗಳು ತಿಳಿಸಿದ ಆಕ್ಸಿಸ್ ಬ್ಯಾಂಕ್ ಖಾತೆಗೆ ₹1.32 ಕೋಟಿ ವರ್ಗಾಯಿಸಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಬ್ಯಾಂಕ್ ಉದ್ಯೋಗಿಯು ಹೆಚ್ಚಿನ ಹಣವನ್ನು ವರ್ಗಾಯಿಸಿದ ಬಗ್ಗೆ, ವ್ಯವಸ್ಥಾಪಕರಿಗೆ ಅನುಮಾನ ಬಂದು ಸೈಬರ್ ಅಪರಾಧ ಪೊಲೀಸರಿಗೆ ಮಾಹಿತಿ ನೀಡಿದ್ದರು. ಪ್ರಕರಣದ ತನಿಖೆ ಕೈಗೊಂಡ ಸೈಬರ್ ಅಪರಾಧ ಪೊಲೀಸರು ಪ್ರಕರಣದಲ್ಲಿ ಹಣ ವರ್ಗಾವಣೆಯಾದ ಆಕ್ಸಿಸ್ ಬ್ಯಾಂಕ್ ಖಾತೆಯ ವಿವರವನ್ನು ಪಡೆದುಕೊಂಡು ಪರಿಶೀಲಿಸಿದ್ದರು. ಆಗ ಹಣ ವರ್ಗಾವಣೆಯಾದ ಆಕ್ಸಿಸ್ ಬ್ಯಾಂಕ್ ಖಾತೆಯು ಆರೋಪಿ ಅಭಿಮನ್ಯು ಕುಮಾರ್ ಪಾಂಡೆಗೆ ಸಂಬಂಧಿಸಿದ್ದು ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿತ್ತು. ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ನ್ಯಾಯಾಲಯ ಹೆಸರಿನಲ್ಲಿ ದಾಖಲೆ ಸೃಷ್ಟಿಸಿ, ವಂಚನೆ ನಡೆಸುತ್ತಿರುವುದು ಪತ್ತೆ ಆಯಿತು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಅಭಿಮನ್ಯು ಕುಮಾರ್ ನೀಡಿದ ಮಾಹಿತಿ ಆಧರಿಸಿ ನೀರಜ್ ಹಾಗೂ ರಾಜಸ್ಥಾನದಲ್ಲಿ ತಲೆಮರೆಸಿಕೊಂಡಿದ್ದ ಪ್ರಮುಖ ಆರೋಪಿ ಸಾಗರ್ ಲುಕ್ರಾನನ್ನು ಬಂಧಿಸಲಾಯಿತು’ ಎಂದು ಮೂಲಗಳು ಹೇಳಿವೆ.

ಬ್ಯಾಂಕ್‌ನಲ್ಲಿ ಕೆಲಸ ಮಾಡುತ್ತಿದ್ದ ಪ್ರಮುಖ ಆರೋಪಿ

‘ಪ್ರಕರಣದ ಪ್ರಮುಖ ಆರೋಪಿ ಸಾಗರ್ ರಾಜಸ್ಥಾನದ ಆಕ್ಸಿಸ್ ಬ್ಯಾಂಕ್ ಶಾಖೆಯೊಂದರಲ್ಲಿ ಮಾರಾಟ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದ. ಬ್ಯಾಂಕ್‌ಗಳಲ್ಲಿ ವಹಿವಾಟು ಸ್ಥಗಿತಗೊಂಡಿರುವ ಹಣವನ್ನು ಬಿಡಿಸಿ ಕೊಳ್ಳುವುದು ಹೇಗೆ ಎಂಬ ಮಾಹಿತಿ ಆತನಿಗೆ ಇತ್ತು. ಅದೇ ಮಾಹಿತಿ ಆಧರಿಸಿ ವಂಚನೆಗೆ ಸಂಚು ರೂಪಿಸಿದ್ದ’ ಎಂದು ಪೊಲೀಸರು ಹೇಳಿದರು.

‘ಆನ್‌ಲೈನ್ ಮೂಲಕ ಕ್ರಿಕೆಟ್ ಬೆಟ್ಟಿಂಗ್‌ನಲ್ಲೂ ಸಾಗರ್ ಭಾಗಿಯಾಗಿದ್ದ. ಅಲಹಾಬಾದ್ ಪೊಲೀಸರು ಈತನನ್ನು ಬಂಧಿಸಿದ್ದರು. ಜಾಮೀನು ಪಡೆದು ಹೊರಬಂದ ಬಳಿಕ ಸಾಗರ್, ಬೆಂಗಳೂರಿನ ಹಲಸೂರಿನ ಐಸಿಐಸಿಐ ಬ್ಯಾಂಕ್‌ನಲ್ಲಿ ಫ್ರೀಜ್ ಆಗಿದ್ದ ₹1.32 ಕೋಟಿಯ ಬಗ್ಗೆ ತಿಳಿದುಕೊಂಡಿದ್ದ. ಸರ್ಕಾರಿ ಅಧಿಕಾರಿ ರೀತಿ ದಾಖಲಾತಿ ಸಿದ್ಧಪಡಿಸಿಕೊಂಡು ಸರ್ಕಾರಿ ಇ-ಮೇಲ್ ಐ.ಡಿ ಬೇಕೆಂದು ಸರ್ಕಾರ ಅಧೀನದಲ್ಲಿ ಬರುವ ಕೆ-ಸ್ವಾನ್ (ಕರ್ನಾಟಕ ಸ್ಟೇಟ್ ವೈಡ್ ಏರಿಯಾ ನೆಟ್‌ವರ್ಕ್) ಆನ್‌ಲೈನ್ ಮೂಲಕ ಮನವಿ ಸಲ್ಲಿಸಿ ಮೇಲ್ ಐ.ಡಿ ಪಡೆದುಕೊಂಡಿದ್ದ’ ಎಂದು ಪೊಲೀಸರು ಹೇಳಿದರು.

ಅಭಿಮನ್ಯು ಖಾತೆಯಲ್ಲಿ ₹63 ಲಕ್ಷ

ವಂಚನೆ ಎಸಗಿದ ಹಣದ ಪೈಕಿ ₹ 38 ಲಕ್ಷವನ್ನು ಸಾಗರ್ ಪಡೆದಿದ್ದ ಅದನ್ನು ಕ್ಯಾಸಿನೊ, ಪಬ್‌ಗಳಲ್ಲಿ ಮೋಜು-ಮಸ್ತಿ ಮಾಡಿ ಖರ್ಚು ಮಾಡಿದ್ದ. ಆತನ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಿದಾಗ ಖಾತೆಯಲ್ಲಿ ಹಣ ಇರಲಿಲ್ಲ. ಅಭಿಮನ್ಯು ಬ್ಯಾಂಕ್ ಖಾತೆಯಲ್ಲಿದ್ದ ₹ 63 ಲಕ್ಷ ವಶಕ್ಕೆ ಪಡೆದುಕೊಳ್ಳಲಾಗಿದೆ ಎಂದು ತನಿಖಾಧಿಕಾರಿಯೊಬ್ಬರು ಹೇಳಿದರು.


ಅಭಿಮನ್ಯು

ಸುದ್ದಿ 2 ನಿಮಿಷ

ಬೆಟ್ಟಿಂಗ್: ಬುಕ್ಕಿಗಳಿಬ್ಬರ ಬಂಧನ

ಬೆಂಗಳೂರು: ದುಬೈ ಎಕ್ಸ್‌ಚೇಂಜ್ ಹೆಸರಲ್ಲಿ ಐಪಿಎಲ್ ಬೆಟ್ಟಿಂಗ್ ನಡೆಸುತ್ತಿದ್ದ ಇಬ್ಬರು ಬುಕ್ಕಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ರಾಜಸ್ಥಾನದ ಯಶ್ ಹಾಗೂ ಸಂತೋಷ್ ಬಂಧಿತರು.

‘ಬಂಧಿತರಿಂದ ₹5 ಲಕ್ಷ ನಗದು, ಮೊಬೈಲ್, ಲ್ಯಾಪ್‌ಟಾಪ್ ವಶಕ್ಕೆ ಪಡೆಯಲಾಗಿದೆ’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

ಜೀವನ್‌ಭಿಮಾ ನಗರ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

‘ಈ ಇಬ್ಬರು ಐಪಿಎಲ್ ಟೂರ್ನಿಯ ಪ್ರತಿ ಪಂದ್ಯದ ವೇಳೆಯೂ ಬೆಟ್ಟಿಂಗ್ ದಂಧೆ ನಡೆಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

ಜೀವನ್‌ಭಿಮಾ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಡು ರಸ್ತೆಯಲ್ಲಿ ಮುಂದುವರಿದ ಅನ್ನದಾತರ ಹೋರಾಟ



ದೇವನಹಳ್ಳಿ: ತಾಲ್ಲೂಕಿನ ಚನ್ನರಾಯಪಟ್ಟಣ ಹೋಬಳಿಯ 13 ಹಳ್ಳಿಗಳ ರೈತರು 1,777 ಎಕರೆ ಕೃಷಿ ಭೂಮಿ ಕೆಐಎಡಿಬಿ ಪಾಲಾಗದಂತೆ ಭೂಮಿ ಉಳಿಸಿಕೊಳ್ಳಲು ನಡೆಸುತ್ತಿರುವ ಹೋರಾಟ ಶುಕ್ರವಾರ 1,104ನೇ ದಿನಕ್ಕೆ ಕಾಲಿಟ್ಟಿದ್ದು, ಮತ್ತಷ್ಟು ತೀವ್ರತೆ ಪಡೆದುಕೊಂಡಿದೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಚ್. ಮುನಿಯಪ್ಪ ಅವರ ಬೆಂಗಳೂರಿನ ನಿವಾಸಕ್ಕೆ ತೆರಳಲು ಮುಂದಾಗಿದ್ದ ರೈತರನ್ನು ಪೊಲೀಸರು ತಡೆದು ನಡು ರಸ್ತೆಯಲ್ಲಿಯೇ ಇಡೀ ದಿನ ರಾತ್ರಿ ರೈತರು ತಮ್ಮ ಪ್ರತಿಭಟನೆ ಮುಂದುವರಿಸಿದ್ದಾರೆ.

ಹೆಚ್ಚಿನ ಸಂಖ್ಯೆಯಲ್ಲಿ ರೈತ ಮಹಿಳೆಯರು ಧರಣಿಯಲ್ಲಿ ಭಾಗಿಯಾಗಿದ್ದಾರೆ. ಸಿಪಿಐಎಂ ನಾಯಕಿ ಪ್ರಭಾ ಬೆಳವಂಗಲ ಅವರು ತಮ್ಮ ಸಂಗಾತಿಗಳೊಂದಿಗೆ ಗುರುವಾರ ರಾತ್ರಿ ನಡು ರಸ್ತೆಯಲ್ಲಿ ಮಲಗಿ ಹೋರಾಟಕ್ಕೆ ಕಾವು ತುಂಬಿದ್ದಾರೆ.

ಹತ್ತಾರು ಸಂಘಟನೆಗಳ ಪದಾಧಿಕಾರಿಗಳು ಭೇಟಿ ನೀಡಿ ಚನ್ನರಾಯಪಟ್ಟಣ ಭೂಸ್ವಾಧೀನ ವಿರೋಧಿ ಹೋರಾಟಕ್ಕೆ ಬೆಂಬಲ ಸೂಚಿಸಿದ್ದು, ರಾತ್ರಿ ಇಡೀ ರೈತರೊಂದಿಗೆ ನಡು ರಸ್ತೆಯಲ್ಲಿ ಹೋರಾಟದ ಗೀತೆಗಳನ್ನು ಹಾಡುತ್ತಾ ಧರಣಿಯಲ್ಲಿ ಭಾಗಿಯಾಗಿದ್ದರು.

ಗುರುವಾರ ರಾತ್ರಿ ರೈತರು ಮೊಕ್ಕಾಂ ಹೂಡಿರುವ ಜಾಗಕ್ಕೆ ಭೇಟಿ ನೀಡಿದ ಕರ್ನಾಟಕ ಪ್ರಾಂತ್ಯ ರೈತ ಸಂಘದ ಅಧ್ಯಕ್ಷ ಯು.ಬಸವರಾಜ್ ಮಾತನಾಡಿ, ‘ಕಾರ್ಪೋರೇಟ್ ಪೋಷಿತ ಸರ್ಕಾರಗಳು ಕೃಷಿಕರ ಭೂಮಿಯನ್ನು ಕಬ್ಬಳಿಕೆ ಮಾಡುವ ಹುನ್ನಾರ ಇಡೀ ದೇಶದಲ್ಲಿ ನಡೆಯುತ್ತಿದೆ’ ಎಂದು ಆರೋಪಿಸಿದರು.

ಮತ್ತೊಂದು ದಿನ ಭೇಟಿ: ಚನ್ನರಾಯಪಟ್ಟಣ ರೈತ ಹೋರಾಟಗಾರರ ನಿಯೋಗವೂ ಬೆಂಗಳೂರಿನ ವಿಧಾನ ಸೌಧದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿತು.

ಮದ್ಯ ಸೇವನೆಗೆ ಹಣ ನೀಡದ ತಾಯಿಯ ಕೊಲೆ


ಶಾಂತಾಬಾಯಿ


ಮಹೇಂದ್ರ ಸಿಂಗ್

ಬೆಂಗಳೂರು: ಮದ್ಯ ಸೇವನೆಗೆ ಹಣ ನೀಡಲು ನಿರಾಕರಿಸಿದ ತಾಯಿಯನ್ನು ಕಬ್ಬಿಣದ ರಾಡ್‌ನಿಂದ ತಲೆಗೆ ಹೊಡೆದು ಸಾಯಿಸಿದ ಮಗನನ್ನು ಬಾಗಲಗುಂಟೆ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮುನೇಶ್ವರ ನಗರ ನಿವಾಸಿ ಶಾಂತಾಬಾಯಿ (82) ಕೊಲೆಯಾದವರು. ಗುರುವಾರ ರಾತ್ರಿ 9.30ರ ಸುಮಾರಿಗೆ ಘಟನೆ ನಡೆದಿದ್ದು, ಆರೋಪಿ ಮಹೇಂದ್ರ ಸಿಂಗ್ (56)ಎಂಬಾತನನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಚನ್ನಪಟ್ಟಣದ ಮಹೇಂದ್ರ ಸಿಂಗ್, ಬಾಗಲಗುಂಟೆಯ ಮುನೇಶ್ವರ ನಗರದ ಮನೆಯೊಂದರಲ್ಲಿ ತಾಯಿ ಜೊತೆ ಐದು ವರ್ಷಗಳಿಂದ ವಾಸವಾಗಿದ್ದ. ಮದ್ಯ ವ್ಯಸನಿಯಾಗಿದ್ದರಿಂದ ಪತ್ನಿ ಸಹ ಈತನಿಂದ ದೂರವಾಗಿದ್ದರು. ಕೆಲಸಕ್ಕೂ ಹೋಗುತ್ತಿರಲಿಲ್ಲ. ಮದ್ಯ ಸೇವನೆಗಾಗಿ ನಿತ್ಯ ತಾಯಿ ಬಳಿ ಹಣ ಪಡೆಯುತ್ತಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ .

‘ಶಾಂತಾಬಾಯಿ ಅವರಿಗೆ ಪ್ರತಿ ತಿಂಗಳು ಪಿಂಚಣಿ ಹಣ ಬರುತಿತ್ತು. ಒಂದು ಮನೆಯ ಬಾಡಿಗೆ ಹಣವೂ ಬರುತಿತ್ತು. ಈ ಆದಾಯದ ಮೂಲದಿಂದಲೇ ಶಾಂತಾಬಾಯಿ ಜೀವನ ಸಾಗಿಸುತ್ತಿದ್ದರು. ಹಣಕ್ಕಾಗಿ ತಾಯಿಗೆ ಪೀಡಿಸುತ್ತಿದ್ದ. ಇದೇ ವಿಚಾರಕ್ಕಾಗಿ ರಾತ್ರಿ ಇಬ್ಬರ ನಡುವೆ ಜಗಳವಾಗಿದೆ. ಹಣ ನೀಡದ ಕಾರಣ ಮನೆಯಲ್ಲಿದ್ದ ಕಬ್ಬಿಣದ ರಾಡ್‌ನಿಂದ ತಲೆಗೆ ಹೊಡೆದು ಕೊಲೆ ಮಾಡಿದ್ದಾನೆ’ ಎಂದು ಪೊಲೀಸರು ಹೇಳಿದ್ದಾರೆ.

ಮರಣೋತ್ತರ ಪರೀಕ್ಷೆಗಾಗಿ ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಲಾಗಿದೆ.

ಕಾಳಸಂತೆ: ಟಿಕೆಟ್ ಮಾರುತ್ತಿದ್ದವರ ಸೆರೆ

ಐಪಿಎಲ್: ₹1,500 ಮುಖಬೆಲೆಯ ಟಿಕೆಟ್ ₹12 ಸಾವಿರಕ್ಕೆ ಮಾರಾಟ

ಪ್ರಜಾವಾಣಿ ವಾರ್ತೆ


ಸಾಯಿ ಪ್ರಸಾದ್


ನರೇಂದ್ರ


ಶಿವರಾಜ್


ಮನೋಜ್


ಸಂತೋಷ್


ಮಂಜುನಾಥ್


ಭರತ್


ಹೇಮಂತ್

ಬೆಂಗಳೂರು: ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆರ್‌ಸಿಬಿ ಹಾಗೂ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳ ಮಧ್ಯೆ ಗುರುವಾರ ನಡೆದ ಐಪಿಎಲ್ ಪಂದ್ಯದ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ಅಧಿಕ ಮೊತ್ತಕ್ಕೆ ಮಾರುತ್ತಿದ್ದ ಎಂಟು ಮಂದಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ತಮಿಳುನಾಡಿನ ಹೇಮಂತ್ ಕುಮಾರ್, ಸಾಯಿ ಪ್ರಸಾದ್, ಚಂಡೀಗಢದ ಮನೋಜ್ ಖಾಂಡೆ ಹಾಗೂ ಬೆಂಗಳೂರಿನ ಜಯನಗರದ ನಿವಾಸಿ ಭರತ್, ಹಲಸೂರಿನ ನರೇಂದ್ರ ಕುಮಾರ್, ದೊಮ್ಮಲೂರಿನ ಶಿವರಾಜ್ ಕುಮಾರ್, ನಾಗರಬಾವಿಯ ಮಂಜುನಾಥ್, ಕಾವಲ್ ಬೈರಸಂದ್ರದ ಸಂತೋಷ್ ಬಂಧಿತರು.

ಐಪಿಎಲ್ ಪಂದ್ಯದ ಟಿಕೆಟ್‌ಗಳನ್ನು ಕಾಳಸಂತೆಯಲ್ಲಿ ಅಧಿಕ ಮೊತ್ತಕ್ಕೆ ಮಾರಾಟ ಮಾಡುತ್ತಿದ್ದ ಬಗ್ಗೆ ಸಿಸಿಬಿ ಘಟಕಕ್ಕೆ ಮಾಹಿತಿ ಬಂದಿತ್ತು. ಆ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

‘ಚಿನ್ನಸ್ವಾಮಿ ಕ್ರೀಡಾಂಗಣದ ಗೇಟ್ ಸಂಖ್ಯೆ 10ರ ಬಳಿ ಸಿಸಿಬಿ ಪೊಲೀಸರು ಮಫ್ತಿಯಲ್ಲಿ ಕಾರ್ಯಾಚರಣೆ ನಡೆಸಲು ನಿಂತಿದ್ದರು. ಗೇಟ್ ಬಳಿಯೇ ನಿಂತಿದ್ದ ಆರೋಪಿಗಳಾದ ಮನೋಜ್ ಖಾಂಡೆ ಹಾಗೂ ಸಂತೋಷ್ ಅವರು ಪೊಲೀಸರಿಗೆ ಟಿಕೆಟ್ ಬೇಕಾ? ಎಂದು ಕಾರ್ಯಾಚರಣೆ ತಂಡದ ಸಿಬ್ಬಂದಿಯನ್ನು ಕೇಳಿದ್ದರು. ಒಂದು ಟಿಕೆಟ್‌ನ ದರ ಎಷ್ಟು? ಎಂದು ಪೊಲೀಸರು ಕೇಳಿದಾಗ ₹7 ಸಾವಿರ ಎಂಬುದಾಗಿ ಆರೋಪಿಗಳು ಹೇಳಿದ್ದರು. ತಕ್ಷಣವೇ ಅವರನ್ನು ವಶಕ್ಕೆ ಪಡೆದುಕೊಳ್ಳಲಾಯಿತು’ ಎಂದು ಸಿಸಿಬಿ ಮೂಲಗಳು ತಿಳಿಸಿವೆ.

‘ಇಬ್ಬರು ಆರೋಪಿಗಳು ಎನ್‌ಎಂಎಸ್ ಕ್ಯಾಂಟೀನ್ ವ್ಯವಸ್ಥಾಪಕರಾದ ಎಚ್.ಶಿವಕುಮಾರ್ ಹಾಗೂ ಕೆ.ನಾಗರಾಜ್ ಎಂಬುವರಿಂದ ಟಿಕೆಟ್ ಪಡೆದು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದರು. ₹1,200 ಮುಖಬೆಲೆಯ ಟಿಕೆಟ್ ಅನ್ನು ₹7 ಸಾವಿರಕ್ಕೆ ಮಾರಾಟ ಮಾಡುತ್ತಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ’ ಎಂದು ಮೂಲಗಳು ತಿಳಿಸಿವೆ.

‘ನಾಗರಬಾವಿಯ ನಿವಾಸಿ ಮಂಜುನಾಥ್ ₹1,500 ಮುಖಬೆಲೆಯ ಟಿಕೆಟ್ ಅನ್ನು ₹12 ಸಾವಿರಕ್ಕೆ ಮಾರಾಟ ಮಾಡುತ್ತಿದ್ದರು. ಉಳಿದ ಐವರು ಆರೋಪಿಗಳು ಕಾಂಪ್ಲಿಮೆಂಟರಿ ಟಿಕೆಟ್ ಪಡೆದುಕೊಂಡು ಪ್ರತಿ ಟಿಕೆಟ್ ಅನ್ನು ₹8 ಸಾವಿರಕ್ಕೆ ಮಾರಾಟ ಮಾಡುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಆರೋಪಿಗಳು ಯಾವ ಮೂಲದಿಂದ ಹೆಚ್ಚಿನ ಟಿಕೆಟ್ ಪಡೆದುಕೊಂಡಿದ್ದರು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ’ ಎಂದು ಸಿಸಿಬಿ ವಿಶೇಷ ವಿಚಾರಣಾ ದಳದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೇಯರ್ ವಿರುದ್ಧ ಅವಿಶ್ವಾಸ: ಟಿಡಿಪಿ ಕಾರ್ಪೋರೇಟರ್‌ಗಳು ಮಲೇಷ್ಯಾಕ್ಕೆ

ವಿಶಾಖಪಟ್ಟಣ(ಪಿಟಿಐ): ಗ್ರೇಟರ್ ವಿಶಾಖಪಟ್ಟಣ ಮುನ್ಸಿಪಲ್ ಕಾರ್ಪೊರೇಷನ್ (ಜಿವಿಎಂಸಿ) ಮೇಯರ್ ವಿರುದ್ಧ ಅವಿಶ್ವಾಸ ನಿರ್ಣಯ ಮಂಡಿಸಲಾಗಿದ್ದು, ಅಡ್ಡ ಮತದಾನ ತಪ್ಪಿಸುವುದಕ್ಕಾಗಿ ಟಿಡಿಪಿ ತನ್ನ 25 ಕಾರ್ಪೊರೇಟರ್‌ಗಳನ್ನು ಮಲೇಷ್ಯಾಕ್ಕೆ ಕಳುಹಿಸಿದೆ.


ಆಡಳಿತಾರೂಢ ವೈಎಸ್‌ಆರ್ ಕಾಂಗ್ರೆಸ್ ಪಕ್ಷ ಕೂಡ ತನ್ನ ಕೆಲ ಪಾಲಿಕೆ ಸದಸ್ಯರನ್ನು ಬೆಂಗಳೂರಿನ ರೆಸಾರ್ಟ್‌ವೊಂದರಲ್ಲಿ ಇರಿಸಿದ್ದು, ಶನಿವಾರ ಅವರನ್ನು ಶ್ರೀಲಂಕಾಕ್ಕೆ ಸ್ಥಳಾಂತರ ಮಾಡುವ ಯೋಜನೆ ಹೊಂದಿದೆ ಎಂದು ಪಕ್ಷದ ಮೂಲಗಳು ಹೇಳಿವೆ.

ಏಪ್ರಿಲ್ 19ರಂದು ಅವಿಶ್ವಾಸ ನಿರ್ಣಯ ಮಂಡನೆಯಾಗಲಿದೆ. 98 ಸದಸ್ಯ ಬಲದ ಪಾಲಿಕೆಯಲ್ಲಿ ವೈಎಸ್‌ಆರ್ ಕಾಂಗ್ರೆಸ್ 59 ಸದಸ್ಯರನ್ನು ಹೊಂದಿದೆ. ಮೂವರು ಜನಸೇನಾ ಸದಸ್ಯರ ಬೆಂಬಲ ಸೇರಿ ಟಿಡಿಪಿ ಬಲ 29 ಇದೆ.

ಬೆಂಗಳೂರು: ಉದ್ಯಾನದ ಬಳಿ ಮತೀಯ ಗೂಂಡಾಗಿರಿ

ಐವರು ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ


ಮಹೀಮ್


ಮನ್ಸೂರ್


ಅಫ್ರೀದಿ ಪಾಷಾ


ವಸೀಂ ಖಾನ್

ಬೆಂಗಳೂರು: ಇಲ್ಲಿನ ಸುವರ್ಣ ಲೇಔಟ್‌ನ ಉದ್ಯಾನದ ಬಳಿ ಮತೀಯ ಗೂಂಡಾಗಿರಿ ನಡೆಸಿದ್ದ ಆರೋಪದ ಅಡಿ ಬಾಲಕ ಸೇರಿದಂತೆ ಐವರನ್ನು ಚಂದ್ರಾಲೇಔಟ್ ಠಾಣೆಯ ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ.

ಗುಜರಿ ವ್ಯಾಪಾರಿ ಮಹೀಮ್, ಟೈಲರ್ ಮನ್ಸೂರ್, ವೆಲ್ಡಿಂಗ್ ಕೆಲಸಗಾರರಾದ ಅಫ್ರೀದಿ ಪಾಷಾ, ವಸೀಂ ಖಾನ್ ಹಾಗೂ ಮತ್ತೊಬ್ಬ ಬಾಲಕನನ್ನು ಪೊಲೀಸರು ಬಂಧಿಸಿದ್ದಾರೆ.

ನಾಲ್ವರು ಆರೋಪಿಗಳಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ. ಬಾಲಕನನ್ನು ಮಕ್ಕಳ ಕಲ್ಯಾಣ ಸಮಿತಿ ಎದುರು ಹಾಜರು ಪಡಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಹಿಂದೂ ಯುವಕ ಹಾಗೂ ಮುಸ್ಲಿಂ ಯುವತಿ ಸುವರ್ಣ ಲೇಔಟ್‌ನ ಉದ್ಯಾನದ ಬಳಿ ಶನಿವಾರ ಸಂಜೆ (ಏಪ್ರಿಲ್ 5) ಸ್ಕೂಟರ್‌ನಲ್ಲಿ ಮಾತನಾಡುತ್ತಾ ಕುಳಿತಿದ್ದರು. ಆ ಸ್ಥಳಕ್ಕೆ ಬಂದಿದ್ದ ಆರೋಪಿಗಳು, ಬುರ್ಖಾ ಧರಿಸಿಕೊಂಡು ಹಿಂದೂ ಯುವಕನ ಜತೆಗೆ ಸ್ಕೂಟರ್‌ನಲ್ಲಿ ಏಕೆ ಕುಳಿತಿದ್ದೀಯಾ ಎಂಬುದಾಗಿ ಪ್ರಶ್ನಿಸಿದ್ದರು. ಅಲ್ಲದೇ ಪೋಷಕರ ಮೊಬೈಲ್ ಸಂಖ್ಯೆ ನೀಡುವಂತೆಯೂ ಯುವತಿಯನ್ನು ಕೇಳಿದ್ದರು. ನನ್ನ ಸಹಪಾಠಿ ಜತೆಗೆ ಮಾತನಾಡುತ್ತಿದ್ದೇನೆ. ಪೋಷಕರ ಮೊಬೈಲ್ ಸಂಖ್ಯೆ ಕೊಡುವುದಿಲ್ಲ ಎಂದು ಯುವತಿ ಹೇಳಿದ್ದರು’ ಎಂದು ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ಬೈಕ್‌ನಲ್ಲಿ ಕುಳಿತ ಯುವಕ-ಯುವತಿ ಮೇಲೆ ಹಲ್ಲೆ
- ನಾಲ್ವರು ಆರೋಪಿಗಳು ನ್ಯಾಯಾಂಗ ಬಂಧನಕ್ಕೆ
- ಬಾಲಕನ ಮಕ್ಕಳ ಕಲ್ಯಾಣ ಸಮಿತಿ ಎದುರು ಹಾಜರು ಪಡಿಸಿದ ಪೊಲೀಸ್

‘ಯುವತಿಯ ಮಾತಿನಿಂದ ಸಿಟ್ಟಿಗೆದ್ದಿದ್ದ ಆರೋಪಿಗಳು ಇಬ್ಬರ ಮೇಲೂ ಹಲ್ಲೆ ನಡೆಸಿದ್ದರು. ಅಲ್ಲದೇ ಬೈಕ್‌ನಲ್ಲಿ ಕುಳಿತಿದ್ದ ಯುವಕ-ಯುವತಿ ಮಾತನಾಡುತ್ತಿರುವ ದೃಶ್ಯವನ್ನು ಸೆರೆ ಹಿಡಿದು, ಸಾಮಾಜಿಕ ಮಾಧ್ಯಮಗಳಲ್ಲಿ ಹಾಕಿದ್ದರು’ ಎಂದು ಪೊಲೀಸರು ಹೇಳಿದರು.

‘ಯುವತಿ ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಸ್ಕೂಟರ್‌ನಲ್ಲಿ ಕುಳಿತಿದ್ದವರನ್ನು ಪ್ರಶ್ನಿಸಿ ಆರೋಪಿಗಳು ಹಲ್ಲೆ ನಡೆಸಿದ್ದಾರೆ. ಜತೆಗೆ, ಇಲ್ಲಿಗೆ ಯಾಕೆ ಬಂದಿದ್ದೀಯಾ? ಮನೆಯಲ್ಲಿ ಹೇಳಿದ್ದೀಯಾ? ಎಂದೆಲ್ಲಾ ಆರೋಪಿಗಳು ಯುವತಿಯನ್ನು ಪ್ರಶ್ನಿಸಿದ್ದರು’ ಎಂದು ಪಶ್ಚಿಮ ವಿಭಾಗದ ಡಿಸಿಪಿ ಗಿರೀಶ್ ತಿಳಿಸಿದರು.



ತೆಪ್ಪೋತ್ಸವ ವೈರಮುಡಿ ಬ್ರಹ್ಮೋತ್ಸವದ ಅಂಗವಾಗಿ ಮೇಲುಕೋಟೆಯ ಪಂಚ ಕಲ್ಯಾಣಿಯಲ್ಲಿ ಶುಕ್ರವಾರ ರಾತ್ರಿ ಚೆಲುವನಾರಾಯಣಸ್ವಾಮಿಯ ತೆಪ್ಪೋತ್ಸವ ವೈಭವದಿಂದ ನಡೆಯಿತು

ಚಿತ್ರ: ಶ್ರೀಕಾಂತ್ ಮೇಲುಕೋಟೆ

ಸರ್ಕಾರಿ ಸಾರಿಗೆ ಬಳಕೆ ಉತ್ತೇಜನಕ್ಕೆ ‘ಸ್ಟ್ಯಾಂಪ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲೆಕ್ಟ್ರಾನಿಕ್ ಸಿಟಿಯಲ್ಲಿ ಜನರು ವೈಯಕ್ತಿಕ ವಾಹನಗಳಲ್ಲಿ ಪ್ರಯಾಣಿಸುವ ಬದಲು ನಮ್ಮ ಮೆಟ್ರೊ ದಂಥ ಸಾರ್ವಜನಿಕ ಸಾರಿಗೆಯಲ್ಲಿ ಪ್ರಯಾಣ ಬೆಳೆಸುವಂತೆ ಉತ್ತೇಜನ ನೀಡುವ ‘ಸ್ಟ್ಯಾಂಪ್’ ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ನೀಡಲಾಯಿತು.

ಬಿಎಂಆರ್‌ಸಿಎಲ್, ಬಿಎಂಟಿಸಿ, ಎಲೆಕ್ಟ್ರಾನಿಕ್‌ಸಿಟಿ ಇಂಡಸ್ಟ್ರೀಸ್ ಅಸೋಸಿಯೇಶನ್ (ಇಎಲ್‌ಸಿಐಎ), ಟೊಯೊಟಾ ಮೊಬಿಲಿಟಿ ಫೌಂಡೇಶನ್ (ಟಿಎಂಎಫ್) ಸಹಯೋಗದಲ್ಲಿ ‘ಸ್ಟ್ಯಾಂಪ್: ಪ್ರಯಾಣಿಕರ ವರ್ತನೆಯನ್ನು ಹುರಿದುಂಬಿಸುವುದು’ ಕಾರ್ಯಕ್ರಮ ನಡೆಯಿತು.

ಈ ವರ್ಷದ ಉತ್ತರಾರ್ಧದಲ್ಲಿ ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ರೈಲು ಸಂಚಾರ ಆರಂಭವಾಗಲಿದೆ. ಆರ್.ವಿ. ರಸ್ತೆಯಿಂದ ಬೊಮ್ಮಸಂದ್ರ ಸಂಪರ್ಕಿಸುವ ಈ ಮಾರ್ಗವು ಬೆಂಗಳೂರಿನ ಅತಿದೊಡ್ಡ ಉದ್ಯೋಗ ಕೇಂದ್ರ ‘ಎಲೆಕ್ಟ್ರಾನಿಕ್ ಸಿಟಿ’ ಮೂಲಕ ಹಾದು ಹೋಗಲಿದೆ. ಇಲ್ಲಿನ ಉದ್ಯೋಗದಾತರು, ಉದ್ಯೋಗಿಗಳು ವೈಯಕ್ತಿಕ ವಾಹನಗಳನ್ನು ಬಳಸುವ ಬದಲು ನಮ್ಮ ಮೆಟ್ರೊ ಬಳಸುವಂತಾಗಬೇಕು. ಮೆಟ್ರೊಗೆ ಪೂರಕವಾಗಿ ಬಿಎಂಟಿಸಿಯಿಂದ ಫೀಡರ್ ಬಸ್‌ಗಳು ಸಂಚರಿಸಲಿದ್ದು, ಅದರ ಉಪಯೋಗ ಪಡೆದುಕೊಳ್ಳಬೇಕು. ಬಸ್‌ಗಳ ಸಂಖ್ಯೆ ಹೆಚ್ಚಾದರೆ ಸಾಲದು, ಬಸ್‌ಗಳಲ್ಲಿ ಸಂಚರಿಸುವವರ ಸಂಖ್ಯೆ ಹೆಚ್ಚಾಗಬೇಕು ಎಂಬ ಅಭಿಪ್ರಾಯವನ್ನು ಕಾರ್ಯಕ್ರಮದಲ್ಲಿ ಭಾಗವಹಿಸಿದವರು ವ್ಯಕ್ತಪಡಿಸಿದರು.

ಸ್ಟೇಷನ್ ಆ್ಯಕ್ಸೆಸ್ ಆ್ಯಂಡ್ ಮೊಬಿಲಿಟಿ ಪ್ರೋಗ್ರಾಂನಲ್ಲಿ (ಸ್ಟ್ಯಾಂಪ್ಸ್) ಜನರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಿ ಭಾಗವಹಿಸಬಹುದು. ಅರ್ಜಿ ಸಲ್ಲಿಸುವ ಪ್ರಕ್ರಿಯೆ, ಕೊನೆಯ ದಿನಾಂಕ ಸಹಿತ ವಿವಿಧ ಮಾಹಿತಿಗಳಿಗಾಗಿ STAMP: Nudging Commuter Behaviour ಗೆ ಭೇಟಿ ನೀಡಲು ಸಂಘಟಕರು ಕೋರಿದ್ದಾರೆ.

ಕಾರ್ಯಕ್ರಮದಲ್ಲಿ ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಮಹೇಶ್ವರ ರಾವ್, ಬಿಎಂಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕ ಜಿ.ಟಿ. ಪ್ರಭಾಕರ ರೆಡ್ಡಿ, ಟೊಯೊಟಾ ಕಿರ್ಲೋಸ್ಕರ್ ಮೋಟಾರ್ ಮುಖ್ಯಸ್ಥ ವಿಕ್ರಂ ಗುಲಾಟಿ, ನಿರ್ದೇಶಕ ಪ್ರಾಸ್ ಗಣೇಶ್, ಇಂಟಿಗ್ರೇಟೆಡ್ ಟ್ರಾನ್ಸ್‌ಪೋರ್ಟ್ ಕಾರ್ಯನಿರ್ವಾಹಕ ನಿರ್ದೇಶಕ ಪವನ್ ಮುಲುಕುಟ್ಲಾ, ವಿವಿಧ ಸಂಘಟನೆಗಳ ಸದಸ್ಯರು ಪಾಲ್ಗೊಂಡಿದ್ದರು.

ಕಮಿಷನರ್ ಹೆಸರಿನಲ್ಲಿ ನಕಲಿ ಖಾತೆ: ವಸೂಲಿಗೆ ಯತ್ನ

ಬೆಂಗಳೂರು: ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರ ಹೆಸರಿನಲ್ಲಿ ಫೇಸ್‌ಬುಕ್‌ನಲ್ಲಿ ನಕಲಿ ಖಾತೆ ತೆರೆದು ಹಣ ವಸೂಲಿ ಯತ್ನ ನಡೆದಿದೆ.

‘ಸೈಬರ್ ಕಳ್ಳರು ಬಿ.ದಯಾನಂದ್ ಹೆಸರಿನಲ್ಲಿ ನಕಲಿ ಖಾತೆ ತೆರೆದು, ಅವರ ಆಪ್ತರು, ಪೊಲೀಸ್ ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ಸ್ನೇಹಿತರಾಗಲು ಕೋರಿಕೆ ಕಳುಹಿಸಿದ್ದಾರೆ. ಹಿಂದಿ ಭಾಷೆಯಲ್ಲಿ ಖಾತೆ ತೆರೆಯಲಾಗಿದ್ದು, ಕೋರಿಕೆ ಸ್ವೀಕರಿಸಬಾರದು. ವಂಚಕರು ವೈಯಕ್ತಿಕ ಮಾಹಿತಿ ಕದಿಯುವ ಅಥವಾ ಹಣಕ್ಕೆ ಬೇಡಿಕೆ ಇಡುವ ಸಾಧ್ಯತೆ ಇದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಈ ವಿಚಾರ ಸೈಬರ್ ಅಪರಾಧ ವಿಭಾಗದ ಪೊಲೀಸರ ಗಮನಕ್ಕೆ ಬರುತ್ತಿದ್ದಂತೆ ನಕಲಿ ಖಾತೆಯನ್ನು ನಿಷ್ಕ್ರಿಯ ಮಾಡಿ, ಆರೋಪಿ ಪತ್ತೆಗೆ ಶೋಧ ನಡೆಸುತ್ತಿದ್ದಾರೆ.

ಚಿತ್ರಾವಳಿ



ಪೆಟ್ರೋಲ್, ಡೀಸೆಲ್ ಮೇಲೆ ಅಬಕಾರಿ ಸುಂಕ ಹೆಚ್ಚಿಸಿರುವ ಕೇಂದ್ರ ಸರ್ಕಾರದ ಕ್ರಮ ಖಂಡಿಸಿ ಬ್ಯಾಟರಾಯನಪುರ ಕ್ಷೇತ್ರದ ಯುವ ಕಾಂಗ್ರೆಸ್ ಕಾರ್ಯಕರ್ತರು ಬಳ್ಳಾರಿ ಮುಖ್ಯರಸ್ತೆಯ ಎಸ್ಟೀಮ್ ಮಾಲ್ ಬಳಿ ಪ್ರತಿಭಟನೆ ನಡೆಸಿದರು



ಬಾಗಲಗುಂಟೆಯ ಸಾಯಿ ಕಲ್ಯಾಣ ಮಂಟಪದ ಬಳಿ ಬಿಜೆಪಿ ವತಿಯಿಂದ ಹಮ್ಮಿಕೊಂಡಿದ್ದ ‘ಭೀಮ ಹೆಜ್ಜೆ 100ರ ಸಂಭ್ರಮ’ ಜಾಗೃತಿ ಬೈಕ್ ರ್‍ಯಾಲಿಗೆ ಶಾಸಕ ಎಸ್. ಮುನಿರಾಜು ಚಾಲನೆ ನೀಡಿದರು



ನಾಲ್ಕು ವರ್ಷಗಳ ಸೇವಾವಧಿ ಪೂರ್ಣಗೊಳಿಸಿದ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಲಿಂಗರಾಜ ಗಾಂಧಿ ಅವರು ಬಿಸಿಯು ವಾಣಿಜ್ಯ ನಿಕಾಯದ ಹಿರಿಯ ಡೀನ್ ಪ್ರೊ.ಆರ್. ಜಲಜಾ ಅವರಿಗೆ ಅಧಿಕಾರ ಹಸ್ತಾಂತರಿಸಿದರು. ಕುಲಸಚಿವರಾದ ಟಿ.ಜವರೇಗೌಡ, ಪ್ರೊ.ಬಿ. ರಮೇಶ್ (ಮೌಲ್ಯಮಾಪನ) ಹಾಜರಿದ್ದರು.

ಅಸಭ್ಯವಾಗಿ ವರ್ತಿಸಿದ ವಿಡಿಯೊ ಹಂಚಿಕೊಂಡು ನೆಟ್ಟಿಗರ ಆಕ್ರೋಶ

ಮೆಟ್ರೊ ನಿಲ್ದಾಣದಲ್ಲಿ ಯುವಜೋಡಿ ಪ್ರಣಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುವ ಜೋಡಿಯೊಂದು ‘ನಮ್ಮ ಮೆಟ್ರೊ’ ಮೆಜೆಸ್ಟಿಕ್‌ನ ನಾಡಪ್ರಭು ಕೆಂಪೇಗೌಡ ನಿಲ್ದಾಣದಲ್ಲಿ ಅಸಭ್ಯವಾಗಿ ವರ್ತಿಸಿದ ವಿಡಿಯೊ ಹರಿದಾಡಿದೆ. ಬಹಳಷ್ಟು ಜನರು ಈ ವರ್ತನೆಯ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ಆಕ್ರೋಶ ವ್ಯಕ್ತಪಡಿಸುತ್ತಲೇ ವಿಡಿಯೊ ಹಂಚಿಕೊಂಡಿದ್ದಾರೆ.

ಮೆಜೆಸ್ಟಿಕ್ ನಿಲ್ದಾಣದ ಮೂರನೇ ಪ್ಲಾಟ್‌ಫಾರ್ಮ್‌ನಲ್ಲಿ ಮಾದಾವರ ಕಡೆಗೆ ತೆರಳುವ ರೈಲಿಗಾಗಿ ಕಾಯುತ್ತಿದ್ದ ಜೋಡಿ ಸಾರ್ವಜನಿಕ ಸ್ಥಳದಲ್ಲಿ ನಿಂತಿರುವುದನ್ನು ಮರೆತು ಪ್ರೀತಿಯ ಉನ್ಮಾದವನ್ನು ತೋರಿಸುತ್ತಿರುವುದನ್ನು ಯಾರೋ ಸಹ ಪ್ರಯಾಣಿಕರು ವಿಡಿಯೊ ಮಾಡಿದ್ದು, ಆ ವಿಡಿಯೊ ಹರಿದಾಡುತ್ತಿದೆ.



ಯುವತಿಯ ಬಟ್ಟೆಯ ಒಳಗೆ ಕೈಹಾಕಿ ಯುವಕ ನಿಂತಿರುವ, ಆಚೀಚೆ ಹೋಗುವಾಗಲೂ ದಾರದಲ್ಲಿ ಕಟ್ಟಿ ಹಾಕಿದಂತೆ ಅದೇ ಭಂಗಿಯಲ್ಲಿ ಚಲಿಸುತ್ತಿದ್ದ ಜೋಡಿ ಈ ವಿಡಿಯೊದಲ್ಲಿ ಕಾಣುತ್ತಿದ್ದು, ‘ಮಾದಾವರ ಕಡೆಗೆ’ ಎಂಬ ಫಲಕವೂ ಸ್ಪಷ್ಟವಾಗಿ ಗೋಚರಿಸುತ್ತದೆ.

ದೆಹಲಿಯಾಗುತ್ತಿದೆಯೇ ಬೆಂಗಳೂರು?: ದೆಹಲಿಯ ಮೆಟ್ರೊ ರೈಲಿನ ಒಳಗೆ ಯುವ ಜೋಡಿಯೊಂದು ಚುಂಬನದಲ್ಲಿ ಮುಳುಗಿದ್ದ ವಿಡಿಯೊ ವರ್ಷದ ಹಿಂದೆ ಹರಿದಾಡಿತ್ತು. ಆಗ ದೆಹಲಿ ಮೆಟ್ರೊವನ್ನು ‘ಪೋರ್ನ್ ಹಬ್’ ಮಾಡಿ ಎಂದು ನೆಟ್ಟಿಗರು ಆಕ್ರೋಶಭರಿತ ಸಲಹೆ ನೀಡಿದ್ದರು. ಇದೀಗ ಬೆಂಗಳೂರಿನ ನಮ್ಮ ಮೆಟ್ರೊದಲ್ಲಿ ಯುವತಿಯ ಖಾಸಗಿ ಅಂಗವನ್ನು ಸಾರ್ವಜನಿಕವಾಗಿಯೇ ಸ್ಪರ್ಶಿಸಿರುವುದನ್ನು ವಿರೋಧಿಸಿರುವ ನೆಟ್ಟಿಗರು ‘ಬೆಂಗಳೂರು ದೆಹಲಿಯಾಗುತ್ತಿದೆಯೇ’ ಎಂದು ಪ್ರಶ್ನಿಸಿದ್ದಾರೆ.

ಕಳವಳಕಾರಿ, ಆಘಾತಕಾರಿ, ಕೆಟ್ಟ ಬೆಳವಣಿಗೆ. ನಾಚಿಕೆ, ಸಭ್ಯತೆಯ ಕೊರತೆಯ ನಡವಳಿಕೆ ಇದು. ಮಹಿಳೆಯರು, ಮಕ್ಕಳು ಸೇರಿದಂತೆ ಸಾರ್ವಜನಿಕರು ಇರುವ ಸ್ಥಳಗಳಲ್ಲಿ ಅವರನ್ನು ಪರಿಗಣನೆಗೆ ತೆಗೆದುಕೊಳ್ಳದೇ ವರ್ತಿಸುವುದು ಸಾರ್ವಜನಿಕರಿಗೆ ತೋರುವ ಅಗೌರವ ಎಂದು ಕಿಡಿಕಾರಿದ್ದಾರೆ.

‘ಇದೇನಾ ಸಂಸ್ಕೃತಿ?, ಇದೇನಾ ಸಭ್ಯತೆ?’ ಎಂದು ಕೇಳುತ್ತಲೇ ಆ 1 ನಿಮಿಷ 25 ಸೆಕೆಂಡ್ಸ್ ವಿಡಿಯೊವನ್ನು ಮಸುಕುಗೊಳಿಸದೇ ಹಂಚಿಕೊಂಡಿದ್ದಾರೆ. ‘ನೀವು ಹಂಚಿಕೊಳ್ಳುವ ಮೊದಲು ಬ್ಲರ್ ಮಾಡಬೇಕಿತ್ತು’ ಎಂದು ಕೆಲವರು ಪ್ರತಿಕ್ರಿಯೆ ಹಾಕಿದ್ದಾರೆ. ‘ಅಲ್ಲೇ ಬುದ್ಧಿ ಹೇಳಲು ಧೈರ್ಯ ಇಲ್ಲದವರು. ವಿಡಿಯೊ ಮಾಡಿ ವಿಕೃತ ಆನಂದ ಅನುಭವಿಸುವವರು’ ಎಂದು ವಿಡಿಯೊ ಚಿತ್ರೀಕರಿಸಿದವರ ವಿರುದ್ಧವೂ ಕೆಲವರು ಹರಿಹಾಯ್ದಿದ್ದಾರೆ.

‘ಉತ್ತರ ಭಾರತದಿಂದ ಬಂದವರ ಇಂಥ ಕೆಟ್ಟ ವರ್ತನೆಗಳೇ ಅವರ ಮೇಲೆ ನಮಗೆ ಸಿಟ್ಟು ಬರಿಸುವುದು’ ಎಂದು ಇನ್ನು ಕೆಲವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

‘ಮೆಟ್ರೊದಲ್ಲಿ ಅಸಭ್ಯವಾಗಿ ವರ್ತಿಸುವಂತಿಲ್ಲ. ಸಾರ್ವಜನಿಕರು ಮುಜುಗರಪಡುವಂತೆ ಮಾಡಬಾರದು. ಇದು ಯಾವಾಗ ನಡೆದಿರುವುದು ಎಂದು ನಮ್ಮ ಸಿಬ್ಬಂದಿ ಪತ್ತೆಹಚ್ಚುತ್ತಿದ್ದಾರೆ. ಆದರೆ, ಇವರು ಯಾರು ಎಂಬುದನ್ನು ಪತ್ತೆಹಚ್ಚುವುದು ಕಷ್ಟ. ಹೊರಗೆ ಹೋಗುವ ಮೊದಲೇ ಹಿಡಿದಿದ್ದರೆ ದಂಡ ವಿಧಿಸಿ, ಹೆತ್ತವರನ್ನು ಕರೆಸಿ ಮಾಹಿತಿ ನೀಡಿ ಕಳುಹಿಸಬಹುದಿತ್ತು’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ನಿಧನ ವಾರ್ತೆ

ಸೌಮ್ಯ ನಾಯಕಿ



ಬೆಂಗಳೂರು: ಮೈಸೂರು ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ನಿವೃತ್ತ ಪ್ರಾಧ್ಯಾಪಕಿ ಎನ್. ಉಷಾರಾಣಿ ಅವರ ತಾಯಿ ಬಿ.ಎ. ಸೌಮ್ಯ ನಾಯಕಿ (93) ಅವರು ಶುಕ್ರವಾರ ಸಂಜೆ ನಿಧನರಾದರು.

ವಯೋಸಹಜ ಅನಾರೋಗ್ಯದಿಂದ ಅವರು ಬಳಲುತ್ತಿದ್ದರು.

ಅವರಿಗೆ ಪುತ್ರಿಯರಾದ ಎನ್. ನಾಗರತ್ನ, ಎನ್. ಉಷಾರಾಣಿ ಇದ್ದಾರೆ.

ಅಂತ್ಯಕ್ರಿಯೆ ನಗರದಲ್ಲಿ ಶನಿವಾರ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಪ್ರತಿ ವಹಿವಾಟಿನ ಮೇಲೆ ಶೇ 2ರವರೆಗೆ ಶುಲ್ಕ ಸಂಗ್ರಹ • ಸಚಿವ ಸಂಪುಟ ಒಪ್ಪಿಗೆ

‘ಗಿಗ್ ಸಾಮಾಜಿಕ ಭದ್ರತೆ ಮಸೂದೆ’ಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಪ್ಲಾಟ್ ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕಲ್ಯಾಣ ಮಸೂದೆ’ಗೆ ಶುಕ್ರವಾರ ನಡೆದ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದ್ದು, ಸುಗ್ರೀವಾಜ್ಞೆ ಮೂಲಕ ಜಾರಿಗೊಳಿಸುವುದಾಗಿ ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದ ಅವರು, ಭವಿಷ್ಯ ನಿಧಿ, ಅಪಘಾತ ಸೌಲಭ್ಯ, ವಸತಿ, ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯ, ಕಾರ್ಮಿಕ ಕೌಶಲಾಭಿವೃದ್ಧಿ, ಅಂತ್ಯಸಂಸ್ಕಾರ ಧನ ಸಹಾಯ ನೀಡಲಾಗುವುದು. ಇದಕ್ಕಾಗಿ ಪ್ರತಿ ವಹಿವಾಟಿನ ಮೇಲೆ ಶೇ 1ರಿಂದ ಶೇ 2 ಮೀರದಂತೆ ಕ್ಷೇಮಾಭಿವೃದ್ಧಿ ಶುಲ್ಕ ಸಂಗ್ರಹಿಸಲಾಗುವುದು ಎಂದರು.

ಪ್ಲಾಟ್ ಫಾರ್ಮ್ ಆಧಾರಿತ ಸೇವೆ ಗಳಾದ ಸ್ವಿಗ್ಗಿ, ಜೊಮಾಟೊಗಳಲ್ಲಿ ಫುಡ್ ಡೆಲಿವರಿ ಮಾಡುವ, ರೈಡ್ ಶೇರಿಂಗ್ ಸೇವೆಗಳಾದ ಓಲಾ, ಉಬರ್ ಮತ್ತು ನಮ್ಮ ಯಾತ್ರಿ ಇತ್ಯಾದಿ ಅಪ್ಲಿಕೇಷನ್ ಆಧಾರಿತ ಚಾಲಕರು, ಇ-ಕಾಮರ್ಸ್ ಸಂಸ್ಥೆಗಳಾದ ಅಮೆಜಾನ್, ಫ್ಲಿಪ್ ಕಾರ್ಟ್, ಬಿಗ್ ಬಾಸ್ಕೆಟ್ ಮತ್ತಿತರ ಕ್ಷೇತ್ರಗಳಲ್ಲಿ ಪೂರ್ಣಕಾಲಿಕ ಅಥವಾ ಅರೆಕಾಲಿಕ ಡೆಲಿವರಿ ನೌಕರರಾಗಿ ಕಾರ್ಯ ನಿರ್ವಹಿಸುತ್ತಿರುವ ಕಾರ್ಮಿಕರು, ಕಾರ್ಮಿಕ ಕಾನೂನುಗಳಡಿ ಲಭ್ಯವಿರುವ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಪಡೆಯಲಿದ್ದಾರೆ ಎಂದು ಪಾಟೀಲ ತಿಳಿಸಿದರು.



ಗಿಗ್ ಕಾರ್ಮಿಕರು ಸರಕು ಸೇವೆಗಳನ್ನು ನಿಗದಿತ ಸಮಯಕ್ಕೆ ಸರಿಯಾಗಿ ಸೂಚಿಸಿದ ಸ್ಥಳಗಳಿಗೆ ವಾಹನಗಳಲ್ಲಿ ತೆರಳಿ ವಿತರಿಸುತ್ತಾರೆ. ಅಂತಹ ಸಂದರ್ಭಗಳಲ್ಲಿ ಅಪಘಾತಕ್ಕೆ ಒಳಗಾಗಬಹುದು. ಅಪಘಾತದಿಂದ ಮರಣ, ಶಾಶ್ವತ ಅಂಗವೈಕಲ್ಯ ಹೊಂದಿದರೆ ಅವರು ಮತ್ತು ಅವರ ಅವಲಂಬಿತರು ಆರ್ಥಿಕ ಸಂಕಷ್ಟಕ್ಕೆ ಒಳಗಾಗುತ್ತಾರೆ. ಅಂತಹ ಸಂದರ್ಭದಲ್ಲಿ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕರು ಹಾಗೂ ಅವರ ಕುಟುಂಬದವರಿಗೆ ಸಾಮಾಜಿಕ ಭದ್ರತೆ ಒದಗಿಸುವುದು ಸರ್ಕಾರದ ಹೊಣೆಗಾರಿಕೆ ಎಂದು ಹೇಳಿದರು.

ದೇಶದ ದುಡಿಯುವ ವರ್ಗದಲ್ಲಿ ಶೇ 83ಕ್ಕೂ ಹೆಚ್ಚು ಕಾರ್ಮಿಕರು ಅಸಂಘಟಿತವಲಯದಲ್ಲಿ ಇರುವುದಾಗಿ ಅಂದಾಜಿಸಲಾಗಿದೆ. ಅವರು ಶಾಸನಬದ್ಧ ಸೌಲಭ್ಯಗಳಿಂದವಂಚಿತರಾಗದಂತೆ ಇವರ ಜೀವನ ಮಟ್ಟವನ್ನು ಉತ್ತಮಪಡಿಸಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಕಲ್ಪಿಸಲು ಕಾಯ್ದೆ ಅಗತ್ಯವಿದೆ. ರಾಜ್ಯದಲ್ಲಿ 2.30 ಲಕ್ಷ ಗಿಗ್ ಕಾರ್ಮಿಕರಿದ್ದಾರೆ ಎಂದರು.

ಕಲ್ಯಾಣ ಮಂಡಳಿ ರಚನೆ: ನಿಧಿ ಸಂಗ್ರಹಣೆ, ನಿರ್ವಹಣೆ ಹಾಗೂ ಫಲಾನುಭವಿಗಳಿಗೆ ಮತ್ತು ಅವರ ಅವಲಂಬಿತರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳ ‘ಕರ್ನಾಟಕ ಪ್ಲಾಟ್‌ಫಾರ್ಮ್ ಆಧಾರಿತ ಗಿಗ್ ಕಾರ್ಮಿಕ ಕಲ್ಯಾಣ ಮಂಡಳಿ’ ಸ್ಥಾಪಿಸಲಾಗುವುದು ಎಂದು ಪಾಟೀಲ ತಿಳಿಸಿದರು.

ಅಲ್ಲದೇ, ಗಿಗ್ ಕಾರ್ಮಿಕರು ಅಪಘಾತದಿಂದ ಮರಣ ಹೊಂದಿದರೆ ಅಪಘಾತ ಪರಿಹಾರ ಮತ್ತು ಜೀವ ವಿಮೆ ಸೇರಿ ₹4ಲಕ್ಷಗಳು ಮತ್ತು ಜೀವ ವಿಮೆ ₹2 ಲಕ್ಷಗಳನ್ನು ಒದಗಿಸಲು ಕರ್ನಾಟಕ ರಾಜ್ಯ ಗಿಗ್ ವಿಮಾ ಯೋಜನೆ ಎಂಬ ಹೊಸ ಯೋಜನೆಯನ್ನೂ ರೂಪಿಸಿದೆ. ಇದರ ಅನುಷ್ಠಾನಕ್ಕೆ ₹1 ಕೋಟಿ ಅನುದಾನ ಒದಗಿಸಿದೆ ಎಂದರು.

ಪ್ರಮುಖ ತೀರ್ಮಾನಗಳು

- 38 ತಾಲ್ಲೂಕು ಆಸ್ಪತ್ರೆ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ಶಂಕಿತ ಕ್ಷಯರೋಗಿಗಳು ಭೇಟಿ ನೀಡುವ 121 ಸಮುದಾಯ ಆರೋಗ್ಯ ಕೇಂದ್ರಗಳಿಗೆ ₹14.24 ಕೋಟಿ ವೆಚ್ಚದಲ್ಲಿ 159 ಟ್ರೂ ನಾಟ್ ಯಂತ್ರಗಳನ್ನು ಖರೀದಿಸಲು ಒಪ್ಪಿಗೆ
- ಚಿಕ್ಕಮಗಳೂರು ಜಿಲ್ಲೆ ಶ್ರೀಗುರು ದತ್ತಾತ್ರೇಯ ಬಾಬಾ ಬುಡನ್ ಸ್ವಾಮಿ ದರ್ಗಾಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ನಲ್ಲಿ ದಾಖಲಾಗಿರುವ ಎಸ್‌ಎಲ್‌ಪಿ ದಾವೆ ಪ್ರಕರಣದಲ್ಲಿ ಸಚಿವ ಸಂಪುಟ ಉಪಸಮಿತಿ ಶಿಫಾರಸುಗಳನ್ನು ಒಳಗೊಂಡಂತೆ ಲಿಖಿತ ಆಕ್ಷೇಪಣಾ ಹೇಳಿಕೆಗಳನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಕ್ರಮಕ್ಕೆ ಘಟನೋತ್ತರ ಅನುಮೋದನೆ
- ಸಾರಿಗೆ ಇಲಾಖೆ 4,000 ಹೊಸ ಎಲೆಕ್ಟ್ರಿಕ್ ಬಸ್‌ಗಳನ್ನು ವಿಶ್ವಬ್ಯಾಂಕ್‌ನಿಂದ ಕಡಿಮೆ ಬಡ್ಡಿದರದಲ್ಲಿ ಖರೀದಿಸಲು ಸಾಲ ಪಡೆಯಲು ಘಟನೋತ್ತರ ಅನುಮೋದನೆ
- ಇಎಸ್‌ಐ ಆಸ್ಪತ್ರೆಗಳಿಗೆ ₹64 ಕೋಟಿ ವೆಚ್ಚದಲ್ಲಿ ಪರಿಕರಗಳ ಖರೀದಿಗೆ ಆಡಳಿತಾತ್ಮಕ ಅನುಮೋದನೆ
- ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರು ಹಾಗೂ ಸದಸ್ಯರು ವೇತನ ಪರಿಷ್ಕರಣೆಗಳಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ ಮತ್ತು ಕರ್ನಾಟಕ ಮಾಹಿತಿ ಆಯೋಗದಂತಹ ಇತರ ಶಾಸನಬದ್ಧ ಸಂಸ್ಥೆಗಳ ವೇತನ ಪರಿಷ್ಕರಣೆಯಲ್ಲಿ ಏಕರೂಪತೆಯನ್ನು ಕಾಪಾಡಿಕೊಳ್ಳಲು ಕರ್ನಾಟಕ ಲೋಕಸೇವಾ ಆಯೋಗ (ಸೇವಾ ಷರತ್ತುಗಳು) ನಿಯಮಗಳು, 1957ರ ನಿಯಮ-4 ಕ್ಕೆ ತಿದ್ದುಪಡಿಗೆ ಒಪ್ಪಿಗೆ
- ಮಾಜಿ ಸಂಸದ ನಳಿನ್‌ಕುಮಾರ ಕಟೀಲ್ ಅವರಿಗೆ ಬಿಡಿಎ ವತಿಯಿಂದ ಜಿ ಕೆಟಗರಿ ನಿವೇಶನ ಮಂಜೂರು ಮಾಡಿರುವ ವಿಷಯವನ್ನು ತಾಂತ್ರಿಕ ಕಾರಣಗಳಿಂದಾಗಿ ಮುಂದೂಡಲಾಗಿದೆ



ಕಂಸಾಳೆ ನೃತ್ಯ

ಸುರಿತ ಆರ್ಟ್ ಕಲೆಕ್ಟಿವ್ ಇಂಡಿಯಾ ಮತ್ತು ಬಿಐಸಿ ಸಹಯೋಗದಲ್ಲಿ ಶುಕ್ರವಾರ ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ(ಬಿಐಸಿ)ದಲ್ಲಿ ಕಂಸಾಳೆ ನೃತ್ಯವನ್ನು ಕಲಾವಿದರು ಪ್ರದರ್ಶಿಸಿದರು ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ತೀರ್ಪು ಕಾಯ್ದಿರಿಸಿದ ‘ಸುಪ್ರೀಂ’

ಪ್ರಜಾವಾಣಿ ವಾರ್ತೆ



ಯಡಿಯೂರಪ್ಪ

ಬಿಎಸ್‌ವೈ ಪ್ರಕರಣ

ನವದೆಹಲಿ: ತಮ್ಮ ವಿರುದ್ಧದ ಭ್ರಷ್ಟಾಚಾರ ಪ್ರಕರಣದ ಮರು ಪರಿಶೀಲನೆಯ ಆದೇಶ ಪ್ರಶ್ನಿಸಿ ಬಿಜೆಪಿಯ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಸಲ್ಲಿಸಿದ್ದ ಮೇಲ್ಮನವಿ ಅರ್ಜಿಯ ತೀರ್ಪನ್ನು ಸುಪ್ರೀಂ ಕೋರ್ಟ್ ಕಾಯ್ದಿರಿಸಿದೆ.

ಯಡಿಯೂರಪ್ಪ ವಿರುದ್ಧ ತಾವು ನೀಡಿರುವ ದೂರನ್ನು ಮರು ಪರಿಶೀಲಿಸುವಂತೆ ಬೆಂಗಳೂರಿನ ಉದ್ಯಮಿ ಎ.ಆಲಂ ಪಾಷಾ ಸಲ್ಲಿಸಿದ್ದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ 2021ರ ಜನವರಿ 5ರಂದು ಮಾನ್ಯ ಮಾಡಿತ್ತು. ಇದನ್ನು ಪ್ರಶ್ನಿಸಿ ಯಡಿಯೂರಪ್ಪ ಅವರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು. ಆದರೆ, ಭ್ರಷ್ಟಾಚಾರ ಪ್ರಕರಣದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ವಿ.ಪಿ.ಬಳಿಗಾರ್ ವಿರುದ್ಧ ವಿಚಾರಣೆಗೆ ನ್ಯಾಯಾಲಯ ಅನುಮತಿ ನೀಡಿರಲಿಲ್ಲ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠ ಏಪ್ರಿಲ್ 4ರಂದು ವಿಚಾರಣೆ ಪೂರ್ಣಗೊಳಿಸಿತು. ಸಿಆರ್‌ಪಿಸಿ ಸೆಕ್ಷನ್ 156 (3) ಅಡಿಯಲ್ಲಿ ಪ್ರಕರಣದ ತನಿಖೆ ನಡೆದಿದೆಯೇ ಮತ್ತು ಈಗಲೂ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಸೆಕ್ಷನ್ 17 ಎ ಅನುಸಾರ ಸೂಕ್ತ ಸರ್ಕಾರಿ ಪ್ರಾಧಿಕಾರಗಳಿಂದ ಪೂರ್ವಾನುಮತಿಯ ಅಗತ್ಯವಿದೆಯೇ ಎಂಬ ಹಲವು ಕಾನೂನಾತ್ಮಕ ಪ್ರಶ್ನೆಗಳನ್ನು ನ್ಯಾಯಪೀಠ ಕೇಳಿದೆ.

ದೂರುದಾರರು ಸಲ್ಲಿಸಿದ್ದ ಹಿಂದಿನ ದೂರನ್ನು ಪೂರ್ವಾನುಮತಿ ಇಲ್ಲದ ಕಾರಣಕ್ಕೆ ರದ್ದುಗೊಳಿಸಿದ್ದನ್ನು ಪ್ರಸ್ತಾಪಿಸಿದ ನ್ಯಾಯಪೀಠ ‘ಆರೋಪಿಯು ತನ್ನ ಸ್ಥಾನದಿಂದ ಕೆಳಗಿಳಿದ ನಂತರ ಹೊಸ ದೂರು ದಾಖಲಿಸುವುದಕ್ಕೆ ಅಡ್ಡಿಯಾಗುವುದಿಲ್ಲ’ ಎಂದು ಸ್ಪಷ್ಟಪಡಿಸಿತು.

ಸಿಆರ್‌ಪಿಸಿಯ ಸೆಕ್ಷನ್ 156 (3) ದೂರಿಗೆ ಸಂಬಂಧಿಸಿದಂತೆ ಪೊಲೀಸ್ ತನಿಖೆಗೆ ಆದೇಶಿಸಲು ನ್ಯಾಯಾಂಗವು ಮ್ಯಾಜಿಸ್ಟ್ರೇಟ್‌ಗೆ ಅನುಮತಿ ನೀಡುತ್ತದೆ. ಇದು ಪ್ರಾಥಮಿಕ ತನಿಖೆಯ ಆದೇಶ ಅಥವಾ ಎಫ್‌ಐಆರ್ ನೋಂದಣಿ ಕೂಡ ಆಗಿರಬಹುದು.

ಭ್ರಷ್ಟಾಚಾರ ನಿಗ್ರಹ ಕಾಯ್ದೆಯ ಸೆಕ್ಷನ್ 17ಎ ಪ್ರಕಾರ, ‘ಈ ಕಾಯ್ದೆಯಡಿ ಜನಪ್ರತಿನಿಧಿಗಳು ಸಾರ್ವಜನಿಕ ಸೇವೆ/ಕರ್ತವ್ಯದಲ್ಲಿದ್ದ ಸಂದರ್ಭದಲ್ಲಿ ಮಾಡಿರುವ ಯಾವುದೇ ಶಿಫಾರಸುಗಳು ಮತ್ತು ನಿರ್ಧಾರಗಳ ಕುರಿತ ಆರೋಪಗಳ ಮೇಲೆ ತನಿಖೆ ಅಥವಾ ವಿಚಾರಣೆ ಮಾಡುವ ಮೊದಲು ಪೊಲೀಸ್ ಅಧಿಕಾರಿಗಳು ಪೂರ್ವಾನುಮತಿ ಪಡೆಯುವುದು ಕಡ್ಡಾಯ’.

ದೇವನಹಳ್ಳಿಯಲ್ಲಿ 2011ರಲ್ಲಿ 26 ಎಕರೆ ಡಿನೋಟಿಫಿಕೇಷನ್ ಮಾಡಿ ಅಕ್ರಮ ನಡೆಸಲಾಗಿದೆ ಎಂದು ಆರೋಪಿಸಿ ಆಲಂ ಪಾಷಾ ದೂರು ನೀಡಿದ್ದರು. ಯಡಿಯೂರಪ್ಪ, ಮಾಜಿ ಕೈಗಾರಿಕಾ ಸಚಿವ ಮುರುಗೇಶ ಆರ್. ನಿರಾಣಿ ಮತ್ತು ಕರ್ನಾಟಕ ಉದ್ಯೋಗ ಮಿತ್ರದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಶಿವಸ್ವಾಮಿ ಕೆ.ಎಸ್. ವಿರುದ್ಧ ಭ್ರಷ್ಟಾಚಾರದ ಆರೋಪಗಳನ್ನು ಮಾಡಿದ್ದರು.

‘ಅಂಬೇಡ್ಕರ್ ಮರೆತ ಕಾಂಗ್ರೆಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾತ್ಮಗಾಂಧಿ ಅವರು ಬೆಳಗಾವಿಗೆ ಬಂದು ಹೋದ ನೆನಪಿಗೆ 'ಶತಮಾನ ಸಂಭ್ರಮ' ಆಚರಿಸಿದ ರಾಜ್ಯ ಸರ್ಕಾರ ಹಾಗೂ ಕಾಂಗ್ರೆಸ್ ಪಕ್ಷ, ಬೆಳಗಾವಿಯ ನಿಪ್ಪಾಣಿಗೆ ಬಂದು ಹೋಗಿದ್ದ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರ ನೆನಪಿಗೆ ಏಕೆ ಸಂಭ್ರಮಾಚರಣೆ ಆಯೋಜಿಸಲಿಲ್ಲ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಪ್ರಶ್ನಿಸಿದರು.

‘ಭೀಮ ಹೆಜ್ಜೆ’ ಶತಮಾನ ಸಂಭ್ರಮ ಕಾರ್ಯಕ್ರಮಕ್ಕೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದ ಅವರು, ಕಾಂಗ್ರೆಸ್ ಹೆಜ್ಜೆ ಹೆಜ್ಜೆಗೂ ಸಂವಿಧಾನ ಶಿಲ್ಪಿ ಅಂಬೇಡ್ಕರ್ ಅವರನ್ನು ಅವಮಾನಿಸುತ್ತಲೇ ಬಂದಿತ್ತು. ಅಂಬೇಡ್ಕರ್ ಅವರ ಆಯ್ಕೆಯನ್ನು ಅನೂರ್ಜಿತಗೊಳಿಸಲೆಂದೇ ಕಾಂಗ್ರೆಸ್‌ಅಂದು, ಅಂಬೇಡ್ಕರ್‌ಗೆದ್ದಂತಹ ಜೈಸೂರು, ಕುಲ್ನಾ, ಹರೀದ್ಪುರ ಪ್ರದೇಶಗಳ ಕ್ಷೇತ್ರಗಳನ್ನು ಪಾಕಿಸ್ತಾನಕ್ಕೆ ಬಿಟ್ಟುಕೊಟ್ಟಿತು. ಈಗ ದಲಿತರ ವೋಟ್ ಬ್ಯಾಂಕ್‌ಗಾಗಿ ಮೊಸಳೆ ಕಣ್ಣೀರಿಡುತ್ತಿದ್ದಾರೆ ಎಂದು ದೂರಿದರು.

ದಲಿತ ನಾಯಕ ಖರ್ಗೆಗೆ ಅವಮಾನ: ‘ಗುಜರಾತ್‌ನಲ್ಲಿ ಈಚೆಗೆ ನಡೆದ ಎಐಸಿಸಿ ಸಮಾವೇಶದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅವಮಾನ ಮಾಡಲಾಗಿದೆ. ಮುಖ್ಯ ಭೂಮಿಕೆಯಲ್ಲಿ ಕುರ್ಚಿ ಕೊಡದೆ, ಎಲ್ಲೋ ಒಂದು ಬದಿಗೆ ಸೋಫಾ ಮೇಲೆ ಕುಳ್ಳಿರಿಸಿದ್ದರು. ಇದು ಕಾಂಗ್ರೆಸ್‌ನ ದಲಿತ ವಿರೋಧಿ ಮನಸ್ಥಿತಿ’ ಎಂದರು.

ಐದು ದಿನ ‘ಭೀಮ ಹೆಜ್ಜೆ’: 1925ರಲ್ಲಿ ಬೆಳಗಾವಿ ಜಿಲ್ಲೆಯ ನಿಪ್ಪಾಣಿಯಲ್ಲಿ ಏ.10, 11ರಂದು ನಡೆದಿದ್ದ ಹಿತಕಾರಿಣಿ ಸಭಾದ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ಈ ಐತಿಹಾಸಿಕ ದಿನದ ನೆನಪಾಗಿ ಬಿಜೆಪಿ ‘ಭೀಮ ಹೆಜ್ಜೆ’ ಶತಮಾನದ ಸಂಭ್ರಮ ಹಮ್ಮಿಕೊಂಡಿದೆ. 15ರಂದು ನಿಪ್ಪಾಣಿಯಲ್ಲಿ ಸಮಾರೋಪ ನಡೆಯಲಿದೆ. ಬೆಂಗಳೂರಿನಿಂದ ನಿಪ್ಪಾಣಿವರೆಗೆ ಬೈಕ್ ಜಾಥಾ ನಡೆಸಲಾಗುತ್ತಿದೆ ಎಂದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಸಂಸದ ಗೋವಿಂದ ಕಾರಜೋಳ ಉಪಸ್ಥಿತರಿದ್ದರು.



ಬಿಜೆಪಿ ಹಮ್ಮಿಕೊಂಡಿದ್ದ ‘ಭೀಮ ಹೆಜ್ಜೆ’ ಶತಮಾನದ ಸಂಭ್ರಮ ಯಾತ್ರೆಗೆ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಶುಕ್ರವಾರ ಚಾಲನೆ ನೀಡಿದರು.



ನಗರದಲ್ಲಿ 'ಜ್ಯುವೆಲ್ಸ್ ಆಫ್ ಇಂಡಿಯಾ' ಆಯೋಜಿಸಿರುವ ಆಭರಣಗಳ ಪ್ರದರ್ಶನ ಮೇಳವನ್ನು ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ನಟಿ ಹಿತಾ ಚಂದ್ರಶೇಖರ್ ಉದ್ಘಾಟಿಸಿದರು. ವಿಕ್ರಮ್ ಮೆಹ್ತಾ, ಹೇಮಂತ್ ಜೈನ್, ವಿಜಯ್ ಕುಮಾರ್, ರಮೇಶ್ ಕುಮಾರ್, ಸಂಜಯ್ ಕುಮಾರ್, ಅಜಯ್ ಜೈನ್, ಆನಂತ ಕುಮಾರ್, ವಿಕಾಸ್ ಕುಮಾರ್, ನಮನಾ ಉಪಸ್ಥಿತರಿದ್ದರು

ಆಭರಣ ಪ್ರದರ್ಶನ ಮೇಳಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಷ್ಠಿತ ಮತ್ತು ಅತ್ಯಂತ ಹಳೆಯ ಆಭರಣ ಪ್ರದರ್ಶನ ಮೇಳ 'ಜ್ಯುವೆಲ್ಸ್ ಆಫ್ ಇಂಡಿಯಾ‘ಕ್ಕೆ ಶುಕ್ರವಾರ ರೇಸ್ ಕೋರ್ಸ್ ರಸ್ತೆಯಲ್ಲಿರುವ ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ಅದ್ದೂರಿ ಚಾಲನೆ ನೀಡಲಾಯಿತು.

ಮದುವೆ ಸಮಾರಂಭ ಮತ್ತು ಅಕ್ಷಯ ತೃತೀಯದ ಪ್ರಯುಕ್ತ ಆಯೋಜಿಸಿರುವ ಮೇಳ ಏಪ್ರಿಲ್ 13ರವರೆಗೆ ನಡೆಯಲಿದೆ. ದೇಶದ 40 ಅತ್ಯುತ್ತಮ ಆಭರಣ ತಯಾರಕರು ಭಾಗವಹಿಸಿದ್ದು, ಗ್ರಾಹಕರ ಇಚ್ಛೆಗೆ ಪೂರಕವಾದ ಹಾಗೂ ಉತ್ತಮ ಶ್ರೇಣಿಯ ಆಭರಣಗಳನ್ನು ಪ್ರದರ್ಶನಕ್ಕಿಡಲಾಗಿದೆ.

ಜ್ಯುವೆಲ್ಸ್ ಆಫ್ ಇಂಡಿಯಾ ವ್ಯವಸ್ಥಾಪಕ ವಿಕ್ರಮ್ ಮೆಹ್ತಾ ಮಾತನಾಡಿ, ‘ದೇಶದ ಅತ್ಯುತ್ತಮ ಆಭರಣ ವ್ಯಾಪಾರಿಗಳು ವಿಶೇಷ ಸಂಗ್ರಹಗಳೊಂದಿಗೆ ಪ್ರದರ್ಶನದಲ್ಲಿ ಭಾಗವಹಿಸಿದ್ದಾರೆ. ಗ್ರಾಹಕರು ಸದುಪಯೋಗ ಪಡಿಸಿಕೊಳ್ಳಬೇಕು’ ಎಂದರು.

ಖನಿಜ ಅನ್ವೇಷಣೆಗೆ ಅರಣ್ಯ ಪ್ರದೇಶ ಕೊಟ್ಟಿಲ್ಲ’

ಪ್ರಜಾವಾಣಿ ವಾರ್ತೆ

ಬಳ್ಳಾರಿ: ‘ಅದಿರು ಅನ್ವೇಷಿಸಲು ಕುದುರೆಮುಖ ಕಬ್ಬಿಣದ ಅದಿರು ಕಂಪನಿಗೆ (ಕೆಐಒಸಿಎಲ್) ಅರಣ್ಯ ಪ್ರದೇಶವನ್ನು ಕೊಟ್ಟಿಲ್ಲ. ಈಗಾಗಲೇ ಗಣಿಗಾರಿಕೆ ನಡೆದಿರುವ (ಬ್ರೋಕನ್ ಲ್ಯಾಂಡ್) ಜಾಗದಲ್ಲಿ ಅನ್ವೇಷಣೆ ನಡೆದಿದ್ದು, ಅದಕ್ಕೆ ಅನುಮತಿ ನೀಡಲಾಗಿದೆ. ಅನ್ವೇಷಣೆ ನಡೆಯುತ್ತಿರುವ ಸಂಪೂರ್ಣ ಜಾಗ ‘ಸಿ’ ವರ್ಗದ ಗಣಿಯ (ಗಡಿಗಿ ಮಿನರಲ್ಸ್) ಬ್ರೋಕನ್ ಲ್ಯಾಂಡ್ ಆಗಿದೆ’ ಎಂದು ಬಳ್ಳಾರಿ ಉಪ ಅರಣ್ಯ ಸಂರಕ್ಷಣಾಧಿಕಾರಿ (ಡಿಸಿಎಫ್) ಸಂದೀಪ್ ಸೂರ್ಯವಂಶಿ ತಿಳಿಸಿದ್ದಾರೆ.

‘ಅದಿರು ಅನ್ವೇಷಣೆಗೆ ಇಲ್ಲಿ ಕೆಐಒಸಿಎಲ್ ಏಜೆನ್ಸಿ ಮಾತ್ರ ಇದೆ. ಅದಿರು ಅನ್ವೇಷಣೆ ಮಾಡಲು ಕೆಐಒಸಿಎಲ್‌ಗೆ ಅನುಮತಿ ಕೊಟ್ಟ ಮಾತ್ರಕ್ಕೆ ಅದು ಗಣಿಗಾರಿಕೆಗೆ ಅನುಮತಿ ಕೊಟ್ಟಂತೆಯೂ ಅಲ್ಲ. ನಿಗದಿತ ಸ್ಥಳದಲ್ಲಿ ಅದಿರಿನ ನಿಕ್ಷೇಪ ಇದೆಯೇ, ಇಲ್ಲವೇ ಎಂಬುದನ್ನು ಏಜೆನ್ಸಿ ಪತ್ತೆ ಮಾಡಿ ಗಣಿ ಮತ್ತು ಭೂವಿಜ್ಞಾನ ಇಲಾಖೆಗೆ ವರದಿ ಸಲ್ಲಿಸುತ್ತದೆ. ಒಂದು ವೇಳೆ ಅದಿರು ದಾಸ್ತಾನು ಇದ್ದರೆ, ಗಣಿ ಇಲಾಖೆಯು ಬ್ಲಾಕ್ ರಚಿಸಿ, ಅದನ್ನು ಹರಾಜಿಗಿಡುತ್ತದೆ. ಗಣಿ ಅನುಮತಿ ನೀಡುವುದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಕೆಲಸ’ ಎಂದು ಅವರು ಹೇಳಿದ್ದಾರೆ.

ಬ್ಯಾಟಿಂಗ್ ಪಿಚ್ ಬೇಕಿತ್ತು: ದಿನೇಶ್

ಬೆಂಗಳೂರು: ‘ನಾವು ಮೊದಲೆರಡೂ ಪಂದ್ಯಗಳಿಗೆ ಬ್ಯಾಟಿಂಗ್ ಸ್ನೇಹಿ ಪಿಚ್ ಸಿದ್ಧಪಡಿಸಲು ಕೇಳಿದ್ದೆವು. ಆದರೆ ಬ್ಯಾಟಿಂಗ್ ಮಾಡಲು ಕಠಿಣ ಸವಾಲೊಡ್ಡುವಂತಹ ಅಂಕಣ ಸಿದ್ಧಪಡಿಸಿದ್ದಾರೆ. ಇದರಿಂದಾಗಿ ತವರಿನಂಗಳದ ಲಾಭ ಸಂಪೂರ್ಣವಾಗಿ ಸಿಗಲಿಲ್ಲ’–



ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಆರ್‌ಸಿಬಿ ತಂಡದ ಮೆಂಟರ್ ದಿನೇಶ್ ಕಾರ್ತಿಕ್ ಅವರು ಹೇಳಿದ ಮಾತುಗಳಿವು. ಈ ಪಂದ್ಯದಲ್ಲಿ ಆರ್‌ಸಿಬಿ ತಂಡವು ಡೆಲ್ಲಿ ಕ್ಯಾಪಿಟಲ್ಸ್ ಎದುರು 6 ವಿಕೆಟ್‌ಗಳಿಂದ ಸೋತಿತು. ತವರಿನಂಗಳದಲ್ಲಿ ಆರ್‌ಸಿಬಿ ಸೋತ ಎರಡನೇ ಪಂದ್ಯ ಇದಾಗಿದೆ.

‘ನಮಗೆ ಯಾವ ರೀತಿಯ ಪಿಚ್ ಲಭಿಸಿತ್ತೋ ಅದೇ ರೀತಿ ಆಡಿದ್ದೇವೆ. ಈ ಕುರಿತು ಅವರೊಂದಿಗೆ (ಪಿಚ್ ಕ್ಯುರೇಟರ್) ಚರ್ಚಿಸುತ್ತೇವೆ. ಅವರ ಮೇಲೆ ನಮಗೆ ತುಂಬಾ ನಂಬಿಕೆ ಇದೆ. ಅವರು ಉತ್ತಮವಾದ ಪಿಚ್ ಸಿದ್ಧಗೊಳಿಸಬಲ್ಲರು’ ಎಂದು ದಿನೇಶ್ ಹೇಳಿದರು.

‘ಪಿಚ್ ತುಸು ಜಿಗುಟುತನದಿಂದ ಕೂಡಿತ್ತು. ಇನಿಂಗ್ಸ್ ಆರಂಭದಲ್ಲಿ ನಾಲ್ಕು ಓವರ್ ಬ್ಯಾಟಿಂಗ್ ಸುಲಭವಾಗಿತ್ತು ನಂತರ 13ನೇ ಓವರ್‌ನವರೆಗೂ ನಾವು ಉತ್ತಮವಾಗಿ ಬ್ಯಾಟಿಂಗ್ ಮಾಡಿದೆವು. ದೊಡ್ಡ ಸ್ಕೋರ್ ಗಳಿಸುವ ಹಾದಿಯಲ್ಲಿ ಸ್ವಲ್ಪ ತಡಬಡಾಯಿಸಿದೆವು. ಡೆಲ್ಲಿ ಆರಂಭದಲ್ಲಿಯೇ ಸಂಕಷ್ಟಕ್ಕೊಳಗಾಗಿತ್ತು. 50 ರನ್‌ಗಳಿಗೆ 4 ವಿಕೆಟ್ ಕಳೆದುಕೊಂಡಿತ್ತು’ ಎಂದು ದಿನೇಶ್ ವಿಶ್ಲೇಷಿಸಿದರು.

ಐಎಸ್‌ಎಸ್‌ಎಫ್ ವಿಶ್ವಕಪ್: ನಾಲ್ಕು ಚಿನ್ನ ಸೇರಿ 8 ಪದಕ

ಶೂಟಿಂಗ್: ಭಾರತಕ್ಕೆ ಎರಡನೇ ಸ್ಥಾನ

ಬ್ಯೂನೊ ಏರ್ಸ್ (ಪಿಟಿಐ): ಭಾರತದ ಲಕ್ಷ್ಯ ಶೆವೊರಾನ್ ಮತ್ತು ನೀರೂ ಢಂಡ ಅವರಿಗೆ ಟ್ರ್ಯಾಪ್ ಮಿಶ್ರ ತಂಡ ವಿಭಾಗದ ಫೈನಲ್‌ನಲ್ಲಿ ಕೇವಲ ಒಂದು ಪಾಯಿಂಟ್ ಅಂತರದಲ್ಲಿ ಪದಕ ಕೈತಪ್ಪಿತು. ಆದರೆ ಭಾರತ ತಂಡವು, ಶುಕ್ರವಾರ ಇಲ್ಲಿ ಮುಕ್ತಾಯಗೊಂಡ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್‌ನಲ್ಲಿ ಒಟ್ಟಾರೆಯಾಗಿ ಉತ್ತಮ ಪ್ರದರ್ಶನ ನೀಡಿ ಪದಕ ಪಟ್ಟಿಯಲ್ಲಿ ಎರಡನೇ ಸ್ಥಾನ ಪಡೆಯಿತು.

ಗುರುವಾರ ನಡೆದ ಏರ್ ಪಿಸ್ತೂಲ್ ಮಿಶ್ರ ವಿಭಾಗದಲ್ಲಿ ಭಾರತದ ಸುರುಚಿ ಮತ್ತು ಸೌರಭ್ ಜೋಡಿ ಕಂಚಿನ ಪದಕ ಗೆದ್ದುಕೊಂಡಿತ್ತು. ರೈಫಲ್, ಪಿಸ್ತೂಲ್, ಶಾಟ್‌ಗನ್ ವಿಭಾಗದಲ್ಲಿ ನಡೆದ ಈ ವಿಶ್ವಕಪ್‌ನಲ್ಲಿ ಭಾರತ ತಂಡ ಒಟ್ಟು ಎಂಟು ಪದಕಗಳನ್ನು ಗಳಿಸಿತು. ಇದರಲ್ಲಿ ನಾಲ್ಕು ಚಿನ್ನ, ಎರಡು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳು ಒಳಗೊಂಡಿವೆ.

ಚೀನಾ ಐದು ಚಿನ್ನ, ಮೂರು ಬೆಳ್ಳಿ ಮತ್ತು ಮೂರು ಕಂಚಿನ ಪದಕಗಳನ್ನು ಗೆದ್ದುಕೊಂಡು ಪದಕ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯಿತು. ಕೊನೆಯ ದಿನ ನಡೆದ ಮಿಶ್ರ ಪಿಸ್ತೂಲ್ ವಿಭಾಗದಲ್ಲಿ ಚೀನಾದ ಸ್ಪರ್ಧಿಗಳು ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಗೆದ್ದುಕೊಂಡರು. ಅಂತಿಮ ದಿನ ನಿರ್ಧಾರವಾದ ಇನ್ನೊಂದು ಚಿನ್ನದ ಪದಕ (ಮಿಶ್ರ ಟೀಮ್ ಟ್ರ್ಯಾಪ್) ಚೀನಾ ತೈಪಿ ಸ್ಪರ್ಧಿಗಳ ಪಾಲಾಯಿತು.

ಸಿಫ್ಟ್ ಕೌರ್ ಸಮ್ರಾ (ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್), ರುದ್ರಾಂಕ್ಷ್ ಪಾಟೀಲ್ (ಪುರುಷರ 10 ಮೀ. ಏರ್ ರೈಫಲ್), ಸುರುಚಿ (ಮಹಿಳೆಯರ 10 ಮೀ. ಏರ್ ಪಿಸ್ತೂಲ್) ಮತ್ತು ವಿಜಯವೀರ್ ಸಿಧು (ಪುರುಷರ 25 ಮೀ. ರ್‍ಯಾಪಿಡ್ ಫೈರ್ ಪಿಸ್ತೂಲ್) ಅವರು ಚಿನ್ನ ಗೆದ್ದ ಭಾರತದ ಸ್ಪರ್ಧಿಗಳು.



ಸುರುಚಿ

ವಿಶ್ವಕಪ್ ರ್‍ಯಾಪಿಡ್ ಫೈರ್ ಪಿಸ್ತೂಲ್ ವಿಭಾಗದಲ್ಲಿ ಚಿನ್ನ ಗೆದ್ದ ಭಾರತದ ಮೊದಲ ಸ್ಪರ್ಧಿ ಎನ್ನುವ ಹಿರಿಮೆ ಸಿಧು ಅವರದಾಯಿತು.

ಮಹಿಳೆಯರ 25 ಮೀ. ಪಿಸ್ತೂಲ್ ಸ್ಪರ್ಧೆಯಲ್ಲಿ ಬೆಳ್ಳಿ ಗೆದ್ದ ಪ್ಯಾರಿಸ್ ಒಲಿಂಪಿಯನ್ ಇಶಾ ಸಿಂಗ್ ಅವರ ಸಾಧನೆಯೂ ಕಡಿಮೆಯೇನಲ್ಲ. ಇಶಾ ಅವರು ಮಿಶ್ರ ತಂಡ ಸ್ಪರ್ಧೆಯಲ್ಲಿ ಹಾಲಿ ವಿಶ್ವ ಚಾಂಪಿಯನ್ ಆಗಿದ್ದಾರೆ.

1998ರಿಂದ ಐಎಸ್‌ಎಸ್‌ಎಫ್ ವಿಶ್ವಕಪ್‌ನಲ್ಲಿ ಸ್ಪರ್ಧಿಸುತ್ತಿರುವ ಭಾರತ ತಂಡದ ಅತಿ ಹಿರಿಯ ಸ್ಪರ್ಧಿ ಝೊರಾವರ್ ಸಿಂಗ್ ಸಂಧು ಅವರು ಪುರುಷರ ಟ್ರ್ಯಾಪ್ ಸ್ಪರ್ಧೆಯಲ್ಲಿ ತಮ್ಮೆಲ್ಲಾ ಸಾಮರ್ಥ್ಯ ಹಾಕಿದರೂ ಏಳನೇ ಸ್ಥಾನ ಪಡೆಯಬೇಕಾಯಿತು.

ಭಾರತ ತಂಡ ಈಗ ಪೆರುವಿನ ಲಿಮಾಕ್ಕೆ ತೆರಳಲಿದೆ. ಅಲ್ಲಿ ಏಪ್ರಿಲ್ 15ರಂದು ಕಂಬೈನ್ಡ್ ಐಎಸ್‌ಎಸ್‌ಎಫ್ ವಿಶ್ವಕಪ್ ಎರಡನೇ ಲೆಗ್ ಆರಂಭವಾಗಲಿದೆ.

ಬ್ಯಾಡ್ಮಿಂಟನ್: ಭಾರತದ ಸವಾಲು ಅಂತ್ಯ

ಕಪಿಲ– ಕ್ರಾಸ್ಟೊ ಜೋಡಿಗೆ ಸೋಲು

ನಿಂಗ್ಬೊ (ಚೀನಾ), (ಪಿಟಿಐ): ಭಾರತದ ಧ್ರುವ್ ಕಪಿಲ– ತನಿಶಾ ಕ್ರಾಸ್ಟೊ ಜೋಡಿ, ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್ ಷಿಪ್‌ನ ಮಿಶ್ರ ಡಬಲ್ಸ್ ವಿಭಾಗದ ಕ್ವಾರ್ಟರ್‌ಫೈನಲ್‌ನಲ್ಲಿ ಹಾಂಗ್‌ಕಾಂಗ್‌ನ ತಾಂಗ್ ಚುನ್ ಮನ್– ತ್ಸೆ ಯಿಂಗ್ ಸುಯೆತ್ ಜೋಡಿಯೆದುರು ಶುಕ್ರವಾರ ಸೋಲನುಭವಿಸಿದರು.

ಐದನೇ ಶ್ರೇಯಾಂಕದ ಚುನ್–ಯಿಂಗ್ ಜೋಡಿ 22–20, 21–13 ರಿಂದ ಕಪಿಲ–ತನಿಶಾ ಜೋಡಿಯನ್ನು ಸೋಲಿಸಿತು. ತನ್ಮೂಲಕ ಈ ಪ್ರತಿಷ್ಠಿತ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಸವಾಲು ಅಂತ್ಯಗೊಂಡಂತೆ ಆಯಿತು.

ಇದಕ್ಕೆ ಮೊದಲು ಪಿ.ವಿ.ಸಿಂಧು (ಮಹಿಳಾ ಸಿಂಗಲ್ಸ್), ಕಿರಣ್ ಜಾರ್ಜ್, ಪ್ರಿಯಾಂಶು ರಾಜಾವತ್ (ಪುರುಷರ ಸಿಂಗಲ್ಸ್), ಹರಿಹರನ್ ಅಮ್ಸಕರುಣನ್/ರುಬನ್ ಕುಮಾರ್ ರೆತಿನಸಭಾಪತಿ (ಪುರುಷರ ಡಬಲ್ಸ್) ಅವರು ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಅವರು ಹೊರಬಿದ್ದಿದ್ದರು.

ಡಿವೈಇಎಸ್ ಎಫ್‌ಸಿ ತಂಡಕ್ಕೆ ಜಯ

ಬೆಂಗಳೂರು: ಡಿವೈಇಎಸ್ ಎಫ್‌ಸಿ ತಂಡ 1–0 ಗೋಲಿನಿಂದ ಬಿಡಿಎಫ್‌ಎ ಎ ಡಿವಿಷನಲ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಶುಕ್ರವಾರ ಬ್ಲಿಟ್ಜ್ ಎಫ್‌ಸಿ ವಿರುದ್ಧ ಜಯಿಸಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಡಿವೈಇಎಸ್ ಎಫ್‌ಸಿ ಪರ ಸಚಿನ್ ಗುಡ್ಡಾದಾ ಯೆಲ್ಲಾಪವಾರ್ (80ನೇ ನಿ.) ಗೋಲು ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ ಆದಾಯ ತೆರಿಗೆ ಎಫ್‌ಸಿ ತಂಡ 2–1 ಗೋಲುಗಳಿಂದ ಸ್ನೈಪರ್ಸ್ ಎಫ್‌ಸಿ ವಿರುದ್ಧ ಗೆಲುವು ಸಾಧಿಸಿತು. ಆದಾಯ ತೆರಿಗೆ ಎಫ್‌ಸಿ ತಂಡದ ಪರ ಪಾಂಡ್ಯನ್ ಎಂ.(8ನೇ ನಿ.) ಮತ್ತು ಪ್ರಶಾಂತ್ ಕಾಳಿಂಗ್ (40+2ನೇ ನಿ.) ಗೋಲುಗಳನ್ನು ಹೊಡೆದರು. ಸ್ನೈಪರ್ಸ್ ತಂಡದ ಪರ ನಿಕೇಶ್ ಥೊಗೊಖೊಮ್ (5ನೇ ನಿ.) ಗೋಲು ಗಳಿಸಿದರು.

ಸಿ ಡಿವಿಷನ್ ಲೀಗ್ ಚಾಂಪಿಯನ್ ಷಿಪ್‌ನಲ್ಲಿ ಸಾಂಬಾ ಎಫ್‌ಸಿ ತಂಡ 5–0 ಗೋಲುಗಳಿಂದ ಬಸವೇಶ್ವರನಗರ ತಂಡದ ವಿರುದ್ಧ ಭರ್ಜರಿ ಗೆಲುವು ಸಾಧಿಸಿತು. ಎರಡನೇ ಪಂದ್ಯದಲ್ಲಿ ಬ್ಲ್ಯಾಕ್ ಮೂನ್ ಎಫ್‌ಸಿ 1–1 ಗೋಲುನಿಂದ ಕರ್ನಾಟಕ ಸ್ಪೋರ್ಟ್ಸ್ ತಂಡದ ವಿರುದ್ಧ ಡ್ರಾ ಸಾಧಿಸಿತು. ಮೂರನೇ ಪಂದ್ಯದಲ್ಲಿ ಆನ್ಸ್ ಸ್ಪೋರ್ಟ್ಸ್ ಕ್ಲಬ್ 4–0 ಗೋಲುಗಳಿಂದ ರೆಬೆಲ್ಸ್ ಫೋನಿಕ್ಸ್ ಎಫ್‌ಸಿ ವಿರುದ್ಧ ಜಯಿಸಿತು. ನಾಲ್ಕನೇ ಪಂದ್ಯದಲ್ಲಿ ಬೆಂಗಳೂರು 1–0 ಗೋಲಿನಿಂದ ಜಿಆರ್‌ಕೆ ಎಫ್‌ಸಿ ವಿರುದ್ಧ ಜಯಿಸಿತು.

ಎಫ್‌ಐವಿಬಿ ಆಡಳಿತ ಮಂಡಳಿಗೆ ಇಶಾ

ಮುಂಬೈ: ಅಂತರರಾಷ್ಟ್ರೀಯ ವಾಲಿಬಾಲ್ ಫೆಡರೇಷನ್‌ನ (ಎಫ್‌ಐವಿಬಿ) ಆಡಳಿತ ಮಂಡಳಿಗೆ ಭಾರತದ ಇಶಾ ಅಂಬಾನಿ ಮತ್ತು ಮಾಜಿ ಅಂತರ-ರಾಷ್ಟ್ರೀಯ ಆಟಗಾರ್ತಿಯಾಗಿರುವ ಆಸ್ಟ್ರೇಲಿಯಾದ ಲೂಯಿಸ್ ಬಾಡೆನ್ ಸೇರ್ಪಡೆಗೊಂಡಿದ್ದಾರೆ.



ಇಶಾ ಅಂಬಾನಿ

2024-2028ರ ಒಲಿಂಪಿಕ್ಸ್ ಸಾಲಿಗೆ ಈ ನೇಮಕಾತಿಯನ್ನು ಮಾಡಿರುವುದಾಗಿ ಎಫ್ ಐವಿಬಿ ಘೋಷಿಸಿದೆ. ಎಫ್ ಐವಿಬಿ ನಿಯಮಾವಳಿ ಅಡಿ ಇಶಾ ಅಂಬಾನಿ ಮತ್ತು ಬಾವ್ಡೆನ್ ಅವರನ್ನು ನೇಮಿಸಲಾಗಿದೆ.

ಎಎಫ್‌ಸಿ ಕಪ್ ಆತಿಥ್ಯ: ಭಾರತ ಬಿಡ್

ನವದೆಹಲಿ (ಪಿಟಿಐ): 2031ರ ಎಎಫ್‌ಸಿ ಏಷ್ಯನ್ ಕಪ್ ಟೂರ್ನಿಯ ಆತಿಥ್ಯ ವಹಿಸಲು ಆಸಕ್ತಿ ಪತ್ರ ಸಲ್ಲಿಸಿರುವುದಾಗಿ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಶುಕ್ರವಾರ ತಿಳಿಸಿದೆ.

ಈ ಪತ್ರ ಸಲ್ಲಿಸಲು ಮಾರ್ಚ್ 31ರ ಗಡುವು ನೀಡಲಾಗಿದ್ದು, ಆತಿಥ್ಯಕ್ಕೆ ಆಸಕ್ತಿ ತೋರಿದ ಏಳು ರಾಷ್ಟ್ರಗಳ ಫುಟ್‌ಬಾಲ್ ಫೆಡರೇಷನ್‌ಗಳ ಪೈಕಿ ಎಐಎಫ್‌ಎಫ್ ಕೂಡ ಒಂದಾಗಿದೆ. ಬಿಡ್ ಸಲ್ಲಿಸಿರುವುದನ್ನು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್‌ನ ಉಪ ಮಹಾ ಪ್ರಧಾನ ಕಾರ್ಯದರ್ಶಿ ಎಂ.ಸತ್ಯನಾರಾಯಣ ಖಚಿತಪಡಿಸಿದ್ದಾರೆ.

ಟೂರ್ನಿಯ ಆತಿಥ್ಯಕ್ಕೆ ಭಾರತದ ಜೊತೆಗೆ ಆಸ್ಟ್ರೇಲಿಯಾ, ದಕ್ಷಿಣ ಕೊರಿಯಾ ಮತ್ತು ಯುಎಇ ಕೂಡ ಪೈಪೋಟಿಯಲ್ಲಿವೆ. ಇಂಡೋನೇಷ್ಯಾ ಮತ್ತು ಕುವೈತ್ ದೇಶಗಳೂ ಆಸಕ್ತಿಪತ್ರ ಸಲ್ಲಿಸಿವೆ. ಕಿರ್ಗಿಸ್ತಾನ, ತಾಜಿಕಿಸ್ತಾನ ಮತ್ತು ಉಜ್ಬೇಕಿಸ್ತಾನ ಜಂಟಿಯಾಗಿ ಬಿಡ್ ಸಲ್ಲಿಸಿವೆ.

ಆತಿಥ್ಯ ವಹಿಸುವ ದೇಶ ಯಾವುದೆಂಬುದು 2026ರಲ್ಲಿ ನಿರ್ಧಾರವಾಗಲಿದೆ. ಆ ದೇಶದ ತಂಡ ಟೂರ್ನಿಗೆ ನೇರವಾಗಿ ಪ್ರವೇಶ ಪಡೆಯಲಿದೆ.

1956ರಲ್ಲಿ ಎಎಫ್‌ಸಿ ಏಷ್ಯನ್ ಕಪ್ ಆರಂಭವಾಗಿತ್ತು. ಭಾರತ 1964ರಲ್ಲಿ ರನ್ನರ್ ಅಪ್ ಆಗಿತ್ತು. 1984, 2011, 2019 ಮತ್ತು 2023ರಲ್ಲಿ ಗುಂಪು ಹಂತದಲ್ಲಿ ಹೊರಬಿದ್ದಿತ್ತು.

ಆಸ್ಟ್ರೇಲಿಯಾ, ಯುಎಇ, ದಕ್ಷಿಣ ಕೊರಿಯಾ ಮತ್ತು ಕುವೈಟ್ ಈ ಹಿಂದೆ ಟೂರ್ನಿಯ ಆತಿಥ್ಯ ವಹಿಸಿವೆ.

ವರದಿ ಬಗ್ಗೆ ಕೆಲ ಸಮುದಾಯಗಳಿಗೆ ಅಸಮಾಧಾನ ಇರುವುದು ನಿಜ. ವರದಿಯಲ್ಲಿನ ಮಾಹಿತಿಯನ್ನು ಸಂಪೂರ್ಣ ಅಧ್ಯಯನ ಮಾಡಿದ ನಂತರ ಸಂಪುಟ ಸಭೆಯಲ್ಲೇ ಅಭಿಪ್ರಾಯ ಮಂಡಿಸಲಾಗುವುದು
ಈಶ್ವರ ಖಂಡ್ರೆ, ಅರಣ್ಯ ಸಚಿವ

ವರದಿ ಪರಿಶೀಲನೆ ನಡೆಸದೆ ಊಹೆಯ ಆಧಾರದ ಮೇಲೆ ಪರ–ವಿರೋಧ ಚರ್ಚೆ ನಡೆಸುವುದು ಸರಿಯಲ್ಲ. ಅದಕ್ಕಾಗಿಯೇ ಮುಖ್ಯಮಂತ್ರಿ ವಿಶೇಷ ಸಂಪುಟ ಸಭೆ ಕರೆದಿದ್ದಾರೆ
ಕೆ.ಎನ್. ರಾಜಣ್ಣ, ಸಹಕಾರ ಸಚಿವ

ವರದಿ ಜಾರಿಗೆ ಕೊನೆಗೂ ಮುಹೂರ್ತ ನಿಗದಿಯಾಗಿದೆ. ಎಲ್ಲರೂ ಒಟ್ಟಾಗಿ ನಿರ್ಧಾರ ತೆಗೆದುಕೊಳ್ಳುತ್ತೇವೆ. ವರದಿ ಜಾರಿ ಬಳಿಕ ಏನಾಗುತ್ತದೆಯೋ ನೋಡೋಣ
ಸತೀಶ ಜಾರಕಿಹೊಳಿ, ಲೋಕೋಪಯೋಗಿ ಸಚಿವ

ವರದಿಯನ್ನು ಸಂಪುಟ ಸಭೆಯಲ್ಲಿ ಚರ್ಚಿಸಿದ ನಂತರ ಸಾರ್ವಜನಿಕ ಚರ್ಚೆಗೆ ಬಿಡಬೇಕಾ? ಒಳ ಮೀಸಲಾತಿ ಸಮೀಕ್ಷೆಯ ಜತೆಗೆ ಇದನ್ನು ಪರಿಗಣಿಸಬೇಕಾ ಎನ್ನುವ ಕುರಿತು ನಿರ್ಧಾರಕ್ಕೆ ಬರಬೇಕಿದೆ
ಪ್ರಿಯಾಂಕ್ ಖರ್ಗೆ, ಗ್ರಾಮೀಣಾಭಿವೃದ್ಧಿ ಸಚಿವ

ಈ ಜಾತಿ ಜನಗಣತಿ ವೈಜ್ಞಾನಿಕವಾಗಿ ನಡೆದಿಲ್ಲ. ನಮ್ಮ ಮನೆಗಾಗಲಿ, ನಮ್ಮ ಅಜ್ಜ ದೇವೇಗೌಡರ ಮನೆಗಾಗಲಿ ಯಾರೂ ಬಂದು ಗಣತಿ ಮಾಡಿಲ್ಲ
ನಿಖಿಲ್ ಕುಮಾರಸ್ವಾಮಿ, ಜೆಡಿಎಸ್ ಯುವ ಘಟಕದ ಅಧ್ಯಕ್ಷ

ಸಂಪುಟ ಸಭೆಯಲ್ಲಿ ಸಾಮಾಜಿಕ–ಶೈಕ್ಷಣಿಕ ಸಮೀಕ್ಷೆ ಮಂಡನೆ • ಎಲ್ಲ ಸಚಿವರಿಗೆ ವರದಿಯ ಪ್ರತಿ

ಇದೇ 17ಕ್ಕೆ ಜಾತಿಗಣತಿ ವರದಿ ಭವಿಷ್ಯ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರ–ವಿರೋಧ ವಾಗ್ವಾದಗಳ ಅಡಕತ್ತರಿಯಲ್ಲಿ ಸಿಲುಕಿರುವ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಗೆ (ಜಾತಿ ಗಣತಿ) ಕೊನೆಗೂ 'ಮೋಕ್ಷ' ಸಿಗುವ ಲಕ್ಷಣಗಳು ಕಾಣಿಸಿದ್ದು, ಇದೇ 17ರ ಗುರುವಾರ ನಡೆಯಲಿರುವ ವಿಶೇಷ ಸಚಿವ ಸಂಪುಟ ಸಭೆಯಲ್ಲಿ ಸಮೀಕ್ಷೆಯ ಭವಿಷ್ಯ ನಿರ್ಧಾರವಾಗಲಿದೆ.

ಸಿದ್ದರಾಮಯ್ಯನವರು ಹಿಂದೆ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಅಂದಿನ ಎಚ್. ಕಾಂತರಾಜ ನೇತೃತ್ವದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗಕ್ಕೆ ಈ ಸಮೀಕ್ಷೆಯ ಹೊಣೆಯನ್ನು ವಹಿಸಿದ್ದರು. ಜಯಪ್ರಕಾಶ ಹೆಗ್ಡೆ ನೇತೃತ್ವದ ಆಯೋಗವು, ಸಮೀಕ್ಷೆಯ ದತ್ತಾಂಶಗಳ ಅಧ್ಯಯನ ವರದಿಯನ್ನು 2024ರ ಫೆಬ್ರುವರಿಯಲ್ಲಿ ಈಗಿನ ಸರ್ಕಾರಕ್ಕೆ ಸಲ್ಲಿಸಿತ್ತು. ಈ ವರದಿ ಹಾಗೂ ಸಮೀಕ್ಷೆಯ ಮಾಹಿತಿಗಳನ್ನು ಒಳಗೊಂಡ ಸಮಗ್ರ ದಾಖಲೆಗಳನ್ನು ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಯಿತು.

ವರದಿಯ ಮುಖ್ಯಾಂಶ ಹಾಗೂ ಶಿಫಾರಸುಗಳಿರುವ ಮುಚ್ಚಿದ ಲಕೋಟೆಯನ್ನು ಸಚಿವ ಸಂಪುಟ ಸಭೆಯಲ್ಲಿ ತೆರೆದು, ವಿವರಿಸುವ ಪ್ರಕ್ರಿಯೆ ನಡೆಯಿತು. ಬಳಿಕ, ವರದಿಯನ್ನು ಅಂಗೀಕರಿಸುವ ನಿರ್ಣಯವನ್ನು ಸಂಪುಟ ಸಭೆ ಕೈಗೊಂಡಿತು. ಮುಂದಿನ ಸಂಪುಟ ಸಭೆಯಲ್ಲಿ ಈ ಬಗ್ಗೆ ಚರ್ಚಿಸುವ ತೀರ್ಮಾನ ತೆಗೆದುಕೊಳ್ಳಲಾಯಿತು.

ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಶಿವರಾಜ ತಂಗಡಗಿ,

> **ವರದಿ ಮಂಡನೆಯಾಗಿದೆ. ಎಲ್ಲ ಸಚಿವರಿಗೂ ಪ್ರತಿ ನೀಡಲಾಗಿದೆ. ಅದರಲ್ಲಿನ ಮಾಹಿತಿ ತಿಳಿದುಕೊಳ್ಳಲಾಗುವುದು, ಸಂಪುಟ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಸಲಾಗುವುದು**
> **ಡಿ.ಕೆ. ಶಿವಕುಮಾರ್**
> ಉಪಮುಖ್ಯಮಂತ್ರಿ

> **ಎಲ್ಲರ ಮನೆಗೂ ಭೇಟಿ ನೀಡಿ ವರದಿ ಸಿದ್ಧಪಡಿಸಿಲ್ಲ. ಯಾರಿಗೋ ಅನುಕೂಲ ಮಾಡಿಕೊಡಲು, ಜಾತಿಜಾತಿಗಳ ನಡುವೆ ವಿಷಬೀಜ ಬಿತ್ತಲು ಸಿದ್ದರಾಮಯ್ಯ ಹೇಳಿ ಮಾಡಿಸಿರುವ ವರದಿ**
> **ಆರ್. ಅಶೋಕ,**
> ವಿಧಾನಸಭೆ ವಿರೋಧ ಪಕ್ಷದ ನಾಯಕ

'ಎಲ್ಲ ಸಚಿವರಿಗೂ ವರದಿಯ ಮುಖ್ಯಾಂಶಗಳನ್ನು ಒಳಗೊಂಡ ಮಾಹಿತಿಯ ಪ್ರತಿ ನೀಡಲಾಗಿದೆ. ವಿಶೇಷ ಸಂಪುಟ ಸಭೆಗೆ ಬರುವ ಮುನ್ನ ಅಧ್ಯಯನ ಮಾಡಿಕೊಂಡು ಬಂದು ಚರ್ಚೆಯಲ್ಲಿ ಭಾಗವಹಿಸುವಂತೆ ಮುಖ್ಯಮಂತ್ರಿ ಸೂಚಿಸಿದರು' ಎಂದು ಹೇಳಿದರು.

ರಾಜ್ಯದ 6.35 ಕೋಟಿ ಜನಸಂಖ್ಯೆಯಲ್ಲಿ 5.98 ಕೋಟಿ ಜನರನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ. 1.35 ಕೋಟಿ ಕುಟುಂಬಗಳು ಅಂದರೆ, ಶೇ 94.17ರಷ್ಟು ಮಾಹಿತಿ ಸಂಗ್ರಹಣೆಯಲ್ಲಿ ಪಾಲ್ಗೊಂಡಿವೆ. 37 ಲಕ್ಷ ಜನರನ್ನು ಮಾತ್ರ ಸಮೀಕ್ಷೆ ಒಳಗೊಂಡಿಲ್ಲ. ಎಚ್. ಕಾಂತರಾಜ ನೇತೃತ್ವದ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗವು 2015 ನೇ ಏ.11ರಿಂದ ಸಮೀಕ್ಷೆ ಆರಂಭಿಸಿ 2015 ರ ಮೇ 30ರಂದು ಪೂರ್ಣಗೊಳಿಸಿತು. 2015ರ ದತ್ತಾಂಶ ಬಳಸಿಕೊಂಡು ಕೆ.ಜಯಪ್ರಕಾಶ್ ಹೆಗ್ಡೆ ನೇತೃತ್ವದ ಹಿಂದುಳಿದ ವರ್ಗಗಳ ಆಯೋಗವು ವರದಿಯನ್ನು ಸಿದ್ಧಪಡಿಸಿ, 2024ರ ಫೆಬ್ರುವರಿ 29ರಂದು ಸರ್ಕಾರಕ್ಕೆ ಸಲ್ಲಿಸಿತು ಎಂದರು.

ಈ ಸಮೀಕ್ಷೆಯಡಿ ಪ್ರತಿಯೊಂದು ಕುಟುಂಬದ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ರಾಜಕೀಯ ಪ್ರಾತಿನಿಧ್ಯ ಮತ್ತು ಔದ್ಯೋಗಿಕ ಸ್ಥಿತಿಗಳ ಬಗ್ಗೆ 54 ಮಾನದಂಡಗಳನ್ನು ಒಳಗೊಂಡ ಕುಟುಂಬದ ಅನುಸೂಚಿ–3ರಲ್ಲಿ ಮಾಹಿತಿ ಸಂಗ್ರಹಿಸಲಾಯಿತು. ಲಭ್ಯವಾಗಿರುವ ಅಂಕಿ–ಅಂಶಗಳನ್ನು ಆಯಾ ಜಿಲ್ಲೆಯಲ್ಲಿಯೇ ಗಣಕೀಕರಣಗೊಳಿಸಲಾಗಿದೆ. ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ (ಬಿಇಎಲ್) ಸಂಸ್ಥೆಯ ಮೂಲಕ ಗಣಕೀಕರಣಕ್ಕಾಗಿ ₹43.09 ಕೋಟಿ ಒಪ್ಪಂದ ಮಾಡಿಕೊಳ್ಳಲಾಗಿತ್ತು. ಸಮೀಕ್ಷೆಗಾಗಿ ₹192.79 ಕೋಟಿ ಬಿಡುಗಡೆ ಮಾಡಿದ್ದು, ₹165.51 ಕೋಟಿ ವೆಚ್ಚ ಮಾಡಲಾಗಿದೆ. ಕೇಂದ್ರ ಸರ್ಕಾರ ₹7 ಕೋಟಿ ನೀಡಿದೆ ಎಂದು ತಂಗಡಗಿ ಹೇಳಿದರು. ಸಭೆಯ ಆರಂಭಕ್ಕೂ ಮುನ್ನ 50 ಸಂಪುಟಗಳನ್ನು ಒಳಗೊಂಡ ಮುಚ್ಚಿದ ಪೆಟ್ಟಿಗೆಗಳನ್ನು ಸಚಿವ ಸಂಪುಟ ಸಭೆಯಲ್ಲಿ ತೆರೆಯಲಾಯಿತು ಎಂದರು.

'ಸಭೆಯಲ್ಲಿ ಯಾವುದೇ ಸಚಿವರು ವರದಿಯ ಬಗ್ಗೆ ಆಕ್ಷೇಪ ವ್ಯಕ್ತಪಡಿಸಲಿಲ್ಲ. ಈ ಹಿಂದೆ ಹೊರಗೆ ಆಕ್ಷೇಪ ವ್ಯಕ್ತಪಡಿಸಿದ್ದ ಪ್ರಬಲ ಸಮುದಾಯಗಳ ಸಚಿವರೂ ಸುಮ್ಮನೇ ಇದ್ದರು. ರಾಹುಲ್ ಗಾಂಧಿ ಅವರ ಸೂಚನೆ ಇತ್ತು. ಹೀಗಾಗಿ ಯಾವುದೇ ಸಚಿವರು ಬಾಯಿ ಬಿಡಲಿಲ್ಲ' ಎಂದು ಮೂಲಗಳು ತಿಳಿಸಿವೆ.

ಇಂದಿನ ಸಂಪುಟ ಸಭೆಗೆ ಆರು ಸಚಿವರು ಗೈರಾಗಿದ್ದರು.

ಬಡಿಗೆ ಹಿಡಿದು ಠಾಣೆಗೆ ನುಗ್ಗುವ ದಿನ ದೂರವಿಲ್ಲ

ಯಲ್ಲಾಪುರದಲ್ಲಿ ನಡೆದ ಜನಾಕ್ರೋಶ ಯಾತ್ರೆಯಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಎಚ್ಚರಿಕೆ

ಪ್ರಜಾವಾಣಿ ವಾರ್ತೆ



ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದಲ್ಲಿ ಜನಾಕ್ರೋಶ ಯಾತ್ರೆ ಅಂಗವಾಗಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಕಾರ್ಯಕರ್ತರೊಂದಿಗೆ ಕಾಲ್ನಡಿಗೆಯಲ್ಲಿ ಸಾಗಿದರು –ಪ್ರಜಾವಾಣಿ ಚಿತ್ರ

ಕಾರವಾರ/ಯಲ್ಲಾಪುರ: 'ರಾಜ್ಯ ಸರ್ಕಾರದ ಕುಮ್ಮಕ್ಕಿನಿಂದ ಪೊಲೀಸ್ ಠಾಣೆಗಳು ಕಾಂಗ್ರೆಸ್ ಕಚೇರಿಯಂತಾಗಿವೆ. ಬಿಜೆಪಿ ಕಾರ್ಯಕರ್ತರ ವಿರುದ್ಧ ಕಿರುಕುಳ ಮಿತಿಮೀರಿದ್ದು, ಕಾರ್ಯಕರ್ತರು ಬಡಿಗೆ ಹಿಡಿದು ಠಾಣೆಗೆ ನುಗ್ಗುವ ದಿನ ದೂರವಿಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಎಚ್ಚರಿಕೆ ನೀಡಿದರು.

ಯಲ್ಲಾಪುರದ ವೈಟಿಎಸ್‌ಎಸ್ ಮೈದಾನದಲ್ಲಿ ಶುಕ್ರವಾರ ನಡೆದ ಜನಾಕ್ರೋಶ ಯಾತ್ರೆ ಸಮಾವೇಶದಲ್ಲಿ ಮಾತನಾಡಿದ ಅವರು, 'ಸರ್ಕಾರದ ನಡೆ ಟೀಕಿಸುವವರು, ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಹಾಕುವವರ ವಿರುದ್ಧ ಪ್ರಕರಣ ದಾಖಲಿಸಿ ಬೆದರಿಸುವ ಕೆಲಸ ನಡೆದಿದೆ' ಎಂದು ಆರೋಪಿಸಿದರು.

'ಬೆದರಿಕೆಗೆ ಕಾರ್ಯಕರ್ತರು ಹೆದರುವುದಿಲ್ಲ. ಅವರ ಸಹನೆ ಮಿತಿಮೀರಲು ಅವಕಾಶ ನೀಡಿದ್ದೀರಿ. ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಪೊಲೀಸ್ ಸಿಬ್ಬಂದಿಗೆ ಮಾಸಿಕ ವೇತನ ನೀಡಲು ವಿಳಂಬ ಆಗುತ್ತಿದೆ ಎಂಬುದನ್ನು ಪೊಲೀಸ್ ಅಧಿಕಾರಿಗಳು ನೆನಪಿನಲ್ಲಿಡಿ' ಎಂದರು.

'ಯಲ್ಲಾಪುರದ ಶಾಸಕರು ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಮಂಜೂರಾದ ಯೋಜನೆಗಳ ಕಾಮಗಾರಿಗಳನ್ನೇ ಇಂದಿಗೂ ಉದ್ಘಾಟಿಸುತ್ತಿದ್ದಾರೆ. ಈ ಕ್ಷೇತ್ರದ ಕಾರ್ಯಕರ್ತರು ಹೆದರುವ ಅಗತ್ಯವಿಲ್ಲ. ಯಾವುದೇ ಕ್ಷಣ ವಿಧಾನಸಭೆಗೆ ಚುನಾವಣೆ ಎದುರಾದರೂ ಯಲ್ಲಾಪುರ ಕ್ಷೇತ್ರದಿಂದ ಸಾಮಾನ್ಯ ಕಾರ್ಯಕರ್ತರೊಬ್ಬರನ್ನು ಕಣಕ್ಕಿಳಿಸಿ ಗೆಲ್ಲಿಸಿಕೊಂಡು ಬರುತ್ತೇನೆ' ಎಂದು ಸಮಾವೇಶದಲ್ಲಿ ಪಾಲ್ಗೊಳ್ಳದ ಶಾಸಕ ಶಿವರಾಮ ಹೆಬ್ಬಾರ ಅವರ ಹೆಸರು ಹೇಳದೇ ಪರೋಕ್ಷವಾಗಿ ಎಚ್ಚರಿಕೆ ನೀಡಿದರು.

'ಮುಖ್ಯಮಂತ್ರಿ ಕುರ್ಚಿ ಅಲ್ಲಾಡಿದಾಗ, ರಾಜ್ಯದಲ್ಲಿ ಬೆಲೆ ಏರಿಕೆ ವಿಚಾರ, ಸರ್ಕಾರದ ದುರಾಡಳಿತ ಚರ್ಚೆಯಾದಾಗಲೆಲ್ಲ, ಜಾತಿ ಜನಗಣತಿ ವರದಿ ವಿಷಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮುನ್ನೆಲೆಗೆ ತರುತ್ತಾರೆ. ಇದು ಅವರ ಪಾಲಿಗೆ ಬೆದರು ಗೊಂಬೆಯಂತಾಗಿದೆ' ಎಂದರು.

ಸಂಸದ ಕೋಟ ಶ್ರೀನಿವಾಸ ಪೂಜಾರಿ, ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್, ಮುಖಂಡ ನಳಿನ್‌ಕುಮಾರ್ ಕಟೀಲ್ ಇದ್ದರು.

> **ಜನಾಕ್ರೋಶ ಯಾತ್ರೆ ಆರಂಭಗೊಂಡ ಮೂರೇ ದಿನಕ್ಕೆ ರಾಜ್ಯ ಸರ್ಕಾರಕ್ಕೆ ಅದರ ಬಿಸಿ ತಟ್ಟಿದೆ. ಹೀಗಾಗಿಯೇ ಡಿ.ಕೆ. ಶಿವಕುಮಾರ್ ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟಿಸಲು ಕರೆ ನೀಡಿದ್ದಾರೆ**
> **ಬಿ.ವೈ.ವಿಜಯೇಂದ್ರ**
> ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

'ಸಾಕಪ್ಪಾ ಸಾಕು ಕಾಂಗ್ರೆಸ್' ಅಭಿಯಾನ



ನಿಖಿಲ್

ಬೆಂಗಳೂರು: ರಾಜ್ಯ ಸರ್ಕಾರದ ವಿರುದ್ಧದ ಹೋರಾಟಕ್ಕೆ ಜೆಡಿಎಸ್, 'ಸಾಕಪ್ಪಾ ಸಾಕು ಕಾಂಗ್ರೆಸ್' ಅಭಿಯಾನಕ್ಕೆ ಚಾಲನೆ ನೀಡಿದೆ. 'ಕಾಂಗ್ರೆಸ್ ಸರ್ಕಾರದ ಬೆಲೆಏರಿಕೆ ನೀತಿಯ ವಿರುದ್ಧ ಜನರಿಗೆ ದನಿಯಾಗಲು ಈ ಅಭಿಯಾನ ಆರಂಭಿಸಲಾಗಿದೆ' ಎಂದು ಜೆಡಿಎಸ್ ಯುವಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಹೇಳಿದರು.

ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಇದು ನಮ್ಮ ಹೋರಾಟವಲ್ಲ. ಬದಲಿಗೆ ರಾಜ್ಯ ಸರ್ಕಾರದ ವಿರುದ್ಧ ಜನರ ಹೋರಾಟ. ಬೆಲೆ ಏರಿಕೆ ಮತ್ತು ಕಾಂಗ್ರೆಸ್ ಸರ್ಕಾರದ ಹುನ್ನಾರಗಳ ವಿರುದ್ಧ ಜನರನ್ನು ಒಗ್ಗೂಡಿಸಲು ಸಾಕಪ್ಪಾಸಾಕು ಜಾಲತಾಣವನ್ನು (https://www.saakappasaaku.com) ಆರಂಭಿಸಿದ್ದೇವೆ. ಈ ಜಾಲತಾಣದಲ್ಲಿ ಯಾರು ಬೇಕಾದರೂ ನೋಂದಣಿ ಮಾಡಿಕೊಂಡು, ಪ್ರತಿಭಟನೆಯಲ್ಲಿ ಭಾಗಿಯಾಗಬಹುದು' ಎಂದರು.

'ಸರ್ಕಾರವು ರಾಜ್ಯವನ್ನು ದಿವಾಳಿಯತ್ತ ಕೊಂಡೊಯ್ದಿದೆ. ಆರ್ಥಿಕ ತುರ್ತು ಸ್ಥಿತಿ ಸೃಷ್ಟಿಯಾಗಿದೆ. ಜನರು ರೋಸಿ ಹೋಗಿದ್ದಾರೆ. ಇದನ್ನೆಲ್ಲಾ ಇನ್ನೆಷ್ಟು ದಿನ ಸಹಿಸಿಕೊಳ್ಳಬೇಕು? ಜನರು ಸಾಕಪ್ಪಾ ಸಾಕು ಎನ್ನುತ್ತಿದ್ದಾರೆ. ಅವರಿಗೆ ಬೆಂಬಲವಾಗಿ ನಾವೂ ಹೋರಾಟಕ್ಕೆ ಧುಮುಕಿದ್ದೇವೆ. ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಪ್ರತಿಭಟನೆಯನ್ನು ಶನಿವಾರ ಹಮ್ಮಿಕೊಂಡಿದ್ದೇವೆ. 10,000ಕ್ಕೂ ಹೆಚ್ಚು ಮಂದಿ ಭಾಗಿಯಾಗಲಿದ್ದಾರೆ. ಅಲ್ಲಿಂದ 'ವಿಧಾನಸೌಧ ಚಲೋ' ನಡೆಸುತ್ತೇವೆ' ಎಂದರು.

'ರಾಯರಡ್ಡಿಯವರಿಗೆ ಅಭಿನಂದನೆ': ಕಾಂಗ್ರೆಸ್ ಸರ್ಕಾರದಲ್ಲಿನ ಭ್ರಷ್ಟಾಚಾರದ ಬಗ್ಗೆ ಅದೇ ಪಕ್ಷದ ಬಸವರಾಜ ರಾಯರಡ್ಡಿ ಮಾತನಾಡಿದ್ದಾರೆ. ಭ್ರಷ್ಟಾಚಾರದಲ್ಲಿ ರಾಜ್ಯವೇ ನಂಬರ್ ಒನ್ ಎಂದಿದ್ದಾರೆ. ಸತ್ಯವನ್ನು ಹೇಳಿರುವ ಅವರಿಗೆ ಅಭಿನಂದನೆಗಳು. ಬಿಜೆಪಿ ಸರ್ಕಾರದ ವಿರುದ್ಧ ಶೇ 40ರಷ್ಟು ಕಮಿಷನ್ ಆರೋಪ ಮಾಡಿ ಅಧಿಕಾರಕ್ಕೆ ಬಂದ ಕಾಂಗ್ರೆಸ್, ಮಿತಿ ಇಲ್ಲದೆ ಕಮಿಷನ್ ಕೀಳುತ್ತಿದೆ' ಎಂದು ನಿಖಿಲ್ ಆರೋಪಿಸಿದರು.

ಸುದ್ದಿ 2 ನಿಮಿಷ

ಶಿವಾಜಿ ಸಿನಿಮಾ ಮಾಡದಂತೆ ರಿಷಬ್‌ಗೆ ವಾಟಾಳ್ ಎಚ್ಚರಿಕೆ

ಕೋಲಾರ: 'ಶಿವಾಜಿ ಕುರಿತು ನಟ, ನಿರ್ದೇಶಕ ರಿಷಬ್ ಶೆಟ್ಟಿ ಸಿನಿಮಾ ಮಾಡಿದರೆ ಪರಿಸ್ಥಿತಿ ನೆಟ್ಟಗಿರುವುದಿಲ್ಲ. ಮುಂದಿನ ಪರಿಸ್ಥಿತಿ ಮನಗಂಡು ಈಗಲೇ ಸಿನಿಮಾ ನಿಲ್ಲಿಸಬೇಕು' ಎಂದು ಕನ್ನಡ ಚಳವಳಿ ವಾಟಾಳ್ ಪಕ್ಷದ ನಾಯಕ ವಾಟಾಳ್ ನಾಗರಾಜ್ ಎಚ್ಚರಿಕೆ ನೀಡಿದರು.

ನಗರದ ಪತ್ರಕರ್ತರ ಭವನದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, 'ರಾಜ್ಯದಲ್ಲೇ ಐತಿಹಾಸಿಕ ಪುರುಷರು, ಮಹನೀಯರು ಬಹಳಷ್ಟು ಮಂದಿ ಇದ್ದಾರೆ. ಅಂಥವರನ್ನು ಬಿಟ್ಟು ಶಿವಾಜಿ ಪಾತ್ರ ಮಾಡಲು ಹೊರಟಿರುವುದು ಸರಿಯಲ್ಲ. ಕನ್ನಡಿಗರ ಎಚ್ಚರಿಕೆ ಕಡೆಗಣಿಸಿ ಸಿನಿಮಾ ಮಾಡಿದರೆ ಪರಿಸ್ಥಿತಿ ನೆಟ್ಟಗಿರುವುದಿಲ್ಲ. ಸಿನಿಮಾ ಬಿಡುಗಡೆ ಮಾಡಿದರೆ ರಾಜ್ಯದಾದ್ಯಂತ ಹೋರಾಟ, ಗಲಾಟೆ ನಡೆಸುತ್ತೇವೆ. ಕಾಂತಾರದ ಯಶಸ್ವಿನಿಂದ ಖುಷಿಪಟ್ಟಿರುವ ಅವರು ಈ ಸಿನಿಮಾ ಮೂಲಕ ನೋವು ಅನುಭವಿಸಬೇಕಾಗುತ್ತದೆ. ಯಾವುದೇ ಸಿನಿಮಾ ಹದ್ದುಬಸ್ತು ಮೀರಬಾರದು' ಎಂದರು.



'ಗ್ರೇಟರ್ ಬೆಂಗಳೂರು ಹೆಸರಲ್ಲಿ ಬೆಂಗಳೂರು ನಗರವನ್ನು ಏಳು ಭಾಗವಾಗಿ ವಿಭಜನೆ ಮಾಡಲು ಪ್ರಯತ್ನ ನಡೆಯುತ್ತಿದೆ. ಹಾಗೇನಾದರೂ ನಡೆದರೆ ಒಂದೊಂದು ಭಾಷೆಯ ಮೇಯರ್ ಬರುವ ಅಪಾಯವಿದೆ' ಎಂದರು.

ಹಾಜರಾತಿ ಕೊರತೆ: ಪರೀಕ್ಷೆಗೆ ನಿರ್ಬಂಧ

ಬಳ್ಳಾರಿ: ಶೇ 75ರಷ್ಟು ಹಾಜರಾತಿ ಪ್ರಮಾಣ ಇರದ ಕಾರಣ ಎಲ್‌ಎಲ್‌ಎಂ ಮೊದಲ ಮತ್ತು ಎರಡನೇ ಸೆಮಿಸ್ಟರ್‌ನ ಬಹುತೇಕ ವಿದ್ಯಾರ್ಥಿಗಳನ್ನು ಬಳ್ಳಾರಿಯ ಕೃಷ್ಣದೇವರಾಯ ವಿಶ್ವವಿದ್ಯಾಲಯವು ಪರೀಕ್ಷೆಗೆ ನಿರ್ಬಂಧಿಸಿದೆ.

ನಿಯಮಗಳ ಪ್ರಕಾರ, ಶೇ 75ರಷ್ಟು ಹಾಜರಾತಿ ಪ್ರಮಾಣವಿದ್ದರಷ್ಟೇ ಪರೀಕ್ಷೆಗೆ ಅವಕಾಶವಿದೆ. ಆದರೆ, ಮೊದಲ ಸೆಮಿಸ್ಟರ್‌ನ 33 ವಿದ್ಯಾರ್ಥಿಗಳಲ್ಲಿ ಒಬ್ಬರಿಗೆ, ಎರಡನೇ ಸೆಮಿಸ್ಟರ್‌ನ 40 ವಿದ್ಯಾರ್ಥಿಗಳಲ್ಲಿ 7 ಜನಕ್ಕೆ ಮಾತ್ರ ನಿಗದಿತ ಹಾಜರಾತಿ ಇತ್ತು. ಇದನ್ನು ಗಮನಿಸಿದ ಕುಲಪತಿ ಪ್ರೊ. ಮುನಿರಾಜು ಹಾಜರಾತಿ ಇಲ್ಲದ ವಿದ್ಯಾರ್ಥಿಗಳಿಗೆ ಪರೀಕ್ಷೆ ಅವಕಾಶ ನೀಡಬಾರದು ಎಂದು ವಿಭಾಗದ ಮುಖ್ಯಸ್ಥರಿಗೆ ಸೂಚಿಸಿದ್ದರು. ಅದರಂತೆ ಏಪ್ರಿಲ್ 9 ಮತ್ತು 11ರಂದು ಪರೀಕ್ಷೆ ಬರೆಯಲು 8 ಜನರಿಗೆ ಮಾತ್ರ ಅವಕಾಶ ಕಲ್ಪಿಸಲಾಯಿತು.

ಫೋರ್ಜರಿ: ಇಬ್ಬರ ಅಮಾನತು

ಮಂಡ್ಯ: ಮುಖ್ಯಮಂತ್ರಿ ಸೇರಿದಂತೆ ಉನ್ನತ ಅಧಿಕಾರಿಗಳ ಸಹಿಯನ್ನು ಫೋರ್ಜರಿ ಮಾಡಿ, ಸರ್ಕಾರಿ ಕೆಲಸ ಕೊಡಿಸುವುದಾಗಿ ಯುವಜನರನ್ನು ವಂಚಿಸುತ್ತಿದ್ದ ಪ್ರಕರಣಕ್ಕೆ ಸಂಬಂಧಿಸಿ ಕಾನ್‌ಸ್ಟೆಬಲ್‌ಗಳಾದ ಗ್ರಾಮಾಂತರ ಠಾಣೆಯ ಚಿಕ್ಕಯ್ಯ ಹಾಗೂ ಸೆಂಟ್ರಲ್ ಠಾಣೆಯ ಲೋಕೇಶ್ ಅವರನ್ನು ಅಮಾನತುಗೊಳಿಸಲಾಗಿದೆ.

ಕೆಲಸಕೊಡಿಸುವುದಾಗಿನಿರುದ್ಯೋಗಿಗಳನ್ನು ನಂಬಿಸಿ, ಲಕ್ಷಾಂತರ ರೂಪಾಯಿ ಪಡೆದು ವಂಚಿಸಿ ಜೈಲು ಸೇರಿರುವ ಆರೋಪಿ ವೆಂಕಟೇಶ್ ಎಂಬಾತನಿಗ ಇಬ್ಬರೂ ಸಹಕರಿಸಿದ್ದರು ಎಂಬುದು ಪೊಲೀಸ್ ಪ್ರಾಥಮಿಕ ತನಿಖೆಯಿಂದ ದೃಢಪಟ್ಟಿದೆ. ಕರ್ತವ್ಯ ಲೋಪದ ಆರೋಪದ ಮೇಲೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.



ದಾವಣಗೆರೆಯ ಹಳೇಪೇಟೆಯಲ್ಲಿ ಶುಕ್ರವಾರ ನಡೆದ ವೀರಭದ್ರೇಶ್ವರ ದೇವರ ಗುಗ್ಗಳ ಮತ್ತು ಅಗ್ನಿಕುಂಡ ಮಹೋತ್ಸವದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್‌.ಎಸ್‌. ಮಲ್ಲಿಕಾರ್ಜುನ್ ಕೆಂಡ ತುಳಿದು ಭಕ್ತಿ ಸಮರ್ಪಿಸಿದರು –ಪ್ರಜಾವಾಣಿ ಚಿತ್ರ

'ರಾಜ್ಯದಲ್ಲಿ ವ್ಯಾಪಕ ಭ್ರಷ್ಟಾಚಾರ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಕರ್ನಾಟಕದಲ್ಲಿ ಭ್ರಷ್ಟಾಚಾರ ಸಾಂಸ್ಥೀಕರಣಗೊಂಡಿದೆ. ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ಹಾಗೂ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರಡ್ಡಿ ಅವರು ಕಾಂಗ್ರೆಸ್ ಸರ್ಕಾರದ ನೈಜ ಮುಖವನ್ನು ಬಯಲು ಮಾಡಿದ್ದಾರೆ' ಎಂದು ಬಿಜೆಪಿ ಹೇಳಿದೆ.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ರಾಷ್ಟ್ರೀಯ ವಕ್ತಾರ ಪ್ರತ್ಯೂಷ್ ಕಾಂತ್, 'ಇಲ್ಲಿಯ ತನಕ ಕರ್ನಾಟಕವನ್ನು ಭ್ರಷ್ಟಾಚಾರದ ಪ್ರಯೋಗಶಾಲೆ ಎಂದು ಕರೆಯಲಾಗುತ್ತಿತ್ತು. ಆದರೆ, ಇತ್ತೀಚಿನ ಬೆಳವಣಿಗೆಗಳಿಂದಾಗಿ ಕರ್ನಾಟಕವು ದೇಶದ ಅತ್ಯಂತ ಭ್ರಷ್ಟ ರಾಜ್ಯ ಎಂದು ಸಾಬೀತಾಗಿದೆ. ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ಆಡಳಿತ ಪಕ್ಷದ ಸದಸ್ಯರೇ ಧ್ವನಿ ಎತ್ತಿದ್ದಾರೆ. ತಮ್ಮ ಇಲಾಖೆಯಲ್ಲಿ ಭ್ರಷ್ಟಾಚಾರ ಇದೆ ಎಂಬುದನ್ನು ಕಂದಾಯ ಸಚಿವರೂ ಒಪ್ಪಿಕೊಂಡಿದ್ದಾರೆ' ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಭ್ರಷ್ಟಾಚಾರ ಹಾಗೂ ಲೂಟಿಯ ಎಟಿಎಂ ಆಗಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಚುನಾವಣಾ ಪ್ರಚಾರ ರ‍್ಯಾಲಿಗಳಲ್ಲಿ ಎಚ್ಚರಿಸಿದ್ದರು. ಈಗ ಅವರ ಮಾತು ನಿಜವಾಗಿದೆ ಎಂದು ಹೇಳಿದರು.

'ಗುತ್ತಿಗೆದಾರರಿಂದ ಸರ್ಕಾರಕ್ಕೆ ಆಪತ್ತು'

ಹುಬ್ಬಳ್ಳಿ: 'ಗುತ್ತಿಗೆದಾರರು ಭ್ರಷ್ಟಾಚಾರದ ಆರೋಪ ಹೊರಿಸಿ ನಮ್ಮ ಬಿಜೆಪಿ ಸರ್ಕಾರವನ್ನು ಅಧಿಕಾರದಲ್ಲಿ ಇರದಂತೆ ಮಾಡಿದರು. ಈಗ ಕಾಂಗ್ರೆಸ್ ಸರ್ಕಾರದ ವಿರುದ್ಧವೂ ಅದನ್ನೇ ಮುಂದುವರಿಸಿದ್ದಾರೆ' ಎಂದು ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

'ಬಿಲ್ ಪಾಸ್ ಮಾಡಲು ಕಮಿಷನ್ ಪಡೆಯಲಾಗುತ್ತಿದೆ' ಎಂದು ಗುತ್ತಿಗೆದಾರರು ಮಾಡಿರುವ ಆರೋಪಕ್ಕೆ ಶುಕ್ರವಾರ ನಗರದಲ್ಲಿ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಅವರು, 'ಬೆಂಕಿ ಇಲ್ಲದೇ ಹೊಗೆ ಆಡಲ್ಲ. ಭ್ರಷ್ಟಾಚಾರದಲ್ಲಿ ಕರ್ನಾಟಕ ನಂಬರ್ ಒನ್ ಇದೆ ಎಂದು ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರರೇ ಹೇಳಿದ್ದಾರೆ. ಈ ಸರ್ಕಾರ ಇರಬಾರದು' ಎಂದರು.

ಗುತ್ತಿಗೆದಾರರಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಲಹೆ

'ಕಮಿಷನ್ ಕೇಳಿದ್ದರೆ ಲೋಕಾಯುಕ್ತಕ್ಕೆ ಹೋಗಿ'

ಪ್ರಜಾವಾಣಿ ವಾರ್ತೆ



ಡಿ.ಕೆ. ಶಿವಕುಮಾರ್

ಬೆಂಗಳೂರು: 'ಗುತ್ತಿಗೆದಾರರ ಬಾಕಿ ಮೊತ್ತ (ಬಿಲ್) ಪಾವತಿಗೆ ಕಮಿಷನ್ ಕೇಳಿದ್ದರೆ ಲೋಕಾಯುಕ್ತಕ್ಕೆ ದೂರು ನೀಡಲಿ. ಸಚಿವರಾದ ಸತೀಶ ಜಾರಕಿಹೊಳಿ, ಎಸ್.ಎನ್. ಬೋಸರಾಜು ಭಾಗಿಯಾಗಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜತೆ ಶುಕ್ರವಾರ ಮಾತನಾಡಿದ ಅವರು, 'ಬಾಕಿ ಪಾವತಿ ವಿಚಾರವಾಗಿ ಗುತ್ತಿಗೆದಾರರು ಸಚಿವರನ್ನು ಏಕೆ ಪ್ರಶ್ನಿಸಬೇಕು? ಇಲಾಖೆಯ ಬಜೆಟ್‌ನ ಅರಿವಿರಲಿಲ್ಲವೇ? ಅನುದಾನ ಬಿಡುಗಡೆಯಾಗದೆ ಇದ್ದಾಗಲೂ ಅವರು ಗುತ್ತಿಗೆ ಹೇಗೆ ಪಡೆದರು. ಬಿಜೆಪಿ ನೇತೃತ್ವದ ಸರ್ಕಾರ ಇದ್ದಾಗ ಜಲಸಂಪನ್ಮೂಲ ಇಲಾಖೆಯಲ್ಲೇ ₹1 ಲಕ್ಷ ಕೋಟಿಗೂ ಅಧಿಕ ಮೊತ್ತದ ಗುತ್ತಿಗೆ ನೀಡಲಾಗಿದೆ. ಈ ಗುತ್ತಿಗೆ ಬಿಲ್ ಪಾವತಿಗೆ ಶಾಸಕರ ಮೂಲಕ ಒತ್ತಡ ತರುತ್ತಿದ್ದಾರೆ' ಎಂದರು

'ವಿಧಾನಸಭೆ ಚುನಾವಣೆಗೂ ಒಂದು ವರ್ಷ ಮುಂಚಿತವಾಗಿ ಗುತ್ತಿಗೆದಾರರಿಗೆ ಕಾಂಗ್ರೆಸ್ ಎಚ್ಚರಿಕೆ ನೀಡಿತ್ತು. ಅನುದಾನ ಇಲ್ಲದೆ ಯಾವುದೇ ಕಾಮಗಾರಿ ತೆಗೆದುಕೊಳ್ಳಬೇಡಿ ಎಂದು ವಿನಂತಿಸಿದ್ದೆವು. ಆದರೂ, ಮಾತು ಕೇಳಲಿಲ್ಲ. ಈಗ ಬಿಜೆಪಿ ನಾಯಕರ ಸೂಚನೆಯಂತೆ ಪತ್ರ ಬರೆಯುತ್ತಿದ್ದಾರೆ' ಎಂದು ಆರೋಪಿಸಿದರು.

> **ಗುತ್ತಿಗೆದಾರರ ಆರೋಪಕ್ಕೆ ಸರ್ಕಾರ ಸೂಕ್ತ ಪ್ರತಿಕ್ರಿಯೆ ನೀಡುತ್ತದೆ. ಬಿಜೆಪಿ ಅವಧಿಯಲ್ಲಿ ಶೇ 40ರಷ್ಟು ಕಮಿಷನ್ ಆರೋಪದ ವಿರುದ್ಧವೂ ಕ್ರಮ ಕೈಗೊಳ್ಳುತ್ತದೆ**
> **ಸಂತೋಷ್ ಲಾಡ್,** ಕಾರ್ಮಿಕ ಸಚಿವ

> **ಕಮಿಷನ್ ಆರೋಪದ ಬಗ್ಗೆ ಕಾಂಗ್ರೆಸ್ ನಾಯಕರು ಸಭೆ ಮಾಡಿ, ಚರ್ಚಿಸಲಿ. ಸಚಿವರ ಕಚೇರಿಗಳು 'ಕಲೆಕ್ಷನ್ ಸೆಂಟರ್' ಆಗಿವೆ. ಆರೋಪ ಬಂದರೂ ಸಿದ್ದರಾಮಯ್ಯ ಸಮರ್ಥನೆ ಮಾಡಿಕೊಳ್ಳುತ್ತಾರೆ**
> **ಆರ್. ಅಶೋಕ.** ವಿಧಾನಸಭೆ ವಿರೋಧ ಪಕ್ಷದ ನಾಯಕ

'ನಿಜ ಗೊತ್ತಿದ್ದರೂ ಸುಳ್ಳು ಆರೋಪ'

ಬಿಜೆಪಿ ಅವಧಿಯಲ್ಲಿ ನಿಯಮ ಮೀರಿ ಗುತ್ತಿಗೆ ನೀಡಿರುವುದು ಗುತ್ತಿಗೆದಾರರ ಸಂಘಕ್ಕೆ ಗೊತ್ತಿದ್ದರೂ, ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ನ್ಯಾ. ನಾಗಮೋಹನ್‌ದಾಸ್ ಆಯೋಗ ಈಗಾಗಲೇ ವರದಿ ನೀಡಿದೆ. ವರದಿಯನ್ನು ಸರ್ಕಾರವೂ ಒಪ್ಪಿದೆ. ಆರೋಪ ಮಾಡುತ್ತಿರುವವರಿಗೆ ಹಿಂದಿನ ಸರ್ಕಾರದ ಅವಧಿಯಲ್ಲಿ ಏನಾಗಿತ್ತು ಎನ್ನುವ ಮಾಹಿತಿ ಇದ್ದರೂ, ನಮ್ಮ ಸರ್ಕಾರದ ಮೇಲೆ ಒತ್ತಡ ಹಾಕುವುದು ಸರಿಯಲ್ಲ. ಆರೋಪ ಮಾಡಿದವರ ಬಳಿ ನಮ್ಮ ವಿರುದ್ಧ ಏನಾದರೂ ದಾಖಲೆ ಇದ್ದರೆ ಕೊಡಲಿ' ಎಂದರು.

'ಸರಿಯಾದ ಆಡಳಿತ ನೀಡದ ಕಾರಣಕ್ಕೆ ಬಿಜೆಪಿ ವಿರೋಧ ಪಕ್ಷದ ಸ್ಥಾನದಲ್ಲಿ ಕುಳಿತಿದೆ. ನಾವು ತಪ್ಪು ಮಾಡಿದರೆ ಅನುಭವಿಸಬೇಕಾಗುತ್ತದೆ. ಉಪ್ಪು ತಿಂದವರು ನೀರು ಕುಡಿಯಲೇಬೇಕು' ಎಂದು ಹೇಳಿದರು.

> **ಗುತ್ತಿಗೆದಾರರು ತಾವು ಮಾಡಿದ ಆರೋಪ ಸಾಬೀತು ಮಾಡಬೇಕು ಎಂದು ಒತ್ತಾಯಿಸುವುದಿಲ್ಲ. ಅವರಿಗೆ ನ್ಯಾಯ ನೀಡಲು ಸಾಂವಿಧಾನಿಕ ಸಂಸ್ಥೆಗಳಿವೆ. ಅಲ್ಲಿಗೆ ದೂರು ನೀಡಲಿ**
> **ಸತೀಶ ಜಾರಕಿಹೊಳಿ**
> ಲೋಕೋಪಯೋಗಿ ಸಚಿವ

> **ಗುತ್ತಿಗೆದಾರರಿಂದ ಬಿಜೆಪಿ ಕಮಿಷನ್ ಪಡೆದದ್ದು ಸಾಬೀತಾಗಿದೆ. ಆಡಳಿತಾತ್ಮಕ ಅನುಮೋದನೆ ಇಲ್ಲದೆ ಹಣ ನೀಡಿದ್ದಾರೆ. ಈಗ ಕಾಂಗ್ರೆಸ್ ಮೇಲೆ ಆರೋಪ ಮಾಡುತ್ತಿದ್ದಾರೆ**
> **ಈಶ್ವರ ಖಂಡ್ರೆ,** ಅರಣ್ಯ ಸಚಿವ

ಒಬಿಸಿ ಮೀಸಲು: ಭಾರಿ ಬದಲು?

ಒಂದನೇ ಪುಟದಿಂದ...

ಹಿಂದುಳಿದವರ ಮೀಸಲು ಪ್ರಮಾಣವನ್ನು ಹೀಗೆ ಹೆಚ್ಚಿಸುವ ಶಿಫಾರಸು ಜಾರಿಯಾಗಬೇಕಾದರೆ ಕೇಂದ್ರ ಸರ್ಕಾರವು ಸಂವಿಧಾನದ ಒಂಬತ್ತನೇ ಪರಿಚ್ಛೇದಕ್ಕೆ ತಿದ್ದುಪಡಿ ತಂದು, ಮೀಸಲಾತಿ ಹೆಚ್ಚಳದ ತೀರ್ಮಾನಕ್ಕೆ ರಕ್ಷಣೆ ಒದಗಿಸಬೇಕಾಗುತ್ತದೆ ಎಂದೂ ಆಯೋಗ ಪ್ರತಿಪಾದಿಸಿದೆ.

ಎಚ್.ಕಾಂತರಾಜ ನೇತೃತ್ವದ ಆಯೋಗ ನಡೆಸಿದ್ದ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ಸಮೀಕ್ಷೆಯನ್ನು (ಜಾತಿ ಜನಗಣತಿ) ಆಧರಿಸಿ ಹೆಗ್ಡೆ ನೇತೃತ್ವದ ಆಯೋಗವು 2024ರ ಫೆಬ್ರುವರಿಯಲ್ಲಿ ಸಲ್ಲಿಸಿದ್ದ '2015ರ ದತ್ತಾಂಶಗಳ ಅಧ್ಯಯನ ವರದಿ 2024'ರಲ್ಲಿ ಈ ಶಿಫಾರಸುಗಳಿವೆ ಎಂದು ಗೊತ್ತಾಗಿದೆ.

ಕಾಂತರಾಜ ಆಯೋಗದ ವರದಿ ಹಾಗೂ ಹೆಗ್ಡೆಯವರ ಅಧ್ಯಯನ ವರದಿಯ ಶಿಫಾರಸು ಹಾಗೂ ಮುಖ್ಯಾಂಶಗಳನ್ನು ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಯಿತು. ಅದರ ವಿವರಗಳು 'ಪ್ರಜಾವಾಣಿ'ಗೆ ಲಭ್ಯವಾಗಿವೆ.

ಏನಿದೆ ವಿವರ: ಈ ಹಿಂದೆ ನಡೆಸಿದ ಸಮೀಕ್ಷೆಯ ವೇಳೆ ರಾಜ್ಯದಲ್ಲಿ 6.35 ಕೋಟಿ ಜನಸಂಖ್ಯೆ ಇದ್ದು, ಅದರಲ್ಲಿ 5.98 ಕೋಟಿ ಜನರನ್ನು ಸಮೀಕ್ಷೆ ಒಳಗೊಂಡಿತ್ತು. ಸಮೀಕ್ಷೆ ವೇಳೆ ಸಂಗ್ರಹಿಸಲಾದ ಮಾಹಿತಿ ಆಧರಿಸಿ, ವಿವಿಧ ಜಾತಿಯ ಜನಸಂಖ್ಯೆ ಎಷ್ಟಿದೆ? ಜಾತಿವಾರು ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕ ಪರಿಸ್ಥಿತಿ ಹೇಗಿದೆ? ಉದ್ಯೋಗವಾರು ಎಷ್ಟು ಪಾಲು ಸಿಕ್ಕಿದೆ? ಭೂ ಹಂಚಿಕೆ ಹೇಗಿದೆ ಎಂಬ ಮಾಹಿತಿಯನ್ನು ಸಮೀಕ್ಷೆ ವೇಳೆ ಸಂಗ್ರಹಿಸಲಾಗಿತ್ತು. ಆ ದತ್ತಾಂಶ ಆಧರಿಸಿ, ಮೀಸಲಾತಿಯನ್ನು ಮರು ಹಂಚಿಕೆ ಮಾಡಬೇಕು ಎಂದು ಹೆಗ್ಡೆಯವರ ನೇತೃತ್ವದ ಆಯೋಗ ಶಿಫಾರಸು ಮಾಡಿದೆ.

ಹಿಂದುಳಿದಿರುವಿಕೆ, ಕುಲಕಸುಬು, ಈಚಿನ ವರ್ಷಗಳಲ್ಲಿ ಮೇಲುಸ್ತರಕ್ಕೆ ಏರಿದ ಜಾತಿಗಳ ಸ್ಥಿತಿಗೆ ಅನುಗುಣವಾಗಿ ಮೀಸಲಾತಿ ಪಟ್ಟಿಯಲ್ಲಿ ಮರು ವರ್ಗೀಕರಣ ಮಾಡಲು ಶಿಫಾರಸು ಮಾಡಲಾಗಿದೆ. ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಈವರೆಗೆ ಐದು ಪ್ರವರ್ಗಗಳಿದ್ದು, ಅದನ್ನು ಆರಕ್ಕೆ ಏರಿಸಲು ಶಿಫಾರಸು ಮಾಡಿದೆ. ಪ್ರವರ್ಗ 1, ಪ್ರವರ್ಗ 2 ಎ ಅಡಿ ಇದ್ದ ಜಾತಿಗಳನ್ನು ಮರು ವರ್ಗೀಕರಣ ಮಾಡುವುದಕ್ಕಾಗಿ ಪ್ರವರ್ಗ 1ರ ಬದಲು ಪ್ರವರ್ಗ '1 ಎ' ಎಂದು ಹಾಗೂ ಪ್ರವರ್ಗ '1 ಬಿ' ಎಂಬ ಹೊಸ ವರ್ಗ ಸೃಷ್ಟಿಸುವಂತೆ ಶಿಫಾರಸು ಮಾಡಲಾಗಿದೆ.

ಪ್ರವರ್ಗ 1ರಲ್ಲಿದ್ದ ಹಲವು ಜಾತಿಗಳನ್ನು ಆ ಜಾತಿಯವರ ಕಾಯಕ, ಸಾಮಾಜಿಕ ಪರಿಸ್ಥಿತಿಗೆ ಅನುಗುಣವಾಗಿ '1 ಎ' ನಲ್ಲಿ ಇರಿಸಲಾಗಿದೆ. ಪ್ರವರ್ಗ 1 ಹಾಗೂ '2 ಎ'ನಲ್ಲಿದ್ದ ಜಾತಿಗಳನ್ನು ಮರು ವರ್ಗೀಕರಿಸಿ, ಕೆಲವು ಜಾತಿಗಳನ್ನು ಒಳಗೊಂಡ '1 ಬಿ' ಪ್ರವರ್ಗ ಸೃಜಿಸಲಾಗಿದೆ. '2 ಎ'ನಲ್ಲಿದ್ದ ಕೆಲವು ಜಾತಿಯವರನ್ನು '1 ಬಿ'ಯಡಿ ತರಲಾಗಿದೆ. ಹಿಂದುಳಿದ ಜಾತಿಯವರನ್ನು '1 ಬಿ'ಯಲ್ಲಿ ಸೇರಿಸಲಾಗಿದ್ದು, ಇವರಲ್ಲಿ ಅಲೆಮಾರಿ, ಅರೆ ಅಲೆಮಾರಿ ಹಾಗೂ ಆ ಗುಣ ಲಕ್ಷಣವುಳ್ಳ ಜಾತಿಗಳು ಇವೆ. ಕುಶಲಕರ್ಮಿ ಹಾಗೂ ಕುಲಕಸುಬು ಆಧಾರಿತ ವೃತ್ತಿಪರ ಸಮುದಾಯಗಳನ್ನು '2 ಎ' ನಲ್ಲೇ ಇರಿಸಲಾಗಿದೆ.

ಪ್ರವರ್ಗ 1ಕ್ಕೆ ಇದ್ದ ಮೀಸಲಾತಿಯನ್ನು ಶೇ 4ರಿಂದ 6ಕ್ಕೆ ಹೆಚ್ಚಿಸುವಂತೆ ಶಿಫಾರಸು ಮಾಡಲಾಗಿದೆ. '2 ಎ'ಗೆ ಶೇ 15ರಷ್ಟಿದ್ದ ಮೀಸಲಾತಿಯನ್ನು '1 ಬಿ' ಹಾಗೂ '2 ಎ'ಗೆ ಮರು ಹಂಚಿಕೆ ಮಾಡಲಾಗಿದೆ. ಹೀಗೆ ಮಾಡುವಾಗ, '1 ಬಿ'ಗೆ ಶೇ 12 ಹಾಗೂ '2 ಎ'ಗೆ ಶೇ 10ರಷ್ಟು ಹಂಚಿಕೆ ಮಾಡಲಾಗಿದೆ. ಇದರಿಂದಾಗಿ ಹಿಂದುಳಿದ ಜಾತಿ(2 ಎ)ಯವರಿಗೆ ಇದ್ದ ಶೇ 15ರ ಮೀಸಲಾತಿ ಶೇ 22ಕ್ಕೆ ಏರಿಕೆಯಾಗಿದೆ.

ಎಸ್‌ಐಟಿ ತನಿಖೆಗೆ ಶೇ 40 ಲಂಚ ಪ್ರಕರಣ

ಒಂದನೇ ಪುಟದಿಂದ...

'ಆಯೋಗವು ಮೂರು ಲಕ್ಷ ಕಾಮಗಾರಿಗಳಲ್ಲಿ 1,729 ಕಾಮಗಾರಿಗಳನ್ನು ಮಾದರಿ ಆಗಿ ತೆಗೆದುಕೊಂಡು ಪರಿಶೀಲನೆ ನಡೆಸಿದೆ. ಕೆಲವು ಪ್ರಕರಣಗಳಲ್ಲಿ ವ್ಯತ್ಯಾಸಗಳಿವೆ. ಕೆಲವು ಕಾಮಗಾರಿಗಳಲ್ಲಿ ಹೆಚ್ಚು ಹಣ ಪಾವತಿಯಾಗಿದೆ. ಕೆಲವು ಸಂಶಯಾಸ್ಪದವಾಗಿವೆ. ಟೆಂಡರ್ ಪ್ರಕ್ರಿಯೆಯಲ್ಲಿ ಲೋಪವಾಗಿದೆ. ಆದ್ದರಿಂದ, ಈ ಬಗ್ಗೆ ಹೆಚ್ಚಿನ ತನಿಖೆಗೆ ಎಸ್‌ಐಟಿ ರಚಿಸಲು ತೀರ್ಮಾನಿಸಲಾಯಿತು. ಎಸ್‌ಐಟಿಯಲ್ಲಿ ವಿಷಯ ಪರಿಣಿತರು, ಅಧಿಕಾರಿಗಳು ಇರಲಿದ್ದಾರೆ' ಎಂದು ಪಾಟೀಲ ಮಾಹಿತಿ ನೀಡಿದರು.

ಒಳಮೀಸಲಾತಿ ಜಾರಿಯಲ್ಲಿ ವಿಳಂಬ ಧೋರಣೆ; ಎಚ್‌. ಆಂಜನೇಯ ಅಸಮಾಧಾನ

ಕಣ್ಣೀರು ಖಾಲಿ, ಮುಂದೆ ರಕ್ತವೇ ನಮ್ಮ ಉತ್ತರ

ಪ್ರಜಾವಾಣಿ ವಾರ್ತೆ



ಎಚ್. ಆಂಜನೇಯ

ಚಿತ್ರದುರ್ಗ: 'ಒಳ ಮೀಸಲಾತಿ ಜಾರಿ ಸಂಬಂಧ ಪರಿಶಿಷ್ಟ ಜಾತಿಗೆ ಸೀಮಿತವಾಗಿ ನಡೆಯಲಿರುವ ಜಾತಿಗಣತಿ ಪ್ರಕ್ರಿಯೆ ವಿಳಂಬವಾಗುತ್ತಿದೆ. ಮುಖ್ಯಮಂತ್ರಿಯವರು ನಮ್ಮನ್ನು ಕಾಡಿಸದೇ, ಹಿಂಸಿಸದೇ, ಅಳುವಂತೆ ಮಾಡದೇ ಒಳಮೀಸಲಾತಿ ಜಾರಿಗೊಳಿಸಬೇಕು. ನಮ್ಮ ಕಣ್ಣಲ್ಲಿ ನೀರು ಖಾಲಿಯಾಗಿದ್ದು ಇನ್ನು ಮುಂದೆ ರಕ್ತವೇ ಉತ್ತರವಾಗಲಿದೆ' ಎಂದು ಕೆಪಿಸಿಸಿ ಉಪಾಧ್ಯಕ್ಷ ಎಚ್. ಆಂಜನೇಯ ಅಸಮಾಧಾನ ವ್ಯಕ್ತಪಡಿಸಿದರು.

'ಜಾತಿ ಗಣತಿ ಪ್ರಕ್ರಿಯೆ ಸಂಶಯಕ್ಕೆ ಎಡೆಮಾಡಿಕೊಡದ ರೀತಿಯಲ್ಲಿ ನಡೆಯಬೇಕು. ಆದರೆ, ಗಣತಿ ಆರಂಭಗೊಂಡಿರುವ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಏಪ್ರಿಲ್, ಮೇ ತಿಂಗಳಲ್ಲಿ ಗಣತಿ ಪೂರ್ಣಗೊಳಿಸಿ, ವರದಿ ಸ್ವೀಕರಿಸಬೇಕು. ಜೂನ್ 1ರಿಂದಲೇ ಒಳಮೀಸಲಾತಿ ಜಾರಿಯಾಗಬೇಕು. ಇಡೀ ಪ್ರಕ್ರಿಯೆ ಆಮೆಗತಿಯಲ್ಲಿ ಸಾಗುತ್ತಿದ್ದು ಕಳವಳ ಮೂಡಿದೆ. ಒಳ ಮೀಸಲಾತಿ ಜಾರಿ ವಿಷಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಇಚ್ಛಾಶಕ್ತಿ ಪ್ರದರ್ಶಿಸಬೇಕು' ಎಂದು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಒತ್ತಾಯಿಸಿದರು.

'2024ರ ಆಗಸ್ಟ್ 1ರಂದು ಸುಪ್ರೀಂ ಕೋರ್ಟ್ ತೀರ್ಪು ಬಂದ ನಂತರ ಅಕ್ಟೋಬರ್ 28ರಂದು ಒಳಮೀಸಲಾತಿ ಜಾರಿಗೊಳಿಸುವ ತೀರ್ಮಾನ ಕೈಗೊಳ್ಳಲಾಗಿದ್ದು, 3 ತಿಂಗಳು ತಡವಾಯಿತು. ದತ್ತಾಂಶ ಸಂಗ್ರಹಕ್ಕಾಗಿ ರಚನೆಗೊಂಡ ಆಯೋಗ ಯಾವುದೇ ಸ್ಪಷ್ಟ ತೀರ್ಮಾನ ಕೈಗೊಳ್ಳಲಿಲ್ಲ. ಅಲ್ಲಿಗೆ 8 ತಿಂಗಳು ತಡವಾಯಿತು. ಈಗ ಜನಗಣತಿಗಾಗಿ 2 ತಿಂಗಳು ಸಮಯ ನೀಡಲಾಗಿದೆ. ಆದರೆ ಅದಕ್ಕಾಗಿ ಯಾವ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂಬ ಬಗ್ಗೆ ಯಾರಿಗೂ ಗೊತ್ತಿಲ್ಲ. ಇದರಿಂದ ಮಾದಿಗ ಸಮುದಾಯದವರು ಸಿಟ್ಟಾಗಿದ್ದಾರೆ. ವಿಳಂಬ ನೀತಿಯಿಂದಾಗಿ ಸಮುದಾಯದಲ್ಲಿ ಅನುಮಾನ ಮೂಡಿದೆ' ಎಂದರು.

'ಜನಗಣತಿ ಪ್ರಕ್ರಿಯೆಯ ಮಾನದಂಡಗಳು ಯಾವುವು?, ಪ್ರಶ್ನಾವಳಿಯಲ್ಲಿ ಏನಿದೆ? ಎಂಬ ಬಗ್ಗೆ ಸಮುದಾಯದ ಮುಖಂಡರಿಗೆ ಮೊದಲೇ ಮಾಹಿತಿ ನೀಡಬೇಕು. ಗಣತಿದಾರರನ್ನಾಗಿ ಪರಿಶಿಷ್ಟ ಜಾತಿ ಶಿಕ್ಷಕರನ್ನು ನೇಮಿಸದೇ ಬೇರೆ ಜಾತಿಯವರನ್ನೇ ನಿಯೋಜಿಸಬೇಕು. ಹಳೇ ಮೈಸೂರು ಭಾಗದಲ್ಲಿ ಹೊಲೆಯ, ಮಾದಿಗರು ಆದಿ ಕರ್ನಾಟಕ ಅಥವಾ ಆದಿ ದ್ರಾವಿಡ ಎಂಬ ಒಂದೇ ವರ್ಗದಲ್ಲಿ ಪ್ರಮಾಣ ಪತ್ರ ಪಡೆದಿರುವುದು ಗೊಂದಲ ಮೂಡಿಸಿದೆ. ಹೀಗಾಗಿ ಗಣತಿದಾರರು ಬಂದಾಗ ಮೂಲ ಜಾತಿಯ ಹೆಸರು ಬರೆಸಬೇಕು' ಎಂದು ಸಲಹೆ ನೀಡಿದರು.

'ತರಾತುರಿಯಲ್ಲಿ 10,000 ಹುದ್ದೆಗಳ ನೇಮಕಾತಿಗೆ ಆದೇಶ ಹೊರಡಿಸಿರುವುದು ಕುತಂತ್ರದ ಭಾಗವಾಗಿದೆ. ಮಾದಿಗರನ್ನು ವಂಚಿಸುವ ಪ್ರಯತ್ನ ಮಾಡಲಾಗುತ್ತಿದೆ. ಸುಪ್ರೀಂ ಕೋರ್ಟ್ ತೀರ್ಪು ಬಂದ ದಿನದಿಂದಲೇ ನೇಮಕಾತಿ ರದ್ದು ಮಾಡಬೇಕಾಗಿತ್ತು. ಅಲ್ಲೂ ನಮಗೆ ಅನ್ಯಾಯವಾಗಿದೆ. ಆದರೂ ಅಕ್ಟೋಬರ್ 28ರ ನಂತರ ಆಗಿರುವ ಎಲ್ಲ ನೇಮಕಾತಿ ಆದೇಶವನ್ನು ರದ್ದುಪಡಿಸಬೇಕು. ಮುಖ್ಯಮಂತ್ರಿ ಈ ವಿಷಯದಲ್ಲಿ ನಮ್ಮ ನೆರವಿಗೆ ಬರುತ್ತಾರೆ ಎಂಬ ವಿಶ್ವಾಸವಿದೆ' ಎಂದರು.

ಮುಖಂಡರಾದ ಒ.ಶಂಕರ್, ಬಿ.ಪಿ. ತಿಪ್ಪೇಸ್ವಾಮಿ ಇದ್ದರು.

ಲಿಂಗಾಯತ–ಒಕ್ಕಲಿಗರಿಗೂ ಲಾಭ

ಒಂದನೇ ಪುಟದಿಂದ...

'3 ಬಿ' ಪಟ್ಟಿಯಲ್ಲಿರುವ ಲಿಂಗಾಯತ ಹಾಗೂ ಅದರ ಉಪ ಜಾತಿಗಳ ಒಟ್ಟು ಜನಸಂಖ್ಯೆ 81 ಲಕ್ಷದಷ್ಟಿದ್ದು, ಅದರಲ್ಲಿ ಲಿಂಗಾಯತರ ಸಂಖ್ಯೆ 66 ಲಕ್ಷದಷ್ಟಿದೆ. ಮೀಸಲಾತಿ ಪ್ರಮಾಣ ಶೇ 5ರಷ್ಟಿದೆ. ಜನಸಂಖ್ಯೆಗೆ ಅನುಗುಣವಾಗಿ ಅದನ್ನು ಶೇ 8ಕ್ಕೆ ಏರಿಸಲು ಶಿಫಾರಸು ಮಾಡಲಾಗಿದೆ.

'3 ಎ' ಪಟ್ಟಿಯಲ್ಲಿರುವ ಒಕ್ಕಲಿಗ ಮತ್ತು ಅದರ ಉಪ ಜಾತಿಗಳ ಒಟ್ಟು ಜನಸಂಖ್ಯೆ 72 ಲಕ್ಷದಷ್ಟಿದೆ. ಒಕ್ಕಲಿಗರು 61.50 ಲಕ್ಷದಷ್ಟಿದ್ದಾರೆ. ಒಟ್ಟು ಮೀಸಲಾತಿ ಶೇ 4ರಷ್ಟಿದೆ. ಅದನ್ನು ಶೇ 7ಕ್ಕೆ ಹೆಚ್ಚಿಸಲು ಶಿಫಾರಸು ಮಾಡಲಾಗಿದೆ.



ಘಟಿಕೋತ್ಸವ ಸಂಭ್ರಮ

ಬೆಳಗಾವಿಯಲ್ಲಿ ಶುಕ್ರವಾರ ನಡೆದ ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ 13ನೇ ಘಟಿಕೋತ್ಸವದಲ್ಲಿ ನಿಡಸೋಸಿಯ ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ, ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ ದಾಸ್ ಮತ್ತು ವಿಜಯಪುರದ ಸೀಕ್ಯಾಬ್ ಸಂಸ್ಥಾಪಕ ಅಧ್ಯಕ್ಷ ಶಂಸುದ್ದೀನ್ ಅಬ್ದುಲ್ಲಾ ಪುಣೇಕರ ಅವರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿ ಎಂ.ಎ. ಸಪ್ನಾ, ಮೌಲ್ಯಮಾಪನ ಕುಲಸಚಿವ ಪ್ರೊ.ರವೀಂದ್ರನಾಥ ಕದಂ, ಕುಲಪತಿ ಪ್ರೊ. ಸಿ.ಎಂ.ತ್ಯಾಗರಾಜ, ರಾಜ್ಯಪಾಲ ಥಾವರಚಂದ್ ಗೆಹಲೋತ್, ಸಚಿವ ಡಾ.ಎಂ.ಸಿ. ಸುಧಾಕರ್, ಕುಲಸಚಿವ ಸಂತೋಷ ಕಾಮಗೌಡರ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಪ್ರಸರಣ ಜಾಲ, ಸಬ್‌ಸ್ಟೇಷನ್ ಮತ್ತು ಜಮೀನುಗಳ ನಗದೀಕರಣಕ್ಕೆ ಸಿದ್ಧತೆ

ಆಸ್ತಿ ನಗದೀಕರಣಕ್ಕೆ ಕೆಪಿಟಿಸಿಎಲ್ ತಯಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತನ್ನ ಒಡೆತನದ ಪ್ರಸರಣ ಜಾಲ, ಸಬ್‌ಸ್ಟೇಷನ್ ಮತ್ತು ಜಮೀನುಗಳ ನಗದೀಕರಣಕ್ಕೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮವು (ಕೆಪಿಟಿಸಿಎಲ್) ಸಿದ್ಧತೆ ನಡೆಸಿದೆ. ಈ ಮೂಲಕ ಖಾಸಗೀಕರಣಕ್ಕೆ ಕೆಪಿಟಿಸಿಎಲ್ ಮುಂದಾಗಿದೆ.

ಇದೇ ಜನವರಿಯಲ್ಲಿ ಬಿಡುಗಡೆಯಾದ ಕೆಪಿಟಿಸಿಎಲ್ ವಾರ್ಷಿಕ ವರದಿಯಲ್ಲಿ, ನಿಗಮದ ಆಸ್ತಿಗಳನ್ನು ನಗದೀಕರಣ ಮಾಡುವ ಬಗ್ಗೆ ಉಲ್ಲೇಖವಿತ್ತು. ಈ ಸಾಲಿನ ಬಜೆಟ್ ಭಾಷಣದಲ್ಲೂ ಆಸ್ತಿ ನಗದೀಕರಣದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದರು. ಅದನ್ನು ಕಾರ್ಯರೂಪಕ್ಕೆ ತರಲು ಕೆಪಿಟಿಸಿಎಲ್ ಈಗ ಪ್ರಸ್ತಾವ ಸಿದ್ಧಪಡಿಸಿದೆ.

'ಕೆಪಿಟಿಸಿಎಲ್ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್ ಪಾಂಡೆ ಅವರ ನೇತೃತ್ವದಲ್ಲಿಯೇ ಪ್ರಸ್ತಾಪ ಸಿದ್ಧವಾಗಿದೆ. ಏಪ್ರಿಲ್ 15 ಅಥವಾ 16ರಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಸಮ್ಮುಖದಲ್ಲಿ ನಡೆಯಲಿರುವ ಆಡಳಿತ ಮಂಡಳಿ ಸಭೆಯಲ್ಲಿ ಪ್ರಸ್ತಾವವನ್ನು ಇರಿಸಲಾಗುತ್ತದೆ' ಎಂದು ಮೂಲಗಳು ತಿಳಿಸಿವೆ.

'ಕೆಪಿಟಿಸಿಎಲ್‌ನ ನಿವ್ವಳ ಆಸ್ತಿಯಲ್ಲಿ ಶೇ 5ರಿಂದ 20ರಷ್ಟನ್ನು ಮೊದಲ ಹಂತದಲ್ಲಿ ನಗದೀಕರಣ ಮಾಡಬಹುದು ಎಂದು ಪ್ರಸ್ತಾವದಲ್ಲಿ ಉಲ್ಲೇಖಿಸಲಾಗಿದೆ. ಸಾರ್ವಜನಿಕ-ಖಾಸಗಿ ಪಾಲುದಾರಿಕೆ (ಪಿಪಿಪಿ) ಮಾದರಿಯಲ್ಲಿ ನಗದೀಕರಣ ಮಾಡಲಾಗುತ್ತದೆ. ಈ ಆಸ್ತಿಗಳ ಮಾಲೀಕತ್ವ ಪೂರ್ಣ ಪ್ರಮಾಣದಲ್ಲಿ ಖಾಸಗಿಯವರಿಗೆ ಹೋಗುವುದಿಲ್ಲ' ಎಂದು ಮೂಲಗಳು ತಿಳಿಸಿವೆ.

'ಕೆಪಿಟಿಸಿಎಲ್ ಒಟ್ಟು ಪ್ರಸರಣ ಜಾಲದಲ್ಲಿ, ನೆಲದಡಿ ಆಪ್ಟಿಕಲ್ ಫೈಬರ್ (ಒಪಿಜಿಡಬ್ಲ್ಯು) ಜಾಲವನ್ನು ಮಾತ್ರ ನಗದೀಕರಣಕ್ಕೆ ಆಯ್ಕೆ ಮಾಡಲಾಗಿದೆ. ಜತೆಗೆ ಬಳಕೆಯಾಗದೆ ಉಳಿದಿರುವ ಜಮೀನು ಮತ್ತು ಕಟ್ಟಡ ಗಳನ್ನು ನಗದೀಕರಣ ಮಾಡಲಾಗುತ್ತದೆ. ಜಮೀನುಗಳನ್ನು ಅಭಿವೃದ್ಧಿಪಡಿಸಿ, ಅವುಗಳಿಂದ ಆದಾಯ ಬರುವ ಹಾಗೆ ಮಾಡಲಾಗುತ್ತದೆ' ಎಂದು ಮಾಹಿತಿ ನೀಡಿವೆ.

ಮೌಲ್ಯ ಕುಗ್ಗಿಸಿದ ಆರೋಪ

'ಪ್ರಸರಣ ಜಾಲದ ನೈಜ ಮೌಲ್ಯವನ್ನು ಸವಕಳಿ ಹೆಸರಿನಲ್ಲಿ, ಕಡಿಮೆ ಅಂದಾಜು ಮಾಡಲಾಗಿದೆ. ಕಡಿಮೆ ಮಾಡಲಾದ ಮೌಲ್ಯದಲ್ಲೇ ನಗದೀಕರಣ ಮಾಡಿದರೆ ಕೆಪಿಟಿಸಿಎಲ್‌ಗೆ ನಷ್ಟವಾಗುತ್ತದೆ. ಇದು ಗೊತ್ತಿದ್ದೂ ಹಿರಿಯ ಅಧಿಕಾರಿಗಳು ಪ್ರಸ್ತಾವ ಸಿದ್ಧಪಡಿಸಿದ್ದಾರೆ' ಎಂದು ಕೆಪಿಟಿಸಿಎಲ್‌ನ ಅಧಿಕಾರಿಯೊಬ್ಬರು ಆರೋಪಿಸಿದರು.

ಅಂಕಿ ಅಂಶಗಳು

₹34,117 ಕೋಟಿ ಕೆಪಿಟಿಸಿಎಲ್‌ನ ಒಟ್ಟು ಆಸ್ತಿಯ ಮೌಲ್ಯ

₹13,310 ಕೋಟಿ ಸವಕಳಿ ಎಂದು ತೋರಿಸಲಾದ ಆಸ್ತಿಯ ಮೌಲ್ಯ

₹20,806 ಕೋಟಿ ಕೆಪಿಟಿಸಿಎಲ್‌ನ ನಿವ್ವಳ ಆಸ್ತಿಯ ಮೌಲ್ಯ, ಇದರಲ್ಲಿ ಶೇ 5ರಿಂದ 20ರವರೆಗೂ ನಗದೀಕರಣಕ್ಕೆ ಪ್ರಸ್ತಾವ

ಬೇಲೂರು: ರಥದ ಚಕ್ರಕ್ಕೆ ಬೆಂಕಿ

ಬೇಲೂರು (ಹಾಸನ): ಶುಕ್ರವಾರ ಇಲ್ಲಿ ನಡೆದ ಚನ್ನಕೇಶವ ಸ್ವಾಮಿ ದಿವ್ಯ ರಥೋತ್ಸವದ ವೇಳೆ ಭಕ್ತರು ಹಚ್ಚಿದ ಕರ್ಪೂರ, ಊದುಬತ್ತಿಯಿಂದ ಚಕ್ರದಲ್ಲಿ ಸಣ್ಣದಾಗಿ ಬೆಂಕಿ ಕಾಣಿಸಿಕೊಂಡಿತ್ತು.

ಪುರಸಭೆ ಆರೋಗ್ಯಾಧಿಕಾರಿ ಲೋಹಿತ್, ಪೌರ ಕಾರ್ಮಿಕರು ಬೆಂಕಿಯನ್ನು ನಂದಿಸಿದರು. ನಂತರ ಅಗ್ನಿಶಾಮಕ ದಳದ ಸಿಬ್ಬಂದಿ ಬಂದು ಪರಿಶೀಲಿಸಿ, ಹೆಚ್ಚಿನ ಪ್ರಮಾಣದ ನೀರನ್ನು ಚಕ್ರಕ್ಕೆ ಹಾಕಿದರು.

'ರಥದ ಚಕ್ರಕ್ಕೆ ಬೆಂಕಿ ಬಿದ್ದಿರುವುದರಿಂದ ಶನಿವಾರ ನಡೆಯುವ ಹೋಮದಲ್ಲಿ ವಿಶೇಷ ಪೂಜೆ ಸಲ್ಲಿಸಲಾಗುವುದು' ಎಂದು ದೇಗುಲದ ಪ್ರಧಾನ ಅರ್ಚಕ ಶ್ರೀನಿವಾಸ್ ಭಟ್ ತಿಳಿಸಿದರು.

'ಯತ್ನಾಳಗೆ ಕೊಲೆ ಬೆದರಿಕೆ: ಕಿಡಿಗೇಡಿಗಳ ಕೃತ್ಯ'

ಪ್ರಜಾವಾಣಿ ವಾರ್ತೆ

ವಿಜಯಪುರ: 'ಮುಹಮ್ಮದ್ ಪೈಗಂಬರ್ ಅವರಿಗೆ ಅವಮಾನಿಸಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳಗೆ ಏಪ್ರಿಲ್ 15 ಅಂತಿಮ ದಿನ' ಎಂಬ ಸಂದೇಶವುಳ್ಳ ಆಡಿಯೊ ಶುಕ್ರವಾರ 'ವಾಟ್ಸ್ ಆ್ಯಪ್'ನಲ್ಲಿ ಹರಿದಾಡಿದೆ.

ಹೀಗಾಗಿ, ಯತ್ನಾಳ ಅವರ ಬೆಂಬಲಿಗ ಗಿರೀಶ ಭಂಡಾರಕರ್ ಎಂಬುವರು, 'ಯತ್ನಾಳ ಅವರಿಗೆ ಕೇಂದ್ರ ಸರ್ಕಾರ 'ವೈ ಪ್ಲಸ್ ಶ್ರೇಣಿಯ ಭದ್ರತೆ ಒದಗಿಸಬೇಕು' ಎಂದು ಪ್ರಧಾನಿ ಮೋದಿ ಅವರಿಗೆ ಇ-ಮೇಲ್ ಮೂಲಕ ಕೋರಿದ್ದಾರೆ.

ಸಂದೇಶ ಏನು?: 'ವಿಜಯಪುರದ ಆಲಂಗೀರ್ ಸಭಾಂಗಣದಲ್ಲಿ ಎಂಎಂಸಿ ಸಭೆ ನಡೆದಿದ್ದು, ಮುಸ್ಲಿಂ ಸಮಾಜದ ಹಿರಿಯರೆಲ್ಲರೂ ಸೇರಿ ಯತ್ನಾಳ ಬಂಧನಕ್ಕೆ ಆಗ್ರಹಿಸಿ ಏಪ್ರಿಲ್ 15ರಂದು ವಿಜಯಪುರ ಬಂದ್ ನಡೆಸಲು ನಿರ್ಧರಿಸಿದ್ದೇವೆ. ಅಂದು ಒಂದು ಲಕ್ಷಕ್ಕೂ ಅಧಿಕ ಜನ ಸೇರಲಿದ್ದೇವೆ. ಅಂಬೇಡ್ಕರ್ ವೃತ್ತದಿಂದ ರ‍್ಯಾಲಿ ಆರಂಭಿಸಿ, ಯತ್ನಾಳ ಮನೆಗೆ ಮುತ್ತಿಗೆ ಹಾಕುತ್ತೇವೆ. ಅಂದು ಯತ್ನಾಳಗೆ ಅಂತಿಮ ದಿನವಾಗಲಿದೆ, ಮುಸ್ಲಿಮರು ಸಜ್ಜಾಗಿದ್ದೇವೆ' ಎಂದು ಎಚ್ಚರಿಕೆ ಸಂದೇಶದಲ್ಲಿ ನೀಡಲಾಗಿದೆ.



ಬಸನಗೌಡ ಪಾಟೀಲ ಯತ್ನಾಳ

ಬೆದರಿಕೆ ಸಂದೇಶ ನಕಲಿ: 'ವಿಜಯಪುರದಲ್ಲಿ ಯತ್ನಾಳ ವಿರುದ್ಧ ಮುಸ್ಲಿಮರಿಂದ ಯಾವುದೇ ಸಭೆ ನಡೆದಿಲ್ಲ. ಏಪ್ರಿಲ್ 15ರಂದು ವಿಜಯಪುರ ಬಂದ್‌ಗೆ ಕರೆ ನೀಡಿಲ್ಲ. ಸಮಾಜದ ಹೆಸರು ಕೆಡಿಸಲು ಯತ್ನಾಳ ಬೆಂಬಲಿಗರು ನಕಲಿ ಆಡಿಯೊ ಸಂದೇಶ ಹರಿಬಿಟ್ಟಿದ್ದಾರೆ. ಈ ಬಗ್ಗೆ ತನಿಖೆಯಾಗಲಿ' ಎಂದು ಮುಸ್ಲಿಂ ಸಮಾಜದ ಮುಖಂಡ, ವಕೀಲ ಆಸೀಫ್‌ವುಲ್ಲಾ ಖಾದ್ರಿ ಅವರು ತಿಳಿಸಿದ್ದಾರೆ.

ಕಿಡಿಗೇಡಿಗಳ ಕೃತ್ಯ: 'ಮೂರು ದಿನಗಳ ಹಿಂದೆ ಕಿಡಿಗೇಡಿಗಳು ಈ ಆಡಿಯೊ ಹರಿಬಿಟ್ಟಿದ್ದಾರೆ. ಇದರ ಬಗ್ಗೆ ಖಚಿತ ಮಾಹಿತಿ ಇಲ್ಲ. ಯಾರೂ ಈ ಸಂಬಂಧ ದೂರು ನೀಡಿಲ್ಲ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಲಕ್ಷ್ಮಣ ನಿಂಬರಗಿ 'ಪ್ರಜಾವಾಣಿ'ಗೆ ತಿಳಿಸಿದರು.

'ಬಸವ ಜಯಂತಿಯಂದು ಬೇರೆ ಜಯಂತಿ ಆಚರಣೆ ಬೇಡ'

ಪ್ರಜಾವಾಣಿ ವಾರ್ತೆ

ಹೊಸದುರ್ಗ: 'ಬಸವ ಜಯಂತಿಯಂದು ಬೇರೆಯವರ ಜಯಂತಿ ಆಚರಣೆ ಮಾಡುವುದು ಬೇಡ' ಎಂದು ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಕೋರಿದ್ದಾರೆ.



ಸಾಣೇಹಳ್ಳಿ ಶ್ರೀ

ಬಸವ ಜಯಂತಿ ಮತ್ತು ರೇಣುಕ ಜಯಂತಿಯನ್ನು ಒಂದೇ ದಿನ ಆಚರಿಸುವಂತೆ ಅಖಿಲ ಭಾರತ ವೀರಶೈವ ಲಿಂಗಾಯತ ಸಂಸ್ಥೆಯ ರಾಜ್ಯ ಘಟಕದ ಅಧ್ಯಕ್ಷ ಶಂಕರ ಬಿದರಿ ಅವರು ಆದೇಶ ಹೊರಡಿಸಿದ್ದಕ್ಕೆ ಪ್ರತಿಕ್ರಿಯಿಸಿದ ಪಂಡಿತಾರಾಧ್ಯ ಶ್ರೀ, 'ರೇಣುಕ ಜಯಂತಿ ಮಾಡುವ ಉದ್ದೇಶವೇನು? ಬಸವಣ್ಣ ಲಿಂಗಾಯತ ಧರ್ಮದ ಗುರು ಎಂದು ರೇಣುಕ ಪರಂಪರೆಯವರು ಒಪ್ಪುವರೇ? ಬಸವಣ್ಣ ಐತಿಹಾಸಿಕ ವ್ಯಕ್ತಿ. ರೇಣುಕರು? ಬಸವ ಜಯಂತಿಯಂದು ಬಸವಣ್ಣನವರ ವಿಚಾರಗಳು ಜನಮನಕ್ಕೆ ಮುಟ್ಟಬೇಕೇ ಹೊರತು ರೇಣುಕರು ಮತ್ತಿತರರ ವಿಚಾರಗಳಲ್ಲ' ಎಂದು ಗುರುವಾರ ಪ್ರಕಟಣೆ ಮೂಲಕ ಹೇಳಿದ್ದಾರೆ.

'ಬಸವಣ್ಣನವರ ತತ್ವ– ಸಿದ್ಧಾಂತಗಳು ಸಮಾಜಮುಖಿಯಷ್ಟೇ ಅಲ್ಲ, ಜೀವಪರವೂ ಹೌದು. ಅಲ್ಲಿ ಸಮಾನತೆ ಇದೆ. ಸಕಲ ಜೀವಾತ್ಮರ ಒಳಿತಿದೆ. ಆತ್ಮಕಲ್ಯಾಣದ ಜೊತೆ ಲೋಕಕಲ್ಯಾಣವೂ ಇದೆ. ಇಂತಹ ಸಾಂಸ್ಕೃತಿಕ ನಾಯಕ, ವಿಶ್ವಗುರು, ಲಿಂಗಾಯತ ಧರ್ಮದ ಸಂಸ್ಥಾಪಕ ಬಸವಣ್ಣನವರ ಆಶಯಗಳಿಗೆ ಮೆರುಗು ಬರಬೇಕಾದಲ್ಲಿ ಬಸವ ಜಯಂತಿಯಂದು ಬಸವಣ್ಣನವರ ಭಾವಚಿತ್ರದ ಮೆರವಣಿಗೆ, ಅವರ ಸಂದೇಶಗಳ ಚಿಂತನ ಮಂಥನ ನಾಡಿನಲ್ಲೆಲ್ಲ (ಏ. 30) ನಡೆಯುವುದು ಸ್ವಾಗತಾರ್ಹ. ಅಂದು ಬೇರೆ ಯಾರದೇ ಜಯಂತಿ ಖಂಡಿತಾ ಬೇಡ' ಎಂದು ತಿಳಿಸಿದ್ದಾರೆ.

ಚುನಾವಣೆಗೆ ಜಯಮೃತ್ಯುಂಜಯ ಸ್ವಾಮೀಜಿ ತಯಾರಿ: ಕಾಶಪ್ಪನವರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಖಾವಿ ಬಿಟ್ಟು, ಖಾದಿ ತೊಡಲು ಬಯಸಿದ್ದಾರೆ. ಮುಖಂಡರೊಬ್ಬರ ಜೊತೆ ಸೇರಿ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಲು ತಯಾರಿ ನಡೆಸಿದ್ದಾರೆ' ಎಂದು ಶಾಸಕ ವಿಜಯಾನಂದ ಕಾಶಪ್ಪನವರ ಆರೋಪಿಸಿದರು.



'ಬೆಳಗಾವಿಯಲ್ಲಿ ಚಳಿಗಾಲದ ವಿಧಾನಮಂಡಲ ಅಧಿವೇಶನ ವೇಳೆ ಸ್ವಾಮೀಜಿ ಮತ್ತು ನಾಯಕರು ಪಂಚಮಸಾಲಿ ಹೋರಾಟದ ನೆಪದಲ್ಲಿ, ಗಲಾಟೆ ಮಾಡಿಸಿದರು. ತಮ್ಮ ಮೇಲೆ ತಾವೇ ಕಲ್ಲು, ಚಪ್ಪಲಿ ತೂರಿಕೊಂಡು ಸರ್ಕಾರದ ವಿರುದ್ಧ ಅಪಪ್ರಚಾರ ಮಾಡಿದರು. ಇದಕ್ಕೆ ನಮ್ಮ ಬಳಿ ವಿಡಿಯೊ ಸಾಕ್ಷಿ ಇದೆ' ಎಂದು ಅವರು ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

'3 ವರ್ಷಗಳಿಂದ ಸಮಾಜಕ್ಕೆ 2ಎ ಮೀಸಲಾತಿ ಕೊಡಿಸಬೇಕೆಂದು ಹೋರಾಟ ನಡೆಸಿದ್ದೇವೆ. ಎರಡು ವರ್ಷಗಳ ಹಿಂದೆ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದ ವೇಳೆ ಬೆಂಗಳೂರಿನಲ್ಲಿ ಹೋರಾಟ ನಡೆಸಿದಾಗ, ಸ್ವಾಮೀಜಿ ಅವರು 'ಡೀಲ್' ಮಾಡಿಕೊಂಡು 2ಎ ಬದಲು 2ಸಿ–2ಡಿ ಮೀಸಲಾತಿಗೆ ಒಪ್ಪಿಗೆ ನೀಡಿದ್ದರು' ಎಂದರು.

'ಡೀಲ್ ಬಗ್ಗೆ ಸಂಶಯ ಬಂದಿದ್ದರಿಂದಲೇ 2ಸಿ–2ಡಿ ಮೀಸಲಾತಿ ವಿರೋಧಿಸಿದೆ. ಪಂಚಮಸಾಲಿ ಜೊತೆ ಅನಾಥ ಜಾತಿಗಳಿಗೆ 2ಸಿ– 2ಡಿ ಮೀಸಲಾತಿ ಕಲ್ಪಿಸಲಾಗಿದೆ ಎಂದು ರಾಜ್ಯ ಸರ್ಕಾರ ಆದೇಶ ಹೊರಡಿಸಿತ್ತು. ಹಾಗಾದರೆ, ಬಿಜೆಪಿ ಪಾಲಿಗೆ ಪಂಚಮಸಾಲಿ ಅನಾಥ ಜಾತಿಯೇ?' ಎಂದು ಅವರು ಪ್ರಶ್ನಿಸಿದರು.

'ಈ ಡೀಲ್ ಹಣದಿಂದ ಅವರು ದಾವಣಗೆರೆ ಸೇರಿ ಹಲವೆಡೆ ವೈಯಕ್ತಿಕವಾಗಿ ಜಾಗ ಖರೀದಿಸಿದ್ದಾರೆ. ಶಿಕ್ಷಣ ಸಂಸ್ಥೆ ನಡೆಸುತ್ತಿದ್ದಾರೆ. ಸ್ವಾಮೀಜಿಯಾದವರು ವೈಯಕ್ತಿಕ ಆಸ್ತಿ ಮಾಡಬಾರದೆಂದು ಟ್ರಸ್ಟ್ ಬೈಲಾದಲ್ಲಿ ಇದ್ದರೂ ಮಾಡಿಕೊಂಡಿದ್ದಾರೆ' ಎಂದರು.

'ಅವರು ಒಟ್ಟು ಸಮಾಜದ ಹಿತ ಕಾಪಾಡಬೇಕೇ ಹೊರತು, ಒಬ್ಬ ವ್ಯಕ್ತಿ ಅಥವಾ ರಾಜಕೀಯ ಪಕ್ಷದ ಪರ ಇರಬಾರದು. ಅವರು ತಮ್ಮ ನಡವಳಿಕೆ ಸುಧಾರಿಸದಿದ್ದರೆ ಒಂದು ವಾರದೊಳಗೆ ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜ ಟ್ರಸ್ಟ್‌ನ ಎಲ್ಲ ಪದಾಧಿಕಾರಿಗಳು, ಪಕ್ಷಾತೀತವಾಗಿ ಸಮಾಜದ ಎಲ್ಲ ಜನಪ್ರತಿನಿಧಿಗಳು ಸಭೆ ಸೇರಿ ಸ್ವಾಮೀಜಿ ವಿರುದ್ಧ ಸೂಕ್ತ ಕ್ರಮಕೈಗೊಳ್ಳುತ್ತೇವೆ' ಎಂದು ಎಚ್ಚರಿಕೆ ನೀಡಿದರು.

'ಅಮೃತ ಭಾರತ' ರೈಲು ಆರಂಭ ಶೀಘ್ರ: ಸೋಮಣ್ಣ

ಹಾವೇರಿ: 'ವಂದೇ ಭಾರತ ಮಾದರಿಯಲ್ಲಿ ಹವಾನಿಯಂತ್ರಣ ರಹಿತ 'ಅಮೃತ ಭಾರತ' ರೈಲುಗಳು ಬೆಂಗಳೂರಿನ ಬಿಇಎಲ್‌ನಲ್ಲಿ ತಯಾರಾಗುತ್ತಿದ್ದು, ಶೀಘ್ರವೇ ಹಳಿಗೆ ಇಳಿಯಲಿವೆ' ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಹೇಳಿದರು.

ನಗರದಲ್ಲಿ ವಂದೇ ಭಾರತ ರೈಲು ನಿಲುಗಡೆಗೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದ ಅವರು, 'ಬೆಳಗಾವಿ, ಹಾವೇರಿ, ಹುಬ್ಬಳ್ಳಿ ಮತ್ತು ಇತರೆಡೆ ಅಮೃತ ಭಾರತ ರೈಲು ನಿಲುಗಡೆ ಆಗಲಿದೆ. ಇದು ಎಲ್ಲರಿಗೂ ಮೆಚ್ಚುಗೆ ಆಗಲಿದೆ' ಎಂದರು.

'ಹುಬ್ಬಳ್ಳಿ– ಅಂಕೋಲಾ ರೈಲು ಮಾರ್ಗದ ಡಿಪಿಆರ್ ಮುಗಿದಿದ್ದು, ಮುಂದಿನ ಪ್ರಕ್ರಿಯೆಗಳು ನಡೆಯಬೇಕಿದೆ' ಎಂದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಆರೋಗ್ಯವೇ ಅತಿದೊಡ್ಡ ಉಡುಗೊರೆ, ನೆಮ್ಮದಿಯೇ ಮಹಾ ಸಂಪತ್ತು, ನಂಬಿಕೆಯೇ ನಿಜವಾದ ಸಂಬಂಧ.
–ಗೌತಮ ಬುದ್ಧ

ರಾಣಾ ಹಸ್ತಾಂತರ: ಪ್ರಕರಣ ತಾರ್ಕಿಕ ಅಂತ್ಯ ತಲುಪಲಿ

ಮುಂಬೈ ಮೇಲೆ ನಡೆದ ಭಯೋತ್ಪಾದನಾ ದಾಳಿಯ ಸಂಚುಕೋರರಲ್ಲಿ ಒಬ್ಬನಾಗಿರುವ ತಹವ್ವುರ್ ರಾಣಾನನ್ನು ಭಾರತಕ್ಕೆ ಅಮೆರಿಕ ಹಸ್ತಾಂತರಿಸಿರುವುದು ಭಯೋತ್ಪಾದನೆ ವಿರುದ್ಧದ ಭಾರತದ ಕಾರ್ಯಾಚರಣೆಯಲ್ಲಿ ಮಹತ್ವದ ಘಟನೆಯಾಗಿದೆ. ರಾಣಾನನ್ನು ದೆಹಲಿಗೆ ಗುರುವಾರ ಕರೆತರಲಾಗಿದೆ. ಪಾಕಿಸ್ತಾನದ ಗುಪ್ತಚರ ಸಂಸ್ಥೆ ಇಂಟರ್ ಸರ್ವಿಸಸ್ ಇಂಟಲಿಜೆನ್ಸ್ (ಐಎಸ್‌ಐ) ಒತ್ತಾಸೆಯಲ್ಲಿ 2008ರಲ್ಲಿ ಮುಂಬೈ ಮೇಲೆ ನಡೆದ ದಾಳಿ ಮತ್ತು ಇತರ ಭಯೋತ್ಪಾದನಾ ಚಟುವಟಿಕೆಗಳಲ್ಲಿ ಆತನ ಪಾತ್ರ ಏನು ಎಂಬುದರ ಕುರಿತು ಕಾನೂನು ಪ್ರಕ್ರಿಯೆಯನ್ನು ರಾಣಾ ಇಲ್ಲಿ ಎದುರಿಸಬೇಕಾಗುತ್ತದೆ. ಆತನನ್ನು ದೆಹಲಿಯಲ್ಲಿ ಎನ್‌ಐಎ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಆತನ ವಿಚಾರಣೆಯು ಈ ನ್ಯಾಯಾಲಯದಲ್ಲಿಯೇ ನಡೆಯಲಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಶ್ವೇತಭವನದಲ್ಲಿ ಎರಡು ತಿಂಗಳ ಹಿಂದೆ ನಡೆಸಿದ ಜಂಟಿ ಮಾಧ್ಯಮಗೋಷ್ಠಿಯಲ್ಲಿ ರಾಣಾನನ್ನು ಹಸ್ತಾಂತರಿಸುವ ವಿಚಾರವನ್ನು ಘೋಷಿಸಲಾಗಿತ್ತು. 'ಕೆಡುಕ ರಾಣಾ'ನನ್ನು ಭಾರತದಲ್ಲಿ ವಿಚಾರಣೆ ಎದುರಿಸುವುದಕ್ಕಾಗಿ ಹಸ್ತಾಂತರ ಮಾಡಲಾಗುವುದು ಎಂದು ಟ್ರಂಪ್ ಘೋಷಿಸಿದ್ದರು. 2009ರಲ್ಲಿಯೇ ಆರಂಭವಾದ ರಾಜತಾಂತ್ರಿಕ, ಕಾನೂನಾತ್ಮಕ ಮತ್ತು ಗುಪ್ತಚರ ಸಂಸ್ಥೆಗಳ ಸುದೀರ್ಘ ಪ್ರಯತ್ನದ ನಂತರ ಹಸ್ತಾಂತರ ಸಾಧ್ಯವಾಗಿದೆ. ವಿವಿಧ ಕಾರಣಗಳಿಗಾಗಿ ರಾಣಾನ ಹಸ್ತಾಂತರ ವಿಳಂಬವಾಯಿತು. ರಾಣಾ ಸಲ್ಲಿಸಿದ್ದ ಎಲ್ಲ ಆಕ್ಷೇಪಗಳು ಮತ್ತು ಮನವಿಗಳನ್ನು ಅಮೆರಿಕದ ಸುಪ್ರೀಂ ಕೋರ್ಟ್ ತಳ್ಳಿಹಾಕಿದ ಬಳಿಕ ಹಸ್ತಾಂತರಿಸಲಾಗಿದೆ.



ರಾಣಾ ವಿಚಾರಣೆ ತ್ವರಿತವಾಗಿ ಪೂರ್ಣಗೊಳ್ಳಲಿ. ದಾಳಿಯ ಸಂಚಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಹೊರಬರಲಿ

ತಹವ್ವುರ್ ರಾಣಾ ಪಾಕಿಸ್ತಾನ ಮೂಲದ ಕೆನಡಾ–ಅಮೆರಿಕ ಪ್ರಜೆ. ಈತ ಪಾಕಿಸ್ತಾನ ಸೇನೆಯಲ್ಲಿ ವೈದ್ಯನಾಗಿ ಕೆಲಸ ಮಾಡಿದ್ದ, ಷಿಕಾಗೊದಲ್ಲಿ ಟ್ರಾವೆಲ್ ಏಜೆನ್ಸಿ ಹೊಂದಿದ್ದ. ಮುಂಬೈ ದಾಳಿಯ ಸಂಚುಕೋರರಲ್ಲಿ ಒಬ್ಬನಾಗಿರುವ ಡೇವಿಡ್ ಹೆಡ್ಲಿ ಈ ಟ್ರಾವೆಲ್ ಏಜೆನ್ಸಿಯನ್ನು ಬಳಸಿಕೊಂಡು ದಾಳಿಗೆ ಮುನ್ನ ಭಾರತಕ್ಕೆ ಬಂದಿದ್ದ ಎನ್ನಲಾಗಿದೆ. ಹೆಡ್ಲಿ ಮಾಫಿಸಾಕ್ಷಿಯಾಗಿದ್ದಾನೆ. 166 ಜನರ ಸಾವಿಗೆ ಕಾರಣವಾದ 2008ರ ನವೆಂಬರ್ 26–29ರ ಮುಂಬೈ ದಾಳಿಯಲ್ಲಿ ರಾಣಾನ ಪಾತ್ರದ ಕುರಿತು ಮಾಹಿತಿ ನೀಡಿದ್ದಾನೆ. ಭಾರತದ ತನಿಖಾ ಸಂಸ್ಥೆಗಳು ಆತನನ್ನು ತನಿಖೆಗೆ ಒಳಪಡಿಸಬೇಕಿದೆ ಮತ್ತು ದಾಳಿಯಲ್ಲಿ ಆತನ ಪಾತ್ರ, ಪಾಕಿಸ್ತಾನದ ಸರ್ಕಾರ ಹಾಗೂ ಅಲ್ಲಿನ ಭಯೋತ್ಪಾದನಾ ಗುಂಪುಗಳ ಪಾತ್ರ ಏನು ಎಂಬ ವಿವರಗಳನ್ನು ಪಡೆದುಕೊಳ್ಳಬೇಕಿದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ನಿಷೇಧಿತವಾಗಿರುವ ಲಷ್ಕರ್ ಎ ತಯಬಾ ಉಗ್ರಗಾಮಿ ಸಂಘಟನೆಯೊಂದಿಗೆ ರಾಣಾ ಹೊಂದಿರುವ ನಂಟು ಈಗಾಗಲೇ ಸಾಬೀತಾಗಿದೆ. ಇದಕ್ಕಾಗಿ ಆತ ಅಮೆರಿಕದಲ್ಲಿ ಶಿಕ್ಷೆಗೂ ಒಳಗಾಗಿದ್ದಾನೆ. ಲಷ್ಕರ್ ಜೊತೆಗೆ ಗುರುತಿಸಿಕೊಂಡಿದ್ದ 10 ಭಯೋತ್ಪಾದಕರು ಮುಂಬೈ ದಾಳಿಯನ್ನು ನಡೆಸಿದ್ದರು. ಅಜ್ಮಲ್ ಕಸಬ್ ಒಬ್ಬನನ್ನು ಬಿಟ್ಟು ಉಳಿದ ಎಲ್ಲರೂ ಕಾರ್ಯಾಚರಣೆಯಲ್ಲಿ ಸಾವಿಗೀಡಾದರು. ಕಸಬ್‌ನನ್ನು ವಿಚಾರಣೆಗೆ ಒಳಪಡಿಸಿ 2012ರಲ್ಲಿ ಗಲ್ಲು ಶಿಕ್ಷೆ ವಿಧಿಸಲಾಗಿದೆ. ಇಡೀ ಸಂಚು ಮತ್ತು ಅದನ್ನು ಹೇಗೆ ಕಾರ್ಯರೂಪಕ್ಕೆ ತರಲಾಯಿತು ಎಂಬ ಮಾಹಿತಿಯನ್ನು ಕಸಬ್ ಬಹಿರಂಗಪಡಿಸಿದ್ದ. ರಾಣಾನ ವಿಚಾರಣೆಯಿಂದ ಈವರೆಗೆ ತಿಳಿಯದೇ ಇರುವ ಅಂಶಗಳು ಕೂಡ ತಿಳಿದು ಬರಬಹುದು.

ತಹವ್ವುರ್ ರಾಣಾ ಜೊತೆಗೆ ಯಾವುದೇ ನಂಟು ಇಲ್ಲ ಎಂದು ಪಾಕಿಸ್ತಾನ ಸರ್ಕಾರ ಹೇಳಿದೆ. ಆತ ಕೆನಡಾ–ಅಮೆರಿಕ ಪ್ರಜೆ ಎಂದು ಕೂಡ ಪಾಕಿಸ್ತಾನ ಹೇಳಿದೆ. ಇದೊಂದು ಸಹಜ ಪ್ರತಿಕ್ರಿಯೆ. ಇಂತಹ ನಿರಾಕರಣೆಯನ್ನು ಒಪ್ಪುವುದು ಸಾಧ್ಯವಿಲ್ಲ. ಏಕೆಂದರೆ, ಸಂಚುಗಳು ಮತ್ತು ರಹಸ್ಯ ಕಾರ್ಯಾಚರಣೆಯ ಸಂದರ್ಭದಲ್ಲಿ ಈ ರೀತಿಯ ನಿರಾಕರಣೆ ಇದ್ದಿದ್ದೇ. ಮುಂಬೈ ದಾಳಿ ಮತ್ತು ಭಾರತದಲ್ಲಿ ನಡೆದ ಇತರ ಭಯೋತ್ಪಾದನಾ ಚಟುವಟಿಕೆಗಳಲ್ಲಿ ಪಾಕಿಸ್ತಾನದ ಪಾತ್ರ ಇದೆ ಎಂಬುದು ಹಲವು ರೀತಿಯಲ್ಲಿ ಸಾಬೀತಾಗಿದೆ. ಅದನ್ನು ದೃಢಪಡಿಸಲು ತಹವ್ವುರ್ ರಾಣಾ ಮಾಹಿತಿ ನೀಡುವ ಅಗತ್ಯವೇನೂ ಇಲ್ಲ. ಆತನನ್ನು ನ್ಯಾಯಾಂಗದ ಮುಂದೆ ನಿಲ್ಲಿಸಿ, ಸಂತ್ರಸ್ತರಿಗೆ ನ್ಯಾಯ ದೊರಕಿಸುವುದು ಮತ್ತು ಪ್ರಕರಣವನ್ನು ಮುಕ್ತಾಯಗೊಳಿಸುವುದು ಇಲ್ಲಿ ಮುಖ್ಯವಾಗಿದೆ. ಭಯೋತ್ಪಾದನೆಯಂತಹ ಗಂಭೀರ ಪ್ರಕರಣಗಳಲ್ಲಿ ಕೂಡ ಬೇರೊಂದು ದೇಶದಿಂದ ಆರೋಪಿಯನ್ನು ವಶಕ್ಕೆ ಪಡೆಯಲು ಎಷ್ಟೊಂದು ಪ್ರಯಾಸಪಡಬೇಕು ಎಂಬುದನ್ನೂ ರಾಣಾ ಪ್ರಕರಣವು ತೋರಿಸಿಕೊಟ್ಟಿದೆ.

ಬಾಹ್ಯಾಕಾಶ ಚಟುವಟಿಕೆ ಮೇಲಿನ ನಿಯಂತ್ರಣಕ್ಕೆ ಬೇಕೊಂದು ಜಾಗತಿಕ ಪ್ರಾಧಿಕಾರ

'ಬಾಹ್ಯ' ತ್ಯಾಜ್ಯ: ಏನೀ ವ್ಯಾಜ್ಯ?



ವಿಶ್ಲೇಷಣೆ

ಚಿರಂತನ್ ಕೆ.

ದೇಶದ ಅತ್ಯಂತ ಪ್ರತಿಷ್ಠಿತ ಹಾಗೂ ಕಲುಷಿತ ನಗರವಾದ ದೆಹಲಿಯಲ್ಲಿ ಒಂದು ವರ್ಷದಿಂದ ಇದ್ದ ನನಗೆ, ಈಚೆಗೆ ತುಮಕೂರು ಜಿಲ್ಲೆಯ ಊರೊಂದರಲ್ಲಿ ಆಕಾಶ ನೋಡಿ ಆನಂದವಾಯಿತು. ಬರಲಿದ್ದ ಹುಣ್ಣಿಮೆಯ ಚಂದ್ರನ ಬೆಳಕು ಆವರಿಸಿತ್ತು. ಆ ಶುಭ್ರ ಆಗಸದಲ್ಲಿ ನಕ್ಷತ್ರಗಳು ಮತ್ತು ಗ್ರಹಗಳನ್ನು ಗುರುತಿಸಲು ಪ್ರಾರಂಭಿಸಿದೆ. ಚಲಿಸುತ್ತಿದ್ದ ಆಕಾಶಕಾಯಗಳನ್ನು ಕಂಡು, ಅವು ಕಕ್ಷೆಯಲ್ಲಿರುವ ಉಪಗ್ರಹಗಳು ಎಂದುಕೊಂಡೆ. ಅವನ್ನು ಗುರುತಿಸಲು ಮೊಬೈಲ್ ಫೋನ್‌ನಲ್ಲಿ ನನ್ನ ಸ್ಟೆಲ್ಲೇರಿಯಮ್ ಅಪ್ಲಿಕೇಷನ್ ಓಪನ್ ಮಾಡಿ, ಮೂರ್ನಾಲ್ಕು ಸ್ಟಾರ್‌ಲಿಂಕ್ ಉಪಗ್ರಹಗಳನ್ನು ಗುರುತಿಸಿದೆ. ರಾಕೆಟ್ ಬಾಡಿ ಎಂದು ಗುರುತಿಸಲಾದ ಚಲಿಸುವ ವಸ್ತುವನ್ನು ಕಂಡು ಅಚ್ಚರಿಗೊಂಡೆ. ಇದು ಸುಮಾರು 800 ಕಿ.ಮೀ. ಎತ್ತರದಲ್ಲಿ ಪರಿಭ್ರಮಿಸುತ್ತಿದ್ದ 'ಟೈಟಾನ್-4ಬಿ' ರಾಕೆಟ್ಟಿನ ಅವಶೇಷ. ಅದನ್ನು 'ಲ್ಯಾಕ್ರೋಸ್ 4' ಎಂಬ ಉಪಗ್ರಹವನ್ನು ಲಾಂಚ್ ಮಾಡಲು ಉಪಯೋಗಿಸಲಾಗಿತ್ತು. ಇದು ನಾನು ನನ್ನ ಬರಿಗಣ್ಣಿನಲ್ಲಿ ಕಂಡ ಮೊದಲ 'ಸ್ಪೇಸ್ ಡೆಬ್ರಿಸ್' ಅಥವಾ ಬಾಹ್ಯಾಕಾಶ ತ್ಯಾಜ್ಯ.

ಏನಿದು ಬಾಹ್ಯಾಕಾಶ ತ್ಯಾಜ್ಯ? ಭೂಮಿಯ ಕಕ್ಷೆಯಲ್ಲಿ ಇರುವ ನಿಷ್ಕ್ರಿಯ ಉಪಗ್ರಹಗಳನ್ನು, ಬಾಹ್ಯಾಕಾಶದಲ್ಲಿರುವ ಮಾನವ ನಿರ್ಮಿತ ಅವಶೇಷಗಳನ್ನು 'ಸ್ಪೇಸ್ ಡೆಬ್ರಿಸ್' ಎನ್ನುತ್ತೇವೆ. ಅವು ಚುಕ್ಕೆ ಗಾತ್ರದಿಂದ ಹಿಡಿದು ಉಪಗ್ರಹ ಅಥವಾ ರಾಕೆಟ್‌ಗಳಿಗಿಂತ ದೊಡ್ಡದಾಗಿರಬಹುದು.

1957ರಲ್ಲಿ ಅಮೆರಿಕ, ರಷ್ಯಾ ನಡುವಿನ ಶೀತಲ ಸಮರದ ಪರಿಣಾಮವಾಗಿ ನಡೆದ ಸ್ಪುಟ್ನಿಕ್ ಉಡಾವಣೆಯು ಮಾನವನ ಬಾಹ್ಯಾಕಾಶ ಯಾತ್ರೆಯ ಮೊದಲ ಮೈಲಿಗಲ್ಲಾಗಿತ್ತು. ಇದು ನಿಧಾನವಾಗಿ ಮಾನವರ ದೈನಂದಿನ ಚಟುವಟಿಕೆಗಳೂ ಸೇರಿದಂತೆ ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ ಕೊಡುಗೆ ನೀಡಲು ಪ್ರಾರಂಭಿಸಿತು. ಈಗ ನಮ್ಮ ಪ್ರವಾಸ, ಇಂಟರ್ನೆಟ್, ಬ್ಯಾಂಕಿಂಗ್‌ನಂತಹವುಗಳ ಜೊತೆಗೆ ರಾಷ್ಟ್ರೀಯ ಭದ್ರತೆ, ಹವಾಮಾನ ಮೇಲ್ವಿಚಾರಣೆಯಂತಹ ಕ್ಷೇತ್ರಗಳ ಅಭಿವೃದ್ಧಿಯು ಬಾಹ್ಯಾಕಾಶದಲ್ಲಿರುವ ಉಪಗ್ರಹಗಳನ್ನು ಅವಲಂಬಿಸಿದೆ.

ಆದರೆ ಸಕ್ರಿಯ ಅವಧಿಯ ನಂತರವೂ ಅಲ್ಲೇ ಉಳಿಯುವ ನಿಷ್ಕ್ರಿಯ ಉಪಗ್ರಹಗಳಿಂದ ಉಂಟಾಗಬಹುದಾದ ಸಮಸ್ಯೆಗಳ ಬಗ್ಗೆ ವಿಜ್ಞಾನಿಗಳು ಮೊದಮೊದಲು ಕಾಳಜಿ ವಹಿಸಿರಲಿಲ್ಲ. ಅಂತಹ ಉಪಗ್ರಹಗಳನ್ನು ಕಕ್ಷೆಯಿಂದ ತೆಗೆದುಹಾಕುವ ಯಾವುದೇ ಪ್ರಯತ್ನ ಅಥವಾ ಅದಕ್ಕಾಗಿ ನಿಯಮಗಳನ್ನು ರೂಪಿಸಬೇಕಾದ ಅಗತ್ಯವಿತ್ತು. ಏಕೆಂದರೆ, ಆಕಾಶ ತ್ಯಾಜ್ಯದ ಸಣ್ಣ ತುಣುಕು ಕೂಡ ಗಮನಾರ್ಹ ಆತಂಕ ಉಂಟು ಮಾಡಬಲ್ಲದು. ಇದಕ್ಕೆ ಕಾರಣ, ಅದರ ಚಲನೆಯ ವೇಗ. ಬಾಹ್ಯಾಕಾಶದಲ್ಲಿ ಈ ತ್ಯಾಜ್ಯಗಳು ಗಂಟೆಗೆ 25,200- 28,800 ಕಿ.ಮೀ.ನಷ್ಟು ವೇಗವಾಗಿ ಚಲಿಸಬಲ್ಲವು. ಇದು ಬುಲೆಟ್‌ನ ವೇಗಕ್ಕಿಂತ ಏಳು ಪಟ್ಟು ಹೆಚ್ಚು. ಒಂದು ಬಾಹ್ಯಾಕಾಶ ನೌಕೆ ಈ ತ್ಯಾಜ್ಯಗಳ ಕಡೆ ಚಲಿಸುತ್ತಿದ್ದರೆ, ಘರ್ಷಣೆಯ ಸಮಯದಲ್ಲಿ ಅವುಗಳ ವೇಗ ಇನ್ನೂ ಹೆಚ್ಚಬಹುದು. ಇದು ದುರಂತಕ್ಕೆ ಕಾರಣವಾಗಬಹುದು.

ಈ ತ್ಯಾಜ್ಯಗಳು ಇತರ ಬಾಹ್ಯಾಕಾಶ ವಸ್ತುಗಳೊಂದಿಗೆ ಡಿಕ್ಕಿ ಹೊಡೆಯುವ ಸಾಧ್ಯತೆಯು ಪರಿಸ್ಥಿತಿಯನ್ನು ಇನ್ನಷ್ಟು ಗಂಭೀರವಾಗಿಸುತ್ತದೆ. ಎರಡು ಅನಿಯಂತ್ರಿತ ತುಣುಕುಗಳು ಡಿಕ್ಕಿ ಹೊಡೆದರೆ, ಅದು ಸರಪಳಿ ಕ್ರಿಯೆಗೆ ಕಾರಣವಾಗುತ್ತದೆ, ಸಾವಿರಾರು ಸಣ್ಣ ತುಣುಕುಗಳನ್ನು ಉತ್ಪಾದಿಸುತ್ತದೆ. ಆದರೂ ಒಂದು ಸಂಭಾವ್ಯ ಘರ್ಷಣೆಯಲ್ಲಿ ಒಂದು ಸಕ್ರಿಯ ಉಪಗ್ರಹ ಹಾಗೂ ಮತ್ತೊಂದು ಗುರುತಿಸಬಲ್ಲ ವಸ್ತು ಭಾಗಿಯಾಗಿದ್ದರೆ, ನಿಯಂತ್ರಣ ಕ್ರಮಗಳ ಮೂಲಕ ಘರ್ಷಣೆಯನ್ನು ತಪ್ಪಿಸಬಹುದು. ಆದರೆ ಅತಿಚಿಕ್ಕ ತುಣುಕುಗಳಿದ್ದರೆ ಅವನ್ನು ಹುಡುಕುವುದು ಕಷ್ಟ. ಈ ತುಣುಕುಗಳು ಸಕ್ರಿಯ ಬಾಹ್ಯಾಕಾಶ ನೌಕೆಯನ್ನು ನಾಶ ಮಾಡಿ, ತ್ಯಾಜ್ಯದ ಪ್ರಮಾಣವನ್ನು ಹೆಚ್ಚಿಸುತ್ತವೆ. ತ್ಯಾಜ್ಯದ ಈ ಅನಿಯಂತ್ರಿತ ಸಂಗ್ರಹವು ಭವಿಷ್ಯದ ಬಾಹ್ಯಾಕಾಶ ಯಾತ್ರೆಗಳಿಗೆ ತೀವ್ರ ಅಡ್ಡಿ ಉಂಟುಮಾಡಬಹುದು, ಜಾಗತಿಕ ಉಪಗ್ರಹ ಕಾರ್ಯಾಚರಣೆಗಳ ಮೇಲೂ ಪರಿಣಾಮ ಬೀರಬಹುದು.

ಕೆಲ ಬಗೆಯ ತ್ಯಾಜ್ಯಗಳು ಭೂಮಿಯ ಕೆಳಕಕ್ಷೆಯಲ್ಲಿ ಇದ್ದರೆ, ನಿಧಾನವಾಗಿ ಅಲ್ಲಿಂದ ಕೆಳಗಿಳಿಯಬಹುದು. ಹೀಗೆ ಇಳಿಯುವಾಗ ಮತ್ತೆ ಭೂಮಿಯ ವಾತಾವರಣವನ್ನು ಪ್ರವೇಶಿಸಿ, ಭೂಮಿಯ ಮೇಲೆ ಅಥವಾ ಸಾಗರದಲ್ಲಿ ಬೀಳಬಹುದು ಅಥವಾ ನಮ್ಮ ಮನೆಯ ಚಾವಣಿಯ ಮೇಲೂ ಬೀಳಬಹುದು. 2024ರ ಮಾರ್ಚ್ 8ರಂದು ಮಧ್ಯಾಹ್ನ, ಅಮೆರಿಕದ ಫ್ಲಾರಿಡಾದ ನೇಪಲ್‌ನಲ್ಲಿರುವ ಕಡಲತೀರದ ಮನೆಯೊಂದರ ಚಾವಣಿಯನ್ನು ಸೀಳಿ ವಸ್ತುವೊಂದು ಒಳಗೆ ಬಿತ್ತು. ಇದನ್ನು ಶೋಧಿಸಲು ನಾಸಾ ತಂಡವನ್ನು ಕರೆಯಲಾಯಿತು. ಇದು ಭೂಮಿಯನ್ನು ಪ್ರತಿ 90 ನಿಮಿಷಕ್ಕೆ ಒಂದು ಬಾರಿ ಸುತ್ತುವ ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಿಂದ (ಐಎಸ್‌ಎಸ್) 2021ರಲ್ಲಿ ಹೊರಹಾಕಲ್ಪಟ್ಟ ಒಂದು ಹಳೆಯ ಬ್ಯಾಟರಿ ಪ್ಯಾಲೆಟ್‌ನ ಭಾಗ ಎಂದು ಈ ಶೋಧನೆ ಹೇಳಿತು. ಇದರ ತೂಕ 0.7 ಕೆ.ಜಿ. ಇದು ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಿಂದ ಹೊರಹಾಕಲ್ಪಟ್ಟ ಮೊದಲ ವಸ್ತುವೇನಲ್ಲ. ಹಲವೊಮ್ಮೆ ಹೀಗೆ ತ್ಯಾಜ್ಯವಸ್ತುಗಳು ಹೊರಹಾಕಲ್ಪಡುತ್ತವೆ. ಅನೇಕ ಸಲ ಇವು ಭೂಮಿಯ ವಾತಾವರಣವನ್ನು ಪ್ರವೇಶಿಸುವಾಗ, ಅಲ್ಲಿನ ತಾಪಮಾನದಲ್ಲಿನ ವ್ಯತ್ಯಾಸಕ್ಕೆ ಸಿಲುಕಿ ಸುಟ್ಟು ಹೋಗುತ್ತವೆ.

ಆತಂಕದ ಸಂಗತಿಯೆಂದರೆ, ತ್ಯಾಜ್ಯಗಳಿಂದ ಬಾಹ್ಯಾಕಾಶದಲ್ಲಿ ಯಾವುದೇ ಅನಾಹುತವಾದರೂ ಯಾವ ದೇಶದ ಬಾಹ್ಯಾಕಾಶ ಸಂಸ್ಥೆಯೂ ಇದರ ಹೊಣೆ ಹೊರುವುದಿಲ್ಲ. 2009ರ ಫೆಬ್ರುವರಿ 10ರಂದು ನಡೆದ ಎರಡು ಉಪಗ್ರಹಗಳ ನಡುವಿನ ಬಾಹ್ಯಾಕಾಶ ಘರ್ಷಣೆಯೇ ಮೊದಲ ಮತ್ತು ಅತಿದೊಡ್ಡ ಘರ್ಷಣೆ. ಈ ಪ್ರಕರಣದಲ್ಲಿ ಅಮೆರಿಕದ ಇರಿಡಿಯಮ್-33 ಮತ್ತು ರಷ್ಯಾದ ನಿಷ್ಕ್ರಿಯವಾಗಿದ್ದ ಕೊಸ್ಮೋಸ್-2251 ಮಿಲಿಟರಿ ಉಪಗ್ರಹ ಗಂಟೆಗೆ 42,120 ಕಿ.ಮೀ. ವೇಗದಲ್ಲಿ ಅಪ್ಪಳಿಸಿದವು. ಇದು ಸಾವಿರಾರು ಅವಶೇಷಗಳ ತುಣುಕುಗಳನ್ನು ಉತ್ಪಾದಿಸಿತು. ಈ ಘರ್ಷಣೆಯ ಹೊಣೆಯನ್ನು ಅಮೆರಿಕವಾಗಲೀ ರಷ್ಯಾವಾಗಲೀ ಹೊರಲಿಲ್ಲ. ಇದು ಅಂತರರಾಷ್ಟ್ರೀಯ ಬಾಹ್ಯಾಕಾಶ ಕಾನೂನುಗಳಲ್ಲಿರುವ ಸಮಸ್ಯೆಯನ್ನು ಸೂಚಿಸುತ್ತದೆ.

ಆ ಕಾಲದಲ್ಲಿ ಉಪಗ್ರಹ ನಿರ್ವಾಹಕರಿಗೆ ನಿಷ್ಕ್ರಿಯ ಉಪಗ್ರಹಗಳನ್ನು ವಿಂಗಡಿಸಲು ಯಾವುದೇ ಕಡ್ಡಾಯ ನಿಯಮಗಳಿರಲಿಲ್ಲ. ಆದ್ದರಿಂದ, 1995ರಿಂದ 'ಕೊಸ್ಮೋಸ್-2251 ನಿಷ್ಕ್ರಿಯವಾಗಿದೆ, ತನ್ನ ನಿಯಂತ್ರಣ ಮೀರಿದೆ' ಎಂದು ರಷ್ಯಾ ಸರ್ಕಾರ ಹೇಳಿತು. ಘರ್ಷಣೆಯನ್ನು ತಪ್ಪಿಸುವುದು ತನ್ನ ಜವಾಬ್ದಾರಿಯಲ್ಲ ಎಂದು ವಾದಿಸಿತು. ಇಂಥ ಪ್ರಕರಣಗಳು ಹೆಚ್ಚಾದ ನಂತರ ನಿಯಂತ್ರಕ ಸಂಸ್ಥೆಗಳು '25 ವರ್ಷಗಳ ನಿಯಮ'ವನ್ನು ರೂಪಿಸಿದವು. ಭೂಮಿಯ ಕೆಳ ಕಕ್ಷೆಯಲ್ಲಿರುವ ಉಪಗ್ರಹಗಳ ಗುರಿ ಪೂರ್ಣಗೊಂಡ 25 ವರ್ಷಗಳ ಒಳಗೆ ಅವನ್ನು ಕಕ್ಷೆಯಿಂದ ತೆಗೆದುಹಾಕಬೇಕು ಅಥವಾ ಸುರಕ್ಷಿತ ಸ್ಮಶಾನ ಕಕ್ಷೆಗೆ ಸ್ಥಳಾಂತರಿಸಬೇಕು ಎಂದು ಈ ನಿಯಮ ಹೇಳುತ್ತದೆ.


2022ರಲ್ಲಿ, ಅಮೆರಿಕದ ಫೆಡರಲ್ ಕಮ್ಯುನಿಕೇಷನ್ಸ್ ಕಮಿಷನ್ (ಎಫ್‌ಸಿಸಿ) ಈ ನಿಯಮವನ್ನು ಮತ್ತಷ್ಟು ಬಿಗಿಗೊಳಿಸಿತು. ಅಮೆರಿಕದ ಪರವಾನಗಿ ಪಡೆದ ಉಪಗ್ರಹಗಳನ್ನು ಭೂಕಕ್ಷೆಯಿಂದ ಐದು ವರ್ಷಗಳ ಒಳಗೆ ತೆಗೆಯಬೇಕೆಂದು ಹೇಳಿತು. ಇಷ್ಟಾಗಿಯೂ ಬಾಹ್ಯಾಕಾಶ ನಿಯಮಗಳನ್ನು ಜಾರಿಗೊಳಿಸಲು ಸಮಗ್ರ ಅಂತರರಾಷ್ಟ್ರೀಯ ಸಂಸ್ಥೆ ಇಲ್ಲ. ಯುನೈಟೆಡ್ ನೇಷನ್ಸ್ ಆಫೀಸ್ ಫಾರ್ ಔಟರ್ ಸ್ಪೇಸ್ ಅಫೇರ್ಸ್ (ಯುಎನ್‌ಒಒಎಸ್‌ಎ) ಮತ್ತು ಇಂಟರ್-ಏಜೆನ್ಸಿ ಸ್ಪೇಸ್ ಡೆಬ್ರಿಸ್ ಕೋಆರ್ಡಿನೇಷನ್ ಕಮಿಟಿಯಂಥ (ಐಎಡಿಸಿ) ಸಂಸ್ಥೆಗಳು ನಿಗದಿಪಡಿಸಿದ ಮಾರ್ಗಸೂಚಿಗಳಿವೆ. ಆದರೆ ಅವುಗಳನ್ನು ಯಾವ ದೇಶವೂ ಪಾಲಿಸುತ್ತಿಲ್ಲ. ಹೆಚ್ಚುತ್ತಿರುವ ರಾಷ್ಟ್ರೀಯ ಬಾಹ್ಯಾಕಾಶ ಸಂಸ್ಥೆಗಳು ಮತ್ತು ಖಾಸಗಿ ಕಂಪನಿಗಳನ್ನು ನಿಯಂತ್ರಿಸಲು, ಭೂಮಿಯ ಕೆಳಕಕ್ಷೆಯಲ್ಲಿ ಹೆಚ್ಚುತ್ತಿರುವ ಉಪಗ್ರಹಗಳ ದಟ್ಟಣೆ ತಗ್ಗಿಸಲು, ಬಾಹ್ಯಾಕಾಶ ಚಟುವಟಿಕೆಗಳ ಮೇಲೆ ನಿಗಾ ಇರಿಸಲು ಜಾಗತಿಕ ಮಟ್ಟದ ನಿಯಂತ್ರಣ ಪ್ರಾಧಿಕಾರದ ತುರ್ತು ಅಗತ್ಯವಿದೆ.

ಬಾಹ್ಯಾಕಾಶ ತ್ಯಾಜ್ಯಗಳನ್ನು ತಗ್ಗಿಸಲು ನಿಯಮಗಳನ್ನು ರೂಪಿಸಿದ್ದರೂ ಭವಿಷ್ಯದ ಅಪಘಾತಗಳನ್ನು ತಡೆಯಲು ಅವು ಸಾಲದು. ಸುಸ್ಥಿರ ಬಾಹ್ಯಾಕಾಶ ಪರಿಶೋಧನೆಯನ್ನು ಖಚಿತಪಡಿಸಿಕೊಳ್ಳಲು ಮತ್ತು ಭವಿಷ್ಯದ ಪೀಳಿಗೆಗೆ ಭೂಮಿಯ ಕಕ್ಷೆಯ ಪರಿಸರವನ್ನು ರಕ್ಷಿಸಲು ಅಂತರರಾಷ್ಟ್ರೀಯ ಕಾನೂನುಗಳ ಮುದ್ರೆ ಹೊತ್ತ ಹಾಗೂ ಜಾಗತಿಕವಾಗಿ ಜಾರಿಯಾಗಬಲ್ಲ ಕಾನೂನುಗಳ ಅನಿವಾರ್ಯ ಇಂದು ಹೆಚ್ಚಾಗಿದೆ.

ಲೇಖಕ: ಜಪಾನ್‌ನ ಒಸಾಕಾ ವಿಶ್ವವಿದ್ಯಾಲಯದಲ್ಲಿ ಸ್ಪೇಸ್ ರೊಬೋಟಿಕ್ಸ್‌ನಲ್ಲಿ ಸಂಶೋಧನಾ ವಿದ್ಯಾರ್ಥಿ



ಚುರುಮುರಿ



ಶಾಕಪ್ಪಾ ಶಾಕು!

• ತುರುವೇಕೆರೆ ಪ್ರಸಾದ್

'ತೆನೆ ಪಕ್ಷದೋರು 'ಸಾಕಪ್ಪಾ ಸಾಕು ಕಾಂಗ್ರೆಸ್ ಸರ್ಕಾರ' ಅಭಿಯಾನ ಶುರು ಮಾಡ್ಕಂಡವ್ರಲ್ಲಪ್ಪ' ಎಂದ ಗುದ್ಲಿಂಗ ಹರಟೆಕಟ್ಟೇಲಿ.

'ರಾಜಕೀಯದೋರೇ ಅಂಗೆ. ಈಗ 'ಸಾಕಪ್ಪಾ ಸಾಕು ಸರ್ಕಾರ' ಅಂತಾರೆ. ಅಧಿಕಾರ ಬೇಕಾದಾಗ 'ಬೇಕಪ್ಪಾ ಬೇಕು ಸಹಕಾರ' ಅಂತಾರೆ. ಬೇಕೂಪರಾಗೋದು ನಾವೇ' ಎಂದ ಮಾಲಿಂಗ.

'ಈಗ ಕಮಲ-ತೆನೆ ಸಂಬಂಧನೂ ಅಂಗೈ ಆಗೈತೆ. ಎಲೆಕ್ಷನ್ ಟೈಮಲ್ಲಿ ಬೇಕಪ್ಪಾ ಬೇಕು ಅಂದ್ರು ಇಬ್ರೂ. ಈಗ ಇಬ್ರಿಗೂ ಸಾಕಪ್ಪಾ ಸಾಕು ಸಹವಾಸ ಅನ್ನೋ ಹಂಗಾಗದೆ!'

'ಅದಕ್ಕೇ ಅವರದ್ದು ಜನಾಕ್ರೋಶದ ಗುನ್ನ, ಇವರದ್ದು ಸಾಕಪ್ಪಾ ಸಾಕು ಅಭಿಯಾನ'.

'ಪಕ್ಷ ಪಕ್ಷದ ವಿರುದ್ಧ ಮಾತ್ರ ಅಲ್ಲ, ಒಳಗೊಳಗೂ ಸಾಕಪ್ಪಾ ಸಾಕು ಅಂತ ಸೀಟ್ಮೇಲೆ ಹಾಕಿದ್ದ ಟವಲ್ ಕೊಡವಿಕೊಳ್ಳೋದು ಇರುತ್ತೆ'.

'ಅಂಗಂತೀಯಾ?'

'ಹ್ದೂಂ ಮತ್ತೆ? ಕಮಲದ ಒಂದು ಬಣ, ಸಾಕಪ್ಪಾ ಸಾಕು ಡೆಲ್ಲಿ ಸವಾಸ ಅಂತ ತೆಪ್ಪಗಾಗದೆ. ಇನ್ನೊಂದು ಬಣ, ಸಾಕಪ್ಪಾ ಸಾಕು ಕೇಸ್ ಮೇಲೆ ಕೇಸು ಅಂತ ಪರದಾಡ್ತಿದೆ! ತೆನೆ ಪಕ್ಷದಲ್ಲೂ ಅಧಿಕಾರನೂ ಇಲ್ಲ, ಅನುದಾನನೂ ಇಲ್ಲ, ಸಾಕಪ್ಪಾ ಸಾಕು ಅಂತಿರೋರು ಮಸ್ತಾಗವ್ರಂತೆ. ಇನ್ನು ಕೈ ಪಾಳಯದಲ್ಲಿ ಕೇಳೋ ಹಾಗೇ ಇಲ್ಲ. ಎಲ್ಲಾ ತರದ ತಾರಾತಿಗಡಿ ಮಾಡಿ ಹೈಕಮಾಂಡ್ 'ನೋ ಗಡಿಬಿಡಿ, ವೈಟ್ ಮಾಡಿ' ಅಂತ ಫರ್ಮಾನ್ ಹೊರಡಿಸಿದ್ಮೇಲೆ, ಸಾಕಪ್ಪಾ ಸಾಕು ಅಂತ ಎಲ್ಲಾ ಟೋಪಿ ಕೊಡವಿಕೊಂಡು ಬಂದಿದಾರಂತೆ'.

'ರಾಜಕೀಯನೇ ಅಂಗೆ! ಕಾಲ ಕಾಲಕ್ಕೆ ಸ'ಕಪ್ಪ'-ಕಾಣಿಕೆ ಸಿಗಲಿಲ್ಲ ಅಂದ್ರೆ ಸಾಕಪ್ಪಾ ಸಾಕು ಅಂತ ಶುರುವಾಗುತ್ತೆ'.

'ಜನಕ್ಕೂ ಅಷ್ಟೇ, ಈ ರಾಜಕೀಯದವರ ಅವತಾರಗಳನ್ನ ನೋಡಿ, ಸಾಕಪ್ಪಾ ಸಾಕು ಅನಿಸಿಬಿಟ್ಟಿದೆ. ಸಾಕಪ್ಪಾ ಸಾಕು ನಿಮ್ಮ ನಾಟಕ, ಮುಷ್ಕರ, ಬೇಕಪ್ಪಾ ಬೇಕು ನಮಗೆ ಪರಿಹಾರ ಅನ್ನೋ ಸ್ಥಿತಿ ತಲುಪಿದಾರೆ'.

'ನಿಜ ಬಿಡು, ರಾಜಕೀಯದೋರು ಸಾಕಪ್ಪಾ ಸಾಕು ಅಂತ ಹೇಳ್ಕೊಂಡೇ ಜನರಿಗೆ ದಿನಕ್ಕೊಂದು ಶಾಕ್ ಕೊಡ್ತಿದಾರೆ. ಅವರಿಗೆ ಸಾಕಪ್ಪಾ ಸಾಕು, ಜನರಿಗೆ ಶಾಕಪ್ಪಾ ಶಾಕು!' ಎಂದ ಪರ್ಮೇಶಿ.

ಎಲ್ಲಾ ಹೌದೌದು ಎನ್ನುತ್ತಾ ನಕ್ಕರು.

ದಿನದ ಟ್ವೀಟ್

ಸಾರ್ವಜನಿಕ ನಡವಳಿಕೆ ಸಹ್ಯವಾಗಿರಲಿ



'ಸಾರ್ವಜನಿಕವಾಗಿ ಪ್ರೇಮದ ಪ್ರದರ್ಶನ ಬೇಡ' ಎಂಬ ಮತ್ತೊಂದು ಎಚ್ಚರಿಕೆಯ ಫಲಕವನ್ನು ಅಳವಡಿಸಬೇಕಾಗಿದೆ. ಈಗಿನ ಪೀಳಿಗೆಯವರಿಗೆ ಎಲ್ಲವನ್ನೂ ಕಲಿಸಬೇಕು! ಓ ದೇವರೇ.

(ಬೆಂಗಳೂರು ಮೆಟ್ರೊ ನಿಲ್ದಾಣವೊಂದರಲ್ಲಿ ಯುವ ಜೋಡಿಯೊಂದು ಅಸಭ್ಯವಾಗಿ ವರ್ತಿಸಿದ ವಿಡಿಯೊ ದೃಶ್ಯಕ್ಕೆ ಪ್ರತಿಕ್ರಿಯೆ)

ಹಿಮಾಂಶು ಮಹಾದೇವ

ಕಿಡಿನುಡಿ

ಕೆಪಿಎಸ್‌ಸಿಯನ್ನು ರದ್ದು ಮಾಡುವುದೇ ಇದಕ್ಕಿರುವ ಉತ್ತಮ ಪರಿಹಾರ...

(ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಸದಸ್ಯರ ನೇಮಕಾತಿಗೆ ಶೋಧನಾ ಸಮಿತಿ ರಚಿಸದ ಸರ್ಕಾರವನ್ನು ಹೈಕೋರ್ಟ್ ತರಾಟೆಗೆ ತೆಗೆದುಕೊಂಡಿರುವ ಸುದ್ದಿಗೆ ಪ್ರತಿಕ್ರಿಯೆ)

ಮಲ್ಲಿಕಾರ್ಜುನ ಸ್ವಾಮಿ

25 ವರ್ಷಗಳ ಹಿಂದೆ

ಬುಧವಾರ, 12-4-2000

• **ಹಣ ಪಡೆದಿದ್ದು ನಿಜ: ಕ್ರೋನಿಯೆ**

ದರ್ಬಾನ್, ಏ. 11 (ಎಎಫ್‌ಪಿ): 'ಭಾರತದಲ್ಲಿ 'ಮೋಸದಾಟ' (ಫಿಕ್ಸಿಂಗ್) ನಡೆಸಿ ಆಟ ಆಡಿದ್ದನ್ನು ನಿರಾಕರಿಸುವಾಗ ತಾವು ದಕ್ಷಿಣ ಆಫ್ರಿಕಾ ಕ್ರಿಕೆಟ್ ಮಂಡಳಿ ಜತೆ 'ಸಂಪೂರ್ಣವಾಗಿ ಪ್ರಾಮಾಣಿಕ'ವಾಗಿ ವರ್ತಿಸಿಲ್ಲ' ಎಂದು ಹ್ಯಾನ್ಸಿ ಕ್ರೋನಿಯೆ ಅವರು ಇಂದು ಒಪ್ಪಿಕೊಂಡಿರುವ ಹಿನ್ನೆಲೆಯಲ್ಲಿ ಅವರನ್ನು ಆಸ್ಟ್ರೇಲಿಯಾ ವಿರುದ್ಧದ ಒಂದು ದಿನದ ಕ್ರಿಕೆಟ್ ಸರಣಿಯಿಂದ ಉಚ್ಚಾಟಿಸಲಾಗಿದೆ.

ಹ್ಯಾನ್ಸಿ ಕ್ರೋನಿಯೆ ಅವರನ್ನು ತಂಡದಿಂದ ಉಚ್ಚಾಟಿಸಿರುವುದರಿಂದ 'ಮೋಸದಾಟ' ಪ್ರಕರಣ ಮಹತ್ವದ ತಿರುವು ಪಡೆದಿದೆ.

ದಕ್ಷಿಣ ಆಫ್ರಿಕಾದ ಕೇಪ್ ಟೌನ್‌ನಲ್ಲಿ ಇಂದು ನಡೆದ ಕ್ರೀಡಾ ಸಚಿವ ಬಾಲ್‌ಫೋರ್ ಅವರ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದ ಕ್ರೋನಿಯೆ ಅವರು, ಬುಕ್ಕಿಯ ಬಳಿ ಹಣ ಪಡೆದಿರುವುದನ್ನು ಒಪ್ಪಿಕೊಂಡು ಅದಕ್ಕೆ ಕ್ಷಮೆ ಯಾಚಿಸಿದರು. ಆದರೆ ತಾವು ಭಾರತದಲ್ಲಿ 'ಮೋಸದಾಟ' ನಡೆಸಿಲ್ಲ ಎಂದು ಅವರು ಪ್ರತಿಪಾದಿಸಿದರು.

ನವದೆಹಲಿ ವರದಿ: ಕ್ರಿಕೆಟ್‌ನ 'ಮೋಸದಾಟ'ಕ್ಕೆ ತೆರೆ ಎಳೆಯುವ ನಿಟ್ಟಿನಲ್ಲಿ ಭಾರತ ಸರ್ಕಾರ ಕೊನೆಗೂ ಕಾರ್ಯರೂಪಕ್ಕೆ ಇಳಿದಿದೆ. ಇದರ ಮೊದಲ ಹೆಜ್ಜೆಯಾಗಿ ಭಾರತ ತಂಡದ ನಾಯಕ ಸೌರವ್ ಗಂಗೂಲಿ ಹಾಗೂ ಕೋಚ್ ಕಪಿಲ್‌ದೇವ್ ಅವರಿಗೆ ಸರ್ಕಾರ ಇಂದು ಸಮನ್ಸ್ ಕಳುಹಿಸಿರುವುದಾಗಿ ತಿಳಿದುಬಂದಿದೆ.

• **ಆಲಮಟ್ಟಿ ಅಣೆಕಟ್ಟೆ ಯರನಾಳ ಸ್ವಾಮೀಜಿ ನಿರಶನ**

ವಿಜಾಪುರ, ಏ. 11– ಆಲಮಟ್ಟಿ ಅಣೆಕಟ್ಟೆಯ ಎತ್ತರವನ್ನು 524 ಮೀಟರ್‌ಗೆ ಹೆಚ್ಚಿಸಬೇಕು ಎಂದು ಆಗ್ರಹಿಸಿ ಇಲ್ಲಿನ ಕೃಷ್ಣಾ ಮೇಲ್ದಂಡೆ ಯೋಜನೆ ಆಲಮಟ್ಟಿ ಹೋರಾಟ ಸಮಿತಿಯ ಅಧ್ಯಕ್ಷ ಯರನಾಳದ ಸಂಗನಬಸವ ಸ್ವಾಮೀಜಿ ಅವರು ಇಂದು ಆಮರಣ ನಿರಶನ ಆರಂಭಿಸಿದರು.

ಈಗಾಗಲೇ ಇತರ ನಾಲ್ಕು ಮಂದಿ ಇಲ್ಲಿ ಆರಂಭಿಸಿರುವ ಆಮರಣ ನಿರಶನ ಇಂದು 6ನೇ ದಿನದಲ್ಲಿ ಮುಂದುವರಿದಿದೆ.

ಈ ತಿಂಗಳ 9ರಂದು ಆಮರಣ ನಿರಶನ ಆರಂಭಿಸಿದ ಐದು ಮಂದಿಯಲ್ಲಿ, ಕಮಲ್‌ಕಾಂತ ಬಸಪ್ಪ ಹುಣಶ್ಯಾಳ ಅವರು ಈಗಾಗಲೇ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರೆ, ವಿ.ಜಿ.ಕುಲಕರ್ಣಿ ಎಂಬುವವರು ತುರ್ತು ಕಾರ್ಯ ನಿಮಿತ್ತ ಮನೆಗೆ ತೆರಳಿದ್ದಾರೆ.

50 ವರ್ಷಗಳ ಹಿಂದೆ

ಶನಿವಾರ, 12-4-1975

• **ಮೊರಾರ್ಜಿಗೆ ನಿಶ್ಶಕ್ತಿ ಮೂತ್ರಕೋಶ ದುರ್ಬಲ**

ನವದೆಹಲಿ, ಏ. 11– ಉಪವಾಸ ಸತ್ಯಾಗ್ರಹದ ಐದನೆಯ ದಿನವಾದ ಇಂದು ಸಂಸ್ಥಾ ಕಾಂಗ್ರೆಸ್ ನಾಯಕ ಮೊರಾರ್ಜಿ ದೇಸಾಯಿ ಅವರ ಮೂತ್ರಜನಕಾಂಗದ ಕಾರ್ಯ ನಿರ್ವಹಣೆ ದುರ್ಬಲಗೊಂಡಿದೆ ಎಂದು ಅವರನ್ನು ಪರೀಕ್ಷಿಸಿದ ವೈದ್ಯರು ತಿಳಿಸಿದ್ದಾರೆ.

ಮೊರಾರ್ಜಿ ದೇಸಾಯಿ ಅವರು ತುಂಬಾ ಸುಸ್ತಾಗಿದ್ದು, ನಿಶ್ಶಕ್ತರಾಗುತ್ತಿದ್ದಾರೆಂದು ವೈದ್ಯರು ತಿಳಿಸಿದ್ದಾರೆ.

ಮೂತ್ರಜನಕಾಂಗವು ದುರ್ಬಲಗೊಳ್ಳುತ್ತಿರುವ ಸೂಚನೆಗಳು ಕಂಡುಬಂದಿವೆ ಎಂದು ಮೊರಾರ್ಜಿ ಅವರನ್ನು ಪರೀಕ್ಷಿಸಿದ ಡಾ. ಪಿ.ಸಿ.ಧಾಂಡ ಅವರು ತಿಳಿಸಿದ್ದಾರೆ.

ಮೊರಾರ್ಜಿ ಅವರು ದಿನಕ್ಕೆ ಎರಡು ಪೌಂಡಿನಷ್ಟು ತೂಕ ಕಳೆದುಕೊಳ್ಳುತ್ತಿದ್ದಾರೆ.

ಲೋಕಸಭೆಯು ಮೊರಾರ್ಜಿ ದೇಸಾಯಿ ಅವರ ಉಪವಾಸ ಸತ್ಯಾಗ್ರಹದ ಬಗ್ಗೆ ನಿಗದಿತ ದಿನದಂದು ಚರ್ಚಿಸಲು ನಿರ್ಧರಿಸಿದೆ.

ಸಂಗತ

ಅಧಿಕ ಅಂಕ ಮತ್ತು ಪ್ರಚಾರದ ಸರಕು

ಹೆಚ್ಚು ಅಂಕ ಗಳಿಸುವ ಪ್ರತಿ ವಿದ್ಯಾರ್ಥಿಯೂ ಮುಂಬರುವ ವರ್ಷಕ್ಕೆ ಪ್ರವೇಶದ ಹೆಚ್ಚಳಕ್ಕೆ ಸಹಾಯ ಮಾಡುವ ಸರಕಿನಂತೆ ಕೆಲವು ಶಿಕ್ಷಣ ಸಂಸ್ಥೆಗಳಿಗೆ ಕಾಣಿಸುತ್ತಿರುವುದು ವಿಷಾದಕರ

• ನಾ.ದಿವಾಕರ

ಭಾರತದಲ್ಲಿ ಶಾಲಾ ಶಿಕ್ಷಣ ಎನ್ನುವುದು ಜ್ಞಾನ ವೃದ್ಧಿಗಿಂತಲೂ ಹೆಚ್ಚಾಗಿ, ಕಲಿತ ಮಕ್ಕಳು ಮುಂದಿನ ಹಂತಕ್ಕೆ ಸಾಗಲು ನೆರವಾಗುವ ಬೌದ್ಧಿಕ ಸೇತುವೆಯಂತೆ ಆಗಿರುವುದು ವಾಸ್ತವ. ಹಾಗಾಗಿ, ತೇರ್ಗಡೆಯಾಗುವುದು ಮಕ್ಕಳ ಬುದ್ಧಿಶಕ್ತಿಯನ್ನು ಅಳೆಯುವ ಒಂದು ಮಾನದಂಡವಾಗಿ, ವಾರ್ಷಿಕ ಪರೀಕ್ಷೆಗಳಲ್ಲಿ ಅನುತ್ತೀರ್ಣವಾಗುವುದು ಅಪಮಾನಕರವಾಗಿ ಪರಿಣಮಿಸಿದೆ. ಪ್ರತಿವರ್ಷ ನಡೆಯುವ ಪರೀಕ್ಷೆಗಳ ಫಲಿತಾಂಶಗಳು ವಿದ್ಯಾರ್ಥಿಗಳ ಅರ್ಹತೆಯನ್ನು ಅಳೆಯುವ ಮಾಪಕಗಳಾಗಿರುವಂತೆಯೇ, ಶಾಲೆಗಳು ಅಥವಾ ಶಿಕ್ಷಣ ಇಲಾಖೆಯ ಕಾರ್ಯಕ್ಷಮತೆಯನ್ನು ನಿರ್ಧರಿಸುವ ಮಾಪಕಗಳಾಗಿಯೂ ಕಾಣುತ್ತವೆ.

ಆದರೆ ಬದಲಾದ ಭಾರತದಲ್ಲಿ ಶಿಕ್ಷಣ ಮತ್ತು ಶೈಕ್ಷಣಿಕ ಕ್ಷೇತ್ರ ಹೆಚ್ಚು ಹೆಚ್ಚು ವಾಣಿಜ್ಯೀಕರಣಕ್ಕೆ ಒಳಗಾಗುತ್ತಿರುವುದು, ಇಡೀ ಶಿಕ್ಷಣ ವ್ಯವಸ್ಥೆಯನ್ನೇ ರೂಪಾಂತರಗೊಳಿಸಿದೆ. ಸರ್ಕಾರಗಳು ಸಾರ್ವತ್ರಿಕ ಶಿಕ್ಷಣವನ್ನು ತಳಮಟ್ಟದವರೆಗೂ ತಲುಪಿಸುವ ತಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುತ್ತಿರುವುದರಿಂದ, ನಾಯಿಕೊಡೆಗಳಂತೆ ಹುಟ್ಟಿಕೊಂಡಿರುವ ಖಾಸಗಿ ಶಾಲೆ, ಕಾಲೇಜು, ಕೋಚಿಂಗ್ ಕೇಂದ್ರಗಳು ಇಡೀ ವ್ಯವಸ್ಥೆಯ ವಾರಸುದಾರಿಕೆಯನ್ನು ವಹಿಸಿಕೊಂಡಿವೆ.

ಈ ವಾತಾವರಣದಲ್ಲೇ ವಾರ್ಷಿಕ ಪರೀಕ್ಷೆಗಳು ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳ ನಡುವೆ ಸೃಷ್ಟಿಸುವಂತಹ ಹರ್ಷೋಲ್ಲಾಸ ಮತ್ತು ವಿಷಾದವು ಸಮಾಜದ ಮೇಲೆ ಎಂತಹ ಕೆಟ್ಟ ಪರಿಣಾಮ ಬೀರುತ್ತವೆ ಎನ್ನುವುದನ್ನು ಗಂಭೀರವಾಗಿ ಪರಾಮರ್ಶಿಸಬೇಕಿದೆ. ಅತಿ ಹೆಚ್ಚು ಅಂಕ ಗಳಿಸುವ ವಿದ್ಯಾರ್ಥಿಗಳನ್ನು ಪ್ರಶಂಸಿಸುವುದು ಅಂತಹ ವಿದ್ಯಾರ್ಥಿಗಳ ಭವಿಷ್ಯದ ಓದಿಗೆ ಪೂರಕವಾಗಿರುತ್ತದೆ. ಆದರೆ ಈ ಪ್ರಶಂಸೆ ಮತ್ತು ಶ್ಲಾಘನೆಯು ವ್ಯಕ್ತಿಗತ ನೆಲೆಯಲ್ಲಿ ನಾಲ್ಕು ಗೋಡೆಗಳ ನಡುವೆ ಇರುವುದಕ್ಕೂ ಸಾರ್ವಜನಿಕ ಸುದ್ದಿಯಾಗುವುದಕ್ಕೂ ಇರುವ ಸೂಕ್ಷ್ಮ ಅಂತರವನ್ನು ಗ್ರಹಿಸಬೇಕಿದೆ.

ತಮ್ಮ ತಮ್ಮ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳಲು ಸಕಲ ಮಾರ್ಗಗಳನ್ನೂ ಅನುಸರಿಸುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ, ಹೆಚ್ಚು ಅಂಕ ಗಳಿಸುವ ಪ್ರತಿ ವಿದ್ಯಾರ್ಥಿಯೂ ಮುಂಬರುವ ವರ್ಷಕ್ಕೆ ಪ್ರವೇಶದ ಹೆಚ್ಚಳಕ್ಕೆ ಸಹಾಯ ಮಾಡುವ ಸರಕಿನಂತೆ ಕಾಣುತ್ತಿರುವುದು ಈ ಸಂದರ್ಭದಲ್ಲಿ ಗಮನಿಸಬೇಕಾದ ಸಂಗತಿ. ವೃತ್ತಪತ್ರಿಕೆಗಳಲ್ಲಿ ಪ್ರಕಟವಾಗುವ ಜಾಹೀರಾತುಗಳು ಈ ಯಶಸ್ವಿ ವಿದ್ಯಾರ್ಥಿಗಳ ದೃಷ್ಟಿಯಿಂದ ಆಪ್ಯಾಯಮಾನ ಎನಿಸುತ್ತವಾದರೂ ಇದಕ್ಕಾಗಿ ಸಂಸ್ಥೆಗಳು ಹೂಡುವ ಬಂಡವಾಳದ ದೃಷ್ಟಿಯಲ್ಲಿ, ಈ ನಗುಮೊಗಗಳೆಲ್ಲವೂ ಭವಿಷ್ಯದ ಸಾಂಸ್ಥಿಕ ಲಾಭ ಗಳಿಕೆಯ ಕಚ್ಚಾವಸ್ತುಗಳಾಗಿ ಬಿಡುತ್ತವೆ. ಸಂಸ್ಥೆಯ ಸಾಧನೆಯನ್ನು ಬಿಂಬಿಸುವುದು ತಪ್ಪಲ್ಲ. ಆದರೆ ಅದನ್ನು ಪ್ರಚಾರದ ಸರಕಿನಂತೆ ಬಳಸುವುದು ಬೌದ್ಧಿಕ ಅಪ್ರಾಮಾಣಿಕತೆ.

ಪರೀಕ್ಷೆಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳ ಮನಃಸ್ಥಿತಿ ಮತ್ತು ಅವರ ಅಂತರಾಳದ ನೋವು ಇಲ್ಲಿ ಗಣನೆಗೇ ಬರುವುದಿಲ್ಲ. ಅನುತ್ತೀರ್ಣವಾಗುವುದೇ ಅಪಮಾನಕರ ಎಂದು ಭಾವಿಸುವ ಸಮಾಜದಲ್ಲಿ, ಹಲವು ಕಾರಣಗಳಿಗಾಗಿ ಯಶಸ್ಸು ಗಳಿಸಲಾಗದ ವಿದ್ಯಾರ್ಥಿಗಳು ಮನನೊಂದು ಖಿನ್ನತೆಗೆ ಒಳಗಾಗುವುದು ಪ್ರತಿವರ್ಷ ನಾವು ಕಾಣುತ್ತಿರುವ ವಿದ್ಯಮಾನ. ನೂರಾರು ಚಹರೆಗಳನ್ನು ಒಳಗೊಂಡ, ಪುಟಗಟ್ಟಲೆ ಪ್ರಕಟವಾಗುವ ಯಾವುದೇ ಶಾಲಾ ಜಾಹೀರಾತಿನಲ್ಲೂ, ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸಾಂತ್ವನ ಹೇಳುವ ಒಂದು ಸಾಲು ಸಹ ಇರುವುದಿಲ್ಲ. ಇದು, ಶೈಕ್ಷಣಿಕ ಮಾರುಕಟ್ಟೆಯ ಬೌದ್ಧಿಕ ಕ್ರೌರ್ಯದ ಸಂಕೇತ ಎಂದೇ ಹೇಳಬೇಕಾಗಿದೆ.

ಫಲಿತಾಂಶ ಪ್ರಕಟವಾದ ನಂತರ ಸಾಲುಸಾಲಾಗಿ ನಡೆಯುವ ಪ್ರತಿಭಾ ಪ್ರದರ್ಶನ ಮತ್ತು ಉತ್ತಮ ಅಂಕ ಗಳಿಸಿದವರ ಸನ್ಮಾನ ಕಾರ್ಯಕ್ರಮಗಳು ಈ ಪ್ರಕ್ರಿಯೆಯ ಮುಂದುವರಿಕೆಯಾಗಿ ಕಾಣುತ್ತವೆ. ಎಲ್ಲ ಶಾಲೆಗಳೂ ಈ ರೀತಿಯ ಪ್ರತಿಭೆಗಳನ್ನು ಸನ್ಮಾನಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತವೆ. ಇದಲ್ಲದೆ ನಮ್ಮ ಜಾತಿ ವ್ಯವಸ್ಥೆಯಲ್ಲಿ ಪ್ರತಿಯೊಂದು ಜಾತಿ, ಉಪಜಾತಿ, ಮತ, ಸಮುದಾಯವೂ 'ತಮ್ಮ ಸಮಾಜದ ಯಶಸ್ವಿ ಮಕ್ಕಳನ್ನು' ಪುರಸ್ಕರಿಸಲು ಮುಂದಾಗುತ್ತವೆ.



ಮಕ್ಕಳ ಸಾಧನೆಗೆ ತಮ್ಮ ಸಂಸ್ಥೆಯ ಕಾರ್ಯಕ್ಷಮತೆ ಮತ್ತು ದಕ್ಷತೆಯೇ ಕಾರಣ ಎಂದು ಬಿಂಬಿಸಿಕೊಳ್ಳುವ ಶಿಕ್ಷಣದ ಮಾರುಕಟ್ಟೆ ಪ್ರಕ್ರಿಯೆಯಲ್ಲಿ, ಅನುತ್ತೀರ್ಣರಾದ ಅಥವಾ ಕಡಿಮೆ ಸಾಧನೆ ಮಾಡಿರುವ ಮಕ್ಕಳು ಅನಾಥರಾಗಿಬಿಡುತ್ತಾರೆ. ಈ ಮಕ್ಕಳನ್ನು ಒಂದೆಡೆ ಕೂರಿಸಿ ಸಾಂತ್ವನ ಹೇಳುವ, ಆತ್ಮಸ್ಥೈರ್ಯವನ್ನು ತುಂಬುವ ಅಥವಾ ಮುಂದಿನ ಹೆಜ್ಜೆಗೆ ಅವಶ್ಯವಾದ ಮಾರ್ಗದರ್ಶನ ನೀಡುವ ಕ್ರಮವನ್ನು ಎಲ್ಲಿಯೂ ಕಾಣಲಾಗುವುದಿಲ್ಲ. ಇದು ಅನುತ್ತೀರ್ಣರಾದ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಕಳಂಕಿತರಾದ ಅಥವಾ ಅಪಮಾನಕ್ಕೆ ಒಳಗಾದ ಭಾವನೆಯನ್ನು ಉಂಟುಮಾಡುತ್ತದೆ. ಮಕ್ಕಳ ಖಿನ್ನತೆಗೆ ಇದೂ ಒಂದು ಕಾರಣ ಎನ್ನುವುದನ್ನು ಮನಶ್ಶಾಸ್ತ್ರೀಯ ನೆಲೆಯಲ್ಲಿ, ಸಮಾಜಶಾಸ್ತ್ರೀಯ ನೆಲಗಟ್ಟಿನಲ್ಲಿ ಅರ್ಥಮಾಡಿಕೊಳ್ಳಬೇಕಿದೆ.

ಅನುತ್ತೀರ್ಣರಾದ ಮಕ್ಕಳು ಶೈಕ್ಷಣಿಕ ಮಾರುಕಟ್ಟೆಗೆ ಬೇಡ ಎನಿಸಬಹುದು, ಆದರೆ ಸಮಾಜಕ್ಕೆ ಅವರು ಬೇಕಾಗುತ್ತಾರೆ. ಏಕೆಂದರೆ ಅವರಲ್ಲಿ ಮತ್ತೊಂದು ಆಯಾಮದ ಪ್ರತಿಭೆ, ಕೌಶಲ ಅಡಗಿರುತ್ತದೆ. ಸಾಮಾಜಿಕ ಮಾಧ್ಯಮಗಳ ಮೂಲಕ ತಮ್ಮ ಮಕ್ಕಳ ಯಶಸ್ಸನ್ನು ಅಂಕಪಟ್ಟಿ ಸಮೇತ ಪ್ರದರ್ಶಿಸುವ ಮುನ್ನ ಪ್ರತಿ ವ್ಯಕ್ತಿಯೂ ಈ ಸೂಕ್ಷ್ಮವನ್ನು ಗ್ರಹಿಸಬೇಕಿದೆ. ಈ ಪ್ರವೃತ್ತಿಯು ಮತ್ತೊಂದು ಬದಿಯಲ್ಲಿ ನೋವು ತಂದೊಡ್ಡುತ್ತದೆ. ಶಿಕ್ಷಣದ ಮಾರುಕಟ್ಟೆಯ ದೃಷ್ಟಿಯಲ್ಲಿ ಮಕ್ಕಳು ಸರಕುಗಳಾಗಿ, ಕಚ್ಚಾವಸ್ತುಗಳಾಗಿ ಕಾಣಬಹುದು. ಆದರೆ ಸಮಾಜದ ದೃಷ್ಟಿಯಲ್ಲಿ ಅವರೇ ದೇಶದ ಭವಿಷ್ಯದ ಆಸ್ತಿ ಎನ್ನುವುದನ್ನು ಪ್ರಜ್ಞಾವಂತ ಸಮಾಜ ಅರ್ಥಮಾಡಿಕೊಳ್ಳಬೇಕಿದೆ.

ವಾಚಕರ ವಾಣಿ

ವಿವಿಧ ಯೋಜನೆಗೆ ಕಾಡಿನ ನಾಶ ಸಲ್ಲದು

ಮಲಪ್ರಭಾ ಮತ್ತು ಮಹದಾಯಿ ನದಿಗಳು ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿ ಹುಟ್ಟುತ್ತವೆ. ಮಲಪ್ರಭಾ ಅತ್ತ ಗದಗ, ಬಾಗಲಕೋಟೆಯ ಕಡೆಗೂ ಮಹದಾಯಿ ಇತ್ತ ಪಶ್ಚಿಮಘಟ್ಟದತ್ತಲೂ ಹರಿಯುತ್ತವೆ. ಮಹದಾಯಿ ನದಿಯು ಘಟ್ಟ ಇಳಿದು ಗೋವಾದಲ್ಲಿ ಸಮುದ್ರ ಸೇರಿದರೆ, ಮಲಪ್ರಭಾ ನದಿಯ ನೀರನ್ನು ಸವದತ್ತಿಯ ಬಳಿ ನವಿಲುತೀರ್ಥದಲ್ಲಿ ಅಣೆಕಟ್ಟು ಕಟ್ಟಿ ಧಾರವಾಡ- ಹುಬ್ಬಳ್ಳಿಗೆ ಕುಡಿಯುವ ನೀರು, ಕೃಷಿ, ಕಾರ್ಖಾನೆಗಳ ಉಪಯೋಗಕ್ಕೆ ಪೂರ್ಣವಾಗಿ ನಾವು ಬಳಸಿಕೊಂಡಿದ್ದೇವೆ. ಈಗ ಅದು ಸಾಕಾಗದೆಂದು ಮಹದಾಯಿ ನದಿಯತ್ತ ನೋಡುತ್ತಿದ್ದೇವೆ. ಕಳಸಾ-ಬಂಡೂರಿ, ಮಹದಾಯಿ ನದಿ ತಿರುವು ಯೋಜನೆಗಳು ಆಗಬೇಕೆಂಬುದು ಬಯಲುನಾಡಿನ ಬಹುದಿನಗಳ ಬೇಡಿಕೆ. ಪರ, ವಿರುದ್ಧದ ಹೋರಾಟಗಳು ಮತ್ತು ಕೋರ್ಟ್ ಸಮರ ಎಲ್ಲವೂ ನಡೆದಿವೆ. ಇನ್ನೂ ಅಂತಿಮ ತೀರ್ಪು ಬರಬೇಕು. ಆದರೆ ಸರ್ಕಾರಕ್ಕೆ ಅಲ್ಲಿಯವರೆಗೆ ಕಾಯಲು ಪುರಸತ್ತಿಲ್ಲ. ಕೋರ್ಟ್ ತೀರ್ಪು ನಾಳೆ ತಮ್ಮ ಪರ ಬಂತೆಂದರೆ ಕೂಡಲೇ ಯೋಜನೆಯನ್ನು ಕಾರ್ಯಗತಗೊಳಿಸಬೇಕಾಗುತ್ತದೆ ಎಂದು ಅವಸರ ಮಾಡಿ, ಬಂಡೂರಿ ನಾಲಾಕ್ಕಾಗಿ ಭೂಮಿ ತೆರವು ಮಾಡುವಂತೆ ಸುತ್ತಮುತ್ತಲಿನ ಹಳ್ಳಿಗಳ ಜನರಿಗೆ ನೋಟಿಸ್ ಕಳಿಸಿಯಾಗಿದೆ.

ಮಹದಾಯಿ ನದಿಯು ಗೋವಾದತ್ತ ಹರಿದು ವ್ಯರ್ಥವಾಗಿ ಸಮುದ್ರ ಸೇರುತ್ತದೆ, ಅದನ್ನು ಇತ್ತ ತಿರುಗಿಸಬೇಕೆಂದು ಅಭಿವೃದ್ಧಿ ಆಯೋಜಕರು ಕೇಳುತ್ತಿದ್ದಾರಾದರೂ ನಿಜವಾಗಿ ಆ ನದಿ ಪಶ್ಚಿಮಘಟ್ಟದೊಳಗೆ ಹರಿಯುತ್ತಾ ಈ ಭಾಗದ ಘಟ್ಟ ಪ್ರದೇಶವನ್ನು ಸುಂದರ, ಸಮೃದ್ಧ ಅರಣ್ಯವನ್ನಾಗಿ ಮಾಡಿದೆ. ಆ ಮೂಲಕ ಈ ಭಾಗದಲ್ಲಿ ಮಳೆ ಸುರಿಯಲು ಕಾರಣವಾಗಿದೆ ಎನ್ನುವುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಪರಿಣಾಮವಾಗಿ, ನದಿಗಳು ತುಂಬಿ ಹರಿಯುತ್ತವೆ. ಹೀಗೆ ಅರಣ್ಯ ಮತ್ತು ನದಿ ಯುಗಾಂತರಗಳಿಂದ ಪರಸ್ಪರ ಪೂರಕವಾಗಿ ಕೆಲಸ ಮಾಡುತ್ತಾ ಬಂದಿವೆ. ಕಳಸಾ, ಬಂಡೂರಿ ಅಥವಾ ಮಹದಾಯಿ ನದಿ ತಿರುವಿಗಾಗಿ ಈ ಕಾಡನ್ನು ಸ್ವಚ್ಛ ಮಾಡಿದರೆ (ಕೆಲಸ ಶುರುವಾಯಿತೆಂದರೆ ಕಾಡು ಸ್ವಚ್ಛಗೊಳಿಸಲು ನಮ್ಮ ಜೆಸಿಬಿ ಯಂತ್ರಗಳಿಗೆ ಎಷ್ಟು ಸಮಯವೂ ಬೇಡ), ಮಳೆ ಕಡಿಮೆಯಾಗಿ ನದಿಯಲ್ಲಿ ನೀರಹರಿವೂ ಕಡಿಮೆಯಾಗುತ್ತದೆ. ಇಂದು ರೇಣುಕಾಸಾಗರದಲ್ಲಿನ ನೀರಿನಲ್ಲಿ ಶೇ 80ರಷ್ಟು ಭಾಗ ಖಾನಾಪುರದ ಈ ಕಾಡಿನಲ್ಲಿ ಸುರಿಯುವ ಮಳೆಯ ನೀರೇ. ನದಿಯಲ್ಲಿ ನೀರು ಕಡಿಮೆ ಆಯಿತೆಂದರೆ, ಅಣೆಕಟ್ಟು ನೀರಿನ ಬದಲಿಗೆ ಹೂಳಿನಿಂದ ತುಂಬಿತೆಂದರೆ ಕುಡಿಯುವ ನೀರು, ಕೃಷಿ, ಕೈಗಾರಿಕೆಗೆ ಎಲ್ಲಿಂದ ನೀರು ಬರುತ್ತದೆ? ರಾಜಕೀಯ ವ್ಯಕ್ತಿಗಳಾಗಲೀ ಗುತ್ತಿಗೆದಾರರಾಗಲೀ ಈ ಬಗ್ಗೆ ವಿಚಾರ ಮಾಡುವುದಿಲ್ಲ. ಆದರೆ ನಾವು ಜನಸಾಮಾನ್ಯರು ಇದರ ಬಗ್ಗೆ ವಿಚಾರ ಮಾಡಬೇಕಲ್ಲವೇ?

ದಿಲೀಪ ಕಾಮತ್, ಶಾರದಾ ಗೋಪಾಲ, ಸುಜಿತ ಮುಳಗುಂದ, ನೈಲಾ ಕೊಯ್ಲೋ, ಶಿವಾಜಿ ಕಾಗಣೇಕರ

ಜನರಿಗೆ ಬೇಕಾಗಿರುವುದು ಸವಾಲು– ಜವಾಬಲ್ಲ

ರಾಜಕೀಯ ಆರೋಪ– ಪ್ರತ್ಯಾರೋಪದ ಭಾಗವಾಗಿ, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರಿಗೆ ಧರ್ಮಸ್ಥಳ ಮಂಜುನಾಥ ಸ್ವಾಮಿಯ ಸನ್ನಿಧಾನಕ್ಕೆ ಬಂದು ಆಣೆ– ಪ್ರಮಾಣ ಮಾಡುವಂತೆ ಸವಾಲು ಹಾಕಿರುವುದು ಮತ್ತು ಅದಕ್ಕೆ ಪ್ರತಿಯಾಗಿ ಕುಮಾರಸ್ವಾಮಿ ಅವರು ತಾವು ಅದಕ್ಕೆ ಸಿದ್ಧರಿರುವುದಾಗಿ ಹೇಳಿರುವುದು ಹಾಸ್ಯಾಸ್ಪದವಾದ ಸಂಗತಿಯಾಗಿದೆ. ಮಂಡ್ಯ ಜಿಲ್ಲೆಯ ಜನರಿಗೆ ಬೇಕಿರುವುದು ಜಿಲ್ಲೆಯ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳೇ ವಿನಾ ಇಂತಹ ಕ್ಷುಲ್ಲಕ ಸವಾಲುಗಳು ಹಾಗೂ ಜವಾಬುಗಳಲ್ಲ. ಇನ್ನು ಮುಂದಾದರೂ ಇಬ್ಬರೂ ಸಚಿವರು ಜಿಲ್ಲೆಗೆ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರದಿಂದ ಹೆಚ್ಚಿನ ಅನುದಾನವನ್ನು ತರುವ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಲಿ. ಈ ಮೂಲಕ ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಸಹಕರಿಸಲಿ.

ರವಿ ಪ್ರಸಾದ್, ಮೈಸೂರು

ವಲಸೆ ಕಾರ್ಮಿಕರು ಮತ್ತು ಪರೀಕ್ಷಾ ಫಲಿತಾಂಶ

ಶಾಲಾ ಕಾಲೇಜುಗಳ ಪರೀಕ್ಷಾ ಫಲಿತಾಂಶದ ಮೇಲೆ ವಿದ್ಯಾರ್ಥಿಗಳ ಕುಟುಂಬದಲ್ಲಿನ ಬಡತನವೂ ಪರಿಣಾಮ ಬೀರುತ್ತದೆ ಎಂದು ಸದಾಶಿವ್ ಸೊರಟೂರು ಬರೆದಿದ್ದಾರೆ (ಸಂಗತ, ಏ. 11). ಕಲ್ಯಾಣ ಕರ್ನಾಟಕ ಭಾಗದ ಕೆಲವು ಹಳ್ಳಿಗಳ ಜನ ಸುಗ್ಗಿಯ ತರುವಾಯ ಎರಡು– ಮೂರು ತಿಂಗಳು ದೂರದ ಕಾಫಿಸೀಮೆ, ಬೆಂಗಳೂರು, ಉಡುಪಿ ಕಡೆಗೆ ದುಡಿಯಲು ಹೋಗುತ್ತಾರೆ. ಈ ಅವಧಿ ಬಹುವಾಗಿ ಡಿಸೆಂಬರ್‌ನಿಂದ ಫೆಬ್ರುವರಿ, ಮಾರ್ಚ್‌ವರೆಗೆ ಇರುತ್ತದೆ. ಹಾಗೆಯೇ ಮಕ್ಕಳು ಪರೀಕ್ಷೆಗೆ ಸಿದ್ಧರಾಗುವ ಸಮಯವೂ ಆಗಿರುತ್ತದೆ. ಈ ಸಮಯದಲ್ಲಿ ಸಾಧ್ಯವಿರುವವರು ತಮ್ಮ ಮಕ್ಕಳನ್ನು ಅಜ್ಜ-ಅಜ್ಜಿಯ ಜೊತೆಯಲ್ಲಿಯೋ ಸಂಬಂಧಿಕರ ಮನೆಯಲ್ಲಿಯೋ ಬಿಟ್ಟು ಹೋಗುತ್ತಾರೆ. ಅಂತಹ ಮಕ್ಕಳು ನಿರಂತರವಾಗಿ ಶಾಲೆಗೆ ಹಾಜರಾಗುತ್ತಾರೆ. ಕಲಿಕೆಯಲ್ಲಿ ತೊಡಗಿಕೊಂಡು ಉತ್ತಮ ಫಲಿತಾಂಶ ಪಡೆಯುತ್ತಾರೆ.

ಹೀಗೆ ಬಿಟ್ಟು ಹೋಗಲು ಸಾಧ್ಯವಾಗದ ಪೋಷಕರು ಅನಿವಾರ್ಯವಾಗಿ ಮಕ್ಕಳನ್ನು ತಮ್ಮ ಜೊತೆ ಕರೆದುಕೊಂಡು ಹೋಗುತ್ತಾರೆ. ವಲಸೆ ಹೋದ ಸ್ಥಳದಲ್ಲಿ ಮಕ್ಕಳನ್ನು ಶಾಲೆಗೆ ಕಳಿಸಲು ಅನುವಾಗುವಂತೆ ವಲಸೆ ಕಾರ್ಡಿನ ಅನುಕೂಲವೂ ಇದೆ. ಹೀಗೆ ದಿಢೀರನೆ ವಾಸಸ್ಥಳದ ಬದಲಾವಣೆ, ಹೊಸ ಶಾಲೆಗೆ ಹೊಂದಿಕೊಳ್ಳುವಲ್ಲಿ ಉಂಟಾಗಬಹುದಾದ ತೊಡಕುಗಳು ಮಗುವಿನ ಶೈಕ್ಷಣಿಕ ಪ್ರಗತಿಯ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು. ಹಾಗೆಯೇ ಸಂಬಂಧಿಕರ ಮನೆಯಲ್ಲಿದ್ದಾಗ ಅವರೊಂದಿಗೆ ಹೊಂದಿಕೊಳ್ಳುವಲ್ಲಿ ತೊಡಕಾಗಿ ಶೈಕ್ಷಣಿಕ ಬೆಳವಣಿಗೆ ಮೇಲೆ ಪರಿಣಾಮ ಬೀರಬಹುದು. ಹಾಗಾಗಿ, ಸರ್ಕಾರ ಬಡ ಮಕ್ಕಳ ಅನುಕೂಲಕ್ಕಾಗಿ ಬಹಳಷ್ಟು ಹಾಸ್ಟೆಲ್‌ಗಳನ್ನು ತೆರೆದಿದೆ. ಹೀಗೆ ಪ್ರತಿವರ್ಷ ದುಡಿಯಲು ಹೋಗುವವರು ತಮ್ಮ ಮಕ್ಕಳ ಸುಗಮ ಶೈಕ್ಷಣಿಕ ಚಟುವಟಿಕೆ ಮತ್ತು ಪ್ರಗತಿಯ ದೃಷ್ಟಿಯಿಂದ ಇಂತಹ ಹಾಸ್ಟೆಲ್‌ಗಳಿಗೆ ಸೇರಿಸುವತ್ತ ಯೋಚಿಸಬಹುದೇನೋ ಎಂದೆನಿಸುತ್ತದೆ. ಒಟ್ಟಿನಲ್ಲಿ ಬಡತನವು ಶಿಕ್ಷಣದ ಪ್ರಗತಿಯ ಮೇಲೆ ಖಂಡಿತ ಪರಿಣಾಮ ಬೀರುತ್ತದೆ.

ಶೇಖರಯ್ಯ ಟಿ.ಎಚ್.ಎಂ., ಗೆದ್ದಲಗಟ್ಟೆ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ವಿವಾದ ಸೃಷ್ಟಿಸಿರುವ 'ವಚನ ದರ್ಶನ' ಕೃತಿ ಕುರಿತಂತೆ ಎರಡು ಅಭಿಪ್ರಾಯಗಳು

ರಹಸ್ಯ ಪ್ರಣಾಳಿಕೆಯ ಸಂಚಿನ ಕೃತಿ

● ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ



ಗೊಂದಲ ಸೃಷ್ಟಿಸುವ ಉದ್ದೇಶದಿಂದಲೇ 'ವಚನ ದರ್ಶನ' ಕೃತಿ ಹೊರಬಂದಂತಿದೆ. ಇದಕ್ಕೆ ಅದರ ಮುಖಪುಟವೇ ಕನ್ನಡಿಯಾಗಿದೆ. ಶರಣ ಪರಂಪರೆಗೂ ಭಕ್ತಿ ಪರಂಪರೆಗೂ ಸಂಬಂಧವಿಲ್ಲದಿದ್ದರೂ ವಚನ ಸಾಹಿತ್ಯದ ಉದ್ದೇಶವನ್ನೇ ತಿರುಚುವ ಕಾರ್ಯ ನಡೆದಿದೆ. ಮುನ್ನುಡಿ, ಸಂಪಾದಕೀಯ ಓದಿದರೂ ಕೃತಿಯ ಸಂಚು ಸ್ಪಷ್ಟವಾಗುತ್ತದೆ

ಬಸವಣ್ಣನವರು ಅನುಭಾವಿ, ಸಮಾಜ ಸುಧಾರಕ, ಅರ್ಥಶಾಸ್ತ್ರಜ್ಞ, ಸಕಲ ಜೀವಾತ್ಮರ ಒಳಿತು ಬಯಸಿದ ಶರಣ. 'ಗೃಹಸ್ಥ ಜಗದ್ಗುರು'. ಅವರಿಗೆ ಕೇವಲ 'ಭಕ್ತಿಭಂಡಾರಿ' ಎಂದು ಲೇಬಲ್ ಹಚ್ಚುವುದು ಸಲ್ಲದು. ಬಸವಣ್ಣನವರದು ಬಹುಮುಖ ವ್ಯಕ್ತಿತ್ವ. ಇದಕ್ಕೆ ವಚನಗಳೇ ಪುರಾವೆ. ಅವರು ವೇದೋಪನಿಷತ್ತುಗಳಿಂದ ಪ್ರಭಾವಿತರಾಗಿ ಅವುಗಳ ಸಾರವನ್ನೇ ವಚನಗಳ ರೂಪದಲ್ಲಿ ಹಿಡಿದಿಟ್ಟಿದ್ದಾರೆ ಎನ್ನುವವರೂ ಇದ್ದಾರೆ. ಅದಕ್ಕಾಗಿ ಲೇಖನಗಳನ್ನು ಬರೆಸಿ ಪ್ರಕಟಿಸುತ್ತಾರೆ. ಪ್ರಕಟಿತ ಪುಸ್ತಕದ ಪ್ರಚಾರಕ್ಕಾಗಿ ಲಕ್ಷಗಟ್ಟಲೆ ಹಣವನ್ನು ದುರ್ವಿನಿಯೋಗಿಸುತ್ತಾರೆ.

ನಾವೂ ಬಸವ ಪರಂಪರೆಯವರೆನ್ನುವ ಕೆಲವರು ವಚನಕಾರರ ತತ್ವಾದರ್ಶಗಳನ್ನು ತಮಗೆ ಬೇಕಾದಂತೆ ತಿರುಚಿ ವ್ಯಾಖ್ಯಾನಿಸುತ್ತಾರೆ. ಇಂಥವರು ಹಿಂದೆ ಇದ್ದರು, ಈಗಲೂ ಇದ್ದಾರೆ. ಅವರು ಓದುಗರನ್ನು ದಿಕ್ಕುತಪ್ಪಿಸುವಲ್ಲಿ ಪ್ರವೀಣರು. ವಚನಗಳನ್ನು ವೇದೋಪನಿಷತ್ತುಗಳ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡಬೇಕೇ, ಬಸವಾದಿ ಶರಣರಿಗೆ ವೇದೋಪನಿಷತ್ತುಗಳ ಪರಿಚಯವೇ ಇರಲಿಲ್ಲ. ಕಾರಣ, ಅವರು ಅಕ್ಷರ ವಂಚಿತ ತಳಸಮುದಾಯದವರು. ಅನುಭವ ಮಂಟಪದ ಮೂಲಕ ತಮ್ಮ ಅನುಭವವನ್ನು ವಚನಗಳಲ್ಲಿ ಹಿಡಿದಿಟ್ಟರು. ಕೆಲವರು ವಚನಗಳನ್ನು ಶ್ರುತಿ-ಸ್ಮೃತಿಗಳ ಹಿನ್ನೆಲೆಯಲ್ಲಿ ವಿಶ್ಲೇಷಣೆ ಮಾಡಬೇಕೆನ್ನುವರು. ಶರಣರು ಆಗಮಗಳನ್ನು ನಿರಾಕರಿಸಿದ್ದರು. 'ವೇದಕ್ಕೆ ಒರೆಯ ಕಟ್ಟುವೆ, ಶಾಸ್ತ್ರಕ್ಕೆ ನಿಗಳವನಿಕ್ಕುವೆ, ತರ್ಕದ ಬೆನ್ನ ಬಾರನೆತ್ತುವೆ, ಆಗಮದ ಮೂಗ ಕೊಯ್ವೆ' ಎಂದಿದ್ದಾರೆ ಬಸವಣ್ಣನವರು.


'ಇಹ-ಪರದ ಬದುಕಿಗೆ ಬೇಕಾದ ಜ್ಞಾನವೆಲ್ಲ ವೇದ, ಶಾಸ್ತ್ರ, ತರ್ಕ, ಪುರಾಣಾಗಮಗಳಲ್ಲಿದೆ' ಎನ್ನುವವರು ಸನಾತನರು. ಇದನ್ನು ಶರಣರು ಒಪ್ಪುವುದಿಲ್ಲ. 'ವೇದ ಶಾಸ್ತ್ರ ಆಗಮ ಪುರಾಣಂಗಳೆಲ್ಲ ಶ್ರುತಿ ಸ್ಮೃತಿಗಳಲ್ಲಿ ನುಡಿದವು ಪುಸಿ' ಎನ್ನುವರು ಅಮುಗೆ ರಾಯಮ್ಮನವರು. ಸಿದ್ಧರಾಮೇಶ್ವರರು 'ನಮ್ಮ ನಡಾವಳಿಗೆ ನಮ್ಮ ಪುರಾತರ ನುಡಿಯೆ ಇಪ್ಪವು' ಎಂದಿದ್ದಾರೆ. ನಮ್ಮಲ್ಲಿ 'ಪುರಾತರ' ಮತ್ತು 'ಸನಾತನ' ಪರಂಪರೆಯವರಿದ್ದಾರೆ.

ವಚನಕಾರರು 'ಪುರಾತರ' ಸಂಸ್ಕೃತಿಯವರು. ಪುರಾತರ ಎಂದರೆ ಶರಣರ ಅಂತಃಸಾಕ್ಷಿಯ ವಚನಗಳು. ಅದರಿಂದಾಗಿ ಚನ್ನಬಸವಣ್ಣನವರು 'ಶಬ್ದಸೋಪಾನವ ಕಟ್ಟಿ ನಡೆಯಿಸಿದರು ಪುರಾತರು' ಎಂದರೆ ಬಸವಣ್ಣನವರು 'ದೇವಸಹಿತ ಭಕ್ತ ಮನೆಗೆ ಬಂದಡೆ ಕಾಯಕವಾವುದೆಂದು ಬೆಸಗೊಂಡೆನಾದಡೆ ನಿಮ್ಮಾಣೆ! ನಿಮ್ಮ ಪುರಾತರಾಣೆ!' ಎಂದಿದ್ದಾರೆ. ವಚನಗಳನ್ನು ಪಶ್ಚಿಮ-ಪೂರ್ವ ಇಲ್ಲವೇ ಸನಾತನವಾಗಿ ನೋಡದೆ ಪುರಾತರ ದೃಷ್ಟಿಯಿಂದ ನೋಡಬೇಕು.

'ವಚನ ದರ್ಶನ' ಕೃತಿಯ ಗೌರವ ಸಂಪಾದಕರು ಸದಾಶಿವಾನಂದ ಮಹಾಸ್ವಾಮಿಗಳು. 'ನಾಡಿನ ಹಲವಾರು ಹಳ್ಳಿಗಳಲ್ಲಿ ಬನ್ನಿ ಗಣಪತಿ ಸ್ಥಾಪಿಸುವುದರ ಮೂಲಕ ಸಾತ್ವಿಕ ಗಣೇಶೋತ್ಸವ ಆಚರಣೆಗೆ ಮಾರ್ಗದರ್ಶನ' ಮಾಡಿದವರು ಎಂದು ಅವರ ಪರಿಚಯದಲ್ಲಿದೆ. ಗಣಪತಿಯ ಆರಾಧಕರು ವಚನಸಾಹಿತ್ಯಕ್ಕೆ ನ್ಯಾಯ ಒದಗಿಸಬಲ್ಲರೇ? ಶರಣ ವಿಚಾರಗಳನ್ನು ಗೌರವಿಸದವರ ನಡುವೆ ಅವರ ಸಂಬಂಧ ಅರ್ಥೈಸಿಕೊಳ್ಳಬೇಕು. 'ವಚನ ದರ್ಶನ'ದ ಸಂಪಾದಕೀಯ ಪ್ರಾರಂಭವಾಗುವುದೇ 'ಆನೋ ಭದ್ರಾಃ ಕ್ರತವೋ ಯಂತು ವಿಶ್ವತಃ' ಶ್ಲೋಕದಿಂದ. ವಚನ ದರ್ಶನವನ್ನು ಸಂಸ್ಕೃತ ಶ್ಲೋಕದಿಂದ ಪರಿಚಯಿಸುವ ಸಂಪಾದಕರ ಗುಪ್ತಪ್ರಣಾಳಿಕೆಯನ್ನು ಅರ್ಥಮಾಡಿಕೊಳ್ಳಬೇಕು. 'ವಚನಸಾಹಿತ್ಯ ಭಕ್ತಿಸಂಪತ್ತನ್ನು ಜನಸಾಮಾನ್ಯರ ಹತ್ತಿರಕ್ಕೆ ತಂದಿದೆ' ಎಂದಿದ್ದಾರೆ. ಅಂದರೆ ವಚನಕಾರರು ಕೇವಲ ಭಕ್ತಿಗೆ ಒತ್ತುಕೊಟ್ಟಿದ್ದರೇ? ವಚನಕಾರರು ಭಕ್ತಿಗೆ ತಕ್ಕಂತೆ ಜ್ಞಾನ, ಕಾಯಕ, ದಾಸೋಹ, ಶಿವಯೋಗ, ಸಮಾನತೆ, ಜಾತ್ಯತೀತತೆ ಮುಂತಾದ ತತ್ವಗಳು.

'ವಚನಗಳನ್ನು ಅರ್ಥೈಸಿಕೊಳ್ಳುವಾಗ ಬ್ರಿಟಿಷರು ಹಾಕಿದ ಮಾನದಂಡಗಳನ್ನು ಬಳಸಿಕೊಳ್ಳಲಾಗುತ್ತಿದೆ...' ಎಂದೆಲ್ಲ ಹರಿಯುತ್ತಾರೆ. ವಚನಗಳನ್ನು ಅರ್ಥೈಸಿಕೊಳ್ಳಲು ಯಾರೂ ಬ್ರಿಟಿಷರ ಮಾನದಂಡಗಳನ್ನು ಬಳಸಿಕೊಂಡಿಲ್ಲ. ಸಂಪಾದಕರು ಮತ್ತು ಲೇಖಕರು ವಚನಗಳ ತಿರುಳನ್ನು ತಮಗೆ ಬೇಕಾದಂತೆ ತಿರುಚಿದ್ದಾರಷ್ಟೆ. ಗೊಂದಲ ಸೃಷ್ಟಿಸುವ ಉದ್ದೇಶದಿಂದಲೇ 'ವಚನ ದರ್ಶನ' ಕೃತಿ ಹೊರಬಂದಂತಿದೆ. ಇದಕ್ಕೆ ಮುಖಪುಟವೇ ಕನ್ನಡಿಯಾಗಿದೆ. ಅಲ್ಲಿರುವ ಚಿತ್ರ ಬಸವಣ್ಣ ಅಥವಾ ಮತ್ತಾವುದೇ ಶರಣರದಲ್ಲ; ಕೊರಳಲ್ಲಿ ರುದ್ರಾಕ್ಷಿಯ ಬದಲು ತುಳಸಿಮಾಲೆ ಇದೆ. ಇಷ್ಟಲಿಂಗ ಬೆಂಕಿಯಲ್ಲಿ ಅರಳಿದಂತಿದೆ. ತಲೆಗೂದಲನ್ನು ಸಿಂಬೆ ಕಟ್ಟಿದ್ದಾರೆ. ಪಕ್ಕದಲ್ಲಿ ಬಿಲ್ಲು-ಬಾಣವಿದೆ. ಕೃತಿಯ ಹಿಂದಿರುವ ಹುನ್ನಾರಕ್ಕೆ ಇವೇ ಸಾಕ್ಷಿಯಾಗಿವೆ. ಶರಣರ ಶಿವ ಪೌರಾಣಿಕ ವ್ಯಕ್ತಿಯಲ್ಲ; ಆತ ಅಗಮ್ಯ, ಅಗೋಚರ, ಅಪ್ರತಿಮ. ಶಿವನಿಗೆ ಕರಚರಣಾದಿಗಳಿಲ್ಲ. 'ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು' ಎನ್ನುವ ಸಂಚಿನಿಂದ ಲಿಂಗಾಯತ ಸ್ವಾಮೀಜಿಗಳನ್ನೇ ಗೌರವ ಸಂಪಾದಕರನ್ನಾಗಿಸಿದ್ದಾರೆ.

ಸಂಪಾದಕ ಮಂಡಳಿಯಲ್ಲಿರುವ ಕೆಲವರಿಗೆ ವಚನ ಸಾಹಿತ್ಯದ ಅಧ್ಯಯನದ ಕೊರತೆ ಇರುವುದು ಅವರ ಪರಿಚಯ ಹಾಗೂ ಅಪ್ರಬುದ್ಧ ಬರವಣಿಗೆಯಿಂದ ವೇದ್ಯವಾಗುತ್ತದೆ. 'ಶಿವಶರಣರು ಋಷಿಗಳಂತೆ ತಪಸ್ವಿಗಳು ಮತ್ತು ಅನುಭಾವಿಗಳು' ಎಂದಿದ್ದಾರೆ. ಶರಣರು ಋಷಿಗಳಂತೆ ಹಿಮಾಲಯ ಇನ್ನೆಲ್ಲೋ ತಪಸ್ಸು ಮಾಡಿದವರಲ್ಲ; 'ಕಾಯಕವೇ ಕೈಲಾಸ' ಎಂದು ನಂಬಿದವರು. ಇದನ್ನು ಸಂಪಾದಕ ಮಂಡಳಿ ಅರ್ಥೈಸಿಕೊಂಡಿದ್ದರೆ 'ವಚನ ದರ್ಶನ' ಹೊರಬರುತ್ತಿರಲಿಲ್ಲ. ಮುನ್ನುಡಿ, ಸಂಪಾದಕೀಯವನ್ನಷ್ಟೇ ಓದಿದರೂ ಕೃತಿಯ ಸಂಚು ಸ್ಪಷ್ಟವಾಗುವುದು. ಶರಣರ ವಿಚಾರಗಳಿಗೆ ಮಸಿಬಳಿಯಲು ಮುಂದಾಗಿದ್ದ ಜಳಕಿ ಡಂಕಿನ್, ಬಾಲಗಂಗಾಧರರ ಸಂತತಿ ಇನ್ನೂ ಜೀವಂತವಿದೆ ಎನ್ನುವುದು ಕೃತಿಯ ಆರಂಭದ ಲೇಖನಗಳಿಂದಲೇ ಅರ್ಥವಾಗುತ್ತದೆ.



ಬಸವಕಲ್ಯಾಣದ ಕ್ರಾಂತಿಯ ಉದ್ದೇಶ ಸಮಸಮಾಜವನ್ನು ನೆಲೆಗೊಳಿಸುವುದಾಗಿತ್ತು. ಅದಕ್ಕಾಗಿ ಬಸವಣ್ಣನವರು 'ಮಹಾಮನೆ', 'ಅನುಭವ ಮಂಟಪ'ದಂತಹ ಸಂಸ್ಥೆಗಳನ್ನು ತೆರೆದರು. ಅಧ್ಯಯನದ ಕೊರತೆ ಅಥವಾ ವಚನ ಚಳವಳಿಯ ಬಗ್ಗೆ ಭಯಗೊಂಡ ಮತ್ಸರಿಗರು, 'ಅಂಥ ಸಂಸ್ಥೆಗಳೇ ಇರಲಿಲ್ಲ, ವಚನಗಳು ಬರೆದದ್ದಲ್ಲ-ಸೃಷ್ಟಿಸಿದ್ದು, ಬಸವಾದಿ ಶರಣರು ಅಸಮಾನತೆಯ ವಿರುದ್ಧ ಚಳವಳಿಯನ್ನೇ ನಡೆಸಿಲ್ಲ, ಕಲ್ಯಾಣದಲ್ಲಿ ನಡೆದದ್ದು ಕ್ರಾಂತಿಯೇ ಅಲ್ಲ, ಭಾರತದಲ್ಲಿ ಕ್ರಾಂತಿ, ಚಳವಳಿ ಮುಂತಾದ ಪದಗಳಿಗೆ ಜಾಗವೇ ಇಲ್ಲ' ಎಂದೆಲ್ಲ ಅರಚಿದ್ದಾರೆ. ಅವರ ವಾದ, ಅತಿ ಬುದ್ಧಿವಂತಿಕೆ ಅವರಿಗೇ ಮುಳುವಾಗುವುದರಲ್ಲಿ ಅನುಮಾನವಿಲ್ಲ.

ವಚನಗಳಲ್ಲಿ ಜಾತ್ಯತೀತತೆ, ಲಿಂಗಸಮಾನತೆ, ಕಾಯಕ, ಸ್ಥಾವರ ನಿರಾಕರಣೆ ಇತ್ಯಾದಿ ವಿಚಾರಗಳಿವೆ. ಎಲ್ಲರ ಹುಟ್ಟಿನ ಗುಟ್ಟು ಒಂದೇ ಆಗಿರುವಾಗ ಶ್ರೇಷ್ಠ, ಕನಿಷ್ಠ ಕುಲಜರಾಗಲು ಹೇಗೆ ಸಾಧ್ಯವೆಂದು ಪ್ರಶ್ನಿಸಿದ್ದಾರೆ. ಹುಟ್ಟಿನಿಂದಲೇ ಜಾತಿಯನ್ನು ಗುರುತಿಸುವ ಸನಾತನಿಗಳು ಶರಣರಲ್ಲ. ಸತ್ತದನಗಳ ಚರ್ಮದಿಂದ ಮೆಟ್ಟು, ಬಾರುಕೋಲು ಇತ್ಯಾದಿ ಮಾಡುವವರು ಮಾದಿಗರಲ್ಲ; ಕೊಲ್ಲುವ, ಹಿಂಸಿಸುವ ವ್ಯಕ್ತಿ ಮಾದಿಗ. ಭ್ರಷ್ಟಾಚಾರಿಗಳು, ಲಂಚಕೋರರು, ದುರಾಸೆಯ ದಳ್ಳುರಿಯಲ್ಲಿ ಬೇಯುವವರು, ನಡೆ-ನುಡಿ ಒಂದಾಗಿಲ್ಲದವರು ಹೊಲೆಯರು. ವಚನಗಳಲ್ಲಿ ಅನುಭವ, ಅನುಭಾವ ಮತ್ತು ಆತ್ಮವಿಮರ್ಶೆಯೊಂದಿಗೆ ಲೋಕವಿಮರ್ಶೆಯೂ ಇದೆ.

'ವಚನ ದರ್ಶನ'ದಂತಹ ಕೃತಿಗಳು 12ನೆಯ ಶತಮಾನದಿಂದ ಇಂದಿನವರೆಗೂ ಬರುತ್ತಲೇ ಇವೆ. ಮುಂದೆಯೂ ಬರಬಹುದು. ಶರಣರ ವಚನಗಳಂತಹ ಅಪ್ಪಟ ಚಿನ್ನವೇ ಕಣ್ಮುಂದೆ ಇರುವಾಗ ದಿಕ್ಕು ತಪ್ಪಿಸುವಂತಹ ಕೃತಿಗಳಿಗೆ ಮರುಳಾಗಬೇಕಿಲ್ಲ. ರಾಜಾರಾಮ ಹೆಗಡೆಯವರ ಲೇಖನ ವಚನ ದರ್ಶನಕ್ಕೆ ವಿರುದ್ಧವಾದ ವಿಚಾರಗಳನ್ನೇ ಪ್ರತಿಪಾದಿಸುತ್ತದೆ. ಅವರ ಉದ್ದೇಶ ಸನಾತನ ಧರ್ಮವನ್ನು ಪ್ರತಿಪಾದಿಸುತ್ತ ವಚನಕಾರರನ್ನು ಅಲ್ಲಿಗೆ ಸೇರಿಸಿ ತಾವೂ ಅದೇ ಪರಂಪರೆಯವರೆಂದು ಬಿಂಬಿಸುವುದು. ಬೆಕ್ಕು ಕಣ್ಣುಮುಚ್ಚಿಕೊಂಡು ಹಾಲು ಕುಡಿದರೆ ಯಾರಿಗೂ ಗೊತ್ತಾಗುವುದಿಲ್ಲವೇ? ಕೃತಿಯ ಪ್ರಚಾರಕ್ಕಾಗಿ ಕಾಣದ ಕೈಗಳು ಕೋಟಿಗಟ್ಟಲೆ ಹಣವನ್ನು ದುರ್ವಿನಿಯೋಗ ಮಾಡಿವೆ. ಅವರ ಉದ್ದೇಶ ಏನೆಂದು ಗೊತ್ತಾಯ್ತಲ್ಲ! ಅವರು ಮತ್ತೊಂದು ಸಾಹಸಕ್ಕೆ ಕೈಹಾಕಿದ್ದರು: ಅದೇ ಇಷ್ಟಲಿಂಗದೀಕ್ಷೆ. ಶರಣ ತತ್ವಗಳ ಮಾರ್ಗದರ್ಶನ ನೀಡದೇ ಸನಾತನ ಪರಂಪರೆಯನ್ನೇ ಲಿಂಗಧಾರಿಗಳ ಮಿದುಳಿಗೆ ತುಂಬುವ ಹುನ್ನಾರವಿದ್ದರೆ ಅವರನ್ನು ದುಷ್ಟರು, ಶನಿಸಂತಾನ, ಧರ್ಮದ್ರೋಹಿಗಳು, ಬಂಡವಾಳಶಾಹಿಗಳೆನ್ನದೆ ಬೇರೇನು ಹೇಳಲು ಸಾಧ್ಯ?

'ವಚನ ದರ್ಶನ' ಕೃತಿಯ ಹಿಂದಿರುವವರಿಗೆ ಈಗಲೂ ತೆರೆದ ಮನಸ್ಸು, ವಿವೇಕ ಇದ್ದರೆ ವಚನಸಾಹಿತ್ಯವನ್ನು ಓದಬೇಕು. ಕೊನೆಯಪಕ್ಷ ಎಸ್.ಜಿ.ಸಿದ್ಧರಾಮಯ್ಯನವರ 'ಕ್ರಾಂತಿಯ ಹೆಜ್ಜೆಗಳು', ನಾವೇ ಸಂಪಾದಿಸಿರುವ 'ವಚನ ಸಂವಿಧಾನ', 'ವಚನ ದರ್ಶನ' ಮಿಥ್ಯ-ಸತ್ಯ ಕೃತಿಗಳನ್ನಾದರೂ ಓದುವ ಧಾರಾಳತನ ತೋರಿದರೆ ತಮ್ಮ ತಪ್ಪಿನ ಅರಿವಾಗುತ್ತದೆ.

ಲೇಖಕ: ಸಾಣೇಹಳ್ಳಿಯ ತರಳಬಾಳು ಶಾಖಾಮಠದ ಪೀಠಾಧ್ಯಕ್ಷರು

ಲಿಂಗಾಯತರ ಸೆಳೆಯುವ ತಂತ್ರ

● ಎಸ್.ಎಂ.ಜಾಮದಾರ



ಮೇಲ್ನೋಟಕ್ಕೆ 'ವಚನ ದರ್ಶನ' ಎಂಬ ಹೆಸರು ವಚನಗಳನ್ನು ಕುರಿತಾದ ಮತ್ತೊಂದು ಕೃತಿಯೆಂದು ಸಾಮಾನ್ಯ ಓದುಗನಿಗೆ ಅನಿಸುತ್ತದೆ. ಆದರೆ ಅದರ ಒಳಗಿನ ಹೂರಣವೆಲ್ಲ ಶರಣ ತತ್ವಗಳಿಗೆ ವಿರುದ್ಧವಾದದ್ದು. ಲಿಂಗಾಯತರನ್ನು ಹೇಗಾದರೂ ಮಾಡಿ 'ಹಿಂದೂ' ಅಥವಾ 'ವೈದಿಕ' ಪರಿಧಿಯೊಳಗೆ ತರಬೇಕು ಎಂಬ ಉದ್ದೇಶ ಈ ಕೃತಿಯ ಹಿಂದಿದೆ

'ವಚನ ದರ್ಶನ' ಎಂಬ ಹೆಸರಿನ ಗ್ರಂಥವು ಬಿಜೆಪಿ ಮತ್ತು ಆರ್‌ಎಸ್‌ಎಸ್ ಪರಿವಾರದಿಂದ ಕಳೆದ ವರ್ಷದ ಜುಲೈ ತಿಂಗಳಿಂದ ಡಿಸೆಂಬರ್‌ವರೆಗೆ ಕರ್ನಾಟಕದ ಒಂಬತ್ತು ಸ್ಥಳಗಳಲ್ಲಿ ಮತ್ತು ದೆಹಲಿಯಲ್ಲಿ ಅಪಾರ ಖರ್ಚಿನಲ್ಲಿ ಅದ್ದೂರಿಯಾಗಿ ಬಿಡುಗಡೆಯಾಯಿತು. ಆ ಎಲ್ಲ ಸ್ಥಳಗಳಲ್ಲಿ ಸಂಘ ಪರಿವಾರದ ವಕ್ತಾರರು ಅತ್ಯಂತ ಪ್ರಚೋದನಕಾರಿ ಭಾಷಣಗಳನ್ನು ಮಾಡಿದರು. ಈ ಪುಸ್ತಕವು ಸಂಘ ಪರಿವಾರದ ದುರುದ್ದೇಶ ಮತ್ತು ದುರುಳತನವನ್ನು ಬಿಂಬಿಸುತ್ತದೆ. ಈ ಕೃತಿಯ ಕುರಿತಾಗಿ ಕೆಲವು ಮುಖ್ಯ ಅಂಶಗಳನ್ನು ಗಮನಿಸಬೇಕಿದೆ.

ಮೊದಲನೆಯದು, 'ವಚನ ದರ್ಶನ'ದ ಗೌರವ ಸಂಪಾದಕರಾಗಿರುವ ಸದಾಶಿವಾನಂದ ಸ್ವಾಮಿಗಳ ಯಾವುದೇ ಲೇಖನ, ಪ್ರಸ್ತಾವನೆ ಅಥವಾ ಮುನ್ನುಡಿ ಕೃತಿಯಲ್ಲಿ ಇಲ್ಲ. ಅವರ ಭಾವಚಿತ್ರ ಮಾತ್ರ ಇದೆ. ಕಾರಣ ಅವರೊಬ್ಬ ಲಿಂಗಾಯತ ಮುಖವಾಡದ ವೇದಾಂತಿ.

ಎರಡನೆಯದು, ಈ ಪುಸ್ತಕ ಬಿಡುಗಡೆ ಕಾರ್ಯಕ್ರಮಗಳಿಗೆ ಲಿಂಗಾಯತರು ಬಹುಸಂಖ್ಯಾತರಾಗಿರುವ ರಾಜ್ಯದ ಒಂಬತ್ತು ಪ್ರಮುಖ ಜಿಲ್ಲೆಗಳನ್ನೇ ಆಯ್ಕೆ ಮಾಡಿ, ಲಿಂಗಾಯತರ ಸಭಾಭವನಗಳಲ್ಲಿಯೇ ಕಾರ್ಯಕ್ರಮ ನಡೆಸಿ, ಲಿಂಗಾಯತ ಸ್ವಾಮಿಗಳನ್ನೇ ಗ್ರಂಥ ಬಿಡುಗಡೆಗೆ ಆಹ್ವಾನಿಸಲಾಗಿತ್ತು. ಅದರ ಹಿಂದಿನ ಉದ್ದೇಶ ಲಿಂಗಾಯತರನ್ನು ಹಿಂದುತ್ವ ಮತ್ತು ಬಿಜೆಪಿಯತ್ತ ಸೆಳೆಯುವುದು.

ಮೂರನೆಯದು, ಮೇಲ್ನೋಟಕ್ಕೆ 'ವಚನ ದರ್ಶನ' ಎಂಬ ಹೆಸರು 12ನೆಯ ಶತಮಾನದ ಶರಣರ ವಚನಗಳನ್ನು ಕುರಿತಾದ ಮತ್ತೊಂದು ಕೃತಿಯೆಂದು ಸಾಮಾನ್ಯ ಓದುಗನಿಗೆ ಅನಿಸುತ್ತದೆ. ಆದರೆ ಅದರ ಒಳಗಿನ ಹೂರಣವೆಲ್ಲ ಶರಣ ತತ್ವಗಳಿಗೆ ವಿರುದ್ಧವಾದದ್ದು.

ನಾಲ್ಕನೆಯದು, ಅದರ ಮುಖಪುಟದ ಬಸವಣ್ಣನವರ ಚಿತ್ರ ವಿಚಿತ್ರವಾಗಿದೆ. ಈ ಚಿತ್ರದ ಹಿಂದೆ ಅಡಗಿರುವ ದುರುದ್ದೇಶವೆಂದರೆ, ಲಿಂಗಾಯತರು ಹಿಂದೂ ಶೈವರು ಎಂಬಂತೆಯೂ, ಲಿಂಗಾಯತರು ವೈದಿಕರ ಸಾಕಾರ ಶಿವನ ಆರಾಧಕರು ಎನ್ನುವಂತೆಯೂ ಚಿತ್ರಿಸಿ ಲಿಂಗಾಯತರನ್ನು ಹಿಂದುತ್ವದ ಪರಿಧಿಯಲ್ಲಿ ಬಿಂಬಿಸುವುದು.

ಐದನೆಯದು, ಬೆಂಗಳೂರಲ್ಲಿ ಈ ಗ್ರಂಥವನ್ನು ಲಿಂಗಾಯತ ಬೇಲಿಮಠದ ಶಿವರುದ್ರ ಸ್ವಾಮಿಗಳು ಲೋಕಾರ್ಪಣೆ ಮಾಡಬೇಕಿತ್ತು. ಹುಬ್ಬಳ್ಳಿಯಲ್ಲಿ ಮೂರುಸಾವಿರ ಮಠದ ಸ್ವಾಮಿಗಳು, ಕಲಬುರಗಿಯಲ್ಲಿ ಶರಣಬಸವಪ್ಪನವರು, ವಿಜಯಪುರದಲ್ಲಿ ಜ್ಞಾನಯೋಗಾಶ್ರಮದ ಸ್ವಾಮಿಗಳು ಕೃತಿ ಬಿಡುಗಡೆ ಮಾಡಬೇಕಿತ್ತು. ಆದರೆ ಇವರೆಲ್ಲರೂ ಕಾರ್ಯಕ್ರಮದಿಂದ ದೂರ ಉಳಿದರು. ಆದಾಗ್ಯೂ, ಬೆಂಗಳೂರಿನಲ್ಲಿ ಆರ್‌ಎಸ್‌ಎಸ್‌ನ ನಂಬರ್ -2 ನಾಯಕ ದತ್ತಾತ್ರೇಯ ಹೊಸಬಾಳೆಯವರು ಬಿಡುಗಡೆ ಮಾಡಿದರೆ, ಮುಕುಂದ ಅವರು ಪ್ರಚೋದನಕಾರಿ ಭಾಷಣ ಮಾಡಿದರು. ಬಿ.ಎಲ್.ಸಂತೋಷ್ ಅವರು ಕಲಬುರಗಿಯಲ್ಲಿ, ಶಂಕರಾನಂದರು ಬಿಜಾಪುರದಲ್ಲಿ ಪ್ರಚೋದನಕಾರಿ ಭಾಷಣ ಮಾಡಿದರು. ಸಭಿಕರಿಲ್ಲದೆ ಬಹುತೇಕ ಕಾರ್ಯಕ್ರಮಗಳು ವಿಫಲವಾದವು.

ಆರನೆಯದು, ಈ ಗ್ರಂಥವನ್ನು ಪ್ರಕಟಿಸಿದವರು ಸಂಘ ಪರಿವಾರದ ಪ್ರಜ್ಞಾ ಪ್ರಕಾಶನ ಸಂಸ್ಥೆ ಮತ್ತು ಅಯೋಧ್ಯಾ ಪ್ರಕಾಶನ. ನೀರಿನಂತೆ ಹಣವನ್ನು ಖರ್ಚು ಮಾಡಿದವರು, ಈ ಎಲ್ಲ ಕಾರ್ಯಕ್ರಮಗಳ ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸಿದವರು, ಪುಸ್ತಕದಲ್ಲಿನ ಲೇಖನಗಳನ್ನು ಬರೆದವರೆಲ್ಲರೂ ಕಟ್ಟರ್ ಬಲಪಂಥೀಯರು ಎಂದು ಬೇರೆ ಹೇಳಬೇಕಿಲ್ಲ. ದೆಹಲಿಯ ಇದೇ ಕಾರ್ಯಕ್ರಮಕ್ಕೆ ಬಿಜೆಪಿಯಿಂದ ಆಯ್ಕೆಯಾಗಿ ಕೇಂದ್ರ ಸರ್ಕಾರದಲ್ಲಿ ರೈಲ್ವೆ ಖಾತೆ ರಾಜ್ಯ ಸಚಿವರಾಗಿರುವ ಲಿಂಗಾಯತರಾದ ಸೋಮಣ್ಣನವರನ್ನೇ ಆಯ್ಕೆ ಮಾಡಲಾಗಿತ್ತು.

ಕೊನೆಯದಾಗಿ, ಈ ಎಲ್ಲ ತಂತ್ರಗಾರಿಕೆಯನ್ನು ಖುಲ್ಲಂಖುಲ್ಲಾ ಪ್ರದರ್ಶಿಸಿದ ಆರ್‌ಎಸ್‌ಎಸ್ ಮತ್ತು ಬಿಜೆಪಿಯ ನಾಯಕರು, ಈ ಪುಸ್ತಕದ ಸಂಪಾದಕರು ಲಿಂಗಾಯತರಿಗೆ ಏನನ್ನು ಹೇಳಲು ಹೊರಟಿದ್ದಾರೆ ಎಂಬುದನ್ನು ಗಮನಿಸಲು 'ವಚನ ದರ್ಶನ' ಗ್ರಂಥದಲ್ಲಿನ ಕೆಲವು ಮಹತ್ವದ ಮತ್ತು ವಿಚಿತ್ರ ಸುಳ್ಳು ವಾದಗಳನ್ನು ಓದಲೇಬೇಕು.

ಈ ಗ್ರಂಥದಲ್ಲಿರುವ ಇಪ್ಪತ್ತು ಲೇಖನಗಳಲ್ಲಿ ಐದರ ಲೇಖಕರು ಲಿಂಗಾಯತರು. ಕೃತಿಯ ಮುನ್ನುಡಿಯಲ್ಲಿ ಪ್ರೊ.ಮಲ್ಲೇಪುರಂ ವೆಂಕಟೇಶ್ ಅವರು ಹೀಗೆ ಹೇಳಿದ್ದಾರೆ: 'ವಚನ ದರ್ಶನ ಗ್ರಂಥದಲ್ಲಿ ಸಂಕಲಿಸಿರುವ ಲೇಖನಗಳು ಸಮಾಜವಾದಿ ಮತ್ತು ಮಾರ್ಕ್ಸ್‌ವಾದಿ ದೃಷ್ಟಿಕೋನಗಳಿಗಿಂತ ಸಂಪೂರ್ಣವಾಗಿ ಭಿನ್ನವಾಗಿ ಸಾಗಿವೆ. ನಾವು ಈಗ ಭಾರತೀಯ ಜ್ಞಾನ ಪರಂಪರೆಯ ಹಿನ್ನೆಲೆಯಲ್ಲೂ ಕನ್ನಡನಾಡಿನ ಅನುಭಾವಿಕ ಹಿನ್ನೆಲೆಯಲ್ಲೂ ವಚನಸಾಹಿತ್ಯವನ್ನು ಅನುಸಂಧಾನಿಸುವುದು ಅಗತ್ಯವಿದೆ'. ಆದರೆ, ಅವರು 'ಭಾರತೀಯ ಜ್ಞಾನ ಪರಂಪರೆ' ಎಂದರೇನು ಎಂಬುದನ್ನು ವಿಶದಪಡಿಸಿಲ್ಲ. ಸಾಮಾನ್ಯವಾಗಿ, ಭಾರತೀಯ 'ಜ್ಞಾನ ಪರಂಪರೆ' ಎಂದರೆ ಯಾವಾಗಲೂ ವೇದಗಳು, ಪುರಾಣಗಳು, ಹಿಂದೂ ಧರ್ಮಶಾಸ್ತ್ರಗಳು, ಆಗಮಗಳು, ರಾಮಾಯಣ, ಮಹಾಭಾರತಗಳು ಮತ್ತು ವೇದಾಂತಿಗಳ ಭಾಷೆಯಲ್ಲಿ ಇಲ್ಲವೆ ಅವರ ಶೈಲಿಯಲ್ಲಿಯೇ ಚರ್ಚೆ, ವಾದವಿವಾದಗಳು, ಅನುಸಂಧಾನಗಳು ಇರಬೇಕು.

ಸುಮಾರು ಒಂದು ಸಾವಿರ ವಚನಗಳ ಮೂಲಕ ಲಿಂಗಾಯತ ಶರಣರು ವೇದ, ಶಾಸ್ತ್ರ, ಪುರಾಣ, ಉಪನಿಷತ್ತುಗಳನ್ನು ನಿರಾಕರಿಸಿದರು ಮತ್ತು ಅವುಗಳಿಗೆ ಪರ್ಯಾಯವಾದ ಸಿದ್ಧಾಂತ ಮತ್ತು ಆಚರಣೆಗಳನ್ನು ರೂಪಿಸಿದರು. ಇಷ್ಟಾಗಿಯೂ ಶರಣ ಧರ್ಮವನ್ನೂ ವೈದಿಕ ಹಿನ್ನೆಲೆಯಲ್ಲೇ ವಿಮರ್ಶಿಸಬೇಕೆಂಬ ಕಟ್ಟಳೆಗೆ ಆಧಾರವೇನೆಂಬುದನ್ನು ಅವರು ಯಾರೂ ಹೇಳಿಲ್ಲ.

ಮಲ್ಲೇಪುರಂ ಮತ್ತು ರಾಜಾರಾಮ ಹೆಗಡೆಯವರ ವಾದವೆಂದರೆ, ಸಮಾಜವಾದ, ಮಾರ್ಕ್ಸ್‌ವಾದವು ಪರಕೀಯವಾದುದು, ವಿದೇಶದಿಂದ ಬಂದದ್ದು. ಆದ್ದರಿಂದ ಅದು ಭಾರತಕ್ಕೆ ಅನ್ವಯಿಸುವುದಿಲ್ಲ. ಭಾರತದ ನೆಲದಲ್ಲಿಯೇ ಹುಟ್ಟಿದ ವೈದಿಕವಲ್ಲದ ಯಾವುದೇ ಐತಿಹಾಸಿಕ, ಆರ್ಥಿಕ, ಸಾಮಾಜಿಕ, ರಾಜಕೀಯ ವಿಚಾರಗಳು 'ಭಾರತೀಯ ಪರಂಪರೆ'ಗೆ ವಿರುದ್ಧವಾದದ್ದು ಎನ್ನುವುದು, ಅಂತಹ ವಿಚಾರ ಮತ್ತು ಸಿದ್ಧಾಂತಗಳನ್ನು ಹತ್ತಿಕ್ಕಬೇಕು ಎನ್ನುವುದು ಈ ಪುಸ್ತಕ ಬರೆದವರ, ಪ್ರಕಟಿಸಿದವರ ಮತ್ತು ಬೆಂಬಲಿಸುವವರ ವಾದ. ಮಾರ್ಕ್ಸ್‌ವಾದವು ಯುರೋಪಿನಲ್ಲಿ ಹುಟ್ಟುವ 800 ವರ್ಷ ಮೊದಲೇ ಶರಣರು ನಡೆಸಿದ ಕ್ರಾಂತಿಯ ಮೂಲತತ್ವಗಳಲ್ಲಿ ಸಮತಾವಾದದ ಬೀಜಗಳನ್ನು ಕಾಣಬಹುದು. ಸಮಸ್ತ ಮಾನವ ಸಮಾನತೆ, ಸ್ತ್ರೀ ಸಮಾನತೆ, ವಿಶ್ವ ಬಂಧುತ್ವ, ವ್ಯಕ್ತಿ ಸ್ವಾತಂತ್ರ್ಯ, ದೈಹಿಕ ದುಡಿಮೆಯ ಮಹತ್ವ (ಕಾಯಕ) ಮತ್ತು ಸಂಪತ್ತಿನ ಸಾಮಾಜೀಕರಣ (ದಾಸೋಹ) ತತ್ವಗಳು ಮಾರ್ಕ್ಸ್‌ವಾದದ ಮೂಲ ಅಂಶಗಳು. ಈ ರೀತಿಯ ಸಮತಾವಾದ ಭಾರತದಲ್ಲಿಯೇ, ಕನ್ನಡ ನೆಲದಲ್ಲಿಯೇ ಹುಟ್ಟಿ ಬೆಳೆಯಿತು. ಆಗಿನ ಸಂಪ್ರದಾಯವಾದಿಗಳ ಕುತಂತ್ರಗಳೇ ಅದು ಕರ್ನಾಟಕವನ್ನು ಬಿಟ್ಟು ಭಾರತದ ಉಳಿದ ಕಡೆಗಳಲ್ಲಿ ಹರಡದಂತೆ ಮತ್ತು ವಿದೇಶಗಳಿಗೆ ತಲುಪದಂತೆ ಮಾಡಿದವು; ಇಂದಿಗೂ ಅದನ್ನೇ ಮಾಡಲಾಗುತ್ತಿದೆ.

ವೀಣಾ ಬನ್ನಂಜೆಯವರು, ನಾ.ಮೊಗಸಾಲೆಯವರು, ಮಲ್ಲೇಪುರಂ ವೆಂಕಟೇಶ್ ಅವರ ಪ್ರಕಾರ, ಶರಣರ ವಚನಗಳು ವೈದಿಕರ ಉಪನಿಷತ್ತುಗಳ ಮತ್ತು ವೇದಗಳ ಕನ್ನಡದ ಭಾಷಾಂತರಗಳಾಗಿವೆ. ಆದರೆ, ವಚನಗಳು ವೇದಗಳ ಇಲ್ಲವೆ ಉಪನಿಷತ್ತುಗಳ ಯಾವ ಶ್ಲೋಕಗಳ ಭಾಷಾಂತರಗಳಾಗಿವೆ ಎಂಬುದನ್ನು ಇದರಲ್ಲಿ ಯಾರೂ ಹೇಳುವುದಿಲ್ಲ. ಇದೇ ತಂಡದ ಇನ್ನೊಂದು ವಿಕೃತ ವಾದವೆಂದರೆ, ಅನುಭವ ಮಂಟಪವೆಂಬ ಸಂಸ್ಥೆ ಅಥವಾ ಗೋಷ್ಠಿಗಳು 12ನೆಯ ಶತಮಾನದಲ್ಲಿ ಇರಲೇ ಇಲ್ಲ; ಅದು 16ನೆಯ ಶತಮಾನದ ಸಂಪಾದನಾಕಾರರು ಹುಟ್ಟು ಹಾಕಿದ ಕಪೋಲಕಲ್ಪಿತ ಸಂಗತಿ ಎನ್ನುವುದು. ಆ ವಾದವನ್ನು ಆಧಾರಸಹಿತವಾಗಿ 1940ರ ದಶಕದಲ್ಲೇ ತಿರಸ್ಕರಿಸಲಾಗಿದೆ.

ಶರಣರು ವೈದಿಕ ಧರ್ಮವನ್ನು ಎಂದಿಗೂ ಒಪ್ಪಲಿಲ್ಲ. ಆದ್ದರಿಂದ ಶರಣ ಧರ್ಮವನ್ನು ಸ್ವಲ್ಪವಾದರೂ ನಂಬುತ್ತಿರುವ ಲಿಂಗಾಯತರನ್ನು ಹೇಗಾದರೂ ಮಾಡಿ 'ಹಿಂದೂ' ಅಥವಾ 'ವೈದಿಕ' ಪರಿಧಿಯಲ್ಲಿ ತರಬೇಕು ಎಂಬ ಉದ್ದೇಶವು ಸಂಘ ಪರಿವಾರದ ಈ ಎಲ್ಲ ಕಸರತ್ತಿಗೆ ಕಾರಣವಾಗಿದೆ. ಅವರಿಗೆ ಕೆಲವು ರಾಜಕೀಯ ತರಹದ ಲಿಂಗಾಯತ ಮಠಾಧೀಶರು ಮತ್ತು ಪಂಚಾಚಾರ್ಯರೆಂಬ ಮೂಲತಃ ವೈದಿಕರಾಗಿದ್ದ ವೀರಶೈವ ಪಂಥದವರು ಸಾಥ್ ನೀಡುತ್ತಿದ್ದಾರೆ. ಇಲ್ಲಿ ಲೇಖನಗಳನ್ನು ಬರೆದ ಲಿಂಗಾಯತರು ಮತ್ತು ಗೌರವ ಸಂಪಾದಕರಾದ ಸ್ವಾಮಿಗಳು ಅದೇ ಗುಂಪಿಗೆ ಸೇರಿದವರು ಎಂಬುದನ್ನು ನೆನಪಿಡಬೇಕು.

ಲೇಖಕ: ಜಾಗತಿಕ ಲಿಂಗಾಯತ ಮಹಾಸಭಾದ ಮಹಾ ಪ್ರಧಾನ ಕಾರ್ಯದರ್ಶಿ ಮತ್ತು ನಿವೃತ್ತ ಐಎಎಸ್ ಅಧಿಕಾರಿ

ನಾವು ನೋಡಿದ ಸಿನಿಮಾ

ವೇಗ, ಕುತೂಹಲ ಎರಡೂ ಮಿಸ್



ರಂಗಾಯಣ ರಘು

ಅಜ್ಞಾತವಾಸಿ
- ● ನಿರ್ಮಾಣ: ಹೇಮಂತ್ ರಾವ್
- ● ನಿರ್ದೇಶನ: ಜನಾರ್ಧನ್ ಚಿಕ್ಕಣ್ಣ
- ● ತಾರಾಗಣ: ರಂಗಾಯಣ ರಘು, ಸಿದ್ದು ಮೂಲಿಮನೆ, ಪಾವನಾ ಗೌಡ, ರವಿಶಂಕರ್ ಗೌಡ ಮತ್ತಿತರರು

ನಿರ್ದೇಶಕ ಜನಾರ್ಧನ್ ಚಿಕ್ಕಣ್ಣ 'ಗುಲ್ಟು' ಚಿತ್ರದಲ್ಲಿ ಕಂಪ್ಯೂಟರ್‌ನ ಅಪಾಯಕಾರಿ ಜಗತ್ತನ್ನು ಕಟ್ಟಿಕೊಟ್ಟಿದ್ದರು. ಡಾರ್ಕ್ ವೆಬ್‌ಗಳ ಕುರಿತಾದ ಕಥೆ ಕುತೂಹಲ ಹುಟ್ಟಿಸಿತ್ತು. ಅದೇ ರೀತಿ 'ಅಜ್ಞಾತವಾಸಿ'ಯಲ್ಲಿ ಕೂಡ 1990ರ ದಶಕದ ಕಂಪ್ಯೂಟರ್ ಪೆಟ್ಟಿಗೆಯನ್ನು ಮುಂದಿಟ್ಟುಕೊಂಡು, ಅದರಿಂದ ತೀರ ಕುಗ್ರಾಮಗಳಲ್ಲಿ ಶುರುವಾದ ಬದಲಾವಣೆಗಳನ್ನು ಹೇಳುತ್ತ ಹೋಗಿದ್ದಾರೆ. ಒಂದು ಹಂತದಲ್ಲಿ ಇದು ಕಂಪ್ಯೂಟರ್ ಮೇಲಿನ ಸಿನಿಮಾವೇ ಎಂಬಷ್ಟು ಅನುಮಾನ ಹುಟ್ಟಿಸುತ್ತದೆ! ಆದರೆ ಇದೊಂದು ಮರ್ಡರ್ ಮಿಸ್ಟ್ರಿ ಸಿನಿಮಾ ಎನ್ನಲು ಒಂದೆರಡು ಕೊಲೆಗಳು ನಡೆಯುತ್ತವೆ. ಇಷ್ಟಾಗಿಯೂ ಸಿನಿಮಾದಲ್ಲಿ ಇಷ್ಟವಾಗುವ ಸಾಕಷ್ಟು ಅಂಶಗಳು ಸಿಗುತ್ತವೆ. ಕಾರಣ ಚಿತ್ರವನ್ನು ಕಟ್ಟಿಕೊಟ್ಟ ರೀತಿ.

90ರ ದಶಕದಲ್ಲಿ ಕಂಪ್ಯೂಟರ್ ಎಂಬುದೇ ಹೊಸತು. ಹಳ್ಳಿಗಳಲ್ಲಿ ಆಗಷ್ಟೇ ಸಾಫ್ಟ್‌ವೇರ್ ಕ್ರಾಂತಿ ಶುರುವಾಗಿ ಮನೆಯ ಮಕ್ಕಳು ಊರು ಬಿಟ್ಟು ಹೊರಡಲು ಶುರು ಮಾಡಿದ್ದರು. ಈಗ ಸಾಫ್ಟ್‌ವೇರ್ ಎಂಜಿನಿಯರ್‌ಗಳಿಗೆ ಬೆಂಗಳೂರು ಸ್ವರ್ಗವಾಗಿರುವಂತೆ ಅಂದು ಅಮೆರಿಕ ನೆಚ್ಚಿನ ತಾಣವಾಗಿತ್ತು. ಮಲೆನಾಡು, ಕಾಫಿನಾಡುಗಳಿಂದ ಹೀಗೆ ಗುಳೆ ಹೋದವರು ಸಾಕಷ್ಟು ಜನ. ಆ ಕಾಲಘಟ್ಟದ ಚಿತ್ರಣವನ್ನು ಬಹಳ ಸೊಗಸಾಗಿ ಕಟ್ಟಿಕೊಡಲಾಗಿದೆ.

ಕಾಫಿನಾಡಿನ ದಟ್ಟ ಕಾಡಿನ ನಡುವೆ ಇರುವ ಒಂದು ಊರು. ಅಲ್ಲಿನ ಪೊಲೀಸ್ ಠಾಣೆಯಿಂದ ಕಥೆ ಪ್ರಾರಂಭವಾಗುತ್ತದೆ. ಅದು ಫಾರೆಸ್ಟ್ ಆಫೀಸ್ ಅಲ್ಲ, ಪೊಲೀಸ್ ಠಾಣೆ ಎಂಬುದು ಅರ್ಥವಾಗಲು ಕೆಲಹೊತ್ತು ಬೇಕಾಗುತ್ತದೆ. ಆ ಊರಿಗೆ ಪೊಲೀಸ್ ಠಾಣೆ ಬಂದು 25 ವರ್ಷ ಕಳೆದರೂ ಅಲ್ಲಿ ಒಂದೇ ಒಂದು ಕೇಸ್ ಇಲ್ಲ. ಕೊಲೆ ಹಾಗಿರಲಿ, ತಲೆ ಉಪಯೋಗಿಸಿ ಕಳ್ಳತನ ಮಾಡುವವರೂ ಇಲ್ಲ. ಅಂಥ ಊರಿನಲ್ಲಿ ಎಸ್ಟೇಟ್ ಮಾಲೀಕ ಶ್ರೀನಿವಾಸಗೌಡರ ಕೊಲೆಯಾಗುತ್ತದೆ. ಮಗ ಮನೆ ಬಿಟ್ಟು ಹೋಗಿದ್ದಾನೆ. ಗೌಡರು ಕಾಡಿನ ತೋಟದಲ್ಲಿ ಬದುಕುವ ಒಂಟಿ ಜೀವ. ಗೌಡರದ್ದು ಸಾಯುವ ವಯಸ್ಸು. ಇಷ್ಟಾಗಿಯೂ ಅದು ಸಹಜ ಸಾವಲ್ಲ, ಕೊಲೆ ಎಂಬುದು ಪೊಲೀಸ್ ಇನ್‌ಸ್ಪೆಕ್ಟರ್ ಆಗಿರುವ ರಂಗಾಯಣ ರಘುಗೆ ಗೊತ್ತಾಗುತ್ತದೆ. ಕೊಲೆ ಮಾಡಿದವರು ಯಾರು ಎಂಬ ಕುತೂಹಲ ಬಹಳ ಕಾಲ ಉಳಿಯುವುದಿಲ್ಲ. ಅದರ ಬದಲಿಗೆ ಊರು, ಕಂಪ್ಯೂಟರ್, ಪೋಸ್ಟ್‌ಮ್ಯಾನ್, ಇಂಟರ್‌ನೆಟ್‌ನ ಸುತ್ತಲೇ ಕಥೆ ಸಾಗುತ್ತದೆ. ಕೆಲ ದೃಶ್ಯಗಳ ಪುನರಾವರ್ತನೆ, ಅಲ್ಲೇ ಸುತ್ತುವ ಕಥೆ ಮೊದಲಾರ್ಧದಲ್ಲಿ ಅಲ್ಲಲ್ಲಿ ತಾಳ್ಮೆ ಪರೀಕ್ಷಿಸುತ್ತದೆ.


ಇಮೇಲ್ ಮೂಲಕ ಶುರುವಾಗುವ ಅರುಣನ ಪ್ರೇಮಕಥೆ ಚಿತ್ರಕ್ಕೊಂದು ಹೊಸ ಚೈತನ್ಯ ನೀಡುತ್ತದೆ. ಊರಿನ ಎಲ್ಲರ ಪತ್ರವನ್ನು ಇಮೇಲ್ ಮಾಡುವ ರೋಹಿತ್ ಪಾತ್ರಧಾರಿಯಾಗಿ ಸಿದ್ದು ಮೂಲಿಮನಿ ಇಷ್ಟವಾಗುತ್ತಾರೆ. ಅಜ್ಞಾತವಾಸಿ ಅರುಣನ ಪ್ರೇಮಿಯಾಗಿ ಪಾವನಾ ಗೌಡ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ರಂಗಾಯಣ ರಘು ಎಂದಿನಂತೆ ಕೆಲವು ಕಡೆ ನಟಿಸುತ್ತ, ಇನ್ನು ಕೆಲವು ಕಡೆ ಸಹಜವೆನಿಸಿ ತಮ್ಮ ಪಾತ್ರಕ್ಕೆ ಜೀವ ತುಂಬಿದ್ದಾರೆ. ಶರತ್ ಲೋಹಿತಾಶ್ವ, ರವಿಶಂಕರ್ ಗೌಡ, ಯಮುನಾ ಶ್ರೀನಿಧಿ ಅವರ ಪಾತ್ರಗಳೂ ಗಮನ ಸೆಳೆಯುತ್ತವೆ.

ಸಿನಿಮಾದ ದೊಡ್ಡ ಶಕ್ತಿ ಅದ್ವೈತ ಗುರುಮೂರ್ತಿ ಕ್ಯಾಮೆರಾ ಕೈಚಳಕ. 90ರ ದಶಕದ ಬೈಕು, ಕಾರು, ಮನೆ, ಸುತ್ತಲ ಹಸಿರಾದ ಪರಿಸರದೊಂದಿಗೆ ಪ್ರತಿ ಫ್ರೇಮ್ ಅನ್ನು ವರ್ಣಮಯವಾಗಿಸಿದ್ದಾರೆ. ಅದಕ್ಕೆ ತಕ್ಕಂತೆ ಚರಣ್ ರಾಜ್ ಹಿನ್ನೆಲೆ ಸಂಗೀತವೂ ಒಂದು ಸುಮಧುರ ಅನುಭವ ನೀಡುತ್ತದೆ. ಇಷ್ಟಾಗಿಯೂ ಚಿತ್ರದಲ್ಲಿ ಇನ್ನೇನೋ ಬೇಕಿತ್ತು ಎನ್ನಿಸುವುದು ಬರವಣಿಗೆಯಲ್ಲಿ. ಬದುಕಿನಲ್ಲಿ ನಡೆದ ಘಟನೆಯೊಂದರಿಂದ ಅಜ್ಞಾತವಾಸಿಯಾಗಿರುವ ರಂಗಾಯಣ ರಘು ಹಿನ್ನೆಲೆಯನ್ನು ಇನ್ನಷ್ಟು ಗಟ್ಟಿಯಾಗಿಸುವ ಅವಕಾಶ ನಿರ್ದೇಶಕರಿಗಿತ್ತು. ಮರ್ಡರ್ ಮಿಸ್ಟ್ರಿ ಜಾನರಿಗೆ ಅಗತ್ಯವಾದ ವೇಗ, ಕುತೂಹಲ ಎರಡೂ ಚಿತ್ರದಲ್ಲಿ ಕಾಣಿಸುವುದಿಲ್ಲ.

–ವಿನಾಯಕ ಕೆ.ಎಸ್.

ಪದಬಂಧ 6009

– ವಿದ್ಯಾ ವಿನಯ್



ಎಡದಿಂದ ಬಲಕ್ಕೆ
1.ಲೋಭನಿಗೆ ಆಸೆಯನ್ನು ಹುಟ್ಟಿಸುವಿಕೆ! (4)
2.ಆಣೆಯಿಟ್ಟರೂ ಪಕ್ಷದವರೆಲ್ಲಾ ಮಾಡುತ್ತಿರುವ ನಿಂದೆ (4)
4.ಬೆಳದಿಂಗಳನ್ನು ಸೇವಿಸುವ ಹಕ್ಕಿಯು ಚಕ್ರದ ಮೇಲಿದೆ (4)
7.ಜನಗಣತಿಗಾಗಿ ನಿರ್ಮಿಸಿರುವ ವೇದಿಕೆ (3)
8.ಜಾಣ ನೋಡಿದಾಕ್ಷಣ ಹಾರಿರುವ ಮಕ್ಷಿಕ (2)
9.ಎಲ್ಲಾ ಬಲ್ಲವನೆಂದು ಹೇಳಿಕೊಳ್ಳುತ್ತಿರುವ ಪತಿ (3)
10.ಪಂಗಡದವರು ಕುಳಿತಿರುವ ಸಾಲು (2)
11.ಹಸೆ ಹಾಕುವ ಜಾಗದಲ್ಲಿ ಬೆಳೆದಿರುವ ಪಾಚಿ (3)
12.ತಮ್ಮನು ತೋರಿಸಿರುವ ಭೇದಭಾವ (4)
14.ಬೇಡವಾದವರ ಮೇಲೆ ಬೆಳೆಸಿಕೊಂಡಿರುವ ಶತ್ರುತ್ವ (4)
15.ಅಡಿಯಲ್ಲಿ ಕಾಣುತ್ತಿರುವ ಗದ್ದಲ (4)

ಮೇಲಿಂದ ಕೆಳಕ್ಕೆ
1.ಪಂಚರು ನೋಡುತ್ತಿರುವ ಜಗತ್ತು (3)
3.ಚತುರಂಗಸೈನ್ಯದ ಒಂದು ಭಾಗ (3)
5.ಹಂತ ಹಂತವಾಗಿ ಎಂದು ಹೀಗೆ ಹೇಳಿ (3)
6.ಖಡ್ಗದಿಂದ ಮಾಡುವ ಸಾಧನೆ (5)
7.ಈತ ಆಲಸ್ಯ ಸ್ವಭಾವದವನು (5)
10.ಖಂಡಿತ ಈತ ವಿದ್ವಾಂಸ! (3)
11.ಹಾವು ಹಿಡಿಯುವವನು ಧರಿಸಿದ ಮರದ ಮೆಟ್ಟು (3)
13.ಮಡಿವಂತನು ಏರಿದ ಅಟ್ಟ (3)

6008ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಾದಕ 3.ಬಾಲಕ
5.ರವಿಕಿರಣ 6.ತ್ರಯೋದಶಿ
8.ತಿನ್ನಾಸಕ 9.ಹಾಲೋಗರ
10.ವಿಜ್ಞಾಪನೆ 12.ಹಯವದನ
14.ಲವಣ 15.ರವಾನೆ

ಮೇಲಿಂದ ಕೆಳಕ್ಕೆ:
1.ವಾಯುಪುತ್ರ 2.ಕರ
3.ಬಾಣ 5.ಕರ್ನಾಟಕ
7.ಶಿಬಿರ 8.ತಿಭೂವಿ
9.ಹಾಲಾಹಲ 11.ನೆರೆಮನೆ
12.ಹಣ 13.ನರ

ಸುಡೊಕು 6394

			5		6			7
	9			4			8	6
7		4	9			5		3
	1				5			
		7		9				5
5	2		6		3			
8		1		5			6	
			1		4	8		9
4		9		6			5	1

6393 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಏಪ್ರಿಲ್ 12, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುದ್ಧ ಪೂರ್ಣಿಮಾ ಅಹೋರಾತ್ರ ನಕ್ಷತ್ರ: ಹಸ್ತ ಗಂ. 18-08 ಯೋಗ: ವ್ಯಾಘಾತ ಗಂ. 20-40 ಕರಣ: ವಿಷ್ಟಿ ಗಂ. 16-36, ಮೀನ ಮಾಸದ 29 ನೇ ದಿನ, ಮಳೆನಕ್ಷತ್ರ: ರೇವತಿ 4.
ರಾಹುಕಾಲ : ಬೆಳಿಗ್ಗೆ 09-00 – 10-30
ಸೂರ್ಯೋದಯ : 06-23 ಸೂರ್ಯಾಸ್ತ : 06-40
ಮುಸ್ಲಿಂ ದಿನಾಂಕ : 12 ಶವ್ವಾಲ್, ದಿನ ವಿಶೇಷ : ಚೈತ್ರ ಪೂರ್ಣಿಮಾ, ಹನುಮಂತ ಜಯಂತಿ (ದ.ಭಾರತ), ಅದೃಷ್ಟ ಸಂಖ್ಯೆ : 1, 6

ಮೇಷ: ರಾಜಕೀಯ ವ್ಯವಹಾರಗಳ ಪ್ರಬಲಾಕಾಂಕ್ಷಿಯಾಗಿರುವ ನೀವು ಇನ್ನಷ್ಟು ಚುರುಕಾಗಬೇಕಾಗಿದೆ. ಮುಸ್ಸಂಜೆಯ ಹೊತ್ತಿನಲ್ಲಿ ಮನೆಯಿಂದ ಹೊರ ಹೊರಡುವುದು ಸೂಕ್ತಕರವಲ್ಲ. ವಾಹನ ಖರೀದಿ ಬೇಡ.

ವೃಷಭ: ಮನೆಯ ಜನರ ಬದಲಾದ ವ್ಯಕ್ತಿತ್ವವನ್ನು ಮೊದಲಿನ ರೀತಿಗೆ ತರಲು ಪ್ರಯತ್ನಿಸುವಿರಿ. ಹಣವನ್ನು ಬೇಡದ ಜಾಗಗಳಲ್ಲಿ ಹೂಡಿಕೆ ಮಾಡುವ ಯೋಚನೆಗಳಿಗೆ ತಡೆ ಹಾಕಿ.

ಮಿಥುನ: ಎಲ್ಲಾ ಸಮಯದಲ್ಲಿಯೂ ಮೃದುಧೋರಣೆ ಒಳ್ಳೆಯದಲ್ಲ. ಧಾರಾವಾಹಿ ಅಥವಾ ಸಿನಿಮೀಯ ಘಟನೆಗಳು ಅವುಗಳಿಗೆ ಮಾತ್ರ ಸೀಮಿತ ಎಂಬುದು ಮನವರಿಕೆಯಾಗಲಿದೆ. ಆರೋಗ್ಯದ ಮೇಲೆ ಗಮನ ಹರಿಸುವಿರಿ.

ಕರ್ಕಾಟಕ: ಕೆಲವೊಂದು ಕಡೆ ಕಡಿಮೆ ಮಾತನಾಡುವುದರಿಂದಾಗಿ ಅವಿದ್ಯೆಯ ಪ್ರದರ್ಶನವಾಗುವುದು ತಪ್ಪುತ್ತದೆ. ಬಹಳ ಸಲೀಸು ಎಂದು ಅಂದುಕೊಂಡಿರುತ್ತೀರೊ ಅವರೇ ಕಠಿಣವಾಗಿ ತೋರುವರು.

ಸಿಂಹ: ಮಗಳ ಮೇಲೆ ಕಾಳಜಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತದೆ. ಯಾವುದೇ ರೀತಿಯಲ್ಲೂ ತಪ್ಪುಗಳು ನಡೆಯದಂತೆ ನೋಡಿಕೊಳ್ಳಿ. ದೇವರಲ್ಲಿ ಮುಂದಿನ ದಿನಗಳು ಸರಾಗವಾಗಿ ಇರುವಂತೆ ಬೇಡಿಕೊಳ್ಳಿ.

ಕನ್ಯಾ: ಆರೋಗ್ಯದ ಮೇಲೆ ವಹಿಸುತ್ತಿರುವ ಕಾಳಜಿಯು ಕಡಿಮೆಯಾಗುತ್ತದೆ. ಈ ಋತುವಿನಲ್ಲಿ ಸೂಕ್ತವಾಗುವ ಆಹಾರ ಪದಾರ್ಥಗಳನ್ನು ಮಾತ್ರ ಸ್ವೀಕರಿಸಿ. ಸಾಮಾಜಿಕ ಜೀವನದಲ್ಲಿ ಮುಂದುವರಿಯುವಿರಿ.

ತುಲಾ: ನಾಯಕತ್ವ ಗುಣವನ್ನು ಹೊರತರಲು ಸ್ನೇಹಿತರು ಪ್ರಯತ್ನಿಸುತ್ತಾರೆ. ಯುವ ಕ್ರೀಡಾಪಟುಗಳಿಗೆ ಅವಕಾಶಗಳು ಸಿಗುತ್ತವೆ. ಫಾಸ್ಟ್ ಫುಡ್‌ಗಳ ಮೇಲಿನ ವ್ಯಾಮೋಹ ಬದಲಿಸಿಕೊಳ್ಳಿ.

ವೃಶ್ಚಿಕ: ಮನೆಯನ್ನು ಕಟ್ಟುವ ಮೊದಲು ಜಾಗಕ್ಕೆ ಸಂಬಂಧಪಟ್ಟಂತೆ ತಿಳಿದವರಿಂದ ವಿಚಾರಿಸಿ. ಮುಖ್ಯ ನಿರ್ಧಾರಗಳನ್ನು ತೆಗೆದುಕೊಳ್ಳುವ ಮುನ್ನ ಹೆಂಡತಿ–ಮಕ್ಕಳ ಸಲಹೆ ಕೇಳಿ.

ಧನು: ಪೂಜೆ ಪುನಸ್ಕಾರಗಳ ಜತೆಯಲ್ಲಿ ಸ್ವಂತ ಪ್ರಯತ್ನ ಚೆನ್ನಾಗಿ ಇದ್ದಲ್ಲಿ ಗುರಿಯನ್ನು ಮುಟ್ಟುವಲ್ಲಿ ಯಶಸ್ವಿಯಾಗುವಿರಿ. ಕೆಲಸ ಕಾರ್ಯದಲ್ಲಿ ಏಕಾಗ್ರತೆ ಮುಖ್ಯ. ಮನರಂಜನೆಗೆ ಅಧಿಕ ಸಮಯ ನೀಡುವಿರಿ.

ಮಕರ: ಉಗುರು ಹಾಗೂ ಹಸ್ತಗಳ ಸ್ವಚ್ಛತೆ ಕೊರತೆಯಿಂದ ಕಾಯಿಲೆಯನ್ನು-ಹೊಂದುವ ಸಾಧ್ಯತೆ. ಕೌಟುಂಬಿಕ ಸಮಸ್ಯೆಗಳನ್ನು ಬೇರೆಯವರ ಬಳಿ ಹೇಳದೆ ಇರುವುದು ಒಳ್ಳೆಯದು.

ಕುಂಭ: ಗೃಹಿಣಿಯರು ಮನಸ್ಸಿಲ್ಲದಿದ್ದರೂ ಕುಟುಂಬ ಸದಸ್ಯರ ಕೆಲವೊಂದು ಮಾತುಗಳಿಗೆ ಒಪ್ಪಿಕೊಳ್ಳಬೇಕಾಗುತ್ತದೆ. ಪ್ರಯಾಣದ ಸಮಯದಲ್ಲಿ ಹೆಣ್ಣು ಮಕ್ಕಳಿಗೆ ಸಹಪ್ರಯಾಣಿಕರಿಂದ ತೊಂದರೆ ಉಂಟಾಗಬಹುದು.

ಮೀನ: ಅಜ್ಜಿ ಅಥವಾ ಅಜ್ಜನ ಕಡೆಯಿಂದ ಉಡುಗೊರೆಯು ಸಿಗುವ ಸಾಧ್ಯತೆ ಇದೆ. ವಾಹನ ಓಡಿಸುವಾಗ ಹೆಚ್ಚಿನ ಜಾಗ್ರತೆ ಮುಖ್ಯ. ವಾರಾಂತ್ಯವು ಪೂರ್ವ ನಿರ್ಧರಿತ ರೀತಿಯಲ್ಲಿ ನಡೆಯಲಿದೆ.

ಅಂತರಧರ್ಮೀಯ ಜೋಡಿಗೆ ಭದ್ರತೆ ಒದಗಿಸಲು ಅಲಹಾಬಾದ್ ಹೈಕೋರ್ಟ್ ಸೂಚನೆ

‘ಅವಿವಾಹಿತ ಪೋಷಕರು ಜತೆಗಿರಬಹುದು’

ಪ್ರಯಾಗರಾಜ್ (ಪಿಟಿಐ): ವಯಸ್ಕ ಪೋಷಕರು ಅವಿವಾಹಿತರಾದರೂ ಒಟ್ಟಿಗೆ ವಾಸಿಸಬಹುದು ಎಂದು ಹೇಳಿರುವ ಅಲಹಾಬಾದ್ ಹೈಕೋರ್ಟ್, ಬೆದರಿಕೆ ಎದುರಿಸುತ್ತಿರುವ ಅಂತರಧರ್ಮೀಯ ಜೋಡಿಯ ಭದ್ರತೆಯನ್ನು ಪರಿಶೀಲಿಸುವಂತೆ ಪೊಲೀಸರಿಗೆ ಸೂಚಿಸಿದೆ.

ಅಂತರಧರ್ಮೀಯ ಪೋಷಕರ ಅಪ್ರಾಪ್ತ ವಯಸ್ಸಿನ ಮಗಳು ಸಲ್ಲಿಸಿರುವ ರಿಟ್ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಶೇಖರ್ ಬಿ.ಸರಾಫ್ ಮತ್ತು ವಿಪಿನ್‌ಚಂದ್ರ ದೀಕ್ಷಿತ್ ಅವರನ್ನೊಳಗೊಂಡ ಪೀಠವು, ‘ಮಗುವಿನ ತಂದೆ ಮತ್ತು ತಾಯಿ ಭಿನ್ನ ಧರ್ಮದವರಾಗಿದ್ದು, 2018ರಿಂದಲೂ ಒಟ್ಟಿಗೆ ವಾಸಿಸುತ್ತಿದ್ದಾರೆ’ ಎಂದು ಹೇಳಿತು. ಮಗುವಿನ ತಾಯಿಯು ಆಕೆಯ ಪತಿಯ ಮರಣದ ನಂತರ ಅನ್ಯ ಧರ್ಮದ ವ್ಯಕ್ತಿಯ ಜತೆ ವಾಸಿಸಲು ತೊಡಗಿದ್ದರು. ಅದಕ್ಕೆ ಆಕೆ ಹಿಂದಿನ ಅತ್ತೆ–ಮಾವ ಅವರಿಂದ ಬೆದರಿಕೆ ಎದುರಿಸುತ್ತಿದ್ದಾರೆ.

‘ಬೆದರಿಕೆ ಇರುವ ಕಾರಣ ಮಗುವಿನ ಪೋಷಕರು ಭಯಭೀತರಾಗಿದ್ದಾರೆ. ವಯಸ್ಕ ಪೋಷಕರು ಮದುವೆಯಾಗದಿದ್ದರೂ ಒಟ್ಟಿಗೆ ಜೀವಿಸಲು ಸಂವಿಧಾನವು ಅವಕಾಶ ನೀಡುತ್ತದೆ’ ಎಂದು ಹೈಕೋರ್ಟ್ ಏಪ್ರಿಲ್ 8ರ ತನ್ನ ಆದೇಶದಲ್ಲಿ ತಿಳಿಸಿದೆ.

ಕಾನೂನಿನ ಪ್ರಕಾರ ಮಗುವಿಗೆ ಮತ್ತು ಪೋಷಕರಿಗೆ ಭದ್ರತೆಯನ್ನು ಒದಗಿಸಬೇಕೇ ಎಂಬುದನ್ನು ಪರಿಶೀಲಿಸುವಂತೆ ಸಂಭಾಲ್‌ನ ಎಸ್‌ಪಿಗೆ ಪೀಠವು ನಿರ್ದೇಶಿಸಿದೆ.

ಬೆದರಿಕೆ ಇರುವ ಬಗ್ಗೆ ದೂರು ನೀಡಲು ಪೊಲೀಸ್ ಠಾಣೆಗೆ ತೆರಳಿದಾಗ ಪೊಲೀಸರು ಎಫ್‌ಐಆರ್ ದಾಖಲಿಸದೆ, ದೂರುದಾರರನ್ನೇ ‘ಅವಮಾನಿಸಿದ್ದಾರೆ’ ಎಂದು ಅರ್ಜಿಯಲ್ಲಿ ಆರೋಪಿಸಲಾಗಿತ್ತು.

ಅಂಗಿಯ ಗುಂಡಿ ಧರಿಸದೇ ಬಂದ ವಕೀಲಗೆ ಜೈಲು ಶಿಕ್ಷೆ

ಲಖನೌ (ಪಿಟಿಐ): ಅಂಗಿಯ ಗುಂಡಿ ಹಾಕದೇ ನ್ಯಾಯಾಲಯಕ್ಕೆ ಬಂದಿದ್ದ ವಕೀಲರೊಬ್ಬರಿಗೆ 6 ತಿಂಗಳ ಜೈಲು ಶಿಕ್ಷೆಯನ್ನು ಅಲಹಾಬಾದ್ ಹೈಕೋರ್ಟ್ ವಿಧಿಸಿದೆ.

ನ್ಯಾಯಮೂರ್ತಿ ವಿವೇಕ್ ಚೌಧರಿ, ನ್ಯಾಯಮೂರ್ತಿ ಬಿ.ಆರ್.ಸಿಂಗ್ ಅವರನ್ನೊಳಗೊಂಡ ವಿಭಾಗೀಯ ಪೀಠವು 2021ರಲ್ಲಿ ನಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಆದೇಶ ನೀಡಿದೆ.

ಸ್ಥಳೀಯ ವಕೀಲ ಅಶೋಕ್ ಪಾಂಡೆ ಎಂಬುವವರು 2021ರ ಆಗಸ್ಟ್ 18ರಂದು ಅಂಗಿಯ ಗುಂಡಿ ಧರಿಸದೇ ನ್ಯಾಯಾಲಯಕ್ಕೆ ಬಂದಿದ್ದಲ್ಲದೇ, ಸಹ ವಕೀಲರ ಜತೆಗೂ ಅನುಚಿತವಾಗಿ ವರ್ತಿಸಿದ್ದರು. ಅವರ ವಿರುದ್ಧ ಕಾನೂನು ನಿಂದನೆ ಪ್ರಕರಣ ದಾಖಲಿಸಲಾಗಿತ್ತು. ಆದರೆ, ವಿಚಾರಣೆಗೂ ಪಾಂಡೆ ಹಾಜರಾಗಿರಲಿಲ್ಲ.

ಈ ಹಿನ್ನೆಲೆಯಲ್ಲಿ ನ್ಯಾಯಪೀಠವು ಪಾಂಡೆಗೆ 6 ತಿಂಗಳ ಜೈಲು ಶಿಕ್ಷೆ ವಿಧಿಸಿ, ಇದು ಪಾಂಡೆ ಹಾಗೂ ಇತರರಿಗೆ ಪಾಠ ಕಲಿಸುವಂತ ಶಿಕ್ಷೆ ಎಂದಿದೆ. ಜತೆಗೆ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ ಅವರ ಎದುರು ಹಾಜರಾಗಲು ಪಾಂಡೆಗೆ 4 ವಾರಗಳ ಗಡುವು ನೀಡಿದೆ.

ಇದಲ್ಲದೇ, ₹2000 ದಂಡವನ್ನೂ ವಿಧಿಸಿದ್ದು, ದಂಡ ಪಾವತಿಸುವಲ್ಲಿ ವಿಫಲವಾದರೆ ಹೆಚ್ಚುವರಿಯಾಗಿ 1 ತಿಂಗಳ ಜೈಲು ಶಿಕ್ಷೆ ವಿಧಿಸಲಾಗುವುದು ಎಂದಿದೆ.


‘ಅಲಹಾಬಾದ್ ಹೈಕೋರ್ಟ್ ಹಾಗೂ ಅದರ ಲಖನೌ ಪೀಠದಲ್ಲಿ ನೀವು ವಕೀಲಿ ವೃತ್ತಿ ಮುಂದುವರಿಸುವುದನ್ನು ನಾವು ಏಕೆ ನಿರ್ಬಂಧಿಸಬಾರದು ಎಂಬುದಕ್ಕೆ ಸೂಕ್ತ ಕಾರಣ ನೀಡಿ’ ಎಂದು ನ್ಯಾಯಪೀಠವು ಶೋಕಾಸ್ ನೋಟಿಸ್ ಜಾರಿಗೊಳಿಸಿ, ಪ್ರತಿಕ್ರಿಯಿಸಲು ಮೇ 1ರವರೆಗೆ ಪಾಂಡೆಗೆ ಕಾಲಾವಕಾಶ ನೀಡಿದೆ.

ಜನರ ಹಕ್ಕುಗಳ ಬಗ್ಗೆಯೂ ಯೋಚಿಸಿ: ‘ಸುಪ್ರೀಂ’

ನವದೆಹಲಿ (ಪಿಟಿಐ): ಜಾರಿ ನಿರ್ದೇಶನಾಲಯವು (ಇ.ಡಿ) ಜನರ ಮೂಲಭೂತ ಹಕ್ಕುಗಳ ಬಗ್ಗೆಯೂ ಯೋಚಿಸಬೇಕು ಎಂದು ಸುಪ್ರೀಂ ಕೋರ್ಟ್ ಒತ್ತಿ ಹೇಳಿದೆ.

ನಾಗರಿಕ ಆಹಾರ ಪೂರೈಕೆ ನಿಗಮ (ಎನ್‌ಎಎನ್) ಹಗರಣ ಪ್ರಕರಣವನ್ನು ಛತ್ತೀಸಗಢದಿಂದ ನವದೆಹಲಿಗೆ ವರ್ಗಾಯಿಸಬೇಕು ಎಂದು ಕೋರಿದ್ದ ಇ.ಡಿಯನ್ನು ತರಾಟೆಗೆ ತೆಗೆದುಕೊಂಡಿತು.

ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ ಮತ್ತು ಉಜ್ಜಲ್ ಭುಯಾನ್ ಅವರನ್ನು ಒಳಗೊಂಡ ಪೀಠವು, ಸಂವಿಧಾನದ 32ನೇ ವಿಧಿಯಡಿಯಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು ಹೇಗೆ ಎಂದು ಇ.ಡಿಯನ್ನು ಪ್ರಶ್ನಿಸಿತು. ಜನರು ತಮ್ಮ ಹಕ್ಕುಗಳನ್ನು ಉಲ್ಲಂಘಿಸಲಾಗಿದೆ ಎಂದು ಭಾವಿಸಿದರೆ ನೇರವಾಗಿ ಸುಪ್ರೀಂ ಕೋರ್ಟ್ ಮೊರೆ ಹೋಗಲು ಈ ವಿಧಿಯು ಅವಕಾಶ ನೀಡುತ್ತದೆ.



ಬಳಿಕ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್.ವಿ.ರಾಜು ಅವರು, ‘ಇ.ಡಿ ಕೂಡಾ ಮೂಲಭೂತ ಹಕ್ಕು ಹೊಂದಿದೆ’ ಎಂದು ಹೇಳಿ ಅರ್ಜಿಯನ್ನು ಹಿಂಪಡೆಯಲು ಅನುಮತಿ ಕೋರಿದರು. ಆಗ ಪೀಠವು, ‘ಇ.ಡಿ ಮೂಲಭೂತ ಹಕ್ಕು ಹೊಂದಿದ್ದರೆ, ಜನರ ಮೂಲಭೂತ ಹಕ್ಕುಗಳ ಬಗ್ಗೆಯೂ ಅದು ಚಿಂತಿಸಬೇಕು’ ಎಂದು ಹೇಳಿತು. ನಂತರ ಅರ್ಜಿ ಹಿಂಪಡೆಯಲು ಅವಕಾಶ ನೀಡಿತು.

‘ಅಗತ್ಯವಿದ್ದರಷ್ಟೇ ಸಿಬಿಐಗೆ ತನಿಖೆ ವರ್ಗಾಯಿಸಿ’

ನವದೆಹಲಿ (ಪಿಟಿಐ): ಪ್ರಕರಣವೊಂದರ ತನಿಖೆಯನ್ನು ಕೇಂದ್ರೀಯ ತನಿಖಾ ದಳಕ್ಕೆ (ಸಿಬಿಐ) ವರ್ಗಾಯಿಸಿದ್ದ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಆದೇಶವನ್ನು ರದ್ದುಗೊಳಿಸಿರುವ ಸುಪ್ರೀಂ ಕೋರ್ಟ್, ‘ಪ್ರಕರಣಗಳನ್ನು ಸಿಬಿಐಗೆ ವರ್ಗಾಯಿಸುವುದನ್ನು ರೂಢಿಯಾಗಿಸಬಾರದು’ ಎಂದು ಹೇಳಿದೆ.

‘ತನಿಖೆಯನ್ನು ಸಿಬಿಐಗೆ ವಹಿಸಬೇಕಾದ ಅಗತ್ಯವಿದೆ ಎಂಬುದು ಮೇಲ್ನೋಟಕ್ಕೆ ಕಂಡು ಬಂದರೆ ಮಾತ್ರವೇ ಅಂತಹ ಪ್ರಕರಣಗಳನ್ನು ಹೈಕೋರ್ಟ್‌ಗಳು ಸಿಬಿಐಗೆ ವರ್ಗಾಯಿಸಬೇಕು’ ಎಂದು ನ್ಯಾಯಮೂರ್ತಿಗಳಾದ ಸುಧಾಂಶು ಧೂಲಿಯಾ, ಕೆ.ವಿನೋದ್ ಚಂದ್ರನ್ ಅವರಿದ್ದ ಪೀಠ ತಿಳಿಸಿದೆ.

ಗುಪ್ತಚರ ಸಂಸ್ಥೆಯ ಐಜಿ ಎಂದು ಹೇಳಿಕೊಂಡು ವ್ಯಕ್ತಿಯೊಬ್ಬರು ₹1.49 ಕೋಟಿ ವರ್ಗಾಯಿಸುವಂತೆ ಬೆದರಿಕೆ ಹಾಕಿದ್ದಾರೆ ಎಂಬ ಆರೋಪದ ಮೇರೆಗೆ ಪಂಚಕುಲದಲ್ಲಿ 2022ರ ಅಕ್ಟೋಬರ್‌ನಲ್ಲಿ ಎಫ್‌ಐಆರ್ ದಾಖಲಾಗಿತ್ತು.

ಪ್ರಕರಣದ ವಿಚಾರಣೆಯನ್ನು ರಾಜ್ಯ ಪೊಲೀಸರಿಂದ ಸಿಬಿಐಗೆ ವರ್ಗಾಯಿಸುವಂತೆ ಕೋರಿ ದೂರುದಾರರು ಹೈಕೋರ್ಟ್‌ಗೆ ಮನವಿ ಮಾಡಿದ್ದರು. ಅವರ ಮನವಿಯನ್ನು ಹೈಕೋರ್ಟ್ ಅಂಗೀಕರಿಸಿದ ಕಾರಣ ಆರೋಪಿಗಳು ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ಸುದ್ದಿ 2 ನಿಮಿಷ

ಪದ್ಮ ಪ್ರಶಸ್ತಿಗೆ ಶಿಫಾರಸು ಪ್ರಕ್ರಿಯೆ ಆರಂಭ

ನವದೆಹಲಿ (ಪಿಟಿಐ): ಮುಂದಿನ ವರ್ಷದ ಗಣರಾಜ್ಯೋತ್ಸವದ ಮುನ್ನಾ ದಿನ ಘೋಷಿಸುವ 2026ನೇ ಸಾಲಿನ ‘ಪದ್ಮ’ ಪುರಸ್ಕಾರಗಳಿಗೆ ನಾಮನಿರ್ದೇಶನ ಹಾಗೂ ಶಿಫಾರಸು ಪ್ರಕ್ರಿಯೆಯನ್ನು ಕೇಂದ್ರ ಗೃಹ ಸಚಿವಾಲಯ ಆರಂಭಿಸಿದೆ.

ರಾಷ್ಟ್ರೀಯ ಪುರಸ್ಕಾರ ಪೋರ್ಟಲ್‌ನಲ್ಲಿ (https://awards.gov.in) ಜುಲೈ 31ರ ಒಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಪದ್ಮಶ್ರೀ, ಪದ್ಮಭೂಷಣ, ಪದ್ಮವಿಭೂಷಣ ದೇಶದ ಅತ್ಯುನ್ನತ ನಾಗರಿಕ ಪುರಸ್ಕಾರಗಳಾಗಿವೆ.

ಈ ಸಂಬಂಧದ ವಿವರಗಳು ಗೃಹ ಸಚಿವಾಲಯದ ವೆಬ್‌ಸೈಟ್‌ನಲ್ಲಿ ‘ಪ್ರಶಸ್ತಿಗಳು ಮತ್ತು ಪದಕಗಳು’ ಶೀರ್ಷಿಕೆಯಡಿ ಲಭ್ಯವಿವೆ (https://mha.gov.in). ಪದ್ಮ ಪುರಸ್ಕಾರಕ್ಕೆ ಸಂಬಂಧಿಸಿದ ಪೋರ್ಟಲ್ (https://padmaawards.gov.in).

ಪಕ್ಷದ ಹುದ್ದೆಯಿಂದ ಪೊನ್ಮುಡಿ ವಜಾ



ಪೊನ್ಮುಡಿ ಅವರ ಇತ್ತೀಚಿನ ಹೇಳಿಕೆಯು ಸ್ವೀಕಾರಾರ್ಹವಲ್ಲ. ಅವರು ಯಾವುದೇ ಕಾರಣಕ್ಕಾಗಿ ಈ ರೀತಿ ಮಾತನಾಡಿದ್ದರೂ, ಇಂಥ ಅಸಭ್ಯ ಪದಬಳಕೆ ಖಂಡನೀಯ

ಕನಿಮೊಳಿ, ಡಿಎಂಕೆ ಸಂಸದೆ

ಚೆನ್ನೈ (ಪಿಟಿಐ): ತಮಿಳುನಾಡು ಸಚಿವ ಮತ್ತು ಡಿಎಂಕೆ ನಾಯಕ ಕೆ.ಪೊನ್ಮುಡಿ ಅವರು ಶೈವ–ವೈಷ್ಣವ ಪಂಥದ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಕ್ಕೆ ವ್ಯಾಪಕ ಟೀಕೆ ವ್ಯಕ್ತವಾಗಿದೆ. ಇದರ ಬೆನ್ನಲ್ಲೇ, ಪೊನ್ಮುಡಿ ಅವರನ್ನು ಪಕ್ಷದ ಪ್ರಮುಖ ಹುದ್ದೆಯಿಂದ ವಜಾ ಮಾಡಲಾಗಿದೆ.

ಡಿಎಂಕೆ ಅಧ್ಯಕ್ಷ ಮತ್ತು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಅವರು, ‘ಪಕ್ಷದ ಉಪ ಪ್ರಧಾನ ಕಾರ್ಯದರ್ಶಿ ಹುದ್ದೆಯಿಂದ ಪೊನ್ಮುಡಿ ಅವರನ್ನು ಕೈಬಿಡಲಾಗಿದೆ’ ಎಂದು ಘೋಷಿಸಿದ್ದಾರೆ. ಆದರೆ ಇದಕ್ಕೆ ಯಾವುದೇ ಕಾರಣವನ್ನು ಅವರು ತಿಳಿಸಿಲ್ಲ. ಇದೇ ಸಂದರ್ಭದಲ್ಲಿ, ಪೊನ್ಮುಡಿ ಅವರ ಸ್ಥಾನಕ್ಕೆ ರಾಜ್ಯಸಭಾ ಸದಸ್ಯ ತಿರುಚಿ ಶಿವಾ ಅವರನ್ನು ನೇಮಕ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

ಖಂಡನೆ: ಪೊನ್ಮುಡಿ ಅವರ ಹೇಳಿಕೆಯನ್ನು ಡಿಎಂಕೆ ಸಂಸದೆ ಕನಿಮೊಳಿ ಮತ್ತು ಬಿಜೆಪಿ ರಾಜ್ಯ ಘಟಕದ ನಿರ್ಗಮಿತ ಅಧ್ಯಕ್ಷ ಕೆ.ಅಣ್ಣಾಮಲೈ ಸೇರಿ ಹಲವರು ಖಂಡಿಸಿದ್ದಾರೆ. ಪೊನ್ಮುಡಿ ಅವರನ್ನು ಸಚಿವ ಸಂಪುಟದಿಂದಲೂ ವಜಾ ಮಾಡಬೇಕು ಎಂದು ಬಿಜೆಪಿ ಆಗ್ರಹಿಸಿದೆ.



ಭಾಂಗ್ರಾ ನೃತ್ಯ ಅಮೃತಸರದ ಹೊರವಲಯದಲ್ಲಿರುವ ಗದ್ದೆಯಲ್ಲಿ ಬೈಸಾಖಿ ಹಬ್ಬದ ಅಂಗವಾಗಿ ಕಲಾವಿದರು ಪಂಜಾಬ್‌ನ ಸಾಂಪ್ರದಾಯಿಕ ಭಾಂಗ್ರಾ ನೃತ್ಯವನ್ನು ಶುಕ್ರವಾರ ಪ್ರದರ್ಶಿಸಿದರು –ಪಿಟಿಐ ಚಿತ್ರ

ಉಗ್ರರಿಗೆ ಶಿಕ್ಷೆ: ಭಾರತಕ್ಕೆ ಸಹಕಾರ ನೀಡುವುದಾಗಿ ಅಮೆರಿಕ ಭರವಸೆ

ನ್ಯೂಯಾರ್ಕ್ (ಪಿಟಿಐ): ‘ಮುಂಬೈನಲ್ಲಿ ನಡೆದಿದ್ದ 26/11 ಉಗ್ರರ ದಾಳಿ ಕೃತ್ಯದ ಸಂಬಂಧ ತಪ್ಪಿತಸ್ಥರನ್ನು ಶಿಕ್ಷೆಗೆ ಗುರಿಪಡಿಸುವ ಭಾರತದ ಪ್ರಯತ್ನಕ್ಕೆ ಅಮೆರಿಕ ಪೂರ್ಣ ಸಹಕಾರ ನೀಡಲಿದೆ’ ಎಂದು ಅಮೆರಿಕದ ವಿದೇಶಾಂಗ ಇಲಾಖೆಯು ಶುಕ್ರವಾರ ಪ್ರಕಟಿಸಿದೆ.

ಭಾರತಕ್ಕೆ 26/11 ಕೃತ್ಯದ ಸಂಚುಕೋರ ತಹವ್ವುರ್ ರಾಣಾ ಹಸ್ತಾಂತರದ ಹಿಂದೆಯೇ ಈ ಮಾತು ಹೇಳಿರುವ ಇಲಾಖೆಯ ವಕ್ತಾರೆ ಟ್ಯಾಮಿ ಬ್ರೂಸ್, ‘ಜಾಗತಿಕವಾಗಿ ಭಯೋತ್ಪಾದನೆ ಹತ್ತಿಕ್ಕಲು ಅಮೆರಿಕ–ಭಾರತ ಒಟ್ಟಾಗಿ ಕಾರ್ಯನಿರ್ವಹಿಸಲಿವೆ’ ಎಂದರು.

‘ಜಗತ್ತನ್ನೇ ಬೆಚ್ಚಿಬೀಳಿಸಿದ್ದ, ಆರು ಮಂದಿ ಅಮೆರಿಕನ್ನರೂ ಸೇರಿ 166 ಮಂದಿ ಮೃತಪಟ್ಟಿದ್ದ 26/11 ದಾಳಿ ಕೃತ್ಯವನ್ನು ಈಗ ಕೆಲವರು ಸ್ಮರಿಸದಿರಬಹುದು’ ಎಂದರು. ‘ತಪ್ಪಿತಸ್ಥರಿಗೆ ಶಿಕ್ಷೆ ವಿಧಿಸುವಲ್ಲಿ ರಾಣಾ ಹಸ್ತಾಂತರವು ಉತ್ತಮ ನಡೆ’ ಎಂದು ಹೇಳಿದರು.

ಇದಕ್ಕೂ ಮುನ್ನ ನ್ಯಾಯಾಂಗ ಇಲಾಖೆಯ ವಕ್ತಾರರು, ‘ದಾಳಿ ಕೃತ್ಯದ ಸಂತ್ರಸ್ತರಿಗೆ ನ್ಯಾಯ ಒದಗಿಸುವಲ್ಲಿ ರಾಣಾ ಹಸ್ತಾಂತರ ಪ್ರಕ್ರಿಯೆ ನಿರ್ಣಾಯಕವಾದ ಹೆಜ್ಜೆ’ ಎಂದು ಪ್ರತಿಕ್ರಿಯಿಸಿದರು.

ಪಾಕ್ ಮೂಲದ ಕೆನಡಾ ಪ್ರಜೆಯಾಗಿರುವ ರಾಣಾ, 26/11 ಕೃತ್ಯಕ್ಎಕ ಪಾಕ್ ಮೂಲದ ಅಮೆರಿಕದ ಉಗ್ರ ಡೇವಿಡ್ ಕೊಲೆಮನ್ ಹೆಡ್ಲಿ ಜೊತೆಗೂಡಿ ಸಂಚು ನಡೆಸಿದ್ದ.

‘ಉಗ್ರರ ಕೃತ್ಯ ಶ್ಲಾಘಿಸಿದ್ದ ರಾಣಾ’: ನ್ಯೂಯಾರ್ಕ್ (ಪಿಟಿಐ) ‘ಭಾರತೀಯರು ಆ ದಾಳಿಗೆ ಅರ್ಹರಾಗಿದ್ದರು. ಕೃತ್ಯ ನಡೆಸಿ ಸತ್ತವರಿಗೆ ಪಾಕ್‌ನ ಅತ್ಯುನ್ನತ ಪ್ರಶಸ್ತಿ ನೀಡಬೇಕು’ ಎಂದು 26/11ರ ದಾಳಿ ಕೃತ್ಯದ ಸಂಚುಕೋರ ತಹವ್ವುರ್ ರಾಣಾ ಹೇಳಿದ್ದ’ ಎಂದು ಅಮೆರಿಕದ ನ್ಯಾಯಾಂಗ ಇಲಾಖೆಯು ತಿಳಿಸಿದೆ.

‘ದಾಳಿ ಬಳಿಕ ರಾಣಾ, ಸಹಚರ ಹೆಡ್ಲಿ ಉದ್ದೇಶಿಸಿ ‘ಭಾರತೀಯರು ಇದಕ್ಕೆ ಅರ್ಹರಾಗಿದ್ದರು’ ಎಂದಿದ್ದ’ ಎಂದು ಇಲಾಖೆಯು ಹೇಳಿಕೆ ನೀಡಿದೆ.

‘ದಾಳಿ ನಡೆಸಬೇಕಿದ್ದ ಸ್ಥಳಗಳನ್ನು ಗುರುತಿಸಲು ಅಮೆರಿಕದ ಉಗ್ರ ಡಾವುದ್ ಗಿಲಾನಿ ಮುಂಬೈಗೆ ತೆರಳಲು ರಾಣಾ ಸಹಕರಿಸಿದ್ದ. ಹೆಡ್ಲಿಗೆ ಪಾಕ್‌ನಲ್ಲಿ ನೆಲೆ ಹೊಂದಿದ್ದ ಎಲ್‌ಇಟಿ ಸಂಘಟನೆ ತರಬೇತಿ ನೀಡಿತ್ತು’ ಎಂದು ಭಾರತ ಆರೋಪಿಸಿತ್ತು.

26/11 ಕೃತ್ಯದಲ್ಲಿ ‘ಲಷ್ಕರ್ ಎ ತಯಬಾ’ ಸಂಘಟನೆಯ 9 ಭಯೋತ್ಪಾದಕರು ಭದ್ರತಾ ಸಿಬ್ಬಂದಿಯ ಗುಂಡಿಗೆ ಬಲಿಯಾಗಿದ್ದರು.

ಚೀನಾ ಸಚಿವ, ಭಾರತದ ರಾಯಭಾರಿ ಚರ್ಚೆ

ಬೀಜಿಂಗ್ (ಪಿಟಿಐ): ಚೀನಾದಲ್ಲಿನ ಭಾರತೀಯ ರಾಯಭಾರಿ ಪ್ರದೀಪ್ ಕುಮಾರ್ ರಾವತ್‌ಅವರು ಶುಕ್ರವಾರ ಚೀನಾದ ವಿದೇಶಾಂಗ ಸಚಿವ ಸನ್ ವೇಡಂಗ್ ಅವರನ್ನು ಭೇಟಿಯಾಗಿ, ಉಭಯ ದೇಶಗಳ ನಡುವೆ ದ್ವಿಪಕ್ಷೀಯ ಬಾಂಧವ್ಯ ವೃದ್ಧಿ ಕುರಿತು ಚರ್ಚಿಸಿದ್ದಾರೆ.

‘ಏಪ್ರಿಲ್ 9ರಂದು ಸಭೆ ನಡೆಯಿತು. ವಿವಿಧ ಕ್ಷೇತ್ರಗಳಲ್ಲಿ ಉಭಯ ದೇಶಗಳ ನಡುವಿನ ಸಹಕಾರ, ಬಾಂಧವ್ಯ ಕುರಿತು ಚರ್ಚೆ ನಡೆಯಿತು‘ ಎಂದು ಸಚಿವಾಲಯದ ಹೇಳಿಕೆ ತಿಳಿಸಿದೆ. ಉಭಯ ದೇಶಗಳ ನಡುವೆ ಆಗಿರುವ ಒಪ್ಪಂದದ ಅನುಷ್ಠಾನ, ಅಭಿವೃದ್ಧಿಗೆ ಉತ್ತೇಜನ ಮತ್ತು ಆರೋಗ್ಯಕರ ಪ್ರಗತಿಗೆ ಒತ್ತು ನೀಡುವ ಕುರಿತು ಚರ್ಚಿಸಲಾಯಿತು ಎಂದು ಸಚಿವಾಲಯವು ತಿಳಿಸಿದೆ.

ಸಂಚುಕೋರ ರಾಣಾ ವಿಚಾರಣೆ ಆರಂಭ

ಒಂದನೇ ಪುಟದಿಂದ...

ಅಮೆರಿಕದಿಂದ ಗುರುವಾರ ಭಾರತಕ್ಕೆ ಕರೆತಂದಿದ್ದ ರಾಣಾನನ್ನು ತನಿಖಾ ತಂಡವು ಇಲ್ಲಿನ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಿತ್ತು. ಆರೋಪಿಯನ್ನು 20 ದಿನ ಕಸ್ಟಡಿಗೆ ನೀಡುವಂತೆ ಎನ್‌ಐಎ ಕೋರಿತ್ತು.

‘ಪಿತೂರಿಯನ್ನು ಎಳೆಎಳೆಯಾಗಿ ಬಹಿರಂಗಪಡಿಸಲು ಅನುಕೂಲವಾಗುವಂತೆ ರಾಣಾನನ್ನು ದೀರ್ಘಾವಧಿಗೆ ಕಸ್ಟಡಿಗೆ ಪಡೆಯುವ ಅಗತ್ಯವಿದೆ. ಮುಂಬೈ ಮೇಲಿನ ದಾಳಿ ಮಾದರಿಯಲ್ಲೇ ದೇಶದ ಇತರ ನಗರಗಳಲ್ಲೂ ದಾಳಿ ನಡೆಸಲು ಸಂಚು ರೂಪಿಸಿರುವ ಶಂಕೆ ಇದೆ’ ಎಂದು ಎನ್‌ಐಎ ಪರ ವಕೀಲರು ನ್ಯಾಯಾಧೀಶರಿಗೆ ತಿಳಿಸಿದ್ದಾಗಿ ಮೂಲಗಳು ಹೇಳಿವೆ.

ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಚಂದರ್‌ಜೀತ್ ಸಿಂಗ್ ಅವರು ಗುರುವಾರ ತಡರಾತ್ರಿ 1ಕ್ಕೆ ರಾಣಾನನ್ನು ಎನ್‌ಐಎ ಕಸ್ಟಡಿಗೆ ಒಪ್ಪಿಸಿ ಆದೇಶಿಸಿದರು. ಅದರ ಬೆನ್ನಲ್ಲೇ ಆತನನ್ನು ಭಾರಿ ಭದ್ರತೆಯೊಂದಿಗೆ ಸಿಜಿಒ ಸಂಕೀರ್ಣದಲ್ಲಿರುವ ಎನ್‌ಐಎ ಕೇಂದ್ರ ಕಚೇರಿಗೆ ಕರೆತರಲಾಯಿತು.

ರಾಣಾನನ್ನು ಎನ್‌ಐಎ ಕೇಂದ್ರ ಕಚೇರಿಯಲ್ಲೇ ವಿಚಾರಣೆಗೆ ಒಳಪಡಿಸಲಾಗುತ್ತದೆ. ಕಚೇರಿಗೆ ಬಿಗಿ ಭದ್ರತೆ ಒದಗಿಸಲಾಗಿದ್ದು, ಸ್ಥಳೀಯ ಪೊಲೀಸರು ಮತ್ತು ಅರೆಸೇನಾಪಡೆಯಸಿಬ್ಬಂದಿಯನ್ನುನಿಯೋಜಿಸಲಾಗಿದೆ.

ಕಸ್ಟಡಿಗೆ ಒಪ್ಪಿಸುವಂತೆ ಕೋರಿ ಎನ್‌ಐಎ ವಕೀಲರು ವಾದ ಆರಂಭಿಸುವ ಮುನ್ನ ನ್ಯಾಯಾಧೀಶರು ರಾಣಾನಲ್ಲಿ ‘ವಕೀಲರು ಇದ್ದಾರೆಯೇ’ ಎಂದು ಕೇಳಿದರು. ಅದಕ್ಕೆ ರಾಣಾ ‘ಇಲ್ಲ’ ಎಂದು ಹೇಳಿದಾಗ, ದೆಹಲಿ ಕಾನೂನು ಸೇವೆಗಳ ಪ್ರಾಧಿಕಾರವು ವಕೀಲರನ್ನು ಒದಗಿಸಲಿದೆ ಎಂದು ನ್ಯಾಯಾಧೀಶರು ತಿಳಿಸಿದರು. ಆ ಬಳಿಕ ರಾಣಾ ಪರ ವಾದ ಮಂಡಿಸಲು ಪೀಯೂಷ್ ಸಚ್‌ದೇವ್ ಅವರನ್ನು ನೇಮಿಸಲಾಯಿತು.

ಪ್ರತಿದಿನ ವೈದ್ಯಕೀಯ ಪರೀಕ್ಷೆ



- ಪ್ರತಿ 24 ಗಂಟೆಗಳಿಗೊಮ್ಮೆ ರಾಣಾನನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲು ಸೂಚಿಸಿದ ನ್ಯಾಯಾಲಯ
- ಎರಡು ದಿನಗಳಿಗೊಮ್ಮೆ ವಕೀಲರ ಭೇಟಿಗೆ ಅವಕಾಶ
- ಎನ್‌ಐಎ ಅಧಿಕಾರಿಗಳ ಸಮ್ಮುಖದಲ್ಲೇ ವಕೀಲರನ್ನು ಭೇಟಿ ಮಾಡಬೇಕು
- ಎನ್‌ಐಎ ಕೇಂದ್ರ ಕಚೇರಿಯ ಸೆಲ್‌ನಲ್ಲೇ ವಿಚಾರಣೆ
- ತನಿಖೆಗೆ ಎನ್‌ಐಎ ಡಿಐಜಿ ಜಯಾ ರಾಯ್ ನೇತೃತ್ವ

‘ಹೆಡ್ಲಿಗೆ ಭಾರತದ ವೀಸಾ: ರಾಣಾ ನೆರವು’

ಮುಂಬೈ (ಪಿಟಿಐ): ‘ಮುಂಬೈ ಮೇಲಿನ ದಾಳಿಯ ಮುಖ್ಯ ಸಂಚುಕೋರ ಡೇವಿಡ್ ಕೊಲೆಮನ್ ಹೆಡ್ಲಿಗೆ ಭಾರತದ ವೀಸಾ ಪಡೆಯಲು ರಾಣಾ ನೆರವಾಗಿದ್ದ’ ಎಂದು ಇಲ್ಲಿನ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಅಮೆರಿಕದ ಷಿಕಾಗೊದಲ್ಲಿ ಇಮಿಗ್ರೇಷನ್ ಸರ್ವಿಸಸ್ ಕಚೇರಿ ತೆರೆದು ವೀಸಾ ಸಂಬಂಧಿ ಕೆಲಸ ಮಾಡುತ್ತಿದ್ದ ರಾಣಾ, ತನ್ನ ಕಚೇರಿಯ ಮೂಲಕ ಹೆಡ್ಲಿಗೆ ಭಾರತದ ವೀಸಾ ಕೊಡಿಸಲು ಸಹಾಯ ಮಾಡಿದ್ದ ಎಂದಿದ್ದಾರೆ.

ಪ್ರತಿಸುಂಕ ಶೇ 125ಕ್ಕೆ ಏರಿಸಿದ ಚೀನಾ

ಮತ್ತಷ್ಟು ಏರಿಕೆ ಇಲ್ಲ ● ಟ್ರಂಪ್ ನಡೆ ವಿರುದ್ಧ ಕಾನೂನು ಹೋರಾಟ: ಸರ್ಕಾರ

ಬೀಜಿಂಗ್ (ಎಎಫ್‌ಪಿ): ಚೀನಾ ಮತ್ತು ಅಮೆರಿಕ ನಡುವಣ ಪ್ರತಿಸುಂಕ ವಿಧಿಸುವ ಪೈಪೋಟಿ ಇನ್ನಷ್ಟು ತೀವ್ರಗೊಂಡಿದೆ. ಅಮೆರಿಕದ ಆಮದು ಉತ್ಪನ್ನಗಳ ಮೇಲೆ ವಿಧಿಸುವ ಪ್ರತಿಸುಂಕವನ್ನು ಶೇ 125ಕ್ಕೆ ಏರಿಸಲಾಗುವುದು ಎಂದು ಚೀನಾ ಶುಕ್ರವಾರ ಪ್ರಕಟಿಸಿದೆ.

ಚೀನಾದ ಈ ಪ್ರತಿರೋಧ ಕ್ರಮ ಮಾರುಕಟ್ಟೆಯ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಬೀರಿದೆ. ಟೋಕಿಯೊ ಮತ್ತು ಸೋಲ್‌ನ ಷೇರು ಮಾರುಕಟ್ಟೆಯಲ್ಲಿ ಷೇರುಗಳ ಮೌಲ್ಯ ಕುಸಿದಿದ್ದರೆ, ಯೂರೋಪಿಯನ್ ಷೇರುಗಳ ಮೌಲ್ಯದಲ್ಲಿ ಭಾರಿ ಪ್ರಮಾಣದ ಏರಿಳಿತ ಕಂಡುಬಂದಿದೆ.

ಚೀನಾದ ದರ ಆಯೋಗ ಮಂಡಳಿಯು, ‘ಶನಿವಾರದಿಂದಲೇ ಜಾರಿಗೆ ಬರುವಂತೆ ಅಮೆರಿಕದ ಉತ್ಪನ್ನಗಳ ಮೇಲೆ ಶೇ 125ರಷ್ಟು ಸುಂಕ ವಿಧಿಸಲಾಗುವುದು’ ಎಂದು ಪ್ರಕಟಿಸಿತು.

ಚೀನಾದಿಂದ ಆಮದಾಗುವ ಉತ್ಪನ್ನಗಳ ಮೇಲೆ ಅಮೆರಿಕ ಶೇ 145ರಷ್ಟು ಸುಂಕ ವಿಧಿಸಿತ್ತು. ಈಗ ಚೀನಾ ವಿಧಿಸಿರುವ ಪ್ರಮಾಣವು ಬಹುತೇಕ ಅದಕ್ಕೆ ಸರಿಸಮಾನವಾಗಿದೆ.

‘ಸುಂಕ ಏರಿಕೆ ಪರಿಣಾಮಗಳಿಗೆ ಅಮೆರಿಕವೇ ಹೊಣೆ. ಅಂಕಗಳ ಈ ಆಟ, ಈಗ ನಗೆಪಾಟಲಿನ ಸಂಗತಿಯಾಗಿದೆ’ ಎಂದು ಚೀನಾದ ವಾಣಿಜ್ಯ ಸಚಿವಾಲಯದ ವಕ್ತಾರರು ಪ್ರತಿಕ್ರಿಯಿಸಿದ್ದಾರೆ.

‘ಈ ದರವು ಮತ್ತಷ್ಟು ಏರುವ ಸಾಧ್ಯತೆಗಳಿಲ್ಲ. ಏಕೆಂದರೆ, ಆಮದಾಗುವ ಅಮೆರಿಕದ ಉತ್ಪನ್ನಗಳನ್ನು ಚೀನಾದ ಮಾರುಕಟ್ಟೆ ಸ್ವೀಕರಿಸುವ ಸಾಧ್ಯತೆ ಕಡಿಮೆ. ದರ ಮತ್ತೆ ಏರಿದರೆ ಉತ್ಪನ್ನಗಳ ಆಮದು ಸಾಧ್ಯತೆಯೇ ಇರುವುದಿಲ್ಲ’ ಎಂದು ಆರ್ಥಿಕ ಸಚಿವಾಲಯ ಹೇಳಿದೆ.

‘ಟ್ರಂಪ್ ಪ್ರಕಟಿಸಿರುವ ಹೊಸ ಸುಂಕದ ಪ್ರಮಾಣ ಪ್ರಶ್ನಿಸಿ ವಿಶ್ವ ವಾಣಿಜ್ಯ ಸಂಘಟನೆಯಲ್ಲಿ (ಡಬ್ಲ್ಯುಟಿಒ) ಕಾನೂನು ಸಮರ ನಡೆಸಲಾಗುವುದು’ ಎಂದು ಚೀನಾ ಪ್ರಕಟಿಸಿದೆ.

ಇ.ಯು ನಿರ್ಧಾರ ಜಾಣ ನಡೆ: ಟ್ರಂಪ್

ಅಮೆರಿಕದ ಉತ್ಪನ್ನಗಳ ಮೇಲೆ ವಿಧಿಸಲಾಗಿದ್ದ ಹೆಚ್ಚುವರಿ ಪ್ರತಿಸುಂಕ ಜಾರಿಗೊಳಿಸುವುದನ್ನು 90 ದಿನ ಅವಧಿಗೆ ತಡೆದಿರುವ ಐರೋಪ್ಯ ಒಕ್ಕೂಟದ (ಇ.ಯು) ನಿರ್ಧಾರವು ‘ಜಾಣತನದ ನಡೆ’ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಬಣ್ಣಿಸಿದ್ದಾರೆ.

ಆದರೆ, 27 ರಾಷ್ಟ್ರಗಳ ಸದಸ್ಯತ್ವವಿರುವ ಇ.ಯು ಒಕ್ಕೂಟದ ಮುಖ್ಯಸ್ಥೆ ಉರ್ಸುಲಾ ವೊನ್ ಡೆರ್ ಲೆಯೆನ್ ಅವರು, ‘ಸದ್ಯ ನಾವು ಹಲವು ಪ್ರತಿಕ್ರಿಯಾತ್ಮಕ ಕ್ರಮಗಳಿಂದ ಸಜ್ಜಾಗಿದ್ದೇವೆ. ಟ್ರಂಪ್ ಅವರ ಜೊತೆಗಿನ ಚರ್ಚೆ ವಿಫಲವಾದಲ್ಲಿ ಈ ಕ್ರಮಗಳ ಜಾರಿ ನಿಶ್ಚಿತ’ ಎಂದಿದ್ದಾರೆ.





ಸುಂಕ ನೀತಿಗೆ ಉತ್ತಮ ಪ್ರತಿಕ್ರಿಯೆ ಇದೆ. ಅಮೆರಿಕ ಮತ್ತು ಜಗತ್ತು ಉತ್ಸುಕವಾಗಿದೆ. ತ್ವರಿತಗತಿಯಲ್ಲಿ ಪ್ರಗತಿ ಕಾಣುತ್ತಿದೆ

ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ

‘ಹೋಟೆಲ್ ಗ್ರಾಹಕರಿಗೆ ತಟ್ಟಿದ ಬಿಸಿ’

ಸಿಂಗಪುರ (ಪಿಟಿಐ): ಚೀನಾ–ಅಮೆರಿಕ ಸುಂಕ ಸಮರದ ಬಿಸಿ ಇಲ್ಲಿರುವ ಚೀನಾದ ಹೋಟೆಲ್‌ನ ಅಮೆರಿಕದ ಗ್ರಾಹಕರಿಗೂ ತಟ್ಟಿದೆ. ಇಲ್ಲಿರುವ ಚೈನಾಟೌನ್‌ನ ‘ಕ್ಸಿ ಲಾವೊ ಸಾಂಗ್’ ಹೆಸರಿನ ಹೋಟೆಲ್ ‘ಅಮೆರಿಕದ ಗ್ರಾಹಕರಿಗೆ ಶೇ 104 ಸರ್ಚಾರ್ಜ್ ವಿಧಿಸಲಾಗುವುದು’ ಎಂದು ಪ್ರಕಟಿಸಿದೆ.

ಚೀನಿ ಮತ್ತು ಇಂಗ್ಲಿಷ್ ಎರಡೂ ಭಾಷೆಯಲ್ಲಿದ್ದ ಫಲಕವು ಜಾಲತಾಣದಲ್ಲಿ ಸಾಕಷ್ಟು ಹಂಚಿಕೆಯಾಗಿದ್ದು, ಚರ್ಚೆಗೆ ಆಸ್ಪದವಾದ ಹಿಂದೆಯೇ ಹೋಟೆಲ್‌ನ ಆಡಳಿತ ಫಲಕವನ್ನು ತೆಗೆದುಹಾಕಿದೆ ಎಂದು ಚಾನಲ್ ನ್ಯೂಸ್ ಏಷ್ಯಾ ವರದಿ ಮಾಡಿದೆ.

ಉದ್ಯೋಗ ಆಧಾರಿತ ಪ್ರೋತ್ಸಾಹ: ಮತ್ತೊಂದು ಸುಳ್ಳೇ?

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ವರ್ಷದ ಹಿಂದೆ ಘೋಷಿಸಿದ ಉದ್ಯೋಗ ಆಧಾರಿತ ಪ್ರೋತ್ಸಾಹ ಯೋಜನೆಯನ್ನು ಕೇಂದ್ರ ಸರ್ಕಾರ ಜಾರಿಗೊಳಿಸಿಲ್ಲ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಶುಕ್ರವಾರ ಆರೋಪಿಸಿದ್ದು, ‘ಇದು ಕೂಡ ಮತ್ತೊಂದು ಜುಮ್ಲಾವೇ (ಸುಳ್ಳು)’ ಎಂದು ಪ್ರಶ್ನಿಸಿದ್ದಾರೆ.

ಇದಕ್ಕೆ ಪ್ರತಿಕ್ರಿಯೆ ನೀಡಿರುವ ಬಿಜೆಪಿ, ‘ಕಾಂಗ್ರೆಸ್ ನಾಯಕ ತನ್ನ ಅಜ್ಞಾನವನ್ನೇ ಅಸ್ತ್ರ ಮಾಡಿಕೊಂಡಿದ್ದಾರೆ’ ಎಂದು ತಿರುಗೇಟು ನೀಡಿದೆ.

ಮೋದಿ ಅವರನ್ನು ಉದ್ದೇಶಿಸಿ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿರುವ ರಾಹುಲ್ ಗಾಂಧಿ, ನೀವು (ಮೋದಿ) ಪ್ರತಿ ದಿನವೂ ಹೊಸ ಘೋಷಣೆ ರಚಿಸುವುದರಲ್ಲಿ ತಲ್ಲೀನವಾಗಿದ್ದರೂ ಯುವಜನರು ಮಾತ್ರ ನಿಜವಾದ ಉದ್ಯೋಗ ಅವಕಾಶಗಳಿಗೆ ಇನ್ನೂ ಕಾಯುತ್ತಿದ್ದಾರೆ ಎಂದು ಹೇಳಿದ್ದಾರೆ.

‘ಇವಿಎಂಗಳು ಸುರಕ್ಷಿತ’

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದಲ್ಲಿ ಬಳಸುವ ವಿದ್ಯುನ್ಮಾನ ಮತಯಂತ್ರಗಳ (ಇವಿಎಂ) ಸುರಕ್ಷತೆ ಕುರಿತ ಚರ್ಚೆ ಮತ್ತೊಮ್ಮೆ ಮುನ್ನೆಲೆಗೆ ಬಂದಿದ್ದು, ‘ಭಾರತದಲ್ಲಿ ಬಳಸಲಾಗುವ ಇವಿಎಂಗಳು ಸರಳ ಹಾಗೂ ಕರಾರುವಾಕ್ಕಾದ ಕ್ಯಾಲ್ಕುಲೇಟರ್‌ಗಳ ರೀತಿ ಕಾರ್ಯನಿರ್ವಹಿಸುವ ಸಾಧನಗಳಾಗಿವೆ’ ಎಂದು ಚುನಾವಣಾ ಆಯೋಗ ಶುಕ್ರವಾರ ಹೇಳಿದೆ.

‘ಇಂಟರ್‌ನೆಟ್, ವೈಫೈ ಅಥವಾ ಇನ್‌ಫ್ರಾರೆಡ್‌ನೊಂದಿಗೆ ಇವಿಎಂಗಳ ಜೋಡಣೆ ಮಾಡಲು ಸಾಧ್ಯವಿಲ್ಲ’ ಎಂದೂ ಪುನರುಚ್ಚರಿಸಿದೆ.



ಅಮೆರಿಕದ ರಾಷ್ಟ್ರೀಯ ಗುಪ್ತಚರ ನಿರ್ದೇಶಕಿ ತುಳಸಿ ಗಬಾರ್ಡ್ ಅವರು ಇವಿಎಂಗಳ ಸುರಕ್ಷತೆ ಬಗ್ಗೆ ಕಳವಳ ವ್ಯಕ್ತಪಡಿಸಿದ್ದರು. ಮತಪತ್ರಗಳನ್ನು ಬಳಸಿ ನಡೆಸುವ ಚುನಾವಣಾ ವ್ಯವಸ್ಥೆಗೆ ಮತ್ತೆ ಮರಳಬೇಕು ಎಂದೂ ಪ್ರತಿಪಾದಿಸಿದ್ದರು. ಅವರ ಈ ಹೇಳಿಕೆಗೆ ಆಯೋಗವು ಈ ಪ್ರತಿಕ್ರಿಯೆ ನೀಡಿದೆ ಎಂದು ಮೂಲಗಳು ಹೇಳಿವೆ.

‘ಇವಿಎಂಗಳನ್ನು ಸುಲಭವಾಗಿ ಹ್ಯಾಕ್ ಮಾಡಬಹುದು ಹಾಗೂ ಫಲಿತಾಂಶವನ್ನು ತಿರುಚಲು ಸಾಧ್ಯವಿದೆ ಎಂಬುದಕ್ಕೆ ಪುರಾವೆಗಳಿವೆ’ ಎಂದು ಗಬಾರ್ಡ್ ಇತ್ತೀಚೆಗೆ ಹೇಳಿದ್ದರು.

‘ಎಲ್ಲೆಡೆ ಮತಪತ್ರಗಳನ್ನು ಬಳಸುವ ವ್ಯವಸ್ಥೆ ಪುನಃ ಜಾರಿಗೊಳ್ಳಬೇಕು. ಹೀಗೆ ಮಾಡುವುದರಿಂದ ಚುನಾವಣೆಗಳ ಸಮಗ್ರತೆ ಕುರಿತು ಮತದಾರರಲ್ಲಿ ನಂಬಿಕೆ ಬರಲಿದೆ’ ಎಂದೂ ಹೇಳಿದ್ದರು.

ತಮಿಳುನಾಡಿನಲ್ಲಿ ಎನ್‌ಡಿಎಗೆ ಪಳನಿಸ್ವಾಮಿ ನಾಯಕತ್ವ: ಅಮಿತ್ ಶಾ

ಎಐಎಡಿಎಂಕೆ, ಬಿಜೆಪಿ ಮೈತ್ರಿ ಘೋಷಣೆ

ಪ್ರಜಾವಾಣಿ ವಾರ್ತೆ/ಪಿಟಿಐ

ಚೆನ್ನೈ: ಮುಂದಿನ ವರ್ಷ ತಮಿಳುನಾಡು ವಿಧಾನಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಡಿಎಂಕೆ ಪಕ್ಷವನ್ನು ಅಧಿಕಾರದಿಂದ ಕಿತ್ತೊಗೆಯಲು ಶಪಥ ಕೈಗೊಂಡಿರುವ ಬಿಜೆಪಿ ಹಾಗೂ ಎಐಎಡಿಎಂಕೆ, ಮತ್ತೆ ಮೈತ್ರಿ ಮಾಡಿಕೊಂಡಿವೆ.

ಕೆ.ಅಣ್ಣಾಮಲೈ ಅವರು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿದಿದ್ದು, ನೈನಾರ್ ನಾಗೇಂದ್ರನ್ ಅವರು ಪಕ್ಷದ ಚುಕ್ಕಾಣಿ ವಹಿಸಿಕೊಂಡಿದ್ದಾರೆ. ಮತ್ತೊಂದೆಡೆ, ಒಂದೂವರೆ ವರ್ಷದ ಹಿಂದೆ ಎನ್‌ಡಿಎದಿಂದ ಹೊರ ನಡೆದಿದ್ದ ಎಐಎಡಿಎಂಕೆ ಮತ್ತೆ ಅದರ ತೆಕ್ಕೆಗೆ ಮರಳಿದೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಎಐಎಡಿಎಂಕೆ ನಾಯಕ ಇ.ಕೆ.ಪಳನಿಸ್ವಾಮಿ ಅವರೊಂದಿಗೆ ಸುದ್ದಿಗೋಷ್ಠಿ ನಡೆಸಿ, ಉಭಯ ಪಕ್ಷಗಳು ಮೈತ್ರಿ ಮಾಡಿಕೊಂಡಿರುವುದನ್ನು ಘೋಷಿಸಿದರು.

‘ಮುಂಬರುವ ತಮಿಳುನಾಡು ವಿಧಾನಸಭೆ ಚುನಾವಣೆಗಳನ್ನು ಒಟ್ಟಾಗಿ ಎದುರಿಸಲು ಎಐಎಡಿಎಂಕೆ ಹಾಗೂ ಬಿಜೆಪಿ ನಾಯಕರು ಇಂದು ನಿರ್ಧಾರ ಕೈಗೊಂಡಿದ್ದಾರೆ. ಪಳನಿಸ್ವಾಮಿ ಅವರೇ ತಮಿಳುನಾಡಿನಲ್ಲಿ ಎನ್‌ಡಿಎ ಮುನ್ನಡೆಸುವರು’ ಎಂದು ಹೇಳುವ ಮೂಲಕ, ಮೈತ್ರಿಕೂಟದ ನಾಯಕತ್ವದ ಬಗ್ಗೆ ಯಾವುದೇ ಗೊಂದಲ ಇಲ್ಲ ಎಂಬ ಸಂದೇಶವನ್ನು ಅಮಿತ್ ಶಾ ರವಾನಿಸಿದ್ದಾರೆ.

‘ಎನ್‌ಡಿಎ ಮೈತ್ರಿಕೂಟ ತಮಿಳುನಾಡಿನಲ್ಲಿ ಸರ್ಕಾರ ರಚಿಸುವ ಗುರಿ ಹೊಂದಿದೆ’ ಎಂದು ಹೇಳಿದ ಶಾ, ಚುನಾವಣೆಯಲ್ಲಿ ಗೆದ್ದ ನಂತರ ಉಳಿದ ವಿಚಾರಗಳ ಕುರಿತು ಅಂಗಪಕ್ಷಗಳು ನಿರ್ಧರಿಸಲಿವೆ’ ಎಂದರು.

ಉಭಯ ಪಕ್ಷಗಳ ನಡುವಿನ ಮೈತ್ರಿ ಕುರಿತು ಘೋಷಣೆ ಮಾಡಿದ ನಂತರ ಶಾ ಅವರು ಪಳನಿಸ್ವಾಮಿ ನಿವಾಸಕ್ಕೆ ತೆರಳಿ, ಭೋಜನಕೂಟದಲ್ಲಿ ಪಾಲ್ಗೊಂಡು ನಂತರ ದೆಹಲಿಗೆ ಪ್ರಯಾಣ ಬೆಳೆಸಿದರು.

‘ಅಧಿಕಾರ ಹಸ್ತಾಂತರ ಸುಲಲಿತ’: ರಾಜ್ಯದಲ್ಲಿ ಎಐಎಡಿಎಂಕೆ ಜೊತೆ ಮೈತ್ರಿ ಮಾಡಿಕೊಳ್ಳುವುದಕ್ಕೆ ಅಣ್ಣಾಮಲೈ ವಿರೋಧಿಸುತ್ತಲೇ ಬಂದಿದ್ದರು. ಪಕ್ಷದ ಹಿತದೃಷ್ಟಿಯಿಂದ ಮೈತ್ರಿ ಬೇಡ ಎಂಬುದು ಅವರ ವಾದವಾಗಿತ್ತು.

ಆದರೆ, ಎಐಎಡಿಎಂಕೆ ಸಖ್ಯ ತೊರೆದು ಬಿಜೆಪಿ ಸೇರಿರುವ ನಾಗೇಂದ್ರನ್ ಅವರಿಗೆ ಈಗ ಪಕ್ಷದ ಸಾರಥ್ಯ ಒಲಿದಿದೆ. ರಾಜ್ಯದಲ್ಲಿ ಎರಡೂ ಪಕ್ಷಗಳ ನಡುವಿನ ಮೈತ್ರಿಗೆ ಧಕ್ಕೆಯಾಗಬಾರದು ಎಂಬ ದೃಷ್ಟಿಯಿಂದ ಬಿಜೆಪಿ ವರಿಷ್ಠರು ನಾಯಕತ್ವ ಬದಲಾವಣೆ ನಿರ್ಧಾರ ಕೈಗೊಂಡಿದ್ದು, ಅಧಿಕಾರ ಹಸ್ತಾಂತರ ಕೂಡ ಸುಗಮವಾಗಿಯೇ ನಡೆದಿರುವುದು ಗಮನಾರ್ಹ.



ಚೆನ್ನೈನಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿ ನಡೆಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೊಂದಿಗೆ ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಇ.ಕೆ.ಪಳನಿಸ್ವಾಮಿ, ಬಿಜೆಪಿ ತಮಿಳುನಾಡು ಘಟಕದ ನಿರ್ಗಮಿತ ಅಧ್ಯಕ್ಷ ಕೆ.ಅಣ್ಣಾಮಲೈ, ನೂತನ ಅಧ್ಯಕ್ಷ ಎನ್‌ನಾಗೇಂದ್ರನ್ ಇದ್ದರು –ಪಿಟಿಐ ಚಿತ್ರ

ಪ್ರಮುಖ ಅಂಶಗಳು

- 2019ರಲ್ಲಿ ಬಿಜೆಪಿ ಜೊತೆ ಎಐಎಡಿಎಂಕೆ ಮೈತ್ರಿ ಮಾಡಿಕೊಂಡಿತ್ತು. ಪಕ್ಷದ ಹಿರಿಯ ನಾಯಕರ ವಿರುದ್ಧ ಅಣ್ಣಾಮಲೈ ನೀಡಿದ್ದ ಹೇಳಿಕೆಗೆ ಆಕ್ಷೇಪಿಸಿದ್ದ ಎಐಎಡಿಎಂಕೆ 2023ರ ಸೆಪ್ಟೆಂಬರ್‌ನಲ್ಲಿ ಎನ್‌ಡಿಎದಿಂದ ಹೊರನಡೆದಿತ್ತು
- ಕಳೆದ ವರ್ಷ ನಡೆದ ಚುನಾವಣೆಗಳು ಹಾಗೂ ಮುಂಬರುವ ವಿಧಾನಸಭೆ ಚುನಾವಣೆ ದೃಷ್ಟಿಯಿಂದ ಎನ್‌ಡಿಎ ಸೇರುವಂತೆ ಅಮಿತ್ ಶಾ ಆಹ್ವಾನ ನೀಡಿದ್ದರೂ, ಪಳನಿಸ್ವಾಮಿ ಒಪ್ಪಿರಲಿಲ್ಲ. ಪಕ್ಷದ ಸಂಘಟನೆ ಇನ್ನೂ ಗಟ್ಟಿಯಾಗಿರುವುದು ಹಾಗೂ ಡಿಎಂಕೆ ಮಣಿಸಲು ಮೈತ್ರಿ ಅನಿವಾರ್ಯ ಎಂಬುದು ಮನವರಿಕೆಯಾದ ನಂತರ ಪಳನಿಸ್ವಾಮಿ ಬಿಜೆಪಿ ಜೊತೆ ಕೈಜೋಡಿಸಲು ನಿರ್ಧರಿಸಿದ್ದಾರೆ

ಸಂಕ್ಷಿಪ್ತ ಸುದ್ದಿ

19ರಿಂದ ಕಟ್ರಾ– ಶ್ರೀನಗರ ರೈಲು ಸಂಚಾರ



ನವದೆಹಲಿ: ಜಮ್ಮುವಿನ ಕಟ್ರಾ ಹಾಗೂ ಶ್ರೀನಗರ ನಡುವಿನ ಮೊದಲ ರೈಲು ಸಂಚಾರಕ್ಕೆ ಇದೇ 19ರಂದು ಪ್ರಧಾನಿ ನರೇಂದ್ರ ಮೋದಿ ಅವರು ಹಸಿರು ನಿಶಾನೆ ತೋರಲಿದ್ದಾರೆ. ಈ ಮಾರ್ಗವು ದೇಶದ ರೈಲ್ವೆ ಜಾಲಕ್ಕೆ ಕಾಶ್ಮೀರ ಕಣಿವೆಯನ್ನು ನೇರವಾಗಿ ಸಂಪರ್ಕಿಸಲಿದೆ.

ಚಿನಾಬ್ ನದಿಗೆ ನಿರ್ಮಿಸಲಾಗಿರುವ ವಿಶ್ವದ ಅತಿ ಎತ್ತರದ ಕಮಾನು ಸೇತುವೆಯನ್ನು ಇದೇ ದಿನದಂದು ಪ್ರಧಾನಿ ಉದ್ಘಾಟಿಸಲಿದ್ದಾರೆ. ಈ ಸೇತುವೆ ನಿರ್ಮಾಣಕ್ಕೆ 30 ಸಾವಿರ ಟನ್ ಉಕ್ಕು ಬಳಸಲಾಗಿದೆ. ಇದು ಐಫೆಲ್ ಟವರ್‌ಗಿಂತ 35 ಮೀಟರ್ ಎತ್ತರವಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಕಟ್ರಾ– ಶ್ರೀನಗರದ ನಡುವೆ ವಂದೇ ಭಾರತ್ ರೈಲು ಸಂಚರಿಸಲಿದ್ದು, ಆರರಿಂದ ಏಳು ತಾಸಿನ ಪ್ರಯಾಣದ ಅವಧಿ ಮೂರು ತಾಸುಗಳಿಗೆ ಇಳಿಯಲಿದೆ. ಈ ಮಾರ್ಗದಲ್ಲಿ ಸಂಚರಿಸಲಿಕ್ಕಾಗಿಯೇ ವಂದೇ ಭಾರತ್ ರೈಲನ್ನು ವಿಶೇಷವಾಗಿ ವಿನ್ಯಾಸಗೊಳಿಸಲಾಗಿದೆ ಎಂದು ರೈಲ್ವೆ ಇಲಾಖೆ ತಿಳಿಸಿದೆ.

ದೀರ್ಘ ವ್ಯಾಪ್ತಿ ಗ್ಲೈಡ್ ಬಾಂಬ್ ‘ಗೌರವ್’ ಪರೀಕ್ಷೆ ಯಶಸ್ವಿ

ನವದೆಹಲಿ(ಪಿಟಿಐ): ಸುಖೋಯ್ ಯುದ್ಧವಿಮಾನ ಬಳಸಿ, ದೀರ್ಘ ವ್ಯಾಪ್ತಿ ಸಾಮರ್ಥ್ಯದ ಗ್ಲೈಡ್ ಬಾಂಬ್ (ಎಲ್‌ಆರ್‌ಜಿಬಿ) ‘ಗೌರವ್’ದ ಪರೀಕ್ಷೆಯನ್ನು ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಘಟನೆ (ಡಿಆರ್‌ಡಿಒ) ಯಶಸ್ವಿಯಾಗಿ ನೆರವೇರಿಸಿದೆ.

‘ಏಪ್ರಿಲ್ 8ರಿಂದ 10ರ ವರೆಗೆ ಈ ಪರೀಕ್ಷೆಗಳನ್ನು ನೆರವೇರಿಸಲಾಗಿದೆ. ಈ ಬಾಂಬ್ 100 ಕಿ.ಮೀ ದೂರದ ಗುರಿಯನ್ನು ನಿಖರವಾಗಿ ತಲುಪಿ, ನಾಶ ಮಾಡಿತು’ ಎಂದು ರಕ್ಷಣಾ ಸಚಿವಾಲಯ ಶುಕ್ರವಾರ ತಿಳಿಸಿದೆ. ಈ ಪರೀಕ್ಷೆಯಿಂದಾಗಿ ವಾಯುಪಡೆಗೆ ಈ ಅತ್ಯಾಧುನಿಕ ಆಯುಧವನ್ನು ಸೇರ್ಪಡೆ ಮಾಡುವುದಕ್ಕೆ ದಾರಿ ಸುಗಮಗೊಂಡಂತಾಗಿದೆ ಎಂದೂ ಸಚಿವಾಲಯ ತಿಳಿಸಿದೆ.

ಡಿಆರ್‌ಡಿಒ ವಿನ್ಯಾಸಗೊಳಿಸಿ, ಅಭಿವೃದ್ಧಿಪಡಿಸಿರುವ ‘ಗೌರವ್’, ಸಾವಿರ ಕೆ.ಜಿ ಭಾರವಿದೆ. ಪರೀಕ್ಷೆ ಯಶಸ್ವಿ ಆಗಿರುವುದಕ್ಕೆ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಡಿಆರ್‌ಡಿಒ, ವಾಯುಪಡೆ ಹಾಗೂ ಈ ಬಾಂಬ್ ಅಭಿವೃದ್ಧಿಗೆ ಕೈಜೋಡಿಸಿರುವ ಉದ್ದಿಮೆಗಳನ್ನು ಅಭಿನಂದಿಸಿದ್ದಾರೆ.


ಸಾಮೂಹಿಕ ಅತ್ಯಾಚಾರ: ಕ್ರಮಕ್ಕೆ ಮೋದಿ ಸೂಚನೆ

ಲಖನೌ: ವಾರಾಣಸಿಯಲ್ಲಿ ಯುವತಿಯೊಬ್ಬರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ಅಧಿಕಾರಿಗಳಿಗೆ ಆದೇಶಿಸಿದರು.

ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ ನೀಡುವ ಹಿನ್ನೆಲೆಯಲ್ಲಿ ಮೋದಿ ಅವರು ಶುಕ್ರವಾರ ವಾರಾಣಸಿಗೆ ಆಗಮಿಸಿದ್ದರು. ಈ ವೇಳೆ ಸಾಮೂಹಿಕ ಅತ್ಯಾಚಾರ ಪ್ರಕರಣದ ಬಗ್ಗೆ ವಾರಾಣಸಿ ವಿಭಾಗೀಯ ಆಯುಕ್ತರು ಹಾಗೂ ಪೊಲೀಸ್ ಆಯುಕ್ತರಿಂದ ಪ್ರಧಾನಿ ಮಾಹಿತಿ ಪಡೆದರು. ಅಪರಾಧಿಗಳನ್ನು ಬಂಧಿಸಿ, ಕಠಿಣ ಶಿಕ್ಷೆ ಆಗುವುದನ್ನು ಖಾತರಿ ಪಡಿಸಿಕೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

19 ವರ್ಷದ ಯುವತಿಯನ್ನು 22 ಮಂದಿ ಅಪಹರಿಸಿ, ಆರು ದಿನಗಳ ಕಾಲ ವಾರಾಣಸಿಯ ವಿವಿಧ ನಗರಗಳಲ್ಲಿ ಅತ್ಯಾಚಾರ ಎಸಗಿರುವ ಆರೋಪದಡಿ ಪ್ರಕರಣ ದಾಖಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಈಗಾಗಲೇ 11 ಮಂದಿ ಆರೋಪಿಗಳನ್ನು ಬಂಧಿಸಿದ್ದು, ಉಳಿದವರಿಗಾಗಿ ಶೋಧ ನಡೆಸುತ್ತಿರುವುದಾಗಿ ಪೊಲೀಸರು ಹೇಳಿದ್ದಾರೆ.


ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,399
ಇಂದಿನ ಅಂತ್ಯ	22,828
▲	429
ದಿನದ ಗರಿಷ್ಠ	22,923

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ




ಬೆಂಗಳೂರು	
100ಕ್ಕೆ	₹450
12 ಕ್ಕೆ	₹60
ಮೈಸೂರು	
100ಕ್ಕೆ	₹450

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ)	₹300-575
ದ್ವಿತಳಿ (ಬಿ.ವಿ)	₹410-656

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹192
ಆರ್‌ಎಸ್‌ಎಸ್-5	₹187
ಗುಡ್ ಲಾಟ್	₹179

ಮುಂಬೈ ಧಾರಣೆ

ಶೇಂಗಾ ಎಣ್ಣೆ (10 ಕೆಜಿಗೆ)

11-04-2025

ಕಚ್ಚಾ (ತೆರಿಗೆ ಬಿಟ್ಟು)	1380 (1380)
ಒಂದು ವಾರದ ಡೆಲಿವರಿ	1375 (1375)
ಪಾಮ್ ವಾರದ ಡೆಲಿವರಿ	1308 (1313)
ಸೂರ್ಯಕಾಂತಿ ಎಣ್ಣೆ ಕಚ್ಚಾ	1330 (1340)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹93,200 (90,950)

ಬೆಳ್ಳಿ ಕೆ.ಜಿ ₹93,100 (91,550)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ಅಡಿಕೆ ಧಾರಣೆ (₹ಗಳಲ್ಲಿ)

ಕುಮಟ	
ಚಾಲಿ	40099-43098
ಚಿಪ್ಪು	25609-31899
ಕೋಕ	6569-20189
ಫ್ಯಾಕ್ಟರಿ	5019-24529
ಹೊಸಚಾಲಿ	38809-43219
ಪುತ್ತೂರು	
ಕೋಕ	22000-29000
ಸಾಗರ	
ಸಿಪ್ಪೆಗೋಟು	11500-18800
ಶಿವಮೊಗ್ಗ	
ಬೆಟ್ಟೆ	52599-57000
ಗೊರಬಲು	21509-30299
ರಾಶಿ	40009-56011
ಸರಕು	59240-90096
ಸಿದ್ದಾಪುರ	
ಬಿಳಿಗೋಟು	23869-31459
ಚಾಲಿ	33459-41599
ಕೋಕ	10012-24599
ಕೆಂಪುಗೋಟು	16612-22312
ರಾಶಿ	42689-47599
ತಟ್ಟಿಬೆಟ್ಟೆ	34569-40599
ಶಿರಸಿ	
ಬೆಟ್ಟೆ	28269-38699
ಬಿಳಿಗೋಟು	16899-33600
ಚಾಲಿ	36011-42899
ಕೆಂಪುಗೋಟು	12699-24321
ರಾಶಿ	42518-47899
ಯಲ್ಲಾಪುರ	
ಅಪಿ	58800-63700
ಬಿಳಿಗೋಟು	13899-31899
ಚಾಲಿ	33199-42919
ಕೋಕ	4899-18499
ಕೆಂಪುಗೋಟು	16899-28300
ರಾಶಿ	40000-56980
ತಟ್ಟಿಬೆಟ್ಟೆ	27973-39399

ಹೂಡಿಕೆದಾರರ ಸಂಪತ್ತು ₹7.85 ಲಕ್ಷ ಕೋಟಿ ವೃದ್ಧಿ ● ಅಮೆರಿಕದ ಷೇರು ಸೂಚ್ಯಂಕಗಳು ಇಳಿಕೆ

ಸುಂಕ ವಿರಾಮ: ಷೇರುಪೇಟೆಗೆ ಬಲ

ಮುಂಬೈ (ಪಿಟಿಐ): ದೇಶದ ಷೇರುಪೇಟೆಯಲ್ಲಿ ಶುಕ್ರವಾರ ಗೂಳಿ ಆರ್ಭಟದಿಂದಾಗಿ ಸೂಚ್ಯಂಕಗಳು ಶೇ 2ರಷ್ಟು ಏರಿಕೆ ದಾಖಲಿಸಿವೆ. ಹೂಡಿಕೆದಾರರ ಸಂಪತ್ತು ₹7.85 ಲಕ್ಷ ಕೋಟಿ ವೃದ್ಧಿಸಿದೆ.



ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತವು ಭಾರತದ ಮೇಲೆ ವಿಧಿಸಿರುವ ಶೇ 26ರಷ್ಟು ಪ್ರತಿ ಸುಂಕ ಜಾರಿಯನ್ನು ಜುಲೈ 9ರ ವರೆಗೆ ಮುಂದೂಡಿದೆ. ಇದು ಹೂಡಿಕೆದಾರರಲ್ಲಿ ವಿಶ್ವಾಸ ಹೆಚ್ಚಿಸಿದೆ. ಜಾಗತಿಕ ಮಾರುಕಟ್ಟೆಗಳಲ್ಲಿ ಕರಡಿ ಕುಣಿತ ಜೋರಾಗಿದೆ. ಇದರ ಹೊರತಾಗಿಯೂ ದೇಶೀಯ ಷೇರುಪೇಟೆ ಏರಿಕೆ ಕಂಡಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,310 ಅಂಶ ಏರಿಕೆ ಕಂಡು 75,157 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 1,620 ಅಂಶ ಏರಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 429 ಅಂಶ ಏರಿಕೆ ಕಂಡು 22,828 ಅಂಶಗಳಲ್ಲಿ ಸ್ಥಿರಗೊಂಡಿತು.

ಸೆನ್ಸೆಕ್ಸ್ ಗುಚ್ಛದಲ್ಲಿನ ಟಾಟಾ ಸ್ಟೀಲ್, ಪವರ್ ಗ್ರಿಡ್, ಎನ್‌ಟಿಪಿಸಿ, ಕೋಟಕ್ ಮಹೀಂದ್ರ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್, ಅದಾನಿ ಪೋರ್ಟ್ಸ್ ಷೇರಿನ ಮೌಲ್ಯ ಏರಿಕೆ ಕಂಡಿದೆ. ಏಷ್ಯನ್ ಪೇಂಟ್ಸ್, ಟಿಸಿಎಸ್ ಷೇರಿನ ಮೌಲ್ಯ ಇಳಿದಿದೆ.

'ಜಾಗತಿಕ ಮಟ್ಟದಲ್ಲಿ ತಲೆದೋರಿದ್ದ ಅನಿಶ್ಚಿತ ಸ್ಥಿತಿಯ ನಡುವೆಯೇ ಪ್ರತಿ ಸುಂಕ ಜಾರಿಗೆ ಟ್ರಂಪ್ ಆಡಳಿತವು 90 ದಿನ ವಿರಾಮ ನೀಡಿದೆ. ಈ ಅನಿರೀಕ್ಷಿತ ಕ್ರಮವು ದೇಶೀಯ ಷೇರುಪೇಟೆ ಏರಿಕೆ ಕಾಣಲು ನೆರವಾಗಿದೆ' ಎಂದು ಜಿಯೊಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಜಾಗತಿಕ ಷೇರುಪೇಟೆಗಳ ಕಥೆ: ಟೋಕಿಯೊ ಮತ್ತು ದಕ್ಷಿಣ ಕೊರಿಯಾ ಷೇರುಪೇಟೆ ಇಳಿಕೆ ಕಂಡಿದ್ದರೆ, ಶಾಂಘೈ, ಹಾಂಗ್‌ಕಾಂಗ್ ಏರಿಕೆ ಕಂಡಿವೆ. ಯುರೋಪ್ ಮಾರುಕಟ್ಟೆಗಳಲ್ಲೂ ನಕಾರಾತ್ಮಕ ವಹಿವಾಟು ನಡೆದಿದೆ.

ಗುರುವಾರದ ವಹಿವಾಟಿನಲ್ಲಿ ಅಮೆರಿಕದ ನಾಸ್ಡಾಕ್ ಕಂಪೋಸಿಟ್ ಶೇ 4.31, ಎಸ್ ಆ್ಯಂಡ್ ಪಿ 500 ಶೇ 3.46ರಷ್ಟು ಹಾಗೂ ಡೌ ಜೋನ್ಸ್ ಶೇ 2.50ರಷ್ಟು ಇಳಿಕೆಯಾಗಿದೆ.

ರೂಪಾಯಿ ಮೌಲ್ಯ 58 ಪೈಸೆ ಜಿಗಿತ

ಮುಂಬೈ (ಪಿಟಿಐ): ದೇಶೀಯ ಷೇರುಪೇಟೆ ಏರಿಕೆಯು ರೂಪಾಯಿಗೆ ಬಲ ನೀಡಿದ್ದು, ಶುಕ್ರವಾರ ನಡೆದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು 58 ಪೈಸೆ ಏರಿಕೆ ಕಂಡಿದೆ.



ಪ್ರತೀ ಡಾಲರ್ ಮೌಲ್ಯ ₹86.10 ಆಗಿದೆ.

ಡಾಲರ್ ಸೂಚ್ಯಂಕವು ಮೂರು ವರ್ಷದ ಅವಧಿಯಲ್ಲಿ ಮೊದಲ ಬಾರಿಗೆ 100 ಅಂಶಗಳಿಗಿಂತ ಕೆಳಗಿಳಿದಿದೆ. ಇದು ರೂಪಾಯಿ ಮೌಲ್ಯ ಏರಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಡಾಲರ್ ಸೂಚ್ಯಂಕವು ಶೇ 1.52ರಷ್ಟು ಇಳಿಕೆಯಾಗಿದೆ. ಅಮೆರಿಕ ಮತ್ತು ಚೀನಾ ನಡುವಿನ ಸುಂಕ ಸಮರದಿಂದ ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಡಾಲರ್ ಮೌಲ್ಯ ಇಳಿಕೆಯಾಗುತ್ತಿದೆ ಎಂದು ಹೇಳಿದ್ದಾರೆ.

ಬೆಳ್ಳಿ ದರ ಕೆ.ಜಿಗೆ ₹2,300 ಏರಿಕೆ

ನವದೆಹಲಿ (ಪಿಟಿಐ): ಆಭರಣ ತಯಾರಕರು ಮತ್ತು ದಾಸ್ತಾನುಗಾರರಿಂದ ಬೇಡಿಕೆ ಹೆಚ್ಚಿದ್ದರಿಂದ ಇಲ್ಲಿನ ಚಿನಿವಾರ ಪೇಟೆಯಲ್ಲಿ ಶುಕ್ರವಾರ ಬೆಳ್ಳಿ ಧಾರಣೆ ಏರಿಕೆಯಾಗಿದೆ.

ಕೆ.ಜಿಗೆ ಒಂದೇ ದಿನ ₹2,300 ಏರಿಕೆಯಾಗಿದೆ. ಕೆ.ಜಿ ಬೆಲೆ ₹95,500 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಅಮೆರಿಕ ಮತ್ತು ಚೀನಾ ನಡುವಿನ ಸುಂಕ ಸಮರವು ಜಾಗತಿಕ ಮಾರುಕಟ್ಟೆಯಲ್ಲಿ ವ್ಯಾಪಾರ ಬಿಕ್ಕಟ್ಟು ಸೃಷ್ಟಿಸಿದೆ. ಇದರಿಂದ ದರ ಏರುಗತಿಯಲ್ಲಿದೆ ಎಂದು ತಜ್ಞರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಕೈಗಾರಿಕಾ ಉತ್ಪಾದನೆ ಕುಂಠಿತ

ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನಾ ಪ್ರಗತಿಯು ಫೆಬ್ರುವರಿ ತಿಂಗಳಲ್ಲಿ ಆರು ತಿಂಗಳ ಕನಿಷ್ಠ ಮಟ್ಟವಾದ ಶೇ 2.9ರಷ್ಟು ದಾಖಲಾಗಿದೆ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಶುಕ್ರವಾರ ತಿಳಿಸಿದೆ.

ಕಳೆದ ವರ್ಷದ ಫೆಬ್ರುವರಿಯಲ್ಲಿ ಶೇ 5.6ರಷ್ಟು ದಾಖಲಾಗಿತ್ತು. ತಯಾರಿಕಾ, ಗಣಿಗಾರಿಕೆ ಮತ್ತು ವಿದ್ಯುತ್ ವಲಯದಲ್ಲಿನ ಮಂದಗತಿ ಬೆಳವಣಿಗೆಯೇ ಇದಕ್ಕೆ ಕಾರಣ ಎಂದು ತಿಳಿಸಿದೆ.

ಕೈಗಾರಿಕಾ ಉತ್ಪಾದನಾ ಸೂಚ್ಯಂಕ (ಐಐಪಿ) ಆಧಾರದ ಮೇಲೆ ಈ ಪ್ರಗತಿಯನ್ನು ಲೆಕ್ಕ ಹಾಕಲಾಗುತ್ತದೆ. ಗಣಿಗಾರಿಕೆ ಶೇ 1.6, ತಯಾರಿಕೆ ಶೇ 2.9 ಮತ್ತು ವಿದ್ಯುತ್ ವಲಯದ ಪ್ರಗತಿಯು ಶೇ 3.6ಕ್ಕೆ ಇಳಿದಿದೆ.

2024–25ನೇ ಆರ್ಥಿಕ ವರ್ಷದ ಏಪ್ರಿಲ್–ಫೆಬ್ರುವರಿಯಲ್ಲಿ ಐಐಪಿ ಬೆಳವಣಿಗೆ ಶೇ 4.1ರಷ್ಟಿದೆ. 2023–24ರ ಇದೇ ಅವಧಿಯಲ್ಲಿ ಶೇ 6ರಷ್ಟಿತ್ತು ಎಂದು ತಿಳಿಸಿದೆ.

ಈಕ್ವಿಟಿ ಎಂ.ಎಫ್ ಹೂಡಿಕೆ ಇಳಿಕೆ

ನವದೆಹಲಿ (ಪಿಟಿಐ): ಮಾರ್ಚ್‌ನಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್ (ಎಂ.ಎಫ್) ಮಾರುಕಟ್ಟೆಯಲ್ಲಿ ಬಂಡವಾಳ ಹೂಡಿಕೆ ಪ್ರಮಾಣವು 11 ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆಯಾಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ಶುಕ್ರವಾರ ತಿಳಿಸಿದೆ.

ಒಟ್ಟು ₹25,082 ಕೋಟಿ ಹೂಡಿಕೆಯಾಗಿದೆ. ಫೆಬ್ರುವರಿಯಲ್ಲಿ ₹29,303 ಕೋಟಿ ಹೂಡಿಕೆ ಆಗಿತ್ತು. ಇದಕ್ಕೆ ಹೋಲಿಸಿದರೆ ಶೇ 14ರಷ್ಟು ಇಳಿಕೆಯಾಗಿದೆ ಎಂದು ತಿಳಿಸಿದೆ.

ಸೆಕ್ಟೋರಲ್ ಫಂಡ್ಸ್ ಮತ್ತು ಥಿಮ್ಯಾಟಿಕ್ ಫಂಡ್‌ಗಳಲ್ಲಿ ಹೂಡಿಕೆ ಕಡಿಮೆಯಾಗಿದೆ. ಮತ್ತೊಂದೆಡೆ ಟ್ರಂಪ್ ಪ್ರತಿ ಸುಂಕ ನೀತಿಯಿಂದ ಷೇರುಪೇಟೆಯಲ್ಲಿ ಚಂಚಲತೆ ಉಂಟಾಗಿದೆ. ಇದು ಹೂಡಿಕೆ ಪ್ರಮಾಣ ಇಳಿಕೆಗೆ ಕಾರಣವಾಗಿದೆ ಎಂದು ತಿಳಿಸಿದೆ.

ನಗರ ಸ್ಥಳೀಯ ಸರ್ಕಾರ ಸುಧಾರಣೆಗೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ನಗರ ಸ್ಥಳೀಯ ಸರ್ಕಾರಗಳಲ್ಲಿ ಹೊಣೆಗಾರಿಕೆ ವ್ಯವಸ್ಥೆ ಬಲಪಡಿಸುವ ಸಂಬಂಧ ಜನಾಗ್ರಹ ಸಂಸ್ಥೆ ಮತ್ತು ಮಹಾ ಲೆಕ್ಕಪರಿಶೋಧಕ ಮತ್ತು ಮಹಾಲೇಖಪಾಲರ (ಸಿಎಜಿ) ಕಚೇರಿಯು ಐದು ವರ್ಷದ ಒಡಂಬಡಿಕೆಗೆ ಸಹಿ ಹಾಕಿವೆ.

ಸಿಎಜಿ ಕೆ. ಸಂಜಯ್ ಮೂರ್ತಿ ಅವರ ಉಪಸ್ಥಿತಿಯಲ್ಲಿ ಡೆಪ್ಯುಟಿ ಸಿಎಜಿ ಸುಬಿರ್ ಮಲ್ಲಿಕ್ ಮತ್ತು ಜನಾಗ್ರಹ ಸಂಸ್ಥೆಯ ಸಿಇಒ ಶ್ರೀಕಾಂತ್ ವಿಶ್ವನಾಥನ್ ಒಪ್ಪಂದಕ್ಕೆ ಅಂಕಿತ ಹಾಕಿದರು.

ಸ್ಥಳೀಯ ಸರ್ಕಾರಗಳು ಹಣಕಾಸು ನಿರ್ವಹಣೆ ಮತ್ತು ನಾಗರಿಕರಿಗೆ ಸಮರ್ಪಕ ಸೇವೆ ಒದಗಿಸುವಲ್ಲಿ ಹಲವು ಸವಾಲುಗಳನ್ನು ಎದುರಿಸುತ್ತಿವೆ. ಈ ಸಮಸ್ಯೆ ಬಗೆಹರಿಸಲು ಒಪ್ಪಂದ ಸಹಕಾರಿಯಾಗಲಿದೆ ಎಂದು ಜನಾಗ್ರಹ ಸಂಸ್ಥೆ ತಿಳಿಸಿದೆ.

ರಾಷ್ಟ್ರೀಯ ಪುರಸಭೆ ಖಾತೆಗಳ ಕೈಪಿಡಿ ಮತ್ತು ಹಣಕಾಸು ವರದಿಯ ಗುಣಮಟ್ಟ ಸುಧಾರಣೆಗೆ ಒತ್ತು ನೀಡಲಾಗುವುದು. ಬ್ಯಾಂಕ್‌ಗಳು ಮತ್ತು ಹೂಡಿಕೆದಾರರಿಂದ ಹಣಕಾಸಿನ ಬಗ್ಗೆ ಸರ್ಕಾರಗಳಿಗೆ ಮಾಹಿತಿ ಒದಗಿಸಲಾಗುವುದು. ಸ್ಥಳೀಯ ಸರ್ಕಾರಗಳ ಸಾಲ ಪಡೆಯುವಿಕೆ ಮತ್ತು ನಾಗರಿಕರಿಗೆ ಪಾರದರ್ಶಕವಾಗಿ ಸೌಲಭ್ಯ ಕಲ್ಪಿಸುವ ಬಗ್ಗೆ ಒತ್ತು ನೀಡಲಾಗುವುದು ಎಂದು ತಿಳಿಸಿದೆ.



ಜನಾಗ್ರಹ ಸಂಸ್ಥೆ ಮತ್ತು ಮಹಾ ಲೆಕ್ಕಪರಿಶೋಧಕ ಮತ್ತು ಮಹಾಲೇಖಪಾಲರ (ಸಿಎಜಿ) ಕಚೇರಿಯು ಒಡಂಬಡಿಕೆಗೆ ಸಹಿ ಹಾಕಿವೆ

ಗೂಗಲ್‌ನಿಂದ ನೂರಾರು ಉದ್ಯೋಗಿಗಳು ವಜಾ

ಬೆಂಗಳೂರು (ಪಿಟಿಐ): ಆಲ್ಫಾಬೆಟ್ ಇಂಕ್ ಒಡೆತನದ ಗೂಗಲ್ ಕಂಪನಿಯು ತನ್ನ ಆಂಡ್ರಾಯ್ಡ್, ಪಿಕ್ಸೆಲ್ ಫೋನ್ಸ್ ಮತ್ತು ಕ್ರೋಮ್ ಬ್ರೌಸರ್ ಘಟಕಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದ ನೂರಾರು ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಿದೆ.

ಈ ಘಟಕಗಳಲ್ಲಿ ಕೆಲಸ ನಿರ್ವಹಿಸುವ ಉದ್ಯೋಗಿಗಳನ್ನು ಒಂದೇ ವೇದಿಕೆಯಡಿ ಸಂಯೋಜಿಸಲು ಕ್ರಮವಹಿಸಲಾಗಿದೆ. ಕಾರ್ಯಾಚರಣೆಗೆ ಮತ್ತಷ್ಟು ವೇಗ ನೀಡುವುದು ಇದರ ಉದ್ದೇಶ. ಹಾಗಾಗಿ, ಜನವರಿಯಲ್ಲಿ ಉದ್ಯೋಗಿಗಳ ವಜಾಕ್ಕೆ ನಿರ್ಧರಿಸಲಾಗಿತ್ತು. ಸ್ವಯಂಪ್ರೇರಿತವಾಗಿ ಉದ್ಯೋಗ ತೊರೆಯುವಂತೆ ಸೂಚಿಸಲಾಗಿತ್ತು ಎಂದು ಗೂಗಲ್ ಕಂಪನಿಯ ವಕ್ತಾರರು ತಿಳಿಸಿದ್ದಾರೆ.

ಜಾಗತಿಕ ಮಟ್ಟದಲ್ಲಿ ತಂತ್ರಜ್ಞಾನ ಕಂಪನಿಗಳು ಡೇಟಾ ಸೆಂಟರ್ ಮತ್ತು ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಅಭಿವೃದ್ಧಿಗೆ ಬಂಡವಾಳ ಹೂಡುತ್ತಿವೆ. ಹಾಗಾಗಿ, ಇತರೆ ವಲಯಗಳಲ್ಲಿನ ಹೂಡಿಕೆ ಪ್ರಮಾಣವನ್ನು ತಗ್ಗಿಸುತ್ತಿವೆ. ಇದರಿಂದ ಉದ್ಯೋಗ ಕಡಿತಕ್ಕೆ ಮುಂದಾಗಿವೆ ಎಂದು ತಜ್ಞರು ತಿಳಿಸಿದ್ದಾರೆ.

ಕಚ್ಚಾ ತೈಲ ಬೆಲೆ ಕುಸಿತ

ಸುಂಕ ಸಮರ: ಜಾಗತಿಕ ಮಾರುಕಟ್ಟೆ ತಲ್ಲಣ

ಲಂಡನ್ (ರಾಯಿಟರ್ಸ್): ಚೀನಾ ಮತ್ತು ಅಮೆರಿಕದ ನಡುವಿನ ವ್ಯಾಪಾರ ಸಮರದಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಇಳಿಕೆಯಾಗುತ್ತಿದೆ.



ಕಳೆದ ವಾರ ಬ್ರೆಂಟ್ ಮತ್ತು ವೆಸ್ಟ್ ಟೆಕ್ಸಾಸ್ ಇಂಟರ್‌ಮೀಡಿಯೆಟ್ (ಡಬ್ಲ್ಯುಟಿಐ) ಕಚ್ಚಾ ತೈಲ ಬೆಲೆಯು ಶೇ 11ರಷ್ಟು ಇಳಿಕೆ ಕಂಡಿತ್ತು. ಈ ವಾರವೂ ಬ್ರೆಂಟ್ ಶೇ 3.8ರಷ್ಟು ಹಾಗೂ ಡಬ್ಲ್ಯುಟಿಐ ಬೆಲೆಯಲ್ಲಿ ಶೇ 3.5ರಷ್ಟು ಕುಸಿತವಾಗಿದೆ.

ಅಮೆರಿಕ ಮತ್ತು ಚೀನಾ ನಡುವೆ ತಲೆದೋರಿರುವ ವ್ಯಾಪಾರ ಬಿಕ್ಕಟ್ಟು ಆರ್ಥಿಕ ಹಿಂಜರಿತದ ಭೀತಿ ಸೃಷ್ಟಿಸಿದೆ. ಇದು ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಇಳಿಕೆಗೆ ಕಾರಣವಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಬ್ರೆಂಟ್ ಬೆಲೆಯು ಪ್ರತಿ ಬ್ಯಾರೆಲ್‌ಗೆ 63.08 ಡಾಲರ್ ಆಗಿದ್ದರೆ, ಡಬ್ಲ್ಯುಟಿಐ ದರವು ಪ್ರತಿ ಬ್ಯಾರೆಲ್‌ಗೆ 59.77 ಡಾಲರ್ ಆಗಿದೆ.

ಈ ವಾರದ ವಹಿವಾಟಿನಲ್ಲಿ ಬ್ರೆಂಟ್ ಬೆಲೆಯು ಪ್ರತಿ ಬ್ಯಾರೆಲ್‌ಗೆ 60 ಡಾಲರ್‌ಗಿಂತ ಕಡಿಮೆ ದಾಖಲಾಗಿತ್ತು. 2021ರ ಫೆಬ್ರುವರಿ ಬಳಿಕ ಅತಿ ಕಡಿಮೆ ದರ ದಾಖಲಾದ ವಾರ ಇದಾಗಿದೆ.

ಅಮೆರಿಕದ ಸರಕುಗಳ ಮೇಲೆ ಚೀನಾ ಕೂಡ ಟ್ರಂಪ್ ಆಡಳಿತ ವಿಧಿಸಿರುವಷ್ಟೇ ಸುಂಕ ಹೇರಿದೆ. ಇದರಿಂದ ಮಾರುಕಟ್ಟೆಯಲ್ಲಿ ಅಸ್ಥಿರತೆ ಸೃಷ್ಟಿಯಾಗಿದ್ದು, ಕಚ್ಚಾ ತೈಲ ಬೆಲೆ ಇಳಿಕೆಯಾಗಿದೆ ಎಂದು ತಜ್ಞರು ಹೇಳಿದ್ದಾರೆ.

'ಟ್ರಂಪ್ ಆಡಳಿತದ ಪ್ರತಿ ಸುಂಕ ನೀತಿಯು ಜಾಗತಿಕ ಮಾರುಕಟ್ಟೆಗೆ ಸಾಕಷ್ಟು ಪೆಟ್ಟು ನೀಡಿತ್ತು. ಈಗ ಪ್ರತಿ ಸುಂಕ ಜಾರಿಯನ್ನು 90 ದಿನಗಳವರೆಗೆ ಮುಂದೂಡಲಾಗಿದೆ. ಆದರೆ, ಬೆಲೆ ಏರಿಕೆಯಿಂದ ತಲ್ಲಣಗೊಂಡಿರುವ ಮಾರುಕಟ್ಟೆಯು ಸ್ಥಿರತೆ ಕಾಯ್ದುಕೊಳ್ಳಲು ಹೆಣಗಾಡುವಂತಾಗಿದೆ' ಎಂದು ಸ್ಯಾಕ್ಸೋ ಬ್ಯಾಂಕ್‌ನ ಸರಕು ವಿಭಾಗದ ಮುಖ್ಯಸ್ಥ ಓಲೆ ಹ್ಯಾನ್ಸೆನ್ ಹೇಳಿದ್ದಾರೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಜಾಗತಿಕ ಆರ್ಥಿಕತೆಯು ಶೇ 3ಕ್ಕಿಂತ ಕಡಿಮೆ ಪ್ರಗತಿ ಸಾಧಿಸಿದರೆ, ಕಚ್ಚಾ ತೈಲದ ಬಳಕೆಯು ಶೇ 1ರಷ್ಟು ಕಡಿಮೆಯಾಗಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ.

ವಿನಿಮಯ ದರ

$ ಡಾಲರ್	86.10
£ ಪೌಂಡ್	112.78
€ ಯುರೊ	98.23
¥ ಯೆನ್ (100ಕ್ಕೆ)	60

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1370 (1370)
ಸೋಯಾ (ರಿಫೈನ್ಡ್)	₹1310 (1285)
ಸೂರ್ಯಕಾಂತಿ (ರಿಫೈನ್ಡ್)	₹1400 (1405)
ಪಾಮೋಲಿನ್	₹1310 (1315)

ಹೆಲಿಕಾಪ್ಟರ್ ಪತನ: ಸಿಮೆನ್ಸ್ ಕಂಪನಿ ಅಧಿಕಾರಿ ಕುಟುಂಬ ಸದಸ್ಯರ ಸಾವು

ನ್ಯೂಯಾರ್ಕ್ (ಎಪಿ): ಪ್ರವಾಸಿ ಹೆಲಿಕಾಪ್ಟರ್ 'ಬೆಲ್ -206' ಹಾರಾಟ ಆರಂಭಿಸಿದ ಕೆಲ ಹೊತ್ತಿನಲ್ಲಿಯೇ ಗುರುವಾರ ಮಧ್ಯಾಹ್ನ ಇಲ್ಲಿನ ಹಡ್ಸನ್ ನದಿಯಲ್ಲಿ ಪತನಗೊಂಡಿದ್ದು, ಪೈಲಟ್ ಮತ್ತು ಸ್ಪೇನ್‌ನ ಐವರು ಪ್ರಯಾಣಿಕರು, ಮೃತಪಟ್ಟರು.

'ಸಿಮೆನ್ಸ್ ಕಂಪನಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಆಗಸ್ಟಿನ್ ಎಸ್ಕೋಬಾರ್, ಅವರ ಪತ್ನಿ, ಮೂವರು ಮಕ್ಕಳು ಮತ್ತು ಪೈಲಟ್ ಮೃತಪಟ್ಟವರು' ಎಂದು ತನಿಖಾಧಿಕಾರಿಗಳು ಸುದ್ದಿಗಾರರಿಗೆ ತಿಳಿಸಿದರು.

ಹೆಲಿಕಾಪ್ಟರ್ ಟೇಕಾಫ್‌ಗೆ ಮುನ್ನ ಆಗಸ್ಟಿನ್ ಕುಟುಂಬ ಸದಸ್ಯರ ಜೊತೆ ತೆಗೆದುಕೊಂಡಿದ್ದ ಭಾವಚಿತ್ರವನ್ನು ಹೆಲಿಕಾಪ್ಟರ್ ಕಂಪನಿ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಅಪಘಾತ ಕಾರಣ ತಿಳಿದುಬಂದಿಲ್ಲ. ತನಿಖೆ ನಡೆದಿದೆ ಎಂದು ರಾಷ್ಟ್ರೀಯ ಸಾರಿಗೆ ಸುರಕ್ಷತಾ ಮಂಡಳಿ ತಿಳಿಸಿದೆ.



ಸ್ಲೋವಾಕಿಯಾ ಪ್ರವಾಸದಲ್ಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಅಲ್ಲಿನ ನಿತ್ರಾ ನಗರದ ಉದ್ಯಾನದಲ್ಲಿ ಸ್ಲೋವಾಕಿಯಾದ ರಾಷ್ಟ್ರೀಯ ಮರವಾದ 'ಲಿಂಡನ್ ಸಸಿ' ನೆಟ್ಟರು. ಸ್ಲೋವಾಕಿಯಾ ಗಣರಾಜ್ಯದ ಅಧ್ಯಕ್ಷ ಪೀಟರ್ ಪೆಲ್ಲಿಗ್ರಿನ್ ಅವರು ಇದ್ದಾರೆ –ಪಿಟಿಐ ಚಿತ್ರ

ಸಿಯೆರಾ ಲಿಯೋನ್‌ಗೆ 9.90 ಲಕ್ಷ ಡಾಲರ್ ನೆರವು –ಭಾರತ

ನ್ಯೂಯಾರ್ಕ್ (ಪಿಟಿಐ): 'ಭಾರತ-ವಿಶ್ವಸಂಸ್ಥೆ ಅಭಿವೃದ್ಧಿ ಸಹಭಾಗಿತ್ವದ ನಿಧಿ'ಯಡಿ ಭಾರತವು ಆಫ್ರಿಕಾದ ಸಿಯೆರಾ ಲಿಯೋನ್ ದೇಶದಲ್ಲಿ ಅಂಗವಿಕಲರ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ 9.90 ಲಕ್ಷ ಡಾಲರ್ (₹8.52 ಕೋಟಿ) ನೆರವು ಒದಗಿಸಲಿದೆ.

'ಸಿಯೆರಾ ಲಿಯೋನ್‌ನ ಅಂಗವಿಕಲರ ಆರ್ಥಿಕ ಸ್ವಾತಂತ್ರ್ಯ ಯೋಜನೆ'ಯಡಿ ನೆರವು ನೀಡಲು ಭಾರತಕ್ಕೆ ಸಿಯೆರಾ ಲಿಯೋನ್ ಸರ್ಕಾರ ಕೋರಿತ್ತು.

ವಿಶ್ವಸಂಸ್ಥೆಯ ಭಾರತದ ಶಾಶ್ವತ ಮಿಷನ್ ಈ ಕುರಿತು ಹೇಳಿಕೆ ನೀಡಿದ್ದು, 'ಸಿಯೆರಾ ಲಿಯೋನ್‌ನ ಗ್ರಾಮೀಣ ಭಾಗದ ಅಂಗವಿಕಲರಿಗೆ ಸುಸ್ಥಿರ ಜೀವನ ಹಾಗೂ ತರಬೇತಿ ನೀಡುವುದು ಇದರ ಉದ್ದೇಶವಾಗಿದೆ ಎಂದು ತಿಳಿಸಿದೆ.

ಉದ್ಯಮಿ, ಭಾರತ ಮೂಲದ 2 ಸಂಸ್ಥೆಗಳಿಗೆ ನಿರ್ಬಂಧ

ನ್ಯೂಯಾರ್ಕ್/ ವಾಷಿಂಗ್ಟನ್ (ಪಿಟಿಐ): ಇರಾನ್‌ನ ತೈಲ ಸಾಗಣೆಗೆ ನೆರವಾದ ಆರೋಪದಡಿ ಸಂಯುಕ್ತ ಅರಬ್ ಒಕ್ಕೂಟ (ಯುಎಇ) ಮೂಲದ ಭಾರತೀಯ ಉದ್ಯಮಿ ಹಾಗೂ ಭಾರತ ಮೂಲದ ಎರಡು ಸಂಸ್ಥೆಗಳಿಗೆ ಅಮೆರಿಕ ನಿರ್ಬಂಧ ಹೇರಿದೆ.

'ಜುಗ್ವಿಂದರ್ ಸಿಂಗ್ ಬ್ರಾರ್ ಅವರು ಶಿಪ್ಪಿಂಗ್ ಕಂಪನಿಗಳ ಮಾಲೀಕರು. 30 ಹಡಗು ಹೊಂದಿದ್ದಾರೆ. ಇದರಲ್ಲಿ ಹೆಚ್ಚಿನವನ್ನು ಇರಾನ್‌ನ ತೈಲೋತ್ಪನ್ನಗಳ ಸಾಗಣೆಗೆ ಬಳಸಿಕೊಳ್ಳಲಾಗುತ್ತಿತ್ತು' ಎಂದು ಅಮೆರಿಕದ ಖಜಾನೆ ಇಲಾಖೆಯು ಪ್ರಕಟಣೆಯಲ್ಲಿ ತಿಳಿಸಿದೆ.

ಇದಲ್ಲದೇ, ಯುಎಇ ಮೂಲದ, ಬ್ರಾರ್ ನಿಯಂತ್ರಣದಲ್ಲಿರುವ 'ಗ್ಲೋಬಲ್ ಟ್ಯಾಂಕರ್ಸ್ ಪ್ರೈವೆಟ್ ಲಿಮಿಟೆಡ್ ಶಿಪ್ಪಿಂಗ್ ಕಂಪನಿ, ಪೆಟ್ರೊ ಕೆಮಿಕಲ್ಸ್ ಮಾರಾಟ ಸಂಸ್ಥೆ ಬಿ ಆ್ಯಂಡ್ ಪಿ ಸಲ್ಯೂಷನ್ ಪ್ರೈವೆಟ್ ಲಿಮಿಟೆಡ್ ಮೇಲೂ ಅಮೆರಿಕ ನಿರ್ಬಂಧವನ್ನು ಹೇರಿದೆ.

ಡ್ರಗ್ಸ್: ಭಾರತದ ಮೂವರ ಬಂಧನ

ಕಠ್ಮಂಡು (ಪಿಟಿಐ): ಮಾದಕವಸ್ತು ಕಳ್ಳ ಸಾಗಣೆ ಆರೋಪದಡಿ ಮೂವರು ಭಾರತೀಯರನ್ನು ಪೊಲೀಸರು, ಇಲ್ಲಿನ ತ್ರಿಭುವನ್ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ಬಂಧಿಸಿದ್ದಾರೆ.

ಪ್ರತ್ಯೇಕ ಪ್ರಕರಣಗಳಲ್ಲಿ ಇರ್ಫಾನ್ ಅಹ್ಮದ್ ಬಷೀರ್, ರಾಮ್‌ಕುಮಾರ್ ಮತ್ತು ಪಡಿನರ್ ಅವರನ್ನು ಬಂಧಿಸಿದ್ದು, ಒಟ್ಟು 50 ಕೆ.ಜಿ ಹೆಂಪ್ ಜಪ್ತಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.



ಸುನಿಲ್ ಸ್ಪಿನ್: ಕುಸಿದ ಚೆನ್ನೈ

ವರುಣ್, ಹರ್ಷಿತ್‌ಗೆ ತಲಾ 2 ವಿಕೆಟ್: ಕೆಕೆಆರ್‌ಗೆ ಸುಲಭ ಜಯ

ಚೆನ್ನೈ (ಪಿಟಿಐ): ಕೋಲ್ಕತ್ತ ನೈಟ್‌ರೈಡರ್ಸ್ ತಂಡದ ಸುನಿಲ್ ನಾರಾಯಣ್ ಮತ್ತು ವರುಣ್ ಚಕ್ರವರ್ತಿ ಅವರ ಸ್ಪಿನ್ ಮೋಡಿಗೆ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಶರಣಾಯಿತು.

ಶುಕ್ರವಾರ ಚೆಪಾಕ್ ಕ್ರೀಡಾಂಗಣದಲ್ಲಿ ಮಹೇಂದ್ರಸಿಂಗ್ ಧೋನಿ ನಾಯಕತ್ವದಲ್ಲಿ ಕಣಕ್ಕಿಳಿದ ಚೆನ್ನೈ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 103 ರನ್ ಗಳಿಸಿತು. ಅದಕ್ಕುತ್ತರವಾಗಿ ಕೋಲ್ಕತ್ತ ತಂಡವು 10.1 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 107 ರನ್ ಗಳಿಸಿ, 8 ವಿಕೆಟ್‌ಗಳಿಂದ ಜಯಿಸಿತು. ಚೆನ್ನೈ ತಂಡಕ್ಕೆ ಇದು ಸತತ ಐದನೇ ಸೋಲು.

ಶಿವಂ ದುಬೆ (ಔಟಾಗದೆ 31; 29ಎ, 4X3) ಅವರು ತಂಡವು ಮೂರಂಕಿ ಮೊತ್ತ ದಾಖಲಿಸಲು ನೆರವಾದರು. ಚೆನ್ನೈ ತಂಡವು ಮೊದಲ ಇನಿಂಗ್ಸ್ ಆಡಿದಾಗ ಗಳಿಸಿದ ಎರಡನೇ ಅತಿ ಕಡಿಮೆ ಮೊತ್ತ ಇದಾಗಿದೆ. ಋತುರಾಜ್ ಗಾಯಕವಾಡ ಅವರು ಗಾಯಗೊಂಡು ಟೂರ್ನಿಯಿಂದ ಹೊರಬಿದ್ದ ಕಾರಣ ಧೋನಿ ಮತ್ತೆ ನಾಯಕತ್ವ ಅವರು ವಹಿಸಿಕೊಂಡಿದ್ದಾರೆ.

ಟಾಸ್ ಗೆದ್ದ ಹಾಲಿ ಚಾಂಪಿಯನ್ ಕೋಲ್ಕತ್ತ ನೈಟ್ ರೈಡರ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಸುನಿಲ್ (13ಕ್ಕೆ3) ಮಧ್ಯಮ ಕ್ರಮಾಂಕಕ್ಕೆ ಪೆಟ್ಟುಕೊಟ್ಟರು. ಅವರಿಗೆ ಸ್ಪಿನ್ನರ್ ವರುಣ್ ಚಕ್ರವರ್ತಿ (22ಕ್ಕೆ2) ಮತ್ತು ಹರ್ಷಿತ್ ರಾಣಾ (16ಕ್ಕೆ2) ಉತ್ತಮ ಜೊತೆ ನೀಡಿದರು. ಚೆನ್ನೈ ಬ್ಯಾಟರ್‌ಗಳು ಆರಂಭದಿಂದಲೇ ತಡಬಡಾಯಿಸಿದರು.


ಕೋಲ್ಕತ್ತ ತಂಡದ ಸುನಿಲ್ ನಾರಾಯಣ್ ಸಂಭ್ರಮ

ಆರಂಭಿಕ ಜೋಡಿ ರಚಿನ್ ರವೀಂದ್ರ (4; 9ಎ) ಮತ್ತು ಡೆವೊನ್ ಕಾನ್ವೆ (12; 11ಎ, 4X4) ಅವರಿಗೆ ಉತ್ತಮ ಆರಂಭ ನೀಡಲು ಸಾಧ್ಯವಾಗಲಿಲ್ಲ. ನಾಲ್ಕನೇ ಓವರ್‌ನಲ್ಲಿ ಮೋಯಿನ್ ಅಲಿ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಕಾನ್ವೆ ಬಿದ್ದರು. ನಂತರದ ಓವರ್‌ನಲ್ಲಿ ರಚಿನ್ ರವೀಂದ್ರ ಅವರ ವಿಕೆಟ್ ವೇಗಿ ಹರ್ಷಿತ್ ರಾಣಾ ಪಾಲಾಯಿತು.

ರಾಹುಲ್ ತ್ರಿಪಾಠಿ (16; 11ಎ) ಅವರನ್ನು ಕ್ಲೀನ್‌ಬೌಲ್ಡ್ ಮಾಡುವ ಮೂಲಕ ಸುನಿಲ್ ಅವರು ಬೇಟೆ ಆರಂಭಿಸಿದರು. ರವೀಂದ್ರ ಜಡೇಜ ಹಾಗೂ ಮಹೇಂದ್ರಸಿಂಗ್ ಧೋನಿ ಅವರಿಗೂ ಪೆವಿಲಿಯನ್ ದಾರಿ ತೋರಿಸಿದರು.

ಒಂದೆಡೆ ವಿಕೆಟ್‌ಗಳು ಪತನವಾಗುತ್ತಿದ್ದರೂ ಶಿವಂ ದುಬೆ, ಇನಿಂಗ್ಸ್‌ಗೆ ಚೇತರಿಕೆ ನೀಡುವ ಪ್ರಯತ್ನ ಮುಂದುವರಿಸಿದರು. ಅವರೊಂದಿಗೆ ವಿಜಯ್ ಶಂಕರ್ (29; 21ಎ) ಕೂಡ ಸ್ವಲ್ಪ ಹೊತ್ತು ಹೋರಾಡಿದರು. ತಂಡವು 79 ರನ್‌ಗಳಿಗೆ 9 ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ದುಬೆ ಮತ್ತು ಅನ್ಷುಲ್ ಕಾಂಭೋಜ್ (ಔಟಾಗದೇ 3) ಮುರಿಯದ ಕೊನೆಯ ವಿಕೆಟ್ ಜೊತೆಯಾಟದಲ್ಲಿ 24 ರನ್ ಸೇರಿಸಿದರು. ಚೆನ್ನೈ ತಂಡದ ಇನಿಂಗ್ಸ್‌ನಲ್ಲಿ ದಾಖಲಾಗಿದ್ದು 1 ಸಿಕ್ಸರ್ ಮಾತ್ರ. ಅದನ್ನು ವಿಜಯಶಂಕರ್ ಹೊಡೆದಿದ್ದರು. ಒಟ್ಟು 8 ಬೌಂಡರಿಗಳಷ್ಟೇ ದಾಖಲಾದವು.

ಸಂಕ್ಷಿಪ್ತ ಸ್ಕೋರು: ಚೆನ್ನೈ ಸೂಪರ್ ಕಿಂಗ್ಸ್: 20 ಓವರ್‌ಗಳಲ್ಲಿ 9ಕ್ಕೆ103 (ರಾಹುಲ್ ತ್ರಿಪಾಠಿ 16, ವಿಜಯಶಂಕರ್ 29, ಶಿವಂ ದುಬೆ ಔಟಾಗದೇ 31, ಹರ್ಷಿತ್ ರಾಣಾ 16ಕ್ಕೆ2, ವರುಣ್ ಚಕ್ರವರ್ತಿ 22ಕ್ಕೆ2, ಸುನಿಲ್ ನಾರಾಯಣ್ 13ಕ್ಕೆ3). **ಕೋಲ್ಕತ್ತ ನೈಟ್ ರೈಡರ್ಸ್:** 10.1 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 107 (ಕ್ವಿಂಟನ್ ಡಿ ಕಾಕ್ 23, ಸುನಿಲ್ ನಾರಾಯಣ್ 44, ಅಜಿಂಕ್ಯ ರಹಾನೆ ಔಟಾಗದೇ 20, ರಿಂಕು ಸಿಂಗ್ ಔಟಾಗದೇ 15) **ಫಲಿತಾಂಶ:** ಕೆಕೆಆರ್‌ಗೆ 8 ವಿಕೆಟ್‌ಗಳ ಜಯ.

ಪಾಯಿಂಟ್ಸ್ ಪಟ್ಟಿ

	ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
1	ಜಿಟಿ	5	4	1	8	1.413
2	ಡಿಸಿ	4	4	0	8	1.278
3	ಕೆಕೆಆರ್	6	3	3	6	0.803
4	ಆರ್‌ಸಿಬಿ	5	3	2	6	0.539
5	ಪಿಬಿಕೆಎಸ್	4	3	1	6	0.289
6	ಎಲ್‌ಎಸ್‌ಜಿ	5	3	2	6	0.078
7	ಆರ್‌ಆರ್	5	2	3	4	-0.733
8	ಎಂಐ	5	1	4	2	-0.010
9	ಸಿಎಸ್‌ಕೆ	6	1	5	2	-1.554
10	ಎಸ್‌ಆರ್‌ಎಚ್	5	1	4	2	-1.629

ಆರೆಂಜ್ ಕ್ಯಾಪ್
ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 288 ರನ್

ಪರ್ಪಲ್ ಕ್ಯಾಪ್
ನೂರ್ ಅಹ್ಮದ್ (ಸಿಎಸ್‌ಕೆ) 12 ವಿಕೆಟ್

ಲಖನೌ ಸೂಪರ್ ಜೈಂಟ್ಸ್– ಗುಜರಾತ್ ಟೈಟನ್ಸ್ ಹಣಾಹಣಿ ಇಂದು

ಪೂರನ್–ಸಿರಾಜ್ ಮುಖಾಮುಖಿ

ಲಖನೌ (ಪಿಟಿಐ): ಲಖನೌ ಸೂಪರ್ ಜೈಂಟ್ಸ್‌ನ ಆಕ್ರಮಣಕಾರಿ ಬ್ಯಾಟರ್ ನಿಕೋಲಸ್ ಪೂರನ್ ಮತ್ತು ಬೆಂಕಿಯುಗುಳುತ್ತಿರುವ ಮೊಹಮ್ಮದ್ ಸಿರಾಜ್ ಅವರ ಮುಖಾಮುಖಿಗೆ ವೇದಿಕೆ ಸಿದ್ಧಗೊಂಡಿದೆ. ಲಖನೌ ತಂಡವು ಶನಿವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಗುಜರಾತ್ ಟೈಟನ್ಸ್ ತಂಡವನ್ನು ಎದುರಿಸಲಿದ್ದು ಸಿರಾಜ್ ಸವಾಲನ್ನು ಲಯದಲ್ಲಿರುವ ಪೂರನ್ ಹೇಗೆ ಉತ್ತರಿಸುತ್ತಾರೆ ಎಂಬ ಕುತೂಹಲವಿದೆ.

ಲಖನೌದ ಉರಿಬಿಸಿಲಿನಲ್ಲಿ ನಡೆಯುವ ಈ ಪಂದ್ಯದಲ್ಲಿ ಹೋರಾಟ ನಿರೀಕ್ಷಿಸಲಾಗಿದೆ. ಟೈಟನ್ಸ್ (8) ಸತತವಾಗಿ ನಾಲ್ಕು ಪಂದ್ಯಗಳನ್ನು ಗೆದ್ದಿದ್ದು ನಿವ್ವಳ ರನ್‌ರೇಟ್ ಆಧಾರದಲ್ಲಿ ಅಂಕಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ. ಎಲ್‌ಎಸ್‌ಜಿ ತಂಡದ ಆಟ ಕೂಡ ಏರುಹಾದಿಯಲ್ಲಿದೆ.

ಮೂರನೇ ಕ್ರಮಾಂಕದಲ್ಲಿ ಆಡುವ ಪೂರನ್ (288 ರನ್) ಐದು ಇನಿಂಗ್ಸ್‌ಗಳಲ್ಲಿ ಒಮ್ಮೆ ಮಾತ್ರ ವಿಫಲರಾಗಿದ್ದಾರೆ. 24 ಸಿಕ್ಸರ್, 25 ಬೌಂಡರಿಗಳು ಈ ಬಾರಿ ಅವರ ಬ್ಯಾಟಿನಿಂದ ಹರಿದಿದ್ದು ಅವರು ಸಾಧಿಸಿರುವ ಪ್ರಾಬಲ್ಯಕ್ಕೆ ಪುರಾವೆಯಾಗಿವೆ. ಬ್ಯಾಟರ್‌ಗಳ ಪಂಕ್ತಿಯಲ್ಲಿ ಅಗ್ರಸ್ಥಾನದಲ್ಲಿದ್ದಾರೆ. ಅದೂ 225ರ ಸ್ಟ್ರೈಕ್‌ರೇಟ್‌ನೊಡನೆ!


ಸಿರಾಜ್ ಕೂಡ ಒಳ್ಳೆಯ ಲಯದಲ್ಲಿದ್ದಾರೆ. ಐದು ಪಂದ್ಯಗಳಿಂದ 10 ವಿಕೆಟ್‌ಗಳನ್ನು ಪಡೆದಿದ್ದು ಇಕಾನಮಿ ದರ 7.70. ತಂಡಕ್ಕೆ ಎರಡು ಪಂದ್ಯಗಳನ್ನು ಗೆಲ್ಲಿಸಿಕೊಟ್ಟಿದ್ದಾರೆ. ಪವರ್‌ಪ್ಲೇ ಅವಧಿಯಲ್ಲಿ ಬಿಗುದಾಳಿ ಸಂಘಟಿಸಿದ್ದಾರೆ. ಹೀಗಾಗಿ ಪೂರನ್ ಮಾತ್ರವಲ್ಲ, ಮರ್ಕರಂ ಮತ್ತು ಮಿಚೆಲ್ ಮಾರ್ಷ್ ಕೂಡ ಅವರನ್ನು ಎಚ್ಚರಿಕೆ ವಹಿಸಬೇಕಾಗಬಹುದು.

ಕಗಿಸೊ ರಬಾಡ ಅನುಪಸ್ಥಿತಿ ಟೈಟನ್ಸ್‌ಗೆ ಸಮಸ್ಯೆ ತಂದಿಲ್ಲ. ಪ್ರಸಿದ್ಧಕೃಷ್ಣ (8 ವಿಕೆಟ್) ಈ ಬಾರಿ ಗಮನ ಸೆಳೆದಿದ್ದಾರೆ. ಎಡಗೈ ಸ್ಪಿನ್ನರ್ ಆರ್.ಸಾಯಿಕಿಶೋರ್ (10 ವಿಕೆಟ್) ಅವರ ತಂಡದ ಅನುಭವಿ ರಶೀದ್ ಖಾನ್ ಹಿನ್ನಡೆ ಮರೆಮಾಚಿದ್ದಾರೆ.

ನಾಯಕರ ವೈಫಲ್ಯ: ಟೈಟನ್ಸ್ ನಾಯಕ ಶುಭಮನ್ ಗಿಲ್ ಮತ್ತು ಲಖನೌ ನಾಯಕ ರಿಷಭ್ ಪಂತ್ ಆಕರ್ಷಕ ಆಟಕ್ಕೆ ಹೆಸರುವಾಸಿ. ಆದರೆ ಹಾಲಿ ಐಪಿಎಲ್‌ನಲ್ಲಿ ಇವರು ಕಿಚ್ಚೆಬ್ಬಿಸಿಲ್ಲ.

ಇದುವರೆಗೆ 146ರ ಸ್ಟ್ರೈಕ್‌ರೇಟ್‌ನಲ್ಲಿ 148 ರನ್ ಗಳಿಸಿದ್ದಾರೆ. ಸಾಯಿ ಸುದರ್ಶನ್ (273), ಜೋಸ್ ಬಟ್ಲರ್ (203) ಟೈಟನ್ಸ್ ಬ್ಯಾಟರ್‌ಗಳಲ್ಲಿ ಯಶಸ್ಸು ಕಂಡಿದ್ದಾರೆ. ನಾಲ್ಕು ಇನಿಂಗ್ಸ್‌ಗಳಲ್ಲಿ ಅವರು ಗಳಿಸಿರುವುದು ಬರೇ 19 ರನ್‌ಗಳನ್ನಷ್ಟೇ.

ಪಂದ್ಯ ಆರಂಭ: ಮಧ್ಯಾಹ್ನ 3.30.


ಮೊಹಮ್ಮದ್ ಸಿರಾಜ್

ಜಯಕ್ಕಾಗಿ ಕಾತರಿಸುತ್ತಿರುವ ಸನ್

ಹೈದರಾಬಾದ್ (ಪಿಟಿಐ): ಸಿಡಿಲಬ್ಬರದ ಬ್ಯಾಟಿಂಗ್ ಮೂಲಕ ರನ್ ಹೊಳೆ ಹರಿಸಿ ಎದುರಾಳಿಗಳನ್ನು ನಡುಗಿಸುವ ಸನ್‌ರೈಸರ್ಸ್ ಹೈದರಾಬಾದ್ ತಂಡವು ಈ ಬಾರಿ ಸತತ ನಾಲ್ಕು ಸೋಲುಗಳಿಂದ ಬಸವಳಿದಿದೆ.


ಶನಿವಾರ ಉಪ್ಪಳದ ರಾಜೀವಗಾಂಧಿ ಕ್ರೀಡಾಂಗಣದಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಸನ್‌ರೈಸರ್ಸ್ ತಂಡವು ಬಲಿಷ್ಠ ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದೆ. ಹೈದರಾಬಾದ್ ತಂಡವು ಒಟ್ಟು ಐದು ಪಂದ್ಯಗಳನ್ನು ಆಡಿದೆ. ಗೆದ್ದಿದ್ದು ಮೊದಲ ಪಂದ್ಯದಲ್ಲಿ ಮಾತ್ರ.

ಬೌಲರ್‌ಗಳಿಗೆ ಬೆವರಿಳಿಸುವ ಟ್ರಾವಿಸ್ ಹೆಡ್, ಹೆನ್ರಿಚ್ ಕ್ಲಾಸೆನ್, ಅಭಿಷೇಕ್ ಶರ್ಮಾ, ನಿತೀಶ್ ಕುಮಾರ್ ರೆಡ್ಡಿ ಅವರು ತಮ್ಮ ನೈಜ ಲಯಕ್ಕೆ ಮರಳಬೇಕಿದೆ. ತಂಡದ ಅನುಭವಿ ಬೌಲರ್ ಮತ್ತು ನಾಯಕ ಪ್ಯಾಟ್ ಕಮಿನ್ಸ್, ವೇಗಿ ಮೊಹಮ್ಮದ್ ಶಮಿ, ಜಯದೇವ್ ಉನದ್ಕತ್, ಸಿಮ್ರನ್‌ಜೀತ್ ಸಿಂಗ್ ಅವರ ಆಟವೂ ನಡೆಯುತ್ತಿಲ್ಲ. ಜೊತೆಯಾಟಗಳು ಬೆಳೆಯದಂತೆ ತಡೆಯೊಡ್ಡುವ ಪರಿಣಾಮಕಾರಿ ಬೌಲಿಂಗ್ ಹೊರಹೊಮ್ಮುತ್ತಿಲ್ಲ.

ಎಲ್ಲ ವಿಭಾಗಗಳಲ್ಲಿಯೂ ಉತ್ತಮವಾಗಿರುವ ಶ್ರೇಯಸ್ ಅಯ್ಯರ್ ನಾಯಕತ್ವದ ಪಂಜಾಬ್ ತಂಡವನ್ನು ಎದುರಿಸಲು ಸನ್‌ರೈಸರ್ಸ್ ವಿಭಿನ್ನವಾದ ತಂತ್ರಗಾರಿಕೆ ಹೆಣೆಯುವುದು ಅನಿವಾರ್ಯ. ಶ್ರೇಯಸ್ ಬಳಗವು ಆಡಿರುವ 4 ಪಂದ್ಯಗಳಲ್ಲಿ 3 ಗೆದ್ದು, ಒಂದರಲ್ಲಿ ಸೋತಿದೆ.

ಚೆನ್ನೈ ಎದುರಿನ ಪಂದ್ಯದಲ್ಲಿ ಪಂಜಾಬ್ ತಂಡದ ಆರಂಭಿಕ ಬ್ಯಾಟರ್ ಪ್ರಿಯಾಂಶ್ ಆರ್ಯ ಮಿಂಚಿನ ಶತಕ ಬಾರಿಸಿದ್ದರು. ಆದರೆ ಈ ಪಂದ್ಯದಲ್ಲಿ ಶ್ರೇಯಸ್ ಸಹಿತ ಐವರು ಪ್ರಮುಖ ಬ್ಯಾಟರ್‌ಗಳು ಒಂದಂಕಿಗೆ ಔಟಾಗಿದ್ದರು. ಬೌಲಿಂಗ್‌ನಲ್ಲಿ ಲಾಕಿ ಫರ್ಗ್ಯುಸನ್, ಯಶ್ ಠಾಕೂರ್ ಮತ್ತು ಅರ್ಷದೀಪ್ ಸಿಂಗ್ ಉತ್ತಮ ಲಯದಲ್ಲಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್.


ಪ್ಯಾಟ್ ಕಮಿನ್ಸ್

ಪ್ರಶಸ್ತಿಗೆ ಬಿಎಫ್‌ಸಿ, ಬಾಗನ್ ಪೈಪೋಟಿ ಇಂದು

ಕೋಲ್ಕತ್ತದಲ್ಲಿ ಐಎಸ್‌ಎಲ್ ಕಪ್ ಫೈನಲ್ ಪಂದ್ಯ

ಕೋಲ್ಕತ್ತ (ಪಿಟಿಐ): ಉತ್ಸಾಹದಲ್ಲಿರುವ ಬೆಂಗಳೂರುಎಫ್‌ಸಿ ತಂಡವು, ಶನಿವಾರ ಇಲ್ಲಿ ನಡೆಯಲಿರುವ ಐಎಸ್‌ಎಲ್ ಕಪ್ ಫುಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ ಲೀಗ್ ವಿಜೇತರಾದ ಮೋಹನ್ ಬಾಗನ್ ಸೂಪರ್ ಜೈಂಟ್ಸ್ ತಂಡವನ್ನು ಎದುರಿಸಲಿದೆ.

ಮೋಹನ್ ಬಾಗನ್ ತಂಡದ ಭದ್ರ ಕೋಟೆ ಎನಿಸಿರುವ ವಿವೇಕಾನಂದ ಯುವ ಭಾರತಿ ಕ್ರೀಡಾಂಗಣದಲ್ಲಿ ನಡೆಯಲಿರುವ 'ಬ್ಲಾಕ್‌ಬಸ್ಟರ್ ಫೈನಲ್'ನಲ್ಲಿ ತುರುಸಿನ ಪೈಪೋಟಿ ನಿರೀಕ್ಷಿಸಲಾಗಿದೆ.

'ಈ ಹಿಂದಿನ ಪಂದ್ಯಗಳ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಮುಂದಿನದಷ್ಟೇ ಮುಖ್ಯ' ಎಂದು ಮೋಹನ್ ಬಾಗನ್ ಕೋಚ್ ಜೋಸ್ ಮೊಲಿನಾ ಹೇಳಿದರೆ, ಇಲ್ಲಿ ಆಡುವ ಬಗ್ಗೆ ಒಂದಿಷ್ಟೂ ವಿಚಲಿತರಾಗದ ಎಫ್‌ಸಿ ಕೋಚ್ ಜೆರಾರ್ಡ್ ಝೂರ್ಗೋಝಾ ಮತ್ತು ನಾಯಕ ಗುರುಪ್ರೀತ್ ಸಿಂಗ್ ಸಂಧು, ಕೋಲ್ಕತ್ತವನ್ನು ತಮ್ಮ ಎರಡನೇ ತವರು ಎಂದು ಬಣ್ಣಿಸಿದ್ದಾರೆ.

ಬಾಗನ್ ತಂಡ 'ಪ್ರಶಸ್ತಿ ಡಬಲ್' ಮೇಲೆ ಕಣ್ಣಿಟ್ಟಿರುವುದು ಮೊಲಿನಾ ಅವರ ಮಾತಿನಲ್ಲಿ ವ್ಯಕ್ತವಾಯಿತು. 'ನಾವು ಲೀಗ್ ಶೀಲ್ಡ್ ಗೆದ್ದುಕೊಂಡಿದ್ದೇವೆ. ಇದು ನಮಗೆ ಐಎಸ್‌ಎಲ್ ಕಪ್ ಗೆಲ್ಲಲೂ ಪ್ರೇರಣೆ ಒದಗಿಸಿದೆ' ಎಂದು ಕೋಚ್ ಹೇಳಿದರು.

'ಕೋಲ್ಕತ್ತ ನಮಗೆ ಬಹುತೇಕ ಎರಡನೇ ತವರು ಇದ್ದಂತೆ. ಡ್ಯುರಾಂಡ್ ಕಪ್ ಆಡಲೂ ಇಲ್ಲಿಗೆ ಬಂದಿದ್ದೆವು. ಪ್ಲೇ ಆಫ್ ಪಂದ್ಯಗಳಲ್ಲಿ ಉತ್ತಮವಾಗಿ ಆಡಿದ್ದೇವೆ. ಗ್ರ್ಯಾಂಡ್ ಫಿನಾಲೆ ಆಡಲು ತುದಿಗಾಲಲ್ಲಿದ್ದೇವೆ' ಎಂದು ಬೆಂಗಳೂರು ತಂಡದ ಕೋಚ್ ಝೂರ್ಗೋಝಾ ಹೇಳಿದರು.

ಲೀಗ್ ಹಂತದ ಪಂದ್ಯಗಳ ನಂತರ ಬಾಗನ್ ಅಗ್ರಸ್ಥಾನ ಪಡೆದಿದ್ದರೆ, ಬೆಂಗಳೂರಿನ ತಂಡ ಮೂರನೇ ಸ್ಥಾನ ಪಡೆದಿತ್ತು.


ಸುನಿಲ್ ಚೆಟ್ರಿ

ರಾಹುಲ್, ಕಾಂತಾರ ಮತ್ತು ಬೆಂಗಳೂರು...

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಮಾಜಿಕ ಜಾಲತಾಣಗಳ ತುಂಬ ಈಗ ಕೆ.ಎಲ್. ರಾಹುಲ್ ಮತ್ತು ಕಾಂತಾರ ಚಲನಚಿತ್ರದ್ದೇ ಮಾತು.



ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಗುರುವಾರ ಆತಿಥೇಯ ಆರ್‌ಸಿಬಿ ಎದುರು ಡೆಲ್ಲಿ ಕ್ಯಾಪಿಟಲ್ಸ್ ಜಯಕ್ಕೆಕಾರಣರಾದ ಕನ್ನಡಿಗ ರಾಹುಲ್ ಅಜೇಯ 93 ರನ್ ಗಳಿಸಿದರು. ಪಂದ್ಯ ಗೆದ್ದ ನಂತರ 'ಕಾಂತಾರ" ಸಿನಿಮಾದ ದೃಶ್ಯವೊಂದನ್ನು ಅನುಕರಿಸಿದ ರಾಹುಲ್, 'ಇದು ನನ್ನ ನೆಲ...' ಎಂಬ ಸಂದೇಶ ಕೊಟ್ಟರು. ನಂತರ ಅಧಿಕೃತ ಪ್ರಸಾರಕರೊಂದಿಗೆ ಮಾತನಾಡುವಾಗ ತಮ್ಮ ಸಂಭ್ರಮ ಹಾಗೂ ನೆಚ್ಚಿನ ಚಿತ್ರ ಕಾಂತಾರ ಕುರಿತು ಹೇಳಿದರು.

ಸಾಮಾಜಿಕ ಜಾಲತಾಣಗಳಲ್ಲಿ ಈ ಸಂಗತಿಯು ಬೇರೆ ಬೇರೆ ರೂಪದಲ್ಲಿ ಹೊರಹೊಮ್ಮುತ್ತಿದೆ. ಕಳೆದ ಮೆಗಾ ಹರಾಜಿನಲ್ಲಿ ತಮ್ಮನ್ನು ಖರೀದಿಸದ ಆರ್‌ಸಿಬಿ ವಿರುದ್ಧ ರಾಹುಲ್ ಈ ರೀತಿ ಸೇಡು ತೀರಿಸಿಕೊಂಡಿದ್ದಾರೆಂಬ ಸಂದೇಶಗಳು ಹರಿದಾಡುತ್ತಿವೆ. ಈ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಮಾಡಿದ್ದ 'ಸ್ಲೆಜಿಂಗ್' ರಾಹುಲ್ ಪ್ರತ್ಯುತ್ತರ ಕೊಟ್ಟ ರೀತಿ ಇದು ಎಂಬ ಸಂದೇಶಗಳೂ ಇವೆ. ಒಟ್ಟಿನಲ್ಲಿ ಶಾಂತಚಿತ್ತದ ರಾಹುಲ್ ಈ ರೀತಿ ಪ್ರತಿಕ್ರಿಯಿಸಿರುವುದು ಕ್ರಿಕೆಟ್ ವಲಯದಲ್ಲಿ ಸಂಚಲನ ಮೂಡಿಸಿದೆ.

ರಾಹುಲ್ ಅವರು ಬಾಲ್ಯದಿಂದಲೂ ಆಡಿ ಬೆಳೆದ ನೆಲ ಚಿನ್ನಸ್ವಾಮಿ ಅಂಗಳ. ಕರ್ನಾಟಕ ತಂಡವನ್ನು ಬಹಳಷ್ಟು ಪಂದ್ಯಗಳಲ್ಲಿ ತಮ್ಮ ಅಮೋಘ ಬ್ಯಾಟಿಂಗ್ ಮೂಲಕ ಗೆಲ್ಲಿಸಿಕೊಟ್ಟಿದ್ದಾರೆ.

ದಶಕದ ಹಿಂದೆ ಆರ್‌ಸಿಬಿ ತಂಡದಲ್ಲಿಯೂ ಆಡಿದ್ದರು. ಇಲ್ಲಿ ನಡೆದ ಕೆಲವು ಅಂತರರಾಷ್ಟ್ರೀಯ ಪಂದ್ಯಗಳಲ್ಲಿಯೂ ಅವರು ಭಾರತ ತಂಡಕ್ಕೆ ಉಪಯುಕ್ತ ಕಾಣಿಕೆ ನೀಡಿದ ಉದಾಹರಣೆಗಳಿವೆ.

ಆರ್‌ಸಿಬಿ ವಿರುದ್ಧದ ಇನಿಂಗ್ಸ್‌ನಲ್ಲಿ ಅವರು ಪ್ರಯೋಗಿಸಿದ ಬ್ಯಾಕ್‌ಫುಟ್ ಪಂಚ್, ಸುಂದರವಾದ ಡ್ರೈವ್ ಮತ್ತು ಫ್ಲಿಕ್‌ಗಳ ಆಟ ಮನಮೋಹಕವಾಗಿತ್ತು. ಅಷ್ಟೇ ಅಲ್ಲ. ಅವರು ಬ್ಯಾಟಿಂಗ್ ಮಾಡುವ ಸಂದರ್ಭದಲ್ಲಿ ಮೈದಾನದ ಪ್ರೇಕ್ಷಕರ ಗ್ಯಾಲರಿಯಲ್ಲಿದ್ದ ಆರ್‌ಸಿಬಿ ಅಭಿಮಾನಿಗಳು ಕೂಡ ಕನ್ನಡಿಗ ಕೆ.ಎಲ್. ರಾಹುಲ್ ಅವರ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

'ಚಿನ್ನಸ್ವಾಮಿಯಲ್ಲಿರುವ ಜನಸ್ತೋಮವು ರಾಹುಲ್..ರಾಹುಲ್.. ನಮ್ಮ ಹುಡುಗ ಎಂದು ಪಠಿಸುತ್ತಿದ್ದಾರೆ' ಎಂದು ಎಕ್ಸ್‌ನಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಎಂ. ರಾಮಚಂದ್ರ ಸಂದೇಶ ಹಾಕಿದ್ದಾರೆ. ಇಷ್ಟೇ ಅಲ್ಲ. ರಾಹುಲ್ ಅವರ ಆಟದ ಬಗ್ಗೆಹಲವಾರು ಸಂದೇಶಗಳುಎಕ್ಸ್‌ನಲ್ಲಿಹರಿದಾಡುತ್ತಿವೆ.

'ಕಣ್ಣಾವೂರ್ ಲೋಕೇಶ್ ರಾಹುಲ್..ಅಷ್ಟೇ. ಇದೇ ಟ್ವೀಟ್..' ಎಂದು ಮಾಜಿ ಅಂತರರಾಷ್ಟ್ರೀಯ ಕ್ರಿಕೆಟಿಗ ದೊಡ್ಡಗಣೇಶ್ ಅವರು ಕೂಡ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.